ಸಂಸದರ ಹೆಸರು ಬಿಟ್ಟು ಹೋಗಿದೆ. ದಯವಿಟ್ಟು ಅಭಾಸವಾಗದ ರೀತಿಯಲ್ಲಿ ಇದನ್ನು ಸರಿಪಡಿಸಬೇಕೆನ್ನುವ ವಿನಂತಿ ಮಾಡುತೇನೆ.

ಅಧ್ಯಕ್ಷರು : ಸೂಚನೆ ಕೊಡುತ್ತೇನೆ.

3) ವಿತ್ತೀಯ ಕಾರ್ಯಕಲಾಪ

2011–12ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ (ಮುಂದು)

ಶ್ರೀ ವಿ.ಶ್ರೀನಿವಾಸ್ ಪ್ರಸಾದ್ (ನಂಜನಗೂಡು): ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಯವರು 2011–12ನೇ ಸಾಲಿನ ಬಜೆಟ್‌ನ್ನು ಮಂಡಿಸಿದ್ದಾರೆ. ಅವರು ಉಪ ಮುಖ್ಯಮಂತ್ರಿ ಯಾಗಿದ್ದಾಗಲೂ ಅವರ ಹತ್ತಿರ ಹಣಕಾಸಿನ ಖಾತೆ ಇತ್ತು ಆಗ ಅವರು ಎರಡು ಬಾರಿ ಬಜೆಟ್‌ನ್ನು ಮಂಡಿಸಿದ್ದಾರೆ. ಮುಖ್ಯಂತ್ರಿಗಳಾದ ಮೇಲೂ ಹಣಕಾಸಿನ ಖಾತೆ ಅವರ ಹತ್ತಿರ ಇದೆ, ತಾವು ಈಗ ನಾಲ್ಕನೆ ಬಾರಿಗೆ ಈ ಬಜೆಟ್‌ನ್ನು ಮಂಡಿಸಿದ್ದೀರಿ. ಉಪ ಮುಖ್ಯಮಂತ್ರಿಗಳಾಗಿ ಎರಡು ಸಲ, ಮುಖ್ಯಮಂತ್ರಿಗಳಾಗಿ ನಾಲ್ಕು ಸಲ, ಒಟ್ಟು ಆರು ಬಜೆಟ್‌ನ್ನು ಮಂಡಿಸಿದ್ದಾರೆ. ಹಣಕಾಸಿನ ಖಾತೆ ಅವರ ಹತ್ತಿರ ಇದ್ದಿದ್ದರಿಂದ ಅವರು ಆರು ಸಾರಿ ಬಜೆಟ್ ಮಂಡಿಸಲಿಕ್ಕೆ ಅವಕಾಶ ಸಿಕ್ಕಿದೆ ಎನ್ನುವುದಕ್ಕೆ ಅವರು ಬಹಳ ಹೆಮ್ಮೆ ಪಡುತ್ತಾರೆ. ಈ ಸಲ ವಿಶೇಷವಾಗಿ ಕೃಷಿಗೆ ಪ್ರತ್ಯೇಕವಾಗಿ ಬಜೆಟ್‌ನ್ನು ಮಂಡಿಸಿದ್ದಾರೆ. ಬಹುಶ: ದೇಶದಲ್ಲಿ ಮೊಟ್ಟ ಮೊದಲಿಗೆ ಕೃಷಿ ಬಜೆಟ್‌ನ್ನು ಮಂಡಿಸಿರತಕ್ಕಂಥ ಹೆಗ್ಗಳಿಕೆ ನಿಮಗೂ ಇದೆ ಹಾಗೂ ನಮಗೂ ಇದೆ. ಇದುವರೆವಿಗೂ ಯಾವ ರಾಜ್ಯದಲ್ಲೂ ಕೂಡ ಕೃಷಿಗೆ ಪ್ರತ್ಯೇಕವಾಗಿ ಬಜೆಟ್‌ನ್ನು ಮಂಡಿಸಿರಲಿಲ್ಲ. ಕೇಂದ್ರದಲ್ಲಿ ಮಾತ್ರ ಒಂದು ಸಾಮಾನ್ಯ ಬಜೆಟ್ ಮತ್ತೊಂದು ರೈಲ್ವೇ ಬಜೆಟ್ ಎರಡನ್ನು ಮಂಡಿಸುತ್ತಾರೆ. ತಮಗೆಲ್ಲಾ ಗೊತ್ತಿರುವಂತೆ ರೈಲ್ವೇಯದು ಬಹಳ ನೆಟ್‌ವರ್ಕ್ ಇದೆ. ಮತ್ತೆ ಅಲ್ಲಿ ಬಹಳ ದೊಡ್ಡ ದೊಡ್ಡ ಯೋಜನೆಗಳಿದ್ದು ಒಂದೊಂದು ಯೋಜನೆಗೂ ಸಾವಿರಾರು ಕೋಟಿ ರೂಪಾಯಿಗಳು ಬೇಕಾಗುತ್ತದೆ. ಸರಕು, ಸಾಗಾಣಿಕೆ, ಪ್ರಯಾಣಿಕರದು, ಹೀಗೆ ಬಹಳ ದೊಡ್ಡ ಇಲಾಖೆಯಾಗಿರುವುದರಿಂದ ಬಹಳ ಹಿಂದಿನಿಂದಲೂ ಕೂಡ ಇದಕ್ಕೆ ಪ್ರತ್ಯೇಕವಾಗಿ ಬಜೆಟ್‌ನ್ನು ಮಂಡಿಸುತ್ತಾರೆ. ಅಲ್ಲಿ ರೈಲ್ವೇ ಸಚಿವರಾದವರು ರೈಲ್ವೇ ಬಜೆಟ್‌ನ್ನು ಮಂಡಿಸುತ್ತಾರೆ. ಹಣಕಾಸಿನ ಸಚಿವರಾದವರು ಸಾಮಾನ್ಯ ಬಜೆಟ್‌ನ್ನು ಮಂಡಿಸುತ್ತಾರೆ. ಇಲ್ಲಿಯ ವಿಶೇಷ ಏನೆಂದರೆ, ಹಣಕಾಸಿನ ಸಚಿವರಾದ ಮಾನ್ಯ ಮುಖ್ಯಮಂತ್ರಿಗಳು ಎರಡೂ

ಬಜೆಟ್‌ನ್ನು ಒಟ್ಟಿಗೆ ಮಂಡಿಸಿದ್ದಾರೆ. ಇಲ್ಲಿ ಇದನ್ನು ಭಾಗ-1 ಮತ್ತು ಭಾಗ-2 ಎಂದು ಮಾಡಿಕೊಂಡಿದ್ದೀರಿ. ಪ್ರತ್ಯೇಕವಾದ ಬಜೆಟ್‌ನ್ನು ಮಂಡಿಸಬೇಕಾದರೆ ಸಾಕಷ್ಟು ಕಸರತ್ತು ಬೇಕಾಗುತ್ತದೆ, ಆ ನಿಟ್ಟನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಾಕಷ್ಟು ಕಸರತ್ತು ಮಾಡಿದ್ದಾರೆ ಇಲ್ಲವೆಂದಲ್ಲ. You made marathon exercise. ಪ್ರತ್ಯೇಕವಾದ ಬಜೆಟ್ ಮಂಡನೆ ಮಾಡುವಾಗ ಬಹಳ ಕಸರತ್ತನ್ನು ಮಾಡಬೇಕಾಗುತ್ತದೆ. ಬಜೆಟ್ ಮಂಡಿಸುವ ಕಾಲದಲ್ಲಿ ಅವರು ಸುಮಾರು ಮೂರು ಗಂಟೆಗಳ ಕಾಲ ತಮ್ಮ ಭಾಷಣ ಮಾಡಿದ್ದಾರೆ. ಕೃಷಿ ಬಜೆಟ್ ನಲವತ್ತು ಪುಟಗಳಿವೆ, ಸಾಮಾನ್ಯ ಬಜೆಟ್ ಸುಮಾರು ಎಂಬತ್ತೇಳು ಪುಟಗಳಿವೆ. ಇವೆಲ್ಲವನ್ನೂ ಅವರು ಭಾಷಣ ಮಾಡುವಾಗ ಓದಿದ್ದಾರೆ. ಈಗಾಗಲೇ ಸಾಕಷ್ಟು ಚರ್ಚೆಗಳಾಗಿವೆ. ನಮ್ಮ ವಿರೋಧ ಪಕ್ಷದ ನಾಯಕರು ಬಹಳ ಅನುಭವವಿರತಕ್ಕಂಥವರು ಅವರು ಕೂಡ ಹಣಕಾಸಿನ ಸಚಿವರಾಗಿ ಏಳು ಬಜೆಟ್ ಮಂಡಿಸಿದ್ದರು ಎಂದು ಕಾಣುತ್ತದೆ. ಅವರು ಈ ಬಜೆಟ್ ಬಗ್ಗೆ ಸಾಕಷ್ಟು ಸುದೀರ್ಘವಾಗಿ ಮಾತನಾಡಿದ್ದಾರೆ. ನಾನು ಅದನ್ನು ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ಇಲ್ಲಿ ವಿಶೇಷವಾಗಿ ಮಾತನಾಡಿದವರೆಲ್ಲರೂ ಕೂಡ ನಿನ್ನೆ ರೇವಣ್ಣನವರು ಕೂಡ ಮಾತನಾಡಿದರು. ಕೃಷಿ ಬಜೆಟ್ ನಲವತ್ತು ಪುಟಗಳೇನಿದೆ ಬಹುಶ: ಪ್ರತಿಯೊಂದರ ಬಗ್ಗೆ ಅವರು ಮಾತನಾಡುತ್ತಾ ಹೇಳಿದರು. ನಮ್ಮ ಸ್ಪೀಕರ್‌ರವರಿಗೆ ಬಹಳ ತಮಾಷೆಯಾಗಿಯೂ ಕೂಡ ಹೇಳಿದರು. "ಸ್ವಾಮಿ ಪ್ರತ್ಯೇಕವಾದ ಕೃಷಿ ಬಜೆಟ್ ಇದೆ, ನಲವತ್ತು ಪುಟ ಪ್ರಿಂಟ್ ಆಗಿದೆ, ಸ್ವಲ್ಪ ಮಾತನಾಡುವುದಕ್ಕಾದರೂ ಹೆಚ್ಚಿನ ಸಮಯ ಕೊಡಿ" ಎಂದು ನಿನ್ನೆ ಅವರು ಕೇಳಿದರು. ನಮ್ಮ ಉಪನಾಯಕರಾದ ಜಯಚಂದ್ರರವರು ಸ್ವತ: ಕೃಷಿ ಸಚಿವರಾಗಿದ್ದವರು ಅವರು ಕೂಡ ತುಂಬಾ ಚೆನ್ನಾಗಿ ಸುಮಾರು ಎರಡೂಕಾಲು ಗಂಟೆ ಬರಿ ಕೃಷಿಯ ಬಗ್ಗೆನೆ ಮಾತನಾಡಿದ್ದಾರೆ. ಮುಖ್ಯಮಂತ್ರಿಗಳು ಕೃಷಿಯ ಬಗ್ಗೆ ನಲವತ್ತು ಪುಟಗಳನ್ನಿಟ್ಟಿದ್ದರು, ಆದರೆ, ನಿಮ್ಮ ಸಲಹೆ ಸುಮಾರು ಎಂಬತ್ತು ಪುಟಗಳಿಗಾಗುವಷ್ಟು ಬಂತು ಎಂದು ನಾನು ಅವರಿಗೆ ಈಗ ಹೇಳುತ್ತಿದ್ದೆ. ಅಷ್ಟು ಚೆನ್ನಾಗಿ ಕೃಷಿ ಬಜೆಟ್ ಬಗ್ಗೆ ಮಾತನಾಡಿದರು. ಇದಕ್ಕೆ ತಾವು ನೀರಾವರಿ ಇಲಾಖೆಯೂ ಸೇರಿದಂತೆ ಸಾವಯವ ಕೃಷಿ ಇದಕ್ಕೆಲ್ಲಾ ಹಣ ಬಿಡುಗಡೆ

ಮಾಡಿರುವ ಬಗ್ಗೆ ಅವರು ತುಂಬಾ ಚೆನ್ನಾಗಿ ಹೇಳಿದ್ದಾರೆ, ಹೀಗಾಗಿ ನಾನು ಈ ಮೊದಲೇ ಹೇಳಿದಂತೆ ಅದನ್ನೆಲ್ಲಾ ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ಅದರೆ, ನನಗೆ ಮುಖ್ಯಮಂತ್ರಿಗಳನ್ನು ನೋಡಿದಾಗ ಬಹಳ ಬುದ್ಧಿವಂತಿಕೆಯಿಂದ ಇದನ್ನು ಮಂಡಿಸಿದ್ದಾರೆಂದು ಅನ್ನಿಸುತ್ತದೆ. ಏಕೆಂದರೆ, ದೇಶದಲ್ಲಿ ಮೊಟ್ಟ ಮೊದಲ ಬಾರಿಗೆ ಕೃಷಿ ಬಜೆಟ್ ಮಂಡಿಸಬೇಕಾದರೆ ಏನೋ ಒಂದು ಹಿನ್ನೆಲೆ ಇದೆ. ಬಹಳ ಬುದ್ಧಿವಂತರಿದ್ದಾರೆ. ಮಿಸ್ಟರ್ ಸುರೇಶ್ ಕುಮಾರ್‌ರವರೆ, ನನಗೆ ವಿಜ್ಞಾನಿ Darwin ಇದ್ದಾನಲ್ಲ ಅವನ theory, ಇವರನ್ನು ನೋಡಿದಾಗ ನನಗೆ ಅವರ ಒಂದು ಮಾತು ಜ್ಞಾಪಕಕ್ಕೆ ಬರುತ್ತದೆ. ಅತ ಹೇಳುತ್ತಾನೆ, Struggle for existence and survival of the fittest. ಮುಖ್ಯಮಂತ್ರಿಗಳು ಬಹಳ ಬುದ್ಧಿವಂತಿಕೆಯಿಂದ ಇದನ್ನು ಮಾಡಿರುವುದು. ಏಕೆಂದರೆ, ಅವರು struggle for existence ಬಹಳ ಅವಶ್ಯಕತೆಯಿದೆ ಅವರು ಉಳಿಯಬೇಕಾಗಿದೆ. ಏಕೆಂದರೆ, ಅವರು ಮೂರು ವರ್ಷಗಳಿಂದ ಆಡಳಿತ ನಡೆಸತಕ್ಕಂಥ ರೀತಿ ಅವರು ಅದಕ್ಕಿಂತ ಇಪ್ಪತ್ತು ತಿಂಗಳಲ್ಲಿ ಆಡಳಿತ ನಡೆಸುವುದಕ್ಕಿಂತಲೂ ಕೂಡ ಒಂದು ರೀತಿ ಮನೋವ್ಯಥೆ ಇದೆ ಎಂದು ತಿಳಿದುಕೊಂಡಿದ್ದೇನೆ. ಎಲ್ಲೋ ಒಂದು ಕಡೆ ಅವರಿಗೆ ಮಾನಸಿಕವಾಗಿ ಸ್ವಲ್ಪ ನೆಮ್ಮದಿ ಅಷ್ಟು ಸಿಗುತ್ತಿಲ್ಲ, ನಿಮ್ಮ ಮೂರು ವರ್ಷಗಳ ಆಡಳಿತದ ಅವಧಿಯಲ್ಲಿ ನಿಮಗೆ ಬಹುಮತ ಬಂದರೂ ಕೂಡ, ದಕ್ಷಿಣ ಭಾರತದ ಹೆಬ್ಬಾಗಿಲು ಮಾಡಿ ಮೊಟ್ಟ ಮೊದಲ ಭಾರತೀಯ ಜನತಾ ಪಾರ್ಟಿಯ ಸರ್ಕಾರವಿದ್ದಾಗಲೂ ಕೂಡ ಅವರಿಗೆ ನಿರೀಕ್ಷೆಗೆ ತಕ್ಕಂತೆ ಎಲ್ಲೋ ಒಂದು ಕಡೆ ನೆಮ್ಮದಿ ಮತ್ತು ತೃಪ್ತಿ ಸಿಗಲಿಲ್ಲ. ಅದ್ದರಿಂದ ನಾನು ಹೇಳಿದೆ. Darwin theory ಯಲ್ಲಿ ಹೇಳಿದ ಹಾಗೆ, ಅವರ ಅಸ್ಥಿತ್ವಕ್ಕೆ struggle for existence and survival of the fittest. ಬಹಳ ಯೋಚನೆ ಮಾಡಿ ಮಾಡುತ್ತಿರುವುದು. ಅವರ ಉಳಿವಿಗೆ ಅವರ ಅಸ್ಥಿತ್ವಕ್ಕೆ ಅವರು ಹೋರಾಟ ಮಾಡಲೇಬೇಕಾಗಿದೆ. ಮತ್ತೆ ಎಲ್ಲರಿಗಿಂತ ಮೇಲೆ ಬರಬೇಕಾಗಿದೆ. ಅದಕ್ಕೆ survival of the fittest ಎಂದು ಹೇಳುತ್ತೇವೆ. ಬಹುಶ: ಅದರ ಹಿನ್ನೆಲೆಯಲ್ಲಿ ಎಲ್ಲೋ ಒಂದು ಕಡೆಗೆ ಯೋಚಿಸಿ ನೀವು ರಾಷ್ಟ್ರದ ಗಮನ ಮೊಟ್ಟಮೊದಲಿಗೆ ಆ ಕಡೆಗೆ ಸೆಳೆಯಲು ನೀವು ಈ ಒಂದು ಪ್ರತ್ಯೇಕವಾದ ಕೃಷಿ ಬಜೆಟ್‌ನ್ನು

ಮಂಡಿಸುವ ಪ್ರಯತ್ನ ಮಾಡಿದ್ದೀರಿ ಎಂದು ನಾನು ಹೇಳಬಯಸುತ್ತೇನೆ. ನಾನು ಈ ಸದನಕ್ಕೆ ಮೊದಲಬಾರಿಗೆ ಆಯ್ಕೆಯಾಗಿರತಕ್ಕಂಥವನು. ಆದರೆ, ನನಗೆ ಅನುಭವ ಇದೆ. ನಾನು ಇದಕ್ಕಿಂತಲೂ ಪಾರ್ಲಿಮೆಂಟಿಗೆ ಆಯ್ಕೆ ಆಗಿ ಸುಮಾರು 20-25 ವರ್ಷಗಳ ಕಾಲ ಸಂಸತ್‌ನಲ್ಲಿದ್ದಂಥವನು.

ನಮ್ಮ ಕರ್ನಾಟಕದ ರಾಜಕೀಯ ಮತ್ತು ರಾಜಕಾರಣಿಗಳು ಹಾಗೂ ಚುನಾಯಿತ ಪ್ರತಿನಿಧಿಗಳಿಗೆ ಬಹಳ ಗೌರವ ಇದ್ದಂಥದನ್ನು ನಾವು ನೋಡಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಸಂಸದೀಯ ವ್ಯವಹಾರಗಳ ಮತ್ತು ಕಾನೂನು ಇಲಾಖೆಯ ಸಚಿವರು ಇಲ್ಲಿರುವುದರಿಂದ, ಅಪರೇಷನ್ ಕಮಲದ ಬಗ್ಗೆ ತಾವು ಜ್ಞಾಪಿಸಿಕೊಳ್ಳಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ತಮಗೆ ಮಧುಲಿಮೆರವರು ಜ್ಞಾಪಕ ಇರಬಹುದು. ಚುನಾಯಿತ ಪ್ರತಿನಿಧಿಗಳಾದ ಎಂಎಲ್‌ಎ, ಎಂಪಿ ಇರಬಹುದು ಅಥವಾ ಇದರ ಕೆಳಗೆ ಬರತಕ್ಕಂಥ ಯಾವುದೇ democracy institution ಇರಬಹುದು, ಪ್ರಜಾಪ್ರಭುತ್ವ ಸಂಸ್ಥೆಯ ಜನಪ್ರತಿನಿಧಿಗಳಿಗೆ ಈ ದೇಶದಲ್ಲಿ ಬಹಳ ಗೌರವ ಇತ್ತು. ಏಕೆಂದರೆ, ನಮ್ಮ ಪ್ರಜಾಪ್ರಭುತ್ವದ ವ್ಯವಸ್ಥೆಯೇ ಆ ರೀತಿಯಾಗಿತ್ತು. For the people, of the people, by the people ಎನ್ನತಕ್ಕಂಥ ಮಾತನ್ನು ಬಹಳ ಹೆಮ್ಮೆಯಿಂದ ಹೇಳುತ್ತೇವೆ. ಜನಗಳಿಗೆ, ಜನಗಳ ಮೂಲಕ ಬಂದಿರತಕ್ಕಂಥ ಒಂದು ವ್ಯವಸ್ಥೆಯಲ್ಲಿ ಆಡಳಿತ ಸೂತ್ರ ಹಿಡಿಯತಕ್ಕಂಥದ್ದರಲ್ಲಿ ನಾವಿದ್ದೇವೆ. ನಮ್ಮ ಬಗ್ಗೆ ಬಹಳ ಗೌರವ ಕೂಡ ಇತ್ತು. ಆದರೆ, ಇವತ್ತಿನದಿವಸ ಕರ್ನಾಟಕ ರಾಜ್ಯದಲ್ಲಿ ನಡೆದಂಥ ಈ ರಾಜಕೀಯ ಬೆಳವಣಿಗೆಗಳು ನಮಗೆ ತಲೆ ತಗ್ಗಿಸುವಂತೆ ಮಾಡಿದೆ. ಇವತ್ತಿನದಿವಸ ನಿಮಗೊಂದು ಮಾತನ್ನು ಹೇಳುವುದೇನೆಂದರೆ, ತಾವು ತಂದಿರುವ ಆಪರೇಷನ್ ಕಮಲದ ಬಗ್ಗೆ ಒಂದು ಕ್ಷಣ ತಾವು ಯೋಚನೆ ಮಾಡಬೇಕಾಗಿದೆ. Anti-defection Law ಈಗ ಇದೆ. ಈ ಪಕ್ಷಾಂತರ ನಿಷೇದ ಕಾಯಿದೆ ಬೇಕೇನು ಮಾನ್ಯ ಮೊರಾರ್ಜಿ ದೇಸಾಯಿರವರು ಪ್ರಧಾನ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಮಾನ್ಯ ಶಾಂತಿಭೂಷಣ್‌ರವರು ಕಾನೂನು ಮಂತ್ರಿಯಾಗಿ Anti-defection Law ಬಿಲ್ introduce ಮಾಡಿದರು. ಪಕ್ಷಾಂತರ ನಿಷೇದ ಕಾಯಿದೆಯನ್ನು ತಂದಾಗ

ಹಿರಿಯ ಸಮಾಜವಾದಿ ಮತ್ತು ಪಾರ್ಲಿಮೆಂಟ್‌ನ ಮೆಂಬರ್ ಆಗಿದ್ದಂಥ ಮಾನ್ಯ ಮದುಲಿಮೆರವರು. ಇದರ ಬಗ್ಗೆ ಉಗ್ರವಾಗಿ ವಿರೋಧ ಮಾಡಿದಾಗ ಮಾನ್ಯ ಮೊರಾರ್ಜಿದೇಸಾಯಿ ಮತ್ತು ಮಾನ್ಯ ಶಾಂತಿ ಭೂಷಣ್‌ರವರು ತತ್ತರಿಸಿ ಹೋದರು. Introduction stage ನಲ್ಲಿಯೆ ಆ ಬಿಲ್‌ನ್ನು ವಾಪಸ್ಸು ತೆಗೆದುಕೊಂಡರು. ಪ್ರಜಾಪ್ರಭುತ್ವದಲ್ಲಿ ಶಾಸಕರನ್ನು ಏನೆಂದು ತಾವು ತಿಳಿದುಕೊಂಡಿದ್ದೀರಿ, ಅವರಿಗೆ ಸಮಾಜದಲ್ಲಿ ಗೌರವ ಮತ್ತು ಒಳ್ಳೆಯ ಸ್ಥಾನ ಇದೆ. ಈ ವ್ಯಕ್ತಿಗಳಿಗೆ ಒಂದು ಜವಾಬ್ದಾರಿ ಇದೆ. Anti-defection law ತಂದು ಅವರನ್ನು ನಿಮ್ಮ ಗುಲಾಮರಾಗಿ ಅಧೀನದಲ್ಲಿಟ್ಟುಕೊಳ್ಳುವುದಕ್ಕೋಸ್ಕರ ಇಂಥ ಒಂದು ಪ್ರಜಾಪ್ರಭುತ್ವ ವಿರೋಧಿ ಮಸೂದೆಯನ್ನು ನಾನು ವಿರೋಧ ಮಾಡುತ್ತೇನೆಂದರು. ಆಗ ನಮಗೆಲ್ಲ ಗೌರವ ಇತ್ತು. ಯಾವುದೇ ಒಂದು ಪಕ್ಷದಿಂದ ಶಾಸಕರಾಗಿ ಆಯ್ಕೆಯಾಗುತ್ತೇವೆಂದರೆ, ಆ ಪಕ್ಷಕ್ಕೆ ನಾವು ಕೊನೆಯವರಿಗೆ ನಿಷ್ಠೆಯಿಂದ ಇರುತ್ತಿದ್ದೆವು. ಪಕ್ಷ ಬೇಡ ಎಂದಾಗ ರಾಜೀನಾಮೆ ಕೊಟ್ಟು ಹೊರಗಡೆ ಬರತಕ್ಕಂಥದನ್ನು ನಾವು ಕಾಣುತ್ತಿದ್ದೆವು. ಅಂಥ ಒಂದು ಸಂದರ್ಭದಲ್ಲಿ ಮಧುಲಿಮೆರವರು ಅದನ್ನು ವಿರೋಧ ಮಾಡಿದರು. ಇದಾದನಂತರ ನಡೆದ ರಾಜಕೀಯ ಬೆಳವಣಿಗೆಗಳಿಂದ Anti-defection law ತಂದಿರುವುದನ್ನು ನಾವು ಕಾಣುತ್ತೇವೆ. ಈ ಮಾತನ್ನು ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ಕರ್ನಾಟಕದಲ್ಲಿ ಒಂದು ಸುಸಂಸ್ಕೃತ ರಾಜಕಾರಣಿಗಳು, ರಾಜಕೀಯ ಮುಖಂಡರುಗಳು ಇದ್ದಂಥ ರಾಜ್ಯವಾಗಿತ್ತು. ಆದರೆ, ಇವತ್ತಿನದಿವಸ ಏನಾಗಿದೆ ಎಂದರೆ, ದೇಶದಲ್ಲಿ ಮೊಟ್ಟಮೊದಲ ಕೃಷಿ ಬಜೆಟ್ ಎನ್ನುವ ಹೆಮ್ಮೆ ಆಗಿದ್ದರೆ, ಮತ್ತೊಂದು ಕಡೆ ನಾವೆಲ್ಲರೂ ಕೂಡ ತಲೆ ತಗ್ಗಿಸುವಂಥ ಪರಿಸ್ಥಿತಿ ಇವತ್ತಾಗಿದೆ. ಇವತ್ತಿನದಿವಸ ಎಂಥ ರೀತಿಯ ಒಂದು ರಾಜಕೀಯ ಬೆಳವಣಿಗೆ ಆಗಿದೆ. ಈ ದೇಶದಲ್ಲಿರುವ ನಮ್ಮಗಳಿಗೆ ಏನಾಗಿದೆ? ಇವತ್ತಿನದಿವಸ ಎಲ್ಲ ಕಡೆ ಭ್ರಷ್ಟಾಚಾರ ಮೀತಿಮೀರಿ ಆಗಿದೆ. It is a talk of the town. ಸ್ವಜನಪಕ್ಷಪಾತ, ದುರಾಡಳಿತ, ಜಾತಿಯತೆ ವಿಚಾರದಲ್ಲಿ ಇವತ್ತು ಏನು ಬೆಳವಣಿಗೆಯಾಗಿದೆ ಎಂಬುದನ್ನು ನೋಡಬೇಕು. ಇದನ್ನೆಲ್ಲ ಮರೆಮಾಚುವುದಕ್ಕೆ ಏನಾದರು ಕೃಷಿ ಬಜೆಟ್ ಮಾಡಿ ದೇಶದಲ್ಲಿಯೆ ಬಹಳ ಹೆಗ್ಗಳಿಕೆಯಿಂದ ಮತ್ತು

ಬಹಳ ವಿಶೇಷವಾಗಿ ಮಾಡದ್ದೀವಿ ಎನ್ನುವ ರೀತಿಯಲ್ಲಿ ತಾವು ಯೋಚನೆ ಮಾಡುತ್ತಿರಬಹುದು. ಆದರೆ, ನಮ್ಮ ಕತೆಗಳು ಏನಾಗಿವೆ ಎಂಬುದರ ಬಗ್ಗೆ ನೋಡಬೇಕು. ಸದನದಲ್ಲಿ ನನಗೆ ಬಹಳ ನೋೀವಾಗಿರುತಕ್ಕಂಥ ವಿಚಾರ ಏನೆಂದರೆ, ಸದನದಲ್ಲಿ ನಡೆದಿರುವಂಥ ಘಟನೆಗಳನ್ನು ನೋಡಿದರೆ ಎಲ್ಲರು ತಲೆತಗ್ಗಿಸವಂತಾಗಿದೆ. ಘಟನೆಗಳು ನಡೆದಾಗ ನಾನು ಮೂಕ ಪ್ರೇಕ್ಷಕನಾಗಿ ಇಲ್ಲಿಯೇ ಕುಳುತುಕೊಂಡಿದ್ದೆ. ಇದು ನಿಮಗೆ ತಿರುಗುಬಾಣವಾಯಿತು. ಆಪರೇಷನ್ ಕಮಲ ಎಂದು ತಾವು ಏನು ಮಾಡಿದ್ದೀರಿ ಅದರ ನೆಟ್ ರಿಸಲ್ಟ್ ಅವತ್ತಿನದಿವಸ ಇಲ್ಲಿ ನಡೆದಂಥ ಘಟನೆಗಳಾಗಿವೆ. ನೀವು ಮಾಡಿದಂಥದ್ದು ನಿಮಗೆ ಪ್ರತಿಯಾಗಿ ಇಲ್ಲಿ ತಿರುಗುಬಾಣವಾಯಿತು. ಇಲ್ಲಿ ಎಲೆಕ್ಟ್ರಾನಿಕ್ ಮೀಡಿಯಾ ಇದೆ. ಇಲ್ಲಿ ಅವತ್ತಿನದಿವಸ ನಡೆದಂಥ ಗದ್ದಲವನ್ನು ಹೊರಗಡೆ ಪ್ರತ್ಯಕ್ಷವಾಗಿ ನೋಡುತ್ತಾರೆ. Seeing is believing ಎನ್ನುವ ರೀತಿಯಲ್ಲಿ ಕರ್ನಾಟಕದ ವಿಧಾನಸಭೆಯಲ್ಲಿ ನಡೆದಂಥ ಘಟನೆಯಿಂದ ಅವತ್ತಿನ ದಿವಸ ನಾವೆಲ್ಲರೂ ಕೂಡ ತಲೆತಗ್ಗಿಸುವಂಥ ರೀತಿಯಲ್ಲಿತ್ತು. ಈ ಹಿನ್ನೆಲೆಯಲ್ಲಿ ಇದು ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್, ರಾಜ್ಯಪಾಲರು, ರಾಷ್ಟ್ರಪತಿಗಳು, ಕೇಂದ್ರ ಸರ್ಕಾರದ ಮುಂದೆ ಹೋಯಿತು. ಇವತ್ತು ನಿಮ್ಮ ಭ್ರಷ್ಟಾಚಾರ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆಯವರ ಮುಂದಿದೆ. ಸ್ವತ: ಸರ್ಕಾರವೆ ಬಂದು ಭ್ರಷ್ಟಾಚಾರದ ಬಗ್ಗೆ ತನಿಖೆ ಆಗಬೇಕೆಂದು ನ್ಯಾಯಮೂರ್ತಿ ಪದ್ಮರಾಜ್ ಆಯೋಗದ ನೇಮಕ ಮಾಡಿದೆ. ಇಷ್ಟೂ ಕಡೆ ಇದು ಈಗಾಗಲೇ ಹೊರಟು ಹೋಗಿದೆ. ನ್ಯಾಯಾಂಗದಲ್ಲಿ ಮತ್ತು ರಾಜ್ಯಪಾಲರು, ರಾಷ್ಟ್ರಪತಿಗಳು, ಕೇಂದ್ರ ಸರ್ಕಾರ ಇಲ್ಲೆಲ್ಲಾ ಕೂಡ ಇಲ್ಲಿ ನಡೆದಂಥ ಘಟನೆಗಳು ಹೋಗಿವೆ. ಇದು ಒಳ್ಳೆಯದೇನು? ಬಹುಶ: ನೀವು ಮಾಡಿದಂಥ ಆಪರೇಷನ್ ಕಮಲ ಎಂಥಾ ಒಂದು ಅಸಹ್ಯಕಾರಿಯಾದಂಥ ಮತ್ತು ಪ್ರಜಾಪ್ರಭುತ್ವದಲ್ಲಿ ಒಂದು ಅಪಾಯಕಾರಿಯಾದಂಥ ಬೆಳವಣಿಗೆಗಳಿಗೆ ಇವತ್ತಿನದಿವಸ ನಾವು ಕಾರಣರಾಗಿ ಬಿಟ್ಟಿದ್ದೇವೆ. ಕರ್ನಾಟಕ ರಾಜ್ಯದ ರಾಜಕಾರಣಿಗಳು ತಲೆತಗ್ಗಿಸುವಂಥ ರೀತಿಯಲ್ಲಿ ಆಗಿದೆ. ಮಾನ್ಯ ಮುಖ್ಯ ಮಂತ್ರಿಗಳೆ, ಇದು ಎಲ್ಲಿಯವರೆಗೆ ಬಂದಿದೆ ಎಂದರೆ, ಕರ್ನಾಟಕ ರಾಜ್ಯದ ಎಂ.ಎಲ್.ಎ. ಎಂದು ಹೇಳುವುದಕ್ಕೆ ನನಗೆ

ನಾಚಿಕೆ ಆಗುತ್ತದೆ. ಜನ ನಮ್ಮನ್ನು contempt ಆಗಿ ನೋಡತಕ್ಕಂಥ ರೀತಿಯಲ್ಲಿ ಬಂದಿದ್ದಾರೆ. ಇಲ್ಲಿ ನಡೆದಿರುತಕ್ಕಂಥ ಘಟನೆಗಳಿಂದ ಜನ ನಮ್ಮನ್ನು ಅಪರಾಧಿಗಳಾಗಿ ನೋಡುತ್ತಿದ್ದಾರೆ. ಇವತ್ತಿನದಿವಸ ನಾವುಗಳು ರೆಸಾರ್ಟ್‌ಗಳಿಗೆ ಹೋಗ ಬೇಕಾಗಿದೆ. ಜನಪ್ರತಿನಿಧಿಗಳಾಗಿ ಯಾವ ರೀತಿಯಾಗಿ ನಡೆದು ಕೊಳ್ಳುತ್ತಿದ್ದೇವೆಂದು ಮತ್ತು ಯಾವರೀತಿಯಾದ ಬೆಳವಣಿಗೆಗಳು ಆಗಿವೆ ಎಂಬುದನ್ನು ಮತ್ತು ನಮ್ಮ ಹಾವಭಾವಗಳನ್ನು ನೋಡಬೇಕಾಗಿದೆ. ಇವತ್ತೂ ಕೂಡ ಅದು ಮುಗಿಯದೆ ಇರುವ ರೀತಿಯಲ್ಲಿ ಇದೆ. ಈ ಒಂದು ಕಾರಣದಿಂದಲೇ ನಾನು ಹೇಳಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಬಹಳ ಬುದ್ಧಿವಂತಿಕೆಯಿಂದ ಇವೆಲ್ಲವನ್ನು ನಿರೀಕ್ಷೆ ಮಾಡಿ ದೇಶದಲ್ಲಿ ಮೊಟ್ಟ ಮೊದಲನೆಯದಾಗಿ ಕೃಷಿ ಬಜೆಟ್ ಮಾಡಿ ಇವೆಲ್ಲವನ್ನು ಮರೆಮಾಚತಕ್ಕಂಥ ರೀತಿಯಲ್ಲಿ ಮಾಡಿದ್ದಾರೆ. ಇದು ಆಗಬಾರದು. ನಿಜವಾದ ಕೃಷಿಕರ ಬಗ್ಗೆ ಆಸಕ್ತಿ ವಹಿಸಿ ಅವರ ಹಿತಾಸಕ್ತಿಯನ್ನು ಬಯಸಿ ಅವರಿಗೆ ಒಳ್ಳೆಯದನ್ನು ಮಾಡಬೇಕಾಗುತ್ತದೆ. ಏಕೆಂದರೆ, ಮಾನ್ಯ ಮುಖ್ಯ ಮಂತ್ರಿಗಳು ಅವರ ಭಾಷಣದ ಪೀಠಿಕೆಯಲ್ಲಿ ಮಾತನಾಡಿರುವುದನ್ನು ನಾನು ನೋಡಿದ್ದೇನೆ. ರೈತರ ಹೆಸರಿನಲ್ಲಿ ತಾವು ಪ್ರಮಾಣವಚನ ಸ್ವೀಕಾರ ಮಾಡಿದ್ದೀರಿ ಎನ್ನತಕ್ಕಂಥದು ಇದೆ. ಕುವೆಂಪುರವರ ನೇಗಿಲ ಯೋಗಿ ಎಂಬ ರೈತ ಗೀತೆ ಎಲ್ಲರಿಗೂ ಸ್ಫೂರ್ತಿ ಬರುವ ರೀತಿಯಲ್ಲಿ ನಾವು ಇವತ್ತಿನದಿವಸ ಎಲ್ಲಾ ಕಾರ್ಯಕ್ರಮಗಳಲ್ಲಿ ಹಾಡುತ್ತೇವೆ. ರೈತನನ್ನು ಪ್ರಾತ:ಸ್ಮರಣಿಯನ್ನಾಗಿ ಮಾಡಿಕೊಂಡು ಅಂದರೆ ನೇಗಿಲ ಯೋಗಿಯನ್ನು ನೆನೆಯುತ್ತೇನೆಂಬುದು ಮಾನ್ಯ ಮುಖ್ಯ ಮಂತ್ರಿಯವರಿಗೆ ಇದೆ. ಬಹುಶ: ಅವರೇನಾದರು ಪ್ರಾತ:ಸ್ಮರಣಿಯಾಗಿದ್ದರೆ ನೀವು ಯಾವುದೇ ಗುಡಿ ಗುಂಡಾರಗಳಿಗೆ ನಿಜವಾಗಿಯೂ ಕೂಡ ಹೋಗುವ ಆಗಿರಲಿಲ್ಲ. ರೈತನ ಬಗ್ಗೆ ನಿಮಗೆ ಅಷ್ಟೊಂದು ನಂಬಿಕೆ ಇದ್ದಿದ್ದರೆ ಮತ್ತು ಆತನೇ ಅನ್ನದಾತ ಎಂದು ಆತನ ಹೆಸರಿನಲ್ಲಿ ಹೋರಾಟ ಮಾಡಿ ಅಧಿಕಾರ ತೆಗೆದುಕೊಂಡು ಆತನ ಹೆಸರಿನಲ್ಲಿ ಪ್ರಮಾಣವಚನ ತೆಗೆದುಕೊಂಡಿದ್ದು ಆತ ನನಗೆ ಪ್ರಾತ:ಸ್ಮರಣಿಯ ಎಂದು ಹೇಳಿದರೆ ತಾವು ಯಾರನ್ನು ಪ್ರಾತ:ಸ್ಮರಣಿಯ ಮಾಡುತ್ತಾರೆಯೋ ಬಹುಶ: ಅವರ ಮೇಲೆ ನಂಬಿಕೆ ಇಟ್ಟಿದ್ದರೆ, we must have faith in

people in the democracy. ರೈತರ ಬಗ್ಗೆ ತಮಗೆ ಇರತಕ್ಕಂಥ ಕಾಳಜಿ ಬಗ್ಗೆ ಮೆಚ್ಚಬೇಕಾಗಿದೆ. ಆದರೆ, ಅದು ನಿಮ್ಮ ವೈಯಕ್ತಿಕವಾದಂಥದು. ಅದು ಬೇಕಾಗಿರಲಿಲ್ಲವೆಂಬ ದೃಷ್ಟಿಯಿಂದ ನಾನು ಹೇಳಿದೆ. ನಿಜವಾದಂಥ ರೀತಿಯಲ್ಲಿ ಅವರಿಗೆ ಪ್ರಾತ:ಸ್ಮರಣಿಯವಾಗಿದ್ದರೆ ಬಹುಶ: ಈ ಸದನದಲ್ಲಿ ಇವತ್ತು ನಾನು ಮಾತನಾಡಬಾರದು. ಆದರೆ, ತಾವು ವಾಮಾಚಾರ ಎನ್ನತಕ್ಕಂಥದು ಅಂದರೆ, ನಮ್ಮ ವಿಧಾನಸೌಧಕ್ಕೆ ಬರತಕ್ಕಂಥ ಗೇಟ್‌ಗಳಲ್ಲಿ ಮಾಯ, ಮಾಟ, ಮಂತ್ರ, ಹೋಮ, ಹವನ, ಯಜ್ಞಗಳೆಲ್ಲ ಆಗುತ್ತಿವೆ. ಮಾನ್ಯ ಈಶ್ವರಪ್ಪನವರಿಗೆ ಇದೇ ಸಂಸ್ಕಾರಗಳು ಆಗಿರಬೇಕು. ಏಕೆಂದರೆ, ನೀವು ಸಂಸ್ಕಾರದ ಬಗ್ಗೆ ಬಹಳ ಮಾತನಾಡುತ್ತೀರಿ. ನಿಮಗೆ ಸಂಸ್ಕಾರಗಳು ಯಾವ ರೀತಿಯಾಗಿದೆ ಎಂದು ನಾನು ನೋಡುತ್ತಿದ್ದೇನೆ. ಮತ್ತೆ ನಿಮಗೆ ಎಲ್ಲಿ ಸಂಸ್ಕಾರವಾಗಿದೆ ಎಂಬುದು ನನಗೆ ಗೊತ್ತಿದೆ. ಇವೆಲ್ಲ ನಿಮ್ಮ ಆಲೋಚನೆಗೆ ಬರುವುದಿಲ್ಲವೆ? ನಿಮ್ಮ ಮೂರು ವರ್ಷಗಳ ಆಡಳಿತದಲ್ಲಿ ಸಂಸ್ಕಾರದ ಫಲ ಯಾವರೀತಿಯಾಗಿ ಇರಬೇಕಾಗಿತ್ತೋ ಅದನ್ನು ನಾವು ಖಂಡಿತ ಕಾಣುತ್ತಿಲ್ಲ. ಮಾಟ, ಮಂತ್ರ, ಹೋಮ, ಹವನ, ಯಜ್ಞಗಳೆಲ್ಲವನ್ನು ನೋಡಿದಂಥ ಸಮಯದಲ್ಲಿ ನಿಮಗೆ ರೈತರು ಪ್ರಾತ: ಸ್ಮರಣಿಯಾಗಬೇಕಾಗಿತ್ತು. ಪ್ರಜಾಪ್ರಭುತ್ವದಲ್ಲಿ ನೀವು ಜನಗಳ ಮೇಲೆ ನಂಬಿಕೆ ಇಡಬೇಕಾಗಿತ್ತು. ಏಕೆಂದರೆ, ಅವರುಗಳು ಪ್ರಭುಗಳಾಗಿದ್ದಾರೆ. ನೀವು ನಿಜವಾದ ರೀತಿಯಲ್ಲಿದ್ದರೆ, ಬಹುಶ: ಇವತ್ತು ವಿರೋಧಪಕ್ಷ ಮತ್ತು ಆಡಳಿತ ಪಕ್ಷದ ಕಡೆಯಿಂದ ಹೇಳಿಕೆ ಮತ್ತು ಪ್ರತಿ ಹೇಳಿಕೆಗಳನ್ನು ಕೊಡುವುದಕ್ಕೆ ಅವಕಾಶ ಇರುತ್ತಿರಲಿಲ್ಲ ಎಂಬುದನ್ನು ನಾನು ತಮಗೆ ತಿಳಿಸಿ ಹೇಳುವುದಕ್ಕೆ ಬಯಸುತ್ತೇನೆ. ಪ್ರತ್ಯೇಕವಾಗಿ ಕೃಷಿ ಬಜೆಟ್ ಮಾಡಿರುವಂಥದು ತುಂಬಾ ಚೆನ್ನಾಗಿದೆ. ಕೃಷಿ ಬಜೆಟ್ ಬಗ್ಗೆ ನಾನು ಏತಕ್ಕೆ ಮಾತನಾಡುತ್ತಿದ್ದೇನೆಂದರೆ, ಈ ರಾಜಕೀಯ ಬೆಳವಣಿಗೆಗಳನ್ನು ಮರೆಮಾಚುವಂತಹ ಹಿನ್ನೆಲೆಯಲ್ಲಿ ಏನಾದರು ತಂದಿದ್ದೀರಾ ಎಂಬ ಪ್ರಶ್ನೆಯನ್ನು ಹಾಕಿ ಅದರ ಬಗ್ಗೆ ಮಾತನಾಡುತ್ತಿದ್ದೇನೆ. ಕೃಷಿ ಮತ್ತು ನೀರಾವರಿಗೆ 17,857 ಕೋಟಿ ರೂಪಾಯಿ ಹಣವನ್ನು ಕೊಟ್ಟಿದ್ದೀರಿ. ಸಾವಯವಕೃಷಿಗೆ 200 ಕೋಟಿ ರೂಪಾಯಿ ಕೊಟ್ಟಿದ್ದೀರಿ. ಇವತ್ತಿನದಿವಸ ಬಜೆಟ್ ತಯಾರು ಮಾಡಿ ಅಂಗೈನಲ್ಲಿ ಅರಮನೆಯನ್ನು ತೋರಿಸಬಹುದು.

ಅದೇನು ದೊಡ್ಡ ವಿಷಯವಲ್ಲ. ನೀವು ಅಧಿಕಾರಕ್ಕೆ ಬರುವುದಕ್ಕಿಂಥ ಮುಂಚಿತವಾಗಿಯೇ ನಿಮ್ಮ ಚುನಾವಣೆ ಪ್ರಣಾಳಿಕೆಯನ್ನು ನೋಡಿ ಪತ್ರಿಕಾ ಮಿತ್ರರು ಮಾನ್ಯ ಮುಖ್ಯ ಮಂತ್ರಿಯಾಗಿರುವ ಸನ್ಮಾನ್ಯ ಯಡಿಯೂರಪ್ಪನವರನ್ನು ಕರೆದು ಅನೇಕ ಪ್ರಶ್ನೆ ಕೇಳಿದ್ದರು. ಮತ್ತೆ ನೀವು ಅಧಿಕಾರಕ್ಕೆ ಬಂದರೆ 1 ಲಕ್ಷ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇದನ್ನು ಹೇಗೆ ತರುತ್ತೀರೆಂದು ಕೇಳಿದ್ದರು. ನಾವು ಮಾಡಿ ತೋರಿಸುತ್ತೇವೆಂದು ನೀವು ಆಗಲೇ ಹೇಳಿದ್ದೀರಿ. ನೀವು ಅಧಿಕಾರಕ್ಕೆ ಬರುವುದಕ್ಕಿಂಥ ಮೊದಲೇ ಸುಮಾರು 1 ಲಕ್ಷ ಕೋಟಿಗಳ ಆಶ್ವಾಸನೆಗಳನ್ನು ಕೂಡ ಕೊಟ್ಟಿದ್ದೀರಿ. ಇದಾದ ಮೇಲೆ 60 ರಿಂದ 65 ಸಾವಿರ ಕೋಟಿ ರೂಪಾಯಿಗಳ ಬಜೆಟ್‌ನ್ನು ತಾವು ಮಂಡಿಸಿದ್ದೀರಿ. ಕಳೆದ ಸಲ 70 ರಿಂದ 75 ಸಾವಿರ ಕೋಟಿ ರೂಪಾಯಿಗೆ ಬಜೆಟ್ ಮಂಡನೆ ಮಾಡಿದ್ದೀರಿ. 15 ಸಾವಿರ ಕೋಟಿ ರೂಪಾಯಿ ಜಾಸ್ತಿ ಆಯಿತು. ಮತ್ತೆ ಈಗ 85 ಸಾವಿರ ಕೋಟಿ ರೂಪಾಯಿಗಳ ಬಜೆಟ್ ಅನ್ನು ಮಾಡಿದ್ದೀರಿ. ಬಜೆಟ್‌ನಲ್ಲಿ 1 ಲಕ್ಷ ಕೋಟಿ ಅಥವಾ 1.5 ಲಕ್ಷ ಕೋಟಿ ತೋರಿಸಬಹುದು. ಆದರೆ, ಅದಕ್ಕೆ ತಕ್ಕಂತೆ ನಾವು ಸಂಪನ್ಮೂಲಗಳನ್ನು ಕ್ರೂಡೀಕರಿಸಿ, ಬಜೆಟ್‌ನಲ್ಲಿ ಹೇಳಿರತಕ್ಕಂಥದನ್ನು ಅನುಷ್ಠಾನಕ್ಕೆ ತರುವಂಥದರ ಬಗ್ಗೆ ನಾವು ಪ್ರಶ್ನೆ ಮಾಡುತ್ತಿದ್ದೇವೆ. 2010-11ನೇ ಸಾಲಿನಲ್ಲಿ ಕೊಟ್ಟಂಥ ಬಜೆಟ್ ಅನ್ನು ಎಷ್ಟು ಅನುಷ್ಠಾನಕ್ಕೆ ತಂದಿದ್ದೇವೆ ಎಂಬುದು ಮುಖ್ಯ. ಮಾನ್ಯ ಸುರೇಶ್ ಕುಮಾರ್‌ರವರೆ, ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ನೀವು ಅನುಷ್ಠಾನಕ್ಕೆ ತರಬೇಕಾದರೆ, ನಿಮ್ಮಲ್ಲಿ ಎಲ್ಲಿ ಪ್ರಾಮಾಣಿಕತೆ ಮತ್ತು ಪಾರದರ್ಶಕತೆ ಇದೆಯೋ ಅಲ್ಲಿ ಮಾತ್ರ ತರುವುದಕ್ಕೆ ಸಾಧ್ಯವಿದೆ. ಆದ್ದರಿಂದ, ಈ ಎರಡು ನಿಮಗೆ ಇದೆಯೇ ಎಂಬ ಬಗ್ಗೆ ಯೋಚನೆ ಮಾಡಬೇಕು. ಆದರೆ, ಇದರ ಕೊರತೆ ನಿಮಗೆ ಎದ್ದು ಕಾಣುತ್ತದೆ. ನಿಮಗೆ honesty and transparency ಎನ್ನತಕ್ಕಂಥದೆರಡೂ ಕೂಡ ಇಲ್ಲ. ಈ ಎರಡು ಇಲ್ಲದೆ ಹೋದರೆ ನೀವು ಎಷ್ಟೇ ಬಜೆಟ್‌ಗಳನ್ನು ಮತ್ತು ಎಷ್ಟೇ ಅಂಕಿ-ಅಂಶಗಳನ್ನು ಕೊಡಬಹುದು. ಮಾನ್ಯ ಜಯಚಂದ್ರರವರು ಬಹಳ ಚೆನ್ನಾಗಿ ಮಾತನಾಡುತ್ತಾ how you will manipulating figures and statistics ಎಂದು ಕೇಳಿದರು. ನಿಮಗೆ Reserve Bank of India ದಿಂದ

ಬರಬೇಕಾದರೆ, ಅಧಿಕಾರಿಗಳೆಲ್ಲ ಸೇರಿಕೊಂಡು ಯಾವ್ಯಾವರೀತಿಯಲ್ಲಿ ಮಾಡುತ್ತೀರೆಂಬುದು ಮತ್ತು non–planning ಎಲ್ಲೆಲ್ಲಿ ಖರ್ಚು ಮಾಡಬೇಕಾಗಿದೆ ಎನ್ನತಕ್ಕಂಥದ್ದು it is a test of manipulating thing.

ನನಗೆ ಶ್ರೀ ಚರ್ಚಿಲ್‌ರವರು ಹೇಳಿರುವ ಒಂದು ಮಾತು ಜ್ಞಾಪಕಕ್ಕೆ ಬರುತ್ತದೆ. ಬಸವರಾಜ ಬೊಮ್ಮಾಯಿಯುವರೆ ಚರ್ಚಿಲ್ ಅವರು, ಒಂದು ಮಾತನ್ನು ಹೇಳಿದ್ದ. ಜಗತ್ತಿನಲ್ಲಿ ಮೂರು ತರಹದ ಸುಳ್ಳು ಇದೆ ಎಂದು, ಒಂದು ಸಾಧಾರಣವಾದಂಥ ಸುಳ್ಳು, ಎರಡನೆಯದು ದೊಡ್ಡ ಸುಳ್ಳು, ಮೂರನೆಯ ಸುಳ್ಳು ಎಂದರೆ ಸ್ಟಾಟಿಸ್ಟಿಕ್ಸ್ ಎಂದು ಹೇಳಿದ್ದಾ. ನಾವು ನೋಡಿದಾಗ ಅಂಕಿ ಅಂಶಗಳೇ ದೊಡ್ಡ ಸುಳ್ಳು ಅದಕ್ಕಿಂತ ದೊಡ್ಡ ಸುಳ್ಳು ಇನ್ನು ಯಾವುದು ಇಲ್ಲ. ನಾವು manipulate ಮಾಡಲೇಬೇಕಾಗುತ್ತದೆ. ಅದನ್ನು ನಾವು ನೋಡುತ್ತಿದ್ದೇವೆ. ಆದ್ದರಿಂದ ನಾನು ಹೇಳಿದೆ ಬರೀ ಅಂಕಿ ಅಂಶಗಳು ಅಲ್ಲ, ನೀವು ನಿಜವಾಗಲೂ ಬಜೆಟ್‌ನಲ್ಲಿ ಕೊಟ್ಟಂಥದ್ದು ಎಷ್ಟು ಅದನ್ನು ಅನುಷ್ಠಾನಕ್ಕೆ ತರತಕ್ಕಂಥ ರೀತಿಯಲ್ಲಿ ನಿಮ್ಮ ಪ್ರಾಮಾಣಿಕತೆ ಆಡಳಿತದಲ್ಲಿ ಪ್ರಾಯೋಗಿಕ ಎದ್ದು ಕಾಣುತ್ತದೆಯೆ? ಅದು ಇಲ್ಲದೆ ಹೋದರೆ ಅನುಷ್ಠಾನವಾಗುವುದಿಲ್ಲವೆನ್ನತಕ್ಕಂಥ ಮಾತನ್ನು ಹೇಳಬೇಕಾಗುತ್ತದೆ. ಬಜೆಟ್‌ನಲ್ಲಿರುವ ಡಿಟೇಲ್ಸ್ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ, ನಿಮಗೆ ವರಮಾನ ಸಂಗ್ರಹವಾಗುತ್ತದೆಯೆ?

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, statistic ಬಗ್ಗೆ ಮಾನ್ಯ ಹಿರಿಯ ಸದಸ್ಯರು ಏನು ಹೇಳಿದ್ದಾರೆ ಅದು ಖಂಡಿತವಾಗಿಯೂ..

ಶ್ರೀ ವಿ. ಶ್ರೀನಿವಾಸ್ ಪ್ರಸಾದ್: ನಾನು ಜನರಲ್ಲಾಗಿ ಹೇಳಿದೆ.

ಶ್ರೀ ಬಸವರಾಜ ಬೊಮ್ಮಾಯಿ: ನಾನು ಜನರಲ್ಲಾಗಿ ಮಾತನಾಡುತ್ತಿದ್ದೇನೆ. ಇದು ಎಷ್ಟು miss guiding ಇರುತ್ತದೆಂದರೆ, law of averageನಲ್ಲಿ ಒಂದು ನದಿ ದಾಟಬೇಕಾದರೆ ಎರಡು ಫೀಟ್ ಆಳ ಇದೆ ಎಂದು ದಾಟುವುದಕ್ಕೆ ಹೋದರೆ 10 ಫೀಟ್ ಆಳ ಇದ್ದರೆ ಹೇಗೆ ಬೀಳುತ್ತಾನೆ ಎನ್ನುವುದು. statistic ಬಗ್ಗೆ ಹಳೆಯ ಕತೆ. ಆದರೆ ಇವತ್ತು ಎಷ್ಟರ ಮಟ್ಟಿಗೆ

JSDP, statistics ಎಲ್ಲಾ miss-guiding ಇದೆ ಎಂದರೆ ಎಲ್ಲಾ ದೇಶ ಮತ್ತು World Bank ಗಳು ಅದರ ಆಧಾರದ ಮೇಲೆ ನಡೆಯುತ್ತವೆ. ಆದರೆ King of Bhutan ಅವನು ಏನು ಹೇಳಿದನೆಂದರೆ, ನಾನು ನಿಮ್ಮ ಯಾವ index ನ್ನು ಒಪ್ಪುವುದಿಲ್ಲ. co-efficient of growth ನಾನು ಒಪ್ಪುವುದಿಲ್ಲ. co-efficent of growth is happines. ಒಂದು ಸಂಸಾರದಲ್ಲಿ ಯಾವ ರೀತಿಯ happiness ಇರುತ್ತದೆ ಅದರ co-efficient ಮಾಡಿದರೆ ಮಾತ್ರ growth ಆ family ಯಲ್ಲಿ ಎಂದ ಅವನು ಹೇಳಿದ 10 ವರ್ಷದ ಮೇಲೆ ಇವತ್ತು World Bank ಒಪ್ಪಿಕೊಂಡಿದೆ. ಆ ಹಿನ್ನೆಲೆಯಲ್ಲಿ ಇವತ್ತು ಕಳೆದ ಮೂರು ವರ್ಷದ ಬಜೆಟ್‌ನಲ್ಲಿ ತಾವು ನೋಡಿ. ಕಳೆದ ಮೂರು ವರ್ಷದಲ್ಲಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಿರುವಂಥ ಬಜೆಟ್ ಬಡವರ ಸಂಸಾರದಲ್ಲಿ, ಬಡವರ ಅಂಗಳಕ್ಕೆ ಕರ್ನಾಟಕದ ಇತಿಹಾಸದಲ್ಲಿ ಕಳೆದ ಮೂರು ವರ್ಷದ ಬಜೆಟ್ ಬಡವರ ಅಂಗಳಕ್ಕೆ ಹೋಗಿದೆ. ರೈತರ ಅಂಗಳಕ್ಕೆ ಹೋಗಿದೆ. ಇದನ್ನು ನಾವು ಒಪ್ಪಿಕೊಳ್ಳಬೇಕು. ಬಜೆಟ್ ವಿಧಾನಸೌಧದ ಮೂರನೆಯ ಮಹಡಿ ಮತ್ತು trading Chamber of Commerce ನಲ್ಲಿತ್ತು. ಅದನ್ನು ಜನರ ಬಳಿಗೆ ತೆಗೆದುಕೊಂಡು ಹೋಗಿರುವ ಕೀರ್ತಿ ಮಾನ್ಯ ಯಡಿಯೂರಪ್ಪನವರಿಗೆ ಸೇರುತ್ತದೆ. ನಿಮ್ಮನ್ನು ಒಪ್ಪಿಸುವುದಕ್ಕೆ ನಾನು ಈ ಮಾತನಾಡುತ್ತಿಲ್ಲ. ನೀವು ಒಪ್ಪಬಹುದು ಅಥವಾ ಬಿಡಬಹುದು. Co-efficient of happiness ಆ ಸಂಸಾರದಲ್ಲಿ ಏನು ನೆಮ್ಮದಿ ಬಂದಿದೆ ಅದನ್ನು ಅವರು ಖಂಡಿತವಾಗಿ ಒಪ್ಪಿಕೊಳ್ಳುತ್ತಾರೆ.

ಶ್ರೀ ವಿ.ಶ್ರೀನಿವಾಸ ಪ್ರಸಾದ್: ಮಾನ್ಯ ಅಧ್ಯಕ್ಷರೆ, ನಾನು ಸೂಕ್ಷ್ಮವಾಗಿ ಹೇಳುತ್ತಿದ್ದೆ. ನಿಮ್ಮಲ್ಲಿ ಎಷ್ಟು ವರಮಾನ ಸಂಗ್ರಹವಾಗುತ್ತದೋ ಆ ಯೋಜನೆಗಳ ಅನುಷ್ಠಾನಕ್ಕೆ ಬೇಕಾದ ಮೊತ್ತ ಏನು ಇದೆ ಅದು ಹೆಚ್ಚು ಅಂತರ ಇರಬಾರದು. ನಾವು ಎಷ್ಟೆ ಪ್ರಯತ್ನ ಮಾಡಿದರೂ ಕೂಡ ಮಾನ್ಯ ಬೊಮ್ಮಾಯಿಯವರೆ, ಬಜೆಟ್‌ನಲ್ಲಿ ಅವರಿಗೆ ಗೊತ್ತಿದೆ, 6ನೇ ಸಲ ಬಜೆಟ್ ಮಂಡಿಸಿರತಕ್ಕಂಥವರು. ನೀವು ಬಹಳ ಸಿನ್ಸಿಯರಾಗಿ ಬಜೆಟ್‌ನಲ್ಲಿ ಕೊಟ್ಟಿರತಕ್ಕಂಥ ಆಶ್ವಾಸನೆಗಳು ಅದಕ್ಕೆ ತಕ್ಕಂತೆ resource ಎಲ್ಲಾ mobilize

ಮಾಡಿ ನೀವು ಪ್ರಯತ್ನ ಮಾಡಿದರೆ ಬಹಳ ದೊಡ್ಡ ಸಾಧನೆ ಎಂದರೆ 70–75% ಅದನ್ನು ಅವರು ಉತ್ತರ ಕೊಡುವಾಗ ಹೇಳುತ್ತಾರೆ. ತಾವು ಕೂಡ ಕೇಳಿದಿರಿ ಇವತ್ತು ವಿರೋಧ ಪಕ್ಷದವರು ಮಾತನಾಡಿದ್ದಾರೆ ಅವರು ಉತ್ತರವನ್ನು ಕೊಡಬೇಕಾಗುತ್ತದೆ. ಇನ್ನೂ 16000 ಕೋಟಿ ರೂ.ಗಳು ಇವರು ಖರ್ಚು ಮಾಡದೆ ಉಳಿದಿದೆ ಇನ್ನು ಎರಡು ತಿಂಗಳಲ್ಲಿ ಖರ್ಚು ಮಾಡುತ್ತೀರಾ ಎನ್ನತಕ್ಕಂಥದ್ದು ನಾನು ಯಾವುದನ್ನು ಕೂಡ ಮರೆ ಮಾಚಿರುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಅವರು ಹೇಳಿರತಕ್ಕಂಥ ಮಾತು ಹೇಳಿದ್ದಾರೆ.ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವಾಗ ಹೇಳಬೇಕಾಗುತ್ತದೆ, ಅವರು ಉತ್ತರ ಕೊಡುತ್ತಾರೆ. ನಾನು ಹೇಳಿದ್ದು ನಾವು ಎಷ್ಟೆ ಪ್ರಯತ್ನ ಮಾಡಿದರೂ ಕೂಡ ನಮ್ಮ ವರಮಾನ ನಮ್ಮ ಯೋಜನೆಗಳನ್ನು ಜಾರಿಗೆ ತರಬೇಕಾದರೆ ಬಹಳ ವ್ಯತ್ಯಾಸ ಇರಬಾರದು. ಆಗ ಮಾತ್ರ ನಾವು 70–75% ಬಜೆಟ್‌ನಲ್ಲಿ ಏನೇನು ಇಟ್ಟಿದ್ದೇವೆ ಅದನ್ನು ಸಾಧನೆ ಮಾಡುವುದಕ್ಕೆ ಸಾಧ್ಯ ಅದಕ್ಕಿಂತ ಹೆಚ್ಚು ಮಾಡುವುದಕ್ಕೆ ಆಗುವುದಿಲ್ಲ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ. ಕೃಷಿ ಬಜೆಟ್ ಬಗ್ಗೆ ಮಾಧ್ಯಮದಲ್ಲಿ ತುಂಬಾ ಒಳ್ಳೊಳ್ಳೆಯ ಮಾತು ಬಂದಿದೆ. ನಾನು ಒಂದು ಕಡೆ ನೋಡುತ್ತಿದ್ದೆ ತಮ್ಮ ಬಜೆಟ್ ಅನ್ನದಾತನಿಗೆ ಔತಣ ಆಗಬೇಕು ಎನ್ನತಕ್ಕಂಥದ್ದು. Because farmer is the backbone of the country. ಅವನು ಈ ರಾಷ್ಟ್ರದ ಬೆನ್ನೆಲುಬು. ಇವತ್ತು ಏನಾಗಿದೆ, ನಿಮಗೆ ನಿಜ, ಆ ಕನಸು ಇದೆ. ರಾಷ್ಟ್ರದ ಬೆನ್ನೆಲುಬು ಆಗಿರತಕ್ಕಂಥವನಿಗೆ ಅವರ spinal cord ಕಟ್ಟಿ ಹಾಕತಕ್ಕಂಥದ್ದು. ಆದ್ದರಿಂದ ನಾವು ಆತನಿಗೆ ಇವತ್ತು ಈ ಕೃಷಿ ಬಜೆಟ್ ಮುಖಾಂತರ ಸೌಲಭ್ಯಗಳು ಮತ್ತು ಸವಲತ್ತುಗಳು, ಅನುಕೂಲತೆಗಳು ಏನಿವೆ, ಅವುಗಳನ್ನು ಕೊಡ 'ಬೇಕಾಗುತ್ತದೆ. ಆತನ ಬಗ್ಗೆ ಯೋಚನೆ ಮಾಡಿರತಕ್ಕಂಥದ್ದು ಏನಿದೆ ಅವೆಲ್ಲಾ ಅನುಷ್ಠಾನಕ್ಕೆ ಬರಬೇಕು, ತಲುಪಬೇಕು ಎನ್ನುವಂಥದ್ದು. ಆಗ ಮಾತ್ರ ಅನ್ನದಾತನಿಗೆ ಔತಣವಾಗುತ್ತದೆ. ಆದರೆ ಅನ್ನದಾತನ ಹೆಸರಿನಲ್ಲಿ ಯಾರಿಗೆ ಔತಣವಾಗುತ್ತಿದೆ ಎನ್ನತಕ್ಕಂಥದ್ದು ಪ್ರಶ್ನೆ ಇದುವರೆಗೂ ಇತ್ತು. ಅನ್ನದಾತನ ಹೆಸರಿನಲ್ಲಿ ಮಧ್ಯೆವರ್ತಿಗಳು ಭ್ರಷ್ಟ ರಾಜಕಾರಣಿಗಳು, ಭ್ರಷ್ಟ ಅಧಿಕಾರಿಗಳು

ಶಾಮೀಲಾಗಿರತಕ್ಕಂಥವರು, ಇವರೆಲ್ಲರ ಪಾಲಾಗುತ್ತಿದೆ. ರೈತನಿಗೆ ಅನ್ನದೌತಣ ಅಲ್ಲ. ರೈತನ ಹೆಸರಿನಲ್ಲಿ ಬೇರೆಯವರಿಗೆ ಅನ್ನದೌತಣ ಆಗುತ್ತದೆ ಎನ್ನತಕ್ಕಂಥದ್ದು, ಬಹುಶ: ಇದಕ್ಕೆ ಅವಕಾಶ ಕೊಡಬಾರದು ನಾವೆಲ್ಲರೂ ಎನ್ನತಕ್ಕಂಥ ರೀತಿಯಲ್ಲಿ ನಾನು ಹೇಳಿದೆ. ರೈತರ ಹೆಸರಿನಲ್ಲಿ ಬೇರೆಯವರು ಎಲ್ಲಾ ಲೂಟಿ ಮಾಡಿ ಭಕ್ಷಭೋಜನ ಮಾಡುತ್ತಿದ್ದಾರೆ. ರೈತನಿಗೆ ಔತಣ ಸಿಗುತ್ತಿಲ್ಲ. ಅದಕ್ಕಾಗಿಯೆ ನಾನು ಹೇಳಿದೆ. ಆಡಳಿತ ನಡೆಸತಕ್ಕಂಥವರು ಪ್ರಾಮಾಣಿಕತೆ, ಪಾರದರ್ಶಕತೆ ಮತ್ತು ಕಮಿಟ್‌ಮೆಂಟ್ ಆ ಒಂದು ಕಾಳಜಿ ಇದ್ದಾಗ ಮಾತ್ರ ನಿಜವಾದಂಥ ರೀತಿಯಲ್ಲಿರೈತನಿಗೆ ನಿಜವಾದ ಅನ್ನದೌತಣ ಆಗುತ್ತದೆ, ಅರ್ಥಾತ್ ಎಲ್ಲಾ ರೀತಿಯಾದಂಥ ಅನುಕೂಲತೆಗಳು ಸೌಲಭ್ಯಗಳು ಅವನಿಗೆ ಸಿಗಲಿಕ್ಕೆ ಸಾಧ್ಯ ಎನ್ನತಕ್ಕಂಥದ್ದನ್ನು ನಾನು ಈ ಸಂದರ್ಭದಲ್ಲಿ ತಿಳಿಸಿ ಹೇಳುತ್ತೇನೆ. ರೈತರಿಗೆ ಸಿಗುವ ಸೌಲಭ್ಯಗಳ ಬಗ್ಗೆ ಮಾನ್ಯ ಜಯಚಂದ್ರರವರು ಕೂಡ ಹೇಳಿದರು. Minimum support price ಇವತ್ತು ಬಹಳ ಅವೈಜ್ಞಾನಿಕವಾದಂಥದ್ದು ಇವತ್ತು ರೈತನ ಬಗ್ಗೆ minimum support price ಎಂದು ಎಲ್ಲೂ ಕೂಡ ಇಲ್ಲ. ಆ ರೈತನಿಗೆ ಲಾಭದಾಯಕ ಬೆಲೆ ಕೊಡುವುದಕ್ಕಾಗುವುದಿಲ್ಲ. Remunerative price is different from minimum support price. ಬೆಳದಂಥದ್ದಕ್ಕೆ ಬೆಲೆ ಕೊಡುವುದಕ್ಕೆ ಆಗದೆ ಅವನಿಗೆ minimum support price ಕೊಡುವುದು, ಅವನು ಆತ್ಮಹತ್ಯೆಗೆ ಹೋಗಬಾರದು, ಅವನು ಉಳಿದುಕೊಳ್ಳಬೇಕು ಎನ್ನತಕ್ಕದ್ದೇ ಕನಿಷ್ಟ ಬೆಂಬಲ ಬೆಲೆ. ಅವನಿಗೆ ನಿಜವಾದ ಬೆಲೆ ಇದೆಯಲ್ಲಾ ಲಾಭದಾಯಕವಾದ ಬೆಲೆ ಇದುವರೆಗೂ ಕೊಟ್ಟಿಲ್ಲ. ಅವನ ಶ್ರಮಕ್ಕೆ ಅವನ ದುಡಿಮೆಗೆತಕ್ಕಂತೆ remunerative price ಲಾಭದಾಯಕವಾದ ಬೆಲೆಯನ್ನು ಇವತ್ತಿನವರೆಗೂ ನಮಗೆ ಕೊಡುವುದಕ್ಕಾಗಲಿಲ್ಲ. ಇದು ಬಹಳ ಮುಖ್ಯ, ನಿಮ್ಮ ಎಲ್ಲಾ ಸೌಲಭ್ಯಗಳ ಜೊತೆಗೆ ಅವನು ಬೆಳೆದಂತ ಬೆಲೆಗೆ ಅವನಿಗೆ remunerative price ಇವತ್ತು ನಾವು ಸರಿಯಾದ ಬೆಲೆಯನ್ನು ಕೊಡುವುದಕ್ಕಾಗುತ್ತಿಲ್ಲ. ನಿಮ್ಮ ಸೌಲಭ್ಯಗಳು ಒಂಧು ಕಡೆ. ಆದರೆ ರೈತನಿಗೆ ಬೇಕಾಗಿರತಕ್ಕಂಥದ್ದು ಅವನ ಶ್ರಮಕ್ಕೆ ತಕ್ಕಂಥ ಬೆಲೆಯನ್ನು ಕೊಡತಕ್ಕಂಥ ರೀತಿಯಲ್ಲಿ ಆಗಬೇಕು. ಈ

ಸೌಲಭ್ಯಗಳ ಜೊತೆಗೆ ಅದು ಇದ್ದಾಗ ಮಾತ್ರ ಅದು ಸಾರ್ಥಕವಾಗುತ್ತದೆ. ರೈತನಿಗೆ ನಾವು ಮಾರ್ಗದರ್ಶನ ಮತ್ತು ತಿಳುವಳಿಕೆಯನ್ನು ಮಾಡುತ್ತಿಲ್ಲ. ಇವತ್ತು demand and production ಇವತ್ತು ನಾವು ಬಹಳ ಯೋಚನೆಯನ್ನು ಮಾಡಬೇಕಾಗಿದೆ. ಇವತ್ತು ಎಲ್ಲಿ ಕುಸಿದು ಬೀಳತಕ್ಕಂಥದ್ದು ಎಲ್ಲಿ ಬೇಡಿಕೆ ಇದೆ ಅಲ್ಲಿ ಉತ್ಪಾದನೆ ಬೇಡಿಕೆಗಿಂತ ಹೆಚ್ಚಾಗಿ ಬಿಟ್ಟರೆ ಬಹುಶ: ಅಲ್ಲಿ ಕುಸಿದು ಬೀಳುತ್ತದೆ. ಆದ್ದರಿಂದ ಇದನ್ನು ನಾವು ಬಹಳ ಎಚ್ಚರಿಕೆಯಿಂದ ನೋಡಬೇಕು. ನಮಗೆ cropping pattern ಇಲ್ಲ. ಬೆಳೆಯನ್ನು ಯಾವ ರೀತಿಯಲ್ಲಿ ಬೆಳೆಸಬೇಕು ಎನ್ನುವ ವಿಧಾನ ನಮ್ಮಲ್ಲಿ ಇಲ್ಲ. ಮಾನ್ಯ ಜಯಚಂದ್ರರವರು ಹೇಳಿದ ಹಾಗೆ ವಿಪರೀತ production ಆಗಿಬಿಟ್ಟರೆ demand ಆಗಿ ಬಿಟ್ಟರೆ ಏನು ಮಾಡುತ್ತೀರಿ. ನೀವು ಹೇಳಿದ ಹಾಗೆ ಅದನ್ನು ಇಟ್ಟುಕೊಳ್ಳುವುದಕ್ಕೆ storage facilities ಇಲ್ಲ. ರೈತ ಈರುಳ್ಳಿ, ಆಲೂಗೆಡೆ, ಟೊಮೆಟೋ ಚೆಲ್ಲುತ್ತಾನೆ. ಆಸೆಯಿಂದ ಬೆಳೆಗಳನ್ನು ಬೆಳೆಯುತ್ತಾನೆ demand ಅವನಿಗೆ ಕಡಿಮೆ ಇರುತ್ತದೆ ಉತ್ಪಾದನೆ ಜಾಸ್ತಿಯಾಗುತ್ತದೆ. ಅವನಿಗೆ ಸಂಗ್ರಹ ಮಾಡುವುದಕ್ಕಾಗುವುದಿಲ್ಲ. ಅವನಿಗೆ minimum support price ಕೂಡ ಕೊಡುವುದಕ್ಕಾಗುವುದಿಲ್ಲ. ಅವನು ಆತ್ಮಹತ್ಯೆ ಮಾಡಿಕೊಂಡು ಬೀದಿಗೆ ಬರದೆ ಇನ್ನೇನು ಮಾಡುತ್ತಾನೆ. ಬರೀ 40 ಪುಟಗಳ ಸೌಲಭ್ಯಗಳು, ಅವನಿಗೆ ತಿಳುವಳಿಕೆ ಕೊಡಬೇಕಾಗಿರುವಂಥದ್ದು ನಾವು, ಯಾವ್ಯಾವ ಬೆಳೆಯನ್ನು ಯಾವ್ಯಾವ ರೀತಿಯಲ್ಲಿ ಎಲ್ಲಿ ಬೆಳೆಯಬೇಕು ಎನ್ನತಕ್ಕಂಥದು, ಬೇಡಿಕೆಗೆ ತಕ್ಕಂತೆ ಉತ್ಪಾದನೆ ಮಾಡಿದರೆ remunerative price ಕೊಡಬಹುದು, ಅವನು ಉಳಿದು ಕೊಳ್ಳುವುದಕ್ಕೆ ಅವನಿಗೆ ಸಾಧ್ಯತೆ ಇದೆ. ಇದನ್ನು ಮಾಡದೆ ಇರತಕ್ಕಂಥದ್ದು. ರೈತ ಬಹಳ ಯೋಚನೆ ಮಾಡುತ್ತಾರೆ. ಕಬ್ಬು ಬೆಳೆಗಾರರ ಹತ್ತಿರ ಮಾತನಾಡುವಾಗ ನಾನು ಕೇಳಿದೆ. ಅವನು ಬಹಳ ನೊಂದು ಹೇಳುತ್ತಾನೆ. ಯಾವ ರೀತಿ ನೀವು ಕಬ್ಬಿಗೆ remunerate ಕೇಳಿ ಕೊಡುತ್ತೀರೋ actual ನೀವು ನೋಡಿ ಮೊದಲು ನಾವು ಕೊಡತಕ್ಕಂಥದ್ದು, ಕೇಸರಿಬಾತಿಗೆ, ಮೊದಲು ಬೆಲೆಯನ್ನು ನಾವು ಸಿಹಿ ತಿಂಡಿಯವರಿಗೆ ಕೊಡುತ್ತೇವೆ. ಎರಡನೆಯ ರೇಟ್ ಸಕ್ಕರೆ ಕಾರ್ಖಾನೆಯವರಿಗೆ ಕೊಡುತ್ತೇವೆ. ಮೂರನೆಯ ಬೆಲೆಯನ್ನು ಕಬ್ಬು ಬೆಳೆಯುವವರಿಗೆ ಕೊಡುತ್ತೇವೆ.

ನಾವು ಇಲ್ಲಿ ರೀವರ್ಸ್ ಗೇರ್. ರೈತ ಹೇಳುವಂಥದ್ದು ಮೊದಲು ಕಬ್ಬಿಗೆ ಕೊಡಿ, ಆಮೇಲೆ ಸಕ್ಕರೆಗೆ ಕೊಡಿ ಆಮೇಲೆ ಸಿಹಿ ತಿಂಡಿಗಳಿಗೆ ಕೊಡಿ ಎಂದು ಹೇಳುವುದರಲ್ಲಿ ಒಂದು ಅರ್ಥ ಇದೆ.

ನಾವು ರೈತನನ್ನು ಕೊನೆಗೆ ತೆಗೆದುಕೊಂಡು ಹೋಗುತ್ತೇವೆ. ಇವರಿಗೆಲ್ಲಾ ಕೊಟ್ಟು ಅವನಿಗೆ ಬೆಲೆಯನ್ನು ಫಿಕ್ಸ್ ಮಾಡುವುದಕ್ಕೆ ಹೋಗುತ್ತೇವೆ. ಅವನಿಗೆ ಸರಿಯಾದಂತಹ ಬೆಲೆಯನ್ನು ಕೊಡಬೇಕು. ಅವನಿಗೊಂದು remunerative price ಕೊಡಿ ಅವನಿಗೆ, ಆಮೇಲೆ ಉತ್ಪಾದನೆ ಮಾಡಿರುವಂತಹ ಸಕ್ಕರೆಗೆ ಕೊಡಿ. ಆಮೇಲೆ ಸಿಹಿತಿಂಡಿಗಳಿಗೆ ಕೊಡಬೇಕು. ಇದನ್ನು ರೈತನು ಕೇಳುತ್ತಿರುವುದು. ಅವನ ವಿಚಾರ ಸರಿಯಾಗಿದೆ. ಅವನ logic, argument correct ಆಗಿ ಇದೆ. ಅವನು ಮಾತನಾಡುವುದಕ್ಕೆ ಹೋಗುತ್ತಾನೆ. ರೈತರಿಗೆ ಯಾವ ರೀತಿಯಲ್ಲಿ ಬರೀ ಸೌಲಭ್ಯವನ್ನು ಕೊಡುವುದಲ್ಲ, ಅವನಿಗೆ ಸರಿಯಾದ ರೀತಿಯಲ್ಲಿ ತಿಳುವಳಿಕೆಯನ್ನು ಕೊಡಬೇಕು. ಅವನಿಗೆ ಸರಿಯಾದ ರೀತಿಯಲ್ಲಿ ಉತ್ಪಾದನೆಗೆ ತಕ್ಕ ಬೆಲೆಯನ್ನು ಕೊಡಬೇಕೆಂಬ ಬಗ್ಗೆಯೂ ಕೂಡ ನಾವು ಮಾಡಿದ್ದೇವೆ. ನಿಮ್ಮ ಸಮಗ್ರ ಕೃಷಿ ನೀತಿಯನ್ನು ನೋಡಿದ್ದೇನೆ ತಾವು ತುಂಬಾ ಚೆನ್ನಾಗಿ ತಂದಿದ್ದೀರಿ. ಸಮಗ್ರ ಕೃಷಿ ನೀತಿಯನ್ನು ತಾವು globalization backgroundನಲ್ಲಿ ತೆಗೆದುಕೊಂಡು ಬಂದಿದ್ದೀರಿ, ಇದು ಬಹಳ ಮುಖ್ಯ. ನಾವು ಜಾಗತೀಕರಣದ ಹಿನ್ನೆಲೆಯಲ್ಲಿ ಬಹಳ ಎಚ್ಚರಿಕೆಯಿಂದ ಯೋಚನೆಯನ್ನು ಮಾಡಬೇಕಾಗುತ್ತದೆ. ಜಾಗತೀಕರಣವೆಂದರೆ it is a free market ಮುಕ್ತವಾದಂತಹ ಮಾರುಕಟ್ಟೆ ಇರಬೇಕು. ಜಗತ್ತಿನಲ್ಲಿ ಎಲ್ಲೇ ಒಂದು ಕಡೆಯಲ್ಲಿ ಉತ್ಪಾದನೆಯಾದರೆ ಅದು ಮತ್ತೊಂದು ಕಡೆಯಲ್ಲಿ ಬರುತ್ತದೆ. ಎಲ್ಲಿ ಬೇಕಾದರೂ ಕೂಡ ಅದು ಹೋಗುತ್ತದೆ. ಇವತತು competitive world ಎಂದು ಕರೆಯುತ್ತೇವೆ. ಸ್ಪರ್ಧಾತ್ಮಕವಾದಂತಹ ಯುಗದಲ್ಲಿ ಜಾಗತಿಕ ಮಟ್ಟದಲ್ಲಿ ಬಹಳ ಮುಖ್ಯವಾಗಿ ಕೃಷಿಯ ಬಗ್ಗೆ ಮಾತನಾಡುವಂತಹ ಸಮಯದಲ್ಲಿ ಎರಡು ಮುಖ್ಯ. ಯಾವುದೇ ವಸ್ತುಗಳು ಉತ್ಪಾದನೆಯಲ್ಲಿ ಅದರಲ್ಲಿಯೂ ಕೂಡ ನಾವು ಕೃಷಿಯ ಬಗ್ಗೆ ಯೋಚನೆಯನ್ನು ಮಾಡುವಂತಹ ಸಮಯದಲ್ಲಿ cost of production ಎಂದು ಹೇಳುತ್ತೇವೆ. ಉತ್ಪಾದನಾ ವೆಚ್ಚ ಮತ್ತು ಗುಣಮಟ್ಟ (quality)

ಇವೆರಡು ಇದ್ದರೆ ಮಾತ್ರ survive ಆಗುವುದಕ್ಕೆ ಸಾಧ್ಯ. ಈ ಜಾಗತಿಕ ಪ್ರಪಂಚದಲ್ಲಿ ಜಾಗತೀಕರಣದ ಹಿನ್ನೆಲೆಯಲ್ಲಿ ಖಾಸಗೀಕರಣದ ಹಿನ್ನೆಲೆಯಲ್ಲಿ, ಉದಾರೀಕರಣದ ಹಿನ್ನೆಲೆಯಲ್ಲಿ, ಯಾವುದೇ ವಸ್ತುಗಳು ಕೂಡ cost of production ರೈತನಿಗೆ ಇದು ಬಹಳ ಮುಖ್ಯ. ಉತ್ಪಾದನೆಯ ವೆಚ್ಚ ಕಡಿಮೆ ಇರಬೇಕು, ಗುಣಮಟ್ಟ ಜಾಸ್ತಿ ಇರಬೇಕು ಇದು ಬಹಳ ಮುಖ್ಯವಾಗಿರುವುದು. ಕೇಂದ್ರ ಸರ್ಕಾರದವರು ಕೂಡ ಕೃಷಿಗೆ ಹೆಚ್ಚು ಒತ್ತನ್ನು ಕೊಟ್ಟಿರುವುದು we must have thrust in research ಎಂದು ನಾವು ಹೇಳುತ್ತೇವೆ. ಕೃಷಿಯಲ್ಲಿ ಸಂಶೋಧನೆಗೆ ಹೆಚ್ಚು ಒತ್ತನ್ನು ಕೊಡಬೇಕೆನ್ನುವಂತಹ ರೀತಿಯಲ್ಲಿ ಇಲ್ಲದೆ ಹೋದರೆ ಆಗುವುದಿಲ್ಲ ಓಬಿರಾಯನ ಕಾಲದಲ್ಲಿ ನೀವು ಮಾಡುತ್ತಿರಲ್ಲಾ, ಅದು ಇವತ್ತಿನ ಜಾಗತೀಕರಣದಲ್ಲಿ ಆಗುವುದಿಲ್ಲ. ನಿಮ್ಮ ಸಮಗ್ರ ಕೃಷಿ ನೀತಿಯನ್ನು ನಾನು ನೋಡಿದ್ದೇನೆ ಅದರಲ್ಲಿ ಬಹಳ ಚೆನ್ನಾಗಿದೆ. ಜಾಗತೀಕರಣದ ಹಿನ್ನೆಲೆಲ್ಲಿ ನೀವು ಕೃಷಿಯ ಸಂಶೋಧನೆಗೆ ಹೆಚ್ಚು ಒತ್ತನ್ನು ಕೊಡಬೇಕಾಗುತ್ತದೆ. ವೈಜ್ಞಾನಿಕವಾಗಿ ಹೆಚ್ಚು ಹೆಚ್ಚು ಸಂಶೋಧನೆಗಳು ಆಗಬೇಕಾಗಿದೆ. ಇದರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಏಕೋ ಬೆಳಕನ್ನು ಚೆಲ್ಲಲಿಲ್ಲ. ಇದನ್ನು ನಾನು ತಮಗೆ ಜ್ಞಾಪಿಸುತ್ತಿದ್ದೇನೆ, ತಾವು ಚೈನಾ ದೇಶಕ್ಕೆ ಯಾವ ಉದ್ದೇಶಕ್ಕಾಗಿ ಹೋಗಿದ್ದೀರಿ? ಏನು ಕೇಂದ್ರ ಸರ್ಕಾರದ ನೀತಿ ಇದೆ, ಪ್ರತಿಯೊಬ್ಬ ಮುಖ್ಯಮಂತ್ರಿಗಳು ಒಂದಲ್ಲ ಒಂದು ರೀತಿಯಲ್ಲಿ ಚೈನಾ ದೇಶಕ್ಕೆ ಹೋಗಬೇಕೆಂದು ಹೋಗಿದ್ದೀರೋ ಇಲ್ಲಾ ನಾನು ಬಂದ ಮೇಲೆ ಇವತ್ತು ಚೈನಾ ದೇಶಕ್ಕೆ ಹೋಗಿ ಬಂದ ಮೇಲೆ ಬಹುಶಃ ಈ ಸದನದಲ್ಲಿ ಯಾರೇ ಅದರೂ ಕೂಡ ತಮ್ಮ ಅನುಭವವನ್ನು ಹೇಳುತ್ತಾರೆಂದುಕೊಂಡಿದ್ದೇನೆ. ಚೈನಾ ದೇಶ ಇವತ್ತು ಚೈನಾ ದೇಶದವರು ಮೊದಲು WTO Agreementಗೆ ಬರಲಿಲ್ಲ ಪಾರ್ಲಿಮೆಂಟ್‌ನಲ್ಲಿ ಕುಳಿತುಕೊಂಡು ಈ ಬಗ್ಗೆ ಬಹಳ ಚರ್ಚೆಗಳು ಆಯಿತು. ನಾವು ಹೆದರಿ ನಡುಗಿ ಹೋಗಿಬಿಟ್ಟೆವು. ಆಮೇಲೆ ಅವರು ಹೇಳಿದರು ಜಾಗತೀಕರಣದ ಬಗ್ಗೆ ಚಾಲೆಂಜ್ ಆಗಿ ಸವಾಲ್ ಆಗಿ ಸ್ವೀಕಾರ ಮಾಡಿ ನಾವು ಬರುತ್ತೇವೆಂದು ಹೇಳಿದರು. ಚೈನಾ ದೇಶಕ್ಕೆ ತಾವು ಭೇಟಿ ಕೊಟ್ಟಾಗ ತಾವು ಅಲ್ಲಿ ನೋಡಿದ್ದೀರಿ. ಅಲ್ಲಿಯ ಕೃಷಿ ತಜ್ಞರ ಜೊತೆಯಲ್ಲಿಯೂ ಕೂಡ ಚರ್ಚೆ ಮಾಡಿರಬಹುದು. ಕೃಷಿಕರ

ಜೊತೆಯಲ್ಲಿ ರೈತರ ಬಗ್ಗೆಯೂ ಕೂಡ ಚರ್ಚೆಯನ್ನು ಮಾಡಿರಬಹುದು. ಇವತ್ತು ಸಂಶೋಧನೆಗೆ ಒತ್ತು ಕೊಟ್ಟು ಕೃಷಿಯಲ್ಲಿ ಚೈನಾ ದೇಶದವರು ಎಷ್ಟು ಪ್ರಗತಿಯಲ್ಲಿ ಸಾಧಿಸಿದ್ದಾರೆ. ನಾನು ಕೇಂದ್ರದಲ್ಲಿ ಆಹಾರ ಸಚಿವನಾಗಿದಂತಹ ಸಮಯದಲ್ಲಿ ಚೈನಾ ದೇಶದ ಬಗ್ಗೆ because ನಾನು ಇದ್ದಂತಹ ಸಮಯದಲ್ಲಿಯೂ ಕೂಡ ಈ ದೇಶದಲ್ಲಿ ಉತ್ಪಾದನೆಯು ಜಾಸ್ತಿಯಾಗುತ್ತಿದೆ. ನಮ್ಮಷ್ಟೇ ಅವರ ಭೂಮಿಯು ಫಲವತ್ತಾಗಿರುವುದು. Non–irrigated area, but ನಮಗಿಂತಲೂ ಹೆಚ್ಚು, ಎರಡರಷ್ಟು ಅಲ್ಲಿ ಇಳುವರಿಯನ್ನು ತೆಗೆಯುತ್ತಿದ್ದಾರೆ. ನಾನು Food Minister ಆಗಿದ್ದವನು, ನನಗೆ ಆಶ್ಚರ್ಯವಾಯಿತು, ಆ ಟೈಮ್‌ನಲ್ಲಿ ನಮ್ಮಲ್ಲಿಯೂ ಕೂಡ ಆಗಿದೆ. All time record production ಆಗಿತ್ತು. ನಾವಿದ್ದಾಗಲೂ ಕೂಡ ಅದು ದಾಖಲೆಯಾಗಿತ್ತು. ಅದು ಆದ ಮೇಲೆ ಇವತ್ತು ಬಂದಿದೆ, (Public Distribution System) ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ನೀವು ಅಂತ್ಯೋದಯ ಯೋಜನೆಯನ್ನು ತೆಗೆದುಕೊಂಡು ಬಂದಿದ್ದೀರಲ್ಲಾ, ಮುಫತ್ತಾಗಿ 35 ಕೆ.ಜಿ. ಕೊಡುವುದು, ನಮ್ಮಲ್ಲಿ ತುಂಬಿ ತುಳುಕಾಡುತ್ತಿತ್ತು. ಇತ್ತೀಚೆಗೆ ಎಪಿಎಲ್‌ನವರಿಗೂ ಕೂಡ ಹಂಚಿ ಎಂದು Supreme Court directions ನೀಡಿದೆ. ಹೇಳಿದ್ದಾರೆ. ಬಹುಶಃ ನಾವಿದ್ದಾಗಲೂ ಕೂಡ ಅಂತ್ಯೋದಯ ಅನ್ನ ಯೋಜನೆಯಲ್ಲಿ 35 ಕೆ.ಜಿ. ಅನಾಥರಿಗೆ, ಅಧೈರ್ಯ ಇಲ್ಲದೆ ಇರುವವರಿಗೆ ಕೊಡಬೇಕೆಂಬ ಸ್ಕೀಮ್‌ನ್ನು ನಾವು ಮೊಟ್ಟ ಮೊದಲ ಬಾರಿಗೆ ತೆಗೆದುಕೊಂಡು ಬಂದಿದ್ದೇವೆ. ನಾನು ಆಗ NDA ಸರ್ಕಾರದಲ್ಲಿ ಸಚಿವನಾಗಿದ್ದೆ ಬಹುಶಃ ಈ ಬಗ್ಗೆ ತಾವು ಕೇಳಬಹುದು. ಆವತ್ತು ನಾನು ಅದರ ಬಗ್ಗೆ ಹೇಳಿದ್ದೆ. ನಾನು ಏತಕ್ಕಾಗಿ ಈ ವಿಚಾರವನ್ನು ಹೇಳಿದೆ ಎಂದರೆ, ಇವತ್ತು ಅವರು ಚೈನಾದೇಶಕ್ಕೆ ಹೋಗಿಬಂದಿದ್ದಾರೆ, ಕೃಷಿ ತಜ್ಞರ ಜೊತೆಯಲ್ಲಿ ಮಾತನಾಡಿದ್ದೀರಿ, ತಾವು ಮಾತನಾಡುವಾಗ ಆ ಬಗ್ಗೆ ಹೇಳಬಹುದು. ತಾವು ಉತ್ತರ ಕೊಡುವಾಗ ಕೃಷಿಯ ಬಗ್ಗೆ ಹೇಳಬಹುದು. ಅಲ್ಲಿ ರೈತರನ್ನು ಭೇಟಿ ಮಾಡಿ ಅವರ ಜೊತೆಯಲ್ಲಿ ತಾವು ಚರ್ಚೆಯನ್ನು ಮಾಡಿದ್ದೀರಾ? ಅಲ್ಲಿ ಯಾವ ರೀತಿಯಾದಂತಹ ಉತ್ಪಾದನೆ cost of production ಎಷ್ಟು ಕಡಿಮೆ ಇದೆ.

ನಾನು Food Minister ಆಗಿದ್ದಾಗ ಅಮೇರಿಕಾ ದೇಶಕ್ಕೆ ಹೋಗಿದ್ದೆ. ಅಲ್ಲಿ ಚೈನೀಸ್ departmental storeಗೆ ಹೋದಾಗ ನನಗೆ ಆಶ್ಚರ್ಯವಾಯಿತು. ಅಮೇರಿಕಾದಲ್ಲಿ ನಮ್ಮವರೇ ಒಬ್ಬ ಪ್ರೊಫೇಸರ್‌ರವರು ನನಗೆ ಹೇಳಿದರು. Just visit Chinis Departmental store, ಹೋಗಿ ಸಾರ್ ಎಂದು ಹೇಳಿದರು. ನಾನು ಅಲ್ಲಿಗೆ ಹೋಗಿ ನೋಡಿದಾಗ ನನಗೆ ಆಶ್ಚರ್ಯವಾಯಿತು Mr. Sureshkumar, ಒಂದು ಡಾಲರ್‌ಗೆ ಅಲ್ಲಿ ಚೈನಾದೇಶದಲ್ಲಿ ಉತ್ಪಾದನೆಯಾದಂತಹ ವಸ್ತುಗಳು ಅಮೇರಿಕಾದೇಶದ ಮಿಡಲ್ಸ್ ಕ್ಲಾಸ್‌ನವರು ಅಲ್ಲಿ ಮುಗಿದು ಬೀಳುತ್ತಿದ್ದರು. ನನಗೆ ಆಶ್ಚರ್ಯವಾಯಿತು, ಇವರು ಯಾವ ರೀತಿಯಾಗಿ ಅಮೇರಿಕಾ ದೇಶದವರ ಜೊತೆಯಲ್ಲಿ ಪೈಪೋಟಿ ಮಾಡಿದ್ದಾರೆ. ಒಂದು ಡಾಲರ್ ಕೊಟ್ಟರೆ ಅವರಿಗೆ ಯಾವುದಾದರೂ cosmetic ಬೇಕಾ ಮನಗೆ ಬೇಕಾದಂತಹ ವಸ್ತುಗಳು ಅವರು ಎಷ್ಟು ಚೆನ್ನಾಗಿ ಮಾಡಿದ್ದಾರೆ. ಏನಪ್ಪಾ ಇಲ್ಲಿ ಉತ್ಪಾದನೆಯ ವೆಚ್ಚ ಏನು? ಇದರ ಗುಣಮಟ್ಟ, ಇವೆರಡು ಇದ್ದರೆ ನಾವು ಯಾರ ಜೊತೆಯಲ್ಲಿಯಾದರೂ ಪೈಪೋಟಿಯನ್ನು ಮಾಡಬಹುದು. ನಮಗೆ ಎಲ್ಲಾ ರೀತಿಯಿಂದಲೂ ಮಾರುಕಟ್ಟೆಯ ಅವಕಾಶಗಳು ಸಿಗುತ್ತದೆ. ಉತ್ಪಾದನೆಯು ಜಾಸ್ತಿಯಾಗುತ್ತದೆ. ಹಾಗಾಗಿ ಅವರು ಕೃಷಿಯಲ್ಲಿ ಕೂಡ ನಮಗಿಂತ 2–3ರಷ್ಟು ಜಾಸ್ತಿ ಇದ್ದಾರೆ. ಅಲ್ಲಿಯ ಭೂಮಿಯ fertilityಯನ್ನು ನೋಡಿಕೊಂಡು ಅಲ್ಲಿಗೆ ಬೇಕಾಗಿರುವಂತಹ ಗುಣಮಟ್ಟವನ್ನು ಅಲ್ಲಿಗೆ ಬೇಕಾಗಿರುವಂತಹ ಉತ್ತಮವಾದಂತಹ ಗೊಬ್ಬರ ಮತ್ತು ಬೀಜ, ಬಿತ್ತನೆಯನ್ನು ಸರಿಯಾದ ರೀತಿಯಲ್ಲಿ, ಸಕಾಲದಲ್ಲಿ ಕೊಟ್ಟು ಉತ್ಪಾದನೆಯನ್ನು ಮಾಡತಕ್ಕಂತದ್ದು. ಅದಕ್ಕೋಸ್ಕರ ಕೃಷಿ ಸಂಶೋಧನೆಗೆ ಯಾವಾಗಲೂ ಕೂಡ ನಾವು ಹೆಚ್ಚು ಒತ್ತನ್ನು ಕೊಡುತ್ತಿದ್ದೇವೆ. ಆ ಹಿನ್ನೆಲೆಯಲ್ಲಿ ತಾವು ಒಂದು ಒಳ್ಳೆಯ ತೀರ್ಮಾನವನ್ನು ತೆಗೆದುಕೊಂಡಿದ್ದೀರಿ. ಆ ಬಗ್ಗೆ ಮಾತನಾಡುತ್ತಾ ತಾವು ಹೇಳಿದ್ದೀರಿ. ನಮ್ಮಲ್ಲಿ Diploma holdersಗಳ ಕೊರತೆ ಇದೆ. Certified Diploma Courseಗಳನ್ನು ಮಾಡಿ ಅದು ತುಂಬಾ ಚೆನ್ನಾಗಿದೆ. ತಾವು ಹೇಳಿದ ಹಾಗೆ ಮಾಡಬೇಕು. ಒಂದು ಸಾವಿರ ಜನರು Agriculture University ಯಿಂದ graduates ಬಂದಿದ್ದರೆ, ಅದರಲ್ಲಿ Post graduationಗೆ ಎಷ್ಟು ಜನ

ಹೋಗುತ್ತಾರೆ. ಖಾಸಗಿ ಕ್ಷೇತ್ರಕ್ಕೆ ಎಷ್ಟು ಜನರು ಹೋಗುತ್ತಾರೆ ಮತ್ತು ನಮಗೆಷ್ಟು ಕೊರತೆ ಇದೆ. ರೈತನಿಗೆ ತಿಳುವಳಿಕೆಯನ್ನು ಹಾಗೂ ಮಾರ್ಗದರ್ಶನವನ್ನು ಕೊಡುವುದು, ಅವನಿಗೆ educate ಮಾಡುವುದು ಆ diploma course ತುಂಬಾ ಚೆನ್ನಾಗಿದೆ. ತಾವು certified course ಅನ್ನು ತಾವು ಮಾಡಿಸಿ. ಅದರ ಮುಖಾಂತರ ರೈತರಿಗೆ ಹೆಚ್ಚುಹೆಚ್ಚು ಮಾರ್ಗದರ್ಶನ ಮತ್ತು ತಿಳುವಳಿಕೆಯನ್ನು ಕೊಡುವುದು ಬಹಳ ಮುಖ್ಯವೆಂದು ತಾವು ಹೇಳಿ. ಇವತ್ತು ತಾವು ರೇಷ್ಮೆಯನ್ನು ನೋಡಿದ್ದೀರಿ, ಇವತ್ತು ರೈತನು ಎಷ್ಟು ಸಂಕಷ್ಟದಲ್ಲಿದ್ದಾನೆ, ಏಕೆಂದರೆ ಜಗತ್ತಿನಲ್ಲಿ ಹೆಚ್ಚು ಉತ್ಪಾದನೆಯಾಗುತ್ತಿರುವುದು ರೇಷ್ಮೆ, ಚೈನಾದೇಶದಲ್ಲಿ ಅದರ ಗುಣಮಟ್ಟವು ಹೆಚ್ಚಾಗಿದೆ. ಹಾಗಾಗಿ ಇವತ್ತು free trade ನಾವು import ಮಾಡುತ್ತಿರುವುದು. ನಮಗೆ Import dutyಯನ್ನು ಕಡಿಮೆ ಮಾಡಿರುವುದರಿಂದ ಬಹುಶಃ ಅದನ್ನು ಜಾಸ್ತಿ ಮಾಡಬೇಕು. ನಮಗೆ ಇವತ್ತು ಹೆಚ್ಚುಹೆಚ್ಚು ಬಂದಿರುವುದರಿಂದ ನಮ್ಮ ರೈತನು ಕುಸಿದು ಬಿದ್ದಿದ್ದಾನೆ. ಅದರ ಬಗ್ಗೆ ತಾವು ಬಹಳ ಚೆನ್ನಾಗಿ ಹೇಳಿದ್ದೀರಿ. ತಾವು ಸರ್ವ ಪಕ್ಷ ನಿಯೋಗವನ್ನು ತೆಗೆದುಕೊಂಡು ಹೋಗಿ ರೇಷ್ಮೆ ಮತ್ತು ಅಡಿಕೆ ಬೆಳೆ ಎರಡಕ್ಕೂ ಕೂಡ ತಾವು ತೆಗೆದುಕೊಂಡು ಹೋಗಿ ಅಲ್ಲಿ ಸಂಕಷ್ಟದಲ್ಲಿರುವಂತಹ ರೈತರಿಗೆ ಕೇಂದ್ರ ಸರ್ಕಾರವು ಯಾವ ರೀತಿಯಾಗಿ ಮಾಡಬಹುದು, ರಾಜ್ಯ ಸರ್ಕಾರವು ಯಾವ ರೀತಿಯಾಗಿ ಮಾಡಬಹುದು, ರೈತನು ಈ ರೀತಿಯಾದಂತಹ ಸಂಕಷ್ಟದಲ್ಲಿರುವಂತಹ ಸಮಯದಲ್ಲಿ ಅವನಿಗೆ ಯಾವ ರೀತಿಯಾಗಿ ನೆರವಿಗೆ ಹೋಗಬಹುದು ಎಂಬುದನ್ನು ತಾವು ಮಾಡುತ್ತಿದ್ದೀರಿ. ಇಲ್ಲಿ ರೇಷ್ಮೆ ಕೂಡ ಬಹಳ ಮುಖ್ಯವೆಂದು ನಾನು ಹೇಳುತ್ತೇನೆ. ಇದನ್ನು ಮಾಡಬಹುದು. ನಾನು Sugar Minister ಆಗಿದ ಸಮಯದಲ್ಲಿ ವಿದೇಶದಿಂದ ಕ್ಯೂಬಾದಿಂದ ಶುಗರ್ಸ್ ಬಂದು ನಮ್ಮ ಲೋಕಲ್ ಮಾರ್ಕೆಟ್ ಬಿದ್ದು ಹೋಗಿತ್ತು. ಆಗ ನಾವು ಏನು ಮಾಡಿದ್ದೇವೆಂದು ನಮಗೆ ಗೊತ್ತಿದೆ. ನಮ್ಮ ಜೊತೆಯಲ್ಲಿ ಯಾರೇ import ಮಾಡಿಕೊಳ್ಳಲಿ, ಎಷ್ಟೇ import ಮಾಡಿಕೊಂಡರೂ ಕೂಡ ನಮ್ಮ domestic sugar ಏನಿದೆ, ನಮ್ಮಲ್ಲಿ ಉತ್ಪಾದನೆಯಾದಂತಹ ಸಕ್ಕರೆಯ ಜೊತೆಯಲ್ಲಿ ಮಾರುಕಟ್ಟೆಯಲ್ಲಿ ಅವರು ಪೈಪೋಟಿ ಮಾಡದ ಹಾಗೆ ಮಾಡಿ ಬಿಟ್ಟಿದ್ದಾರೆ.

ಅವರಿಗೆನಿಲ್ಲ ಅಲ್ಲಿಗೆ ತಂದವರಿಗೆ customs enhance ಮಾಡಿಬಿಟ್ಟು. Import ಮಾಡಿದವರಿಗೆ levy ಕೊಡಿ ಎಂದು ಹೇಳಿದೆವು. ನಾವು marker fluctuatio ನೋಡಿಕೊಂಡು ಅವರಿಗೆ ಇಷ್ಟನ್ನು ಬಿಡುಗಡೆ ಮಾಡಬೇಕೆಂದು ಹೇಳಿದೆವು. ಯಾರು ಕೂಡ ತರುವುದಕ್ಕಾಗಲಿಲ್ಲ. ಅದನ್ನು ಎಲ್ಲಿ ಮಾಡುವುದಕ್ಕಾಗುತ್ತದೆ? Custom duty, Levy ಮತ್ತೇ 100 ಕ್ವಿಂಟಾಲ್ import ಮಾಡಿದರೆ 20 ಕ್ವಿಂಟಾಲ್ ಬಿಡಬೇಕು, 80 ಕ್ವಿಂಟಾಲ್ ಇಟ್ಟುಕೊಳ್ಳಬೇಕೆಂದರೆ dead capital ಆಯಿತು. ಆಗ ಅವರು ಏನು ಮಾಡುವುದಕ್ಕಾಗಲಿಲ್ಲ. ನಾವು ಸ್ವಲ್ಪ ಆ ರೀತಿಯಾದಂತಹ ರೀತಿಯಲ್ಲಿ ಸರ್ಕಾರಗಳು ಯೋಚನೆಯನ್ನು ಮಾಡ ಬೇಕಾಗುತ್ತದೆ. ನಾವು import ಅನ್ನು curtail ಮಾಡಬೇಕಾದರೆ ಅದು ನಮ್ಮಗಳ ಕೈಯಲ್ಲಿ ಇರುತ್ತದೆ. ನಮ್ಮಲ್ಲಿ ಉತ್ಪಾದನೆಯಾಗುವ ..ಹ ಯಾವುದೇ ವಸ್ತುಗಳಿಗೆ ನಾವು ಮಾರುಟ್ಟೆಯನ್ನು ಕೊಡುವುದನ್ನು ನಮ್ಮ ರೈತನಿಗೆ ಅದರಿಂದ ತೊಂದರೆಯಾಗದ ರೀತಿಯಲ್ಲಿ ನೋಡಿಕೊಳ್ಳಬೇಕಾಗುತ್ತದೆ. ಇದರಿಂದ ನಮಗೆ ಅನುಕೂಲವಾಗುತ್ತದೆ ಎಂದು ನಾನು ಈ ಸಂದರ್ಭಧಲ್ಲಿ ಹೇಳುತ್ತೇನೆ. ಇವತ್ತು ರೇಷ್ಮೆ ಬೆಳೆಗಾರರು ಏನು ಕಷ್ಟದಲ್ಲಿದ್ದಾರೆ ನೀವು ಆಗಲೇ ಅವರ ನೆರವಿಗೆ ಹೋಗಿ ಅವರಿಗೆ ಯಾವುದೇ ರೀತಿಯಲ್ಲಿ ಅವನಿಗೆ ಕನಿಷ್ಟ ಬೆಂಬಲ ಬೆಲೆಯನ್ನು ಕೊಟ್ಟು ಅವನನ್ನು ಉಳಿಸಿಕೊಳ್ಳಬೇಕು. ಚೈನಾದೇಶದವರು ಎಷ್ಟೇ import ಮಾಡಿದರೂ ಕೂಡ ನಮ್ಮ ರೈತನಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗ ಬಾರದು. ಆತನಿಗೆ ಸಹಾಯವಾಗಬೇಕೆನ್ನುವಂತಹ ರೀತಿಯಲ್ಲಿ ತಾವು ಮಾಡಬೇಕೆಂದು ತಮಗೆ ಹೇಳುತ್ತೇನೆ. ಕೊನೆಯಲ್ಲಿ ನಿಮಗೆ ಒಂದು ಮಾತನ್ನು ಹೇಳುತ್ತೇನೆ, ನಾವು ಯಾವತ್ತು ಕೂಡ ಗಾಂಧೀಜಿಯವರನ್ನು ನೆನೆಸಿಕೊಳ್ಳುವವರು, ಸ್ವಾತಂತ್ರ್ಯ ಬಂದ ಮೇಲೆ ಗಾಂಧೀಜಿಯವರ ಆರ್ಥಿಕ ಸ್ವಾವಲಂಬನೆ, ಆರ್ಥಿಕ ಚಿಂತನೆಗಳನ್ನು ನಾವು ಬಹಳ ಜ್ಞಾಪಿಸಿಕೊಳ್ಳುತ್ತೇವೆ. ಗಾಂಧೀಜಿಯವರು ಮಾಡಿದಷ್ಟು ಇವತ್ತು ಜಗತ್ತಿನಲ್ಲಿ ಯಾರು ಕೂಡ ಮಾಡಿರಲಿಲ್ಲ. ಅವರದು ಅಂತ್ಯೋದಯ ಮತ್ತು ಸರ್ವೋದಯ ಇದ ಬಹಳ ಮುಖ್ಯ. ಅಂತ್ಯೋದಯ ಸಮಾಜದ ಅತ್ಯಂತ ಕೆಳಸ್ತರದ್ದು. ಇವತ್ತು ನಾವು ಬಜೆಟ್ ಬಗ್ಗೆ ಮಾತನಾಡುತ್ತಾ ನೋಡುತ್ತಿದ್ದೇವೆ. ಒಂದು ಸರ್ಕಾರ ಯಾರಿಗೆ

ಇರತಕ್ಕಂತದ್ದು, Havesಗೆ ಮಾತ್ರನಾ? ಅಲ್ಲ, ಯಾರು ಅಸಹಾಯಕರು ಇದ್ದಾರೋ, ಅಶಕ್ತರು ಇದ್ದರೋ ಅಸಂಘಟಿತರು ಇದ್ದಾರೋ, ನಮ್ಮ ಮೇಲೆ ಅವಲಂಬಿತರಾಗಿದ್ದಾರೋ ಮತ್ತು ಪ್ರಜಾಪ್ರಭುತ್ವದಲ್ಲಿ ನಮಗೆ ಬೆಂಬಲವನ್ನು ಕೊಟ್ಟು ನಮ್ಮ ಮೇಲೆ ಅವರು ಆಶ್ರಯಿಸಿರುವಂತಹವರ ಬಗ್ಗೆ ನೀವು ಯೋಚನೆಯನ್ನು ಮಾಡಬೇಕು. ಇದು ಪಕ್ಷಪಾತವಲ್ಲವೆಂದು ನಾನು ನಿಮಗೆ ಹೇಳುತ್ತೇನೆ. ಈ ದೇಶದಲ್ಲಿ ಅಂತ್ಯೋದಯ ಕಾರ್ಯಕ್ರಮ 1977-78ರಲ್ಲಿ ತಂದವರು ರಾಜಸ್ಥಾನ ಬೈರೋನ್ ಸಿಂಗ್ ಶೇಖಾವತ್ ಮೊಟ್ಟಮೊದಲ ಬಾರಿಗೆ ಅಂತ್ಯೋದಯದ ಬಗ್ಗೆ ಯೋಚನೆಯನ್ನು ಮಾಡಿದವರು. ಅವರು ಬಹಳ ಆದರ್ಶವಾದಂತಹ ಮುಖ್ಯಮಂತ್ರಿಯಾಗಿ ಕಾರ್ಯಕ್ರಮಗಳನ್ನು ಕೊಟ್ಟವರಾಗಿದ್ದಾರೆ. ಅಂತ್ಯೋದಯ ಸಮಾಜದ ಅತ್ಯಂತ ಕೆಳಸ್ತರದಲ್ಲಿದ್ದವರಿಗೆ, ಗಾಂಧೀಜಿಯವರು ಅದೇ ತಾನೇ ಮಾಡುತ್ತಿದ್ದರು. ಪೌರಕಾರ್ಮಿಕರು sweeping community ಸ್ವಚ್ಛತೆಯನ್ನು ಮಾಡುವವರು ಸಫಾಯಿ ಕರ್ಮಚಾರಿಗಳ ಮನೆಗೆ ಬೆಳಿಗ್ಗೆ ಎದ್ದು ಹೋಗುತ್ತಾರೆ. ಅಲ್ಲಿ ಅವರ ಮನೆಯಲ್ಲಿ ಚಹಾವನ್ನು ಕುಡಿಯುತ್ತಿದ್ದರು ಅದು ಅಂತ್ಯೋದಯ. ಅನಂತರ ಸರ್ವೋದಯ ಅದು ಎಲ್ಲರ ಬಗ್ಗೆಯೂ ಕೂಡ ಆಗಿದೆ.

ಸರ್ವೋದಯದ ಬಗ್ಗೆ ಆಡಳಿತ ನಡೆಸುವವರಿಗೆ ಚಿಂತನೆ ಇರಬೇಕು. ಈ commitment, ಈ ಆಲೋಚನೆಗಳು, ಚಿಂತನೆಗಳು ನಿಮ್ಮಲ್ಲಿರಬೇಕು. ನಿಜವಾದಂಥ ಆಡಳಿತ ಕೊಡಬೇಕಾದರೆ ನಿಜವಾದಂಥ ಮಾನವೀಯತೆ ನೆಲೆಗಟ್ಟಿನ ಮೇಲೆ ಸರ್ಕಾರ ನಡೆಸಬೇಕಾದರೆ ನಿಮಗೆ ಬಹುಶಃ ಇದರ ಬಗ್ಗೆ you must have such social commitment and concern. ನಿಮಗೆ ಆ ಒಂದು ಸಾಮಾಜಿಕ ಕಳಕಳಿ, ಸಂಬಂಧವನ್ನು, ಮಾನವೀಯತೆ ನೆಲೆಗಟ್ಟಿನ ಮೇಲೆ ಮೊದಲು ಬರಬೇಕು. ಬಹುಶಃ ಈ ಸದನದಲ್ಲಿ ನೀವು ಎಲ್ಲಿ ಕುಳಿತಿದ್ದೀರಿ ಅದನ್ನು ಮೊಟ್ಟ ಮೊದಲಿಗೆ ನೀವು ಆಲೋಚನೆ ಮಾಡಬೇಕು, ಬೇರೆ ಮುಖ್ಯಮಂತ್ರಿಗಳು ಆಲೋಚನೆ ಮಾಡಿಲ್ಲವೆಂದಲ್ಲ. ದಿವಂಗತ ದೇವರಾಜ ಅರಸ್‌ರವರು ಸಹ .ಆಲೋಚನೆ ಮಾಡಿದರು. ಸಾಮಾಜಿಕ ನ್ಯಾಯ ಇದೆಯೆಲ್ಲಾ, ಅದನ್ನು ನೊಂದು, ಬೆಂದವರಿಗೆ, ಧ್ವನಿ ಇಲ್ಲದಂಥವರಿಗೆ ಯಾರು ಕುಳಿತಲ್ಲೇ

ನಮ್ಮಿಂದ ಸರ್ಕಾರ ನಮ್ಮ ಪಾಲಿಗಿದೆ ಎಂದು ನಿರೀಕ್ಷೆ, ಅಪೇಕ್ಷೆ ಮಾಡುತ್ತಾರೆ, ನಮಗೆ ಸಹಾಯ ಮಾಡುತ್ತಾರೆ, ನಾವು ಕೂಡ ಮನುಷ್ಯರಾಗಿ ಬದುಕುವ ನಿಟ್ಟಿನಲ್ಲಿ ನಮ್ಮ ಬಗ್ಗೆ ಅವರು ಯೋಚನೆ ಮಾಡುತ್ತಾರೆ. ಬೊಮ್ಮಾಯಿಯವರೇ ನೀವು ಸವಣೂರು ಗ್ರಾಮದಲ್ಲಿ ಮಾಡಿದ ಕೆಲಸದಿಂದ ನನಗೆ ನಿಜಕ್ಕೂ ಬಹಳ ಸಂತೋಷವಾಯಿತು. ಮೊದಲು ನೋವಾಯಿತು. 21ನೇ ಶತಮಾನದಲ್ಲಿದ್ದೇವೆ, ನಾವು ಮನುಷ್ಯರೇ ಎಂದು ಅವರು ಹೇಳಿಕೊಳ್ಳುವಂಥ ಪರಿಸ್ಥಿತಿ ಇದೆ. ಏನ್ರೀ ಅವರಿಗೆ ಕೈಕಾಲು ಚಾಚಿ ಮಲಗಲಿಕ್ಕೆ ಮನೆ, ಎರಡು ಹೊತ್ತಿನ ಊಟಕ್ಕೆ ಗತಿ ಇಲ್ಲದೆ ಅವರು ನಮ್ಮ ಗಮನವನ್ನು ಸೆಳೆಯಬೇಕಾದರೆ ಮಲ ಸುರಿದುಕೊಳ್ಳುವಂಥ ಪರಿಸ್ಥಿತಿ ಈ ದೇಶದಲ್ಲಿ, ಸ್ವತಂತ್ರ ಭಾರತದಲ್ಲಿ ಎಂಥ ಸ್ಥಿತಿ ಇದೆ. ಈ ಸದನಗಳು ಇರುವುದು ಏಕೆ? ಪ್ರಜಾಪ್ರಭುತ್ವವೆಂದು ದೊಡ್ಡ ವ್ಯವಸ್ಥೆ, Parliament, it is the highest democratic forum in the World. ದೊಡ್ಡ ಪ್ರಜಾಪ್ರಭುತ್ವದ ಹಾದಿಯಲ್ಲಿ ವಿಧಾನ ಸೌಧಕ್ಕೆ Temple of Democracy ಎನ್ನುತ್ತೇವೆ. ಅದರ ಕೆಳಗೆ ಬೇಕಾದಷ್ಟು ಜನರು, ಪ್ರಜಾಪ್ರಭುತ್ವ ಸಂಸ್ಥೆಗಳಿವೆ, ಕಣ್ಣೆದುರಿಗೆ ಈ ರೀತಿ ನಡೆದು ಬಿಟ್ಟರೆ, ಈ ರೀತಿಯ ಅಸಮಾನತೆ, ಕಿತ್ತು ತಿನ್ನುವಂಥ ಬಡತನ, ಸಾಮಾಜಿಕ ಅವ್ಯವಸ್ಥೆಗಳ ಮಧ್ಯೆ ಅವರ ಬದುಕು ಹೇಗಿದೆ, ಅದರ ಬಗ್ಗೆ ಚಿಂತನೆ ಮಾಡಬಾರದೆ? ಸವಣೂರಿನಂಥ ಘಟನೆ ನಮ್ಮೆಲ್ಲರ ಕಣ್ಣನ್ನು ತೆರೆಸುವಂಥದ್ದು. ಆದರೂ ಅವರಿಗೆ ಪುನರ್ವಸತಿ ಸೌಕರ್ಯ ಮಾಡಿದ್ದೀರಿ, ಏಕೆಂದರೆ ಅದು ನಿಮ್ಮ ಕ್ಷೇತ್ರಕ್ಕೆ ಬರುವುದು ಎನ್ನುವ ಕಾರಣಕ್ಕಾಗಿ ಅನ್ನಿಸುತ್ತದೆ ಬೊಮ್ಮಾಯಿಯವರೇ. ನಾನು ನೋಡುತ್ತಿದ್ದೇನೆ. ಅದಕ್ಕೋಸ್ಕರ ಅವರ ಬಗ್ಗೆ ಚಿಂತನೆಗಳನ್ನು ಮಾಡಲಿಕ್ಕೆ ಈ ಮಾತನ್ನು ಹೇಳಿದ್ದೇನೆ. ಇಂಥ ಅಸಹಾಯಕರಿಗೆ, ಅಶಕ್ತರಿಗೆ, ಇವತ್ತು ನಾನು ತಮಗೆ ಹೇಳುತ್ತೇನೆ, ಇಲ್ಲಿ ಕಳೆದ ಸಾರಿ ಬಜೆಟ್ ಮೇಲೆ ನಾನು ಮಾತನಾಡಿದಾಗಲೂ ಸಹ ಇದರ ಬಗ್ಗೆ ಮಾತನಾಡುತ್ತಾ ಹೇಳಿದ್ದೆನು, ಪೌರಕಾರ್ಮಿಕರು, ಸಫಾಯಿ ಕರ್ಮಚಾರಿಗಳ ಸ್ಥಿತಿಗತಿಗಳು ಹೇಗೆ? ಒಬ್ಬ ರಾಜೇಶ್ವರಿ ಎನ್ನುವವರು ಜಯನಗರದಲ್ಲಿ ಗುಡಿಸಿ ಬದುಕುವಂಥ ಜೀವ ಹೇಗೆ ಬಲಿಯಾಗಿ ಹೋಯಿತು ಪಾಪ! ಗುಡಿಸುವ ಪೊರಕೆಯನ್ನು ಆ Transformer ಪಕ್ಕ ಇಡಲಿಕ್ಕೆ ಹೋಗಿ ತನ್ನ ಜೀವವನ್ನೇ

ಕಳೆದುಕೊಂಡು ಬಿಟ್ಟಳು. ಅವಳ ಮನೆ ಕಥೆ ಏನಾಗಿದೆಯೋ ಗೊತ್ತಿಲ್ಲ. ಅವಳು ಕಸ ಗುಡಿಸಿ ಅವಳ ಮಕ್ಕಳನ್ನು ಸಾಕಬೇಕು. ಅವಳಿಗೆ ಇನ್ನೂ ಮಕ್ಕಳಿರಲಿಲ್ಲ ವೆಂದೆನಿಸುತ್ತದೆ. ಒಂದು ಕುಟುಂಬವನ್ನು ಸಾಕಬೇಕು. ಯಾವ ರೀತಿ ಸ್ವಚ್ಛತಾ ಕೆಲಸವನ್ನು ಮಾಡಿ ಬದುಕುಬೇಕು, ಅವರ ಬದುಕು ಹೇಗಿದೆ ಇವತ್ತು? ಅವರ ಬದುಕು ನಿಜವಾದ ಬದುಕಾಗಿದೆಯೇ? ಅವರ ಬಗ್ಗೆ ಯೋಚನೆ ಮಾಡಬಾರದೇನು? ಸಮಾಜದ ಅತ್ಯಂತ ಕೆಳಸ್ತರದಲ್ಲಿರುವವರಿಗೆ ಅವರಿನ್ನೂ contract basis ಮೇಲೆ ಕೆಲಸ ಮಾಡಬೇಕೇನು? ಇವತ್ತೇ ಈ ಬಗ್ಗೆ ಯೋಚನೆ ಮಾಡಿ ಮುಖ್ಯಮಂತ್ರಿಗಳು ಹೇಳಬೇಕು. ಗುತ್ತಿಗೆದಾರ ಪದ್ಧತಿಯನ್ನು ತೆಗೆಯುತ್ತೇವೆ ಎಂದು ಯಾವ ರೀತಿ ಕೃಷಿ ಬಜೆಟ್ ಬಗ್ಗೆ ಹೇಳಿದ್ದೀರೋ ಅದೇ ರೀತಿ ಮೊಟ್ಟ ಮೊದಲು ಕೃಷಿ ಬಗ್ಗೆ ಇವತ್ತು ಸಮಾಜದಲ್ಲಿ ಅತ್ಯಂತ ಶೋಚನೀಯ ಸ್ಥಿತಿಯಲ್ಲಿರುವಂಥವರು, ಬಡತನದಲ್ಲಿ ಬಡವರು, ಅವರು ಶೋಷಿತರಲ್ಲಿ ಶೋಷಿತರು. ಅವಮಾನಿತರಲ್ಲಿ ಅವಮಾನಿತರಾಗಿ ಬದುಕುವಂಥ ಒಂದು ವರ್ಗದ ಬಗ್ಗೆ ನಾವು-ನೀವಲ್ಲದೆ ಇನ್ನಾರೂ ಚಿಂತನೆ ಮಾಡಬೇಕಾಗುತ್ತದೆ? ಇವತ್ತಿಗೂ ಕೂಡ ನೀವು ಅವರಿಗೆ ಏನು ಮಾಡಿದ್ದೀರಿ? ಅವರ ಬದುಕು ಕೇವಲ 45 ವರ್ಷಗಳು. ಬಹಳ ಅನಾರೋಗ್ಯಕರವಾದ ಕೆಲಸವನ್ನು ಸಮಾಜದಲ್ಲಿ ಯಾರೂ ಮಾಡಲಿಕ್ಕಾಗುವುದಿಲ್ಲ. ಆ ಸ್ವಚ್ಛತಾ ಕೆಲಸ ಮಾಡುವುದು. ಅವರ ಬದುಕು ಇವತ್ತಿಗೂ ಕೂಡ ಹೇಗಿದೆ? ಬಹಳಷ್ಟು ಜನ ಖಾಯಂ ಸಿಬ್ಬಂದಿಗಳಾಗಿ ಕೆಲಸ ಮಾಡುತ್ತಿದ್ದಾರೆ. Contract basis ಮೇಲೆ ಗುತ್ತಿಗೆ ಪದ್ಧತಿಯಲ್ಲಿ ಕೆಲಸ ಮಾಡುವಂಥದ್ದು. ಇವತ್ತಿಗೂ ಕೂಡ ಅವರಿಗೆ Task Force Committee ಮಾಡುತ್ತೇವೆ. ಅಲ್ಲೇನು ಕೇವಲ ಮಾತುಗಳು, ಮಾತುಗಳು ಅಷ್ಟೇ. ಯಾವುದೂ ಕೂಡ ಕೆಲಸ ಆಗಿಲ್ಲ. ಇವತ್ತು ನಾವು ಅವರುಗಳ ಬಗ್ಗೆ ಯೋಚನೆ ಮಾಡಬೇಕಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳೇ, ಈ ಗುತ್ತಿಗೆದಾರರ ಪದ್ಧತಿಯನ್ನು ತೆಗೆಯುವಂಥ ಕೆಲಸವನ್ನು ಮಾಡಿ. ಪ್ರತಿಯೊಬ್ಬರೂ ಕೂಡ ಇವತ್ತು ಯಾರು ಸಫಾಯಿ ಕರ್ಮಚಾರಿಗಳು, ಗುಡಿಸುವಂಥವರು ಯಾರು ಇದ್ದಾರೆ? ಅವರನ್ನೆಲ್ಲಾ ಖಾಯಂ ಆಗಿ ಮಾಡಬೇಕು, ಬೇರೆ ಯಾರೂ ಸ್ವಚ್ಛತಾ ಕೆಲಸಕ್ಕೆ ಹೋಗುವುದಿಲ್ಲ. ಅವರಿಗೆ

ಖಾಯಂ ಕೆಲಸಗಳನ್ನು ಕೊಡಿ, ಅವರ ಮಕ್ಕಳಿಗೆ ಶಿಕ್ಷಣ ಕೊಡಬೇಕು. Right to Education ಇವತ್ತೇನು ಬಂದಿದೆ, ಅದರ ಬಗ್ಗೆ ಮಾತನಾಡುತ್ತೇವೆ. ಅವರಿಗೆ ಶಿಕ್ಷಣವನ್ನು ಕೊಡಲೇಬೇಕಾಗುತ್ತದೆ. Education is nothing but knowledge. ಜ್ಞಾನ ತಿಳುವಳಿಕೆಯನ್ನು ಕೊಡುವುದು, ಅದಕ್ಕೋಸ್ಕರ ಅವರ ಮಕ್ಕಳಿಗೆ Residential Schools ಮಾಡಿಕೊಡಿ. ಸ್ವಚ್ಛತಾ ಕೆಲಸ ಮಾಡುವವರು ಸೂರ್ಯಚಂದ್ರ ಇರುವವರೆಗೆ ಕಸ ಗುಡಿಸಿಕೊಂಡೇ ಇರಬೇಕೇನು? ನಮ್ಮಂತೆ ಅವರು ಬದುಕಬಾರದೇ? ಅದಕ್ಕೆ ತೊಂದರೆ ಏನಿದೆ? ನೀವು ಸಿಟಿಯಲ್ಲಿರುವಂಥ slums ನೋಡಿರುವಂಥವರು ಸುರೇಶ್‌ಕುಮಾರ್. ಅವರಿಗೆ ಒಂದು ವಸತಿ ಶಾಲೆಗಳನ್ನು ಕೊಡೋಣ, ಅವರ ಬಗ್ಗೆ ಏನಾದರೂ ಯೋಚನೆ ಮಾಡೋಣ. Schedule Casteನಲ್ಲಿ 101 ಉಪ ಜಾತಿಗಳಿವೆ. ಅತ್ಯಂತ ಕೆಳಗಡೆ ಇರತಕ್ಕಂಥವರು, ನಾವು ಅವರಿಗೆ ಪ್ರತ್ಯೇಕ ಮೀಸಲಾತಿ ಕೊಡುವುದಿರಲಿ atleast ಸೌಲಭ್ಯಗಳನ್ನಾದರೂ ಕೊಡಿ. ಪ್ರತ್ಯೇಕ ಹಣಕಾಸು ನಿಗಮವನ್ನು ಮಾಡಿಕೊಡಿ ಅವರಿಗೆ. ಅದಕ್ಕೆ ಯಾರು ಬೇಡವೆನ್ನುವುದಿಲ್ಲ, ಒಪ್ಪಿಕೊಳ್ಳುತ್ತಾರೆ. ಬಹಳ ನಿರ್ಗತಿಕರಾಗಿರುವಂಥವರು. ನಾವಿಲ್ಲಿರುವಂಥ ಶಾಸಕರೆಲ್ಲಾ ಅವರ ಜೀವನವನ್ನೆಲ್ಲಾ ಬಹಳ casual ಆಗಿ ತೆಗೆದುಕೊಳ್ಳುತ್ತೇವೆ ಅಲ್ಲವೇ? ಅವರಿಗೆ, ಕಸ ಗುಡಿಸುವವರಿಗೆ ಎಲ್ಲೆಲ್ಲಿ ನಮ್ಮ ಕ್ಷೇತ್ರಗಳಲ್ಲಿ, ಪಂಚಾಯಿತಿಗಳಲ್ಲಿ ಸ್ವಂತ ಮನೆಗಳಿವೆಯೇ? ಸಂಬಳ ಇದೆಯೇ? ಯೋಚನೆ ಮಾಡಿ. ಇಲ್ಲಿರುವಂಥವರು ನಾವೆಲ್ಲರೂ ಇವರನ್ನು ಬಹಳ ಹಗುರವಾಗಿ ತೆಗೆದುಕೊಳ್ಳುತ್ತೇವೆ. ಅವರು ಮನುಷ್ಯರಲ್ಲವೇನು? ಒಂದೊಂದು ಸಾರಿ ಅವರ ಹತ್ತಿರ ಹೋದಾಗ ಅವರು ನಮಗೆ ಮನವಿ ಕೊಟ್ಟಾಗ ನಮಗೆ ಅಯ್ಯೋ ಎನಿಸುತ್ತದೆ. ಅಲ್ಲಿ ಕೂಡ ಸೇರಿಸಲ್ಲ. ಅವರೂ ಕೂಡ ಹೋಗಿ ಬೋರ್‌ವೆಲ್‌ಗಳಲ್ಲಿ ನೀರು ತೆಗೆದುಕೊಳ್ಳುವಂತಿಲ್ಲ. ಬೇರೆಯವರ ಜೊತೆಯಲ್ಲಿ ಬದುಕುವ ಹಾಗಿಲ್ಲ. ಮನೆ ಇಲ್ಲ, ಸಂಬಳ ಇಲ್ಲ, ಬೆಳಿಗ್ಗೆ ಎದ್ದರೆ ಗುಡಿಸಲಿಕ್ಕೆ ಹೋಗಬೇಕು. ಇವತ್ತೇ ಮಾಡಿ, ನಮ್ಮ ಮುಖ್ಯಮಂತ್ರಿಗಳು ಇಲ್ಲ, ನಮ್ಮ ಸೋಮಣ್ಣನವರು ಇಲ್ಲ ಇವತ್ತು, ನನ್ನ ಮನೆ, ನನ್ನ ಸ್ವತ್ತು, ಅವರೆಲ್ಲಿದ್ದಾರೆ? ಕೊಡಿ, ಇವತ್ತೇ ಒಂದು ಸುತ್ತೋಲೆಯನ್ನು ಮುಖ್ಯ ಮಂತ್ರಿಗಳು ಕಳುಹಿಸಬೇಕು.

ಯಾವ್ಯಾವ ಗ್ರಾಮ ಪಂಚಾಯಿತಿಗಳಿವೆ, ಆಶ್ರಯ ಯೋಜನೆಯಲ್ಲಿ ಮೊದಲು ಕಡ್ಡಾಯವಾಗಿ ಅವರಿಗೆ ಮನೆಗಳನ್ನು ಕೊಡಬೇಕು. ಪ್ರತಿಯೊಬ್ಬ ಗುಡಿಸುವಂಥವನಿಗೆ ಯಾವುದೇ ಹಳ್ಳಿಗಳಿಗೆ ಎಷ್ಟೇ ಮನೆಗಳಿರಲಿ, ಆ ಸ್ವಚ್ಛತಾ ಕೆಲಸ ಮಾಡುವವನಿಗೆ ಮೊದಲು ಆಶ್ರಯ ಯೋಜನೆಯಡಿ ಮೊದಲು ಅವರಿಗೆ ಮನೆಗಳನ್ನು ಕೊಡಿ. ಅವರಿಗೆ ಸಂಬಳ ಜಾಸ್ತಿ ಮಾಡಿ. ಅವರ ಯೋಗ ಕ್ಷೇಮವನ್ನು ವಿಚಾರಿಸಿಕೊಳ್ಳತಕ್ಕಂಥ ರೀತಿಯಲ್ಲಿ ಪಂಚಾಯಿತಿಗಳಿಗೆ ಸರಿಯಾದಂಥ ರೀತಿಯಲ್ಲಿ ಮಾರ್ಗದರ್ಶನಗಳನ್ನು ಕಸ ಗುಡಿಸುವವರಿಗೆ ಮಾಡಲಿಕ್ಕೆ ಅವರಿಗೆ ತಿಳಿಸಿ ಹೇಳಿ ಎಂದು ಈ ಸಂದರ್ಭದಲ್ಲಿ ತಮಗೆ ಹೇಳಬಯಸುತ್ತೇನೆ. ಗುತ್ತಿಗೆದಾರರ ಪದ್ಧತಿಯನ್ನು ತೆಗೆದುಹಾಕಿ ಮೊದಲು ಅವರನ್ನು ಖಾಯಂ ನೌಕರರನ್ನಾಗಿ ಮಾಡಿ. ಗ್ರಾಮ ಪಂಚಾಯಿತಿಗಳಲ್ಲಿ, ಹಳ್ಳಿಗಳಲ್ಲಿ ಸ್ವಚ್ಛ ಕೆಲಸ ಮಾಡುವವರ ಬಗ್ಗೆ ಮಾನವೀಯತೆಯ ದೃಷ್ಟಿಯಿಂದ ಯೋಚನೆಯನ್ನು ತಾವು ಮಾಡಬೇಕು. ಇನ್ನು ಕೊಳೆಗೇರಿಗಳ ಬಗ್ಗೆ ಹೇಳುವುದಾದರೆ ನಿನ್ನೆ ಕೊಳೆಗೇರಿಗಳಲ್ಲಿ ವಾಸ ಮಾಡುವಂಥವರ ಬಗ್ಗೆ ಒಂದು ದೊಡ್ಡ ರಾಜ್ಯ ಮಟ್ಟದ ಸಮ್ಮೇಳನ ನಡೆದಿದ್ದು, ಅದಕ್ಕೆ ನೆ.ಲ. ನರೇಂದ್ರ ಬಾಬುರವರು ಹೋಗಿದ್ದರು. ಕೊಳೆಗೇರಿ ಜನಕ್ಕೆ ಮೂಲಭೂತ ಸೌಕರ್ಯಗಳನ್ನು ಕೊಡಬೇಕ. ಅವರು ಎಲ್ಲಿಯವರೆಗೆ ಸ್ಲಮ್‌ಗಳಲ್ಲೇ ಇರಬೇಕೆನ್ನುವುದು. ಸುರೇಶ್‌ಕಮಾರ್‌ರವರೇ, ಕೊಳೆಗೇರಿಗಳಿಗೆ ಮೂಲಭೂತ ಸೌಕರ್ಯ ಕೊಡಲಿಕ್ಕೆ ಒಂದು time bound programme ನಿಮಗೆ ಬೇಡವೇ? ಪೌರ ಕಾರ್ಮಿಕರು ಸೂರ್ಯಚಂದ್ರರು ಇರುವವರೆಗೆ ಸ್ಲಮ್‌ಗಳಲ್ಲೇ ಇರಬೇಕೆ? ಒಂದು ordinance ತೆಗೆದುಕೊಂಡು ಬನ್ನಿ. ಮಧ್ಯರಾತ್ರಿ ordinance ತೆಗೆದುಕೊಂಡು ಬನ್ನಿ. ಹೊಸ ಸ್ಲಮ್‌ಗಳು ಎಲ್ಲಿಯೂ ಇರಕೂಡದ. ಈಗೇನು ಕೊಳೆಗೇರಿಗಳಿವೆ, ಅವುಗಳಿಗೆ ನನ್ನ ಎರಡು ವರ್ಷಗಳ ಅವಧಿಯಲ್ಲಿ ಪೂರ್ಣ ಮೂಲಭೂತ ಸೌಕರ್ಯ, ಪುನರ್ವಸತಿಗಳನ್ನು ಕೊಡುತ್ತೇವೆಂಬ ಒಂದು ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಿ. ನಿಮಗೆ ಆ ರೀತಿಯ ಕನಸುಗಳಿಲ್ಲವಲ್ಲವೇ? ಬಡವನ ಬಗ್ಗೆ ಆ ರೀತಿಯ ಕನಸುಗಳನ್ನು ಇಟ್ಟುಕೊಳ್ಳಿ. ಅಸಹಾಯಕರ, ಅಶಕ್ತರ ಬಗ್ಗೆ ಮಾನವೀಯತೆ ಇಟ್ಟುಕೊಂಡು ಅದು ನಿಮ್ಮ ಆಡಳಿತದಲ್ಲಿ

ಸಾರ್ಥಕವಾಗುತ್ತದೆ, ಪ್ರಜಾಪ್ರಭುತ್ವಕ್ಕೊಂದು ಗೌರವ ಬರುತ್ತದೆ. ಈಗಲೂ ಮಾಡಿ, ಏನಾಗಿದೆ, ಒಂದು ರಾತ್ರಿ ಹೊಸದಾದ ಸುಗ್ರೀವಾಜ್ಞೆ ತೆಗೆದುಕೊಂಡು ಬನ್ನಿ. ಹೇಳಿ, ಮುಂದೆ ಯಾವುದಾದರೂ ಸ್ಲಮ್‌ಗಳು ಆದರೆ ಇಂತಿಂಥವರೇ ಕಾರಣ, ಹೊಸ ಸ್ಲಮ್‌ಗಳು ಬರಕೂಡದು. ಈಗೇನು declared slumಗಳಿವೆ. ಅಲ್ಲೆಲ್ಲಾ ಕೂಡ ಎರಡು ವರ್ಷಗಳಲ್ಲಿ ಅವರಿಗೆ ಮೂಲಭೂತ ಸೌಕರ್ಯಗಳನ್ನು ಕೊಡುತ್ತೇವೆ. ಅವರ ಜೀವನವನ್ನು ಕೂಡ ಹಸನಾಗುವಂಥ ರೀತಿಯಲ್ಲಿ ಪ್ರಯತ್ನ ಮಾಡುತ್ತೇವೆ, ಅವರಿಗೆ ಪುನರ್ವಸತಿಯನ್ನು ಕೊಡುತ್ತೇವೆನ್ನುವಂಥ ನಿರ್ಣಯವನ್ನು ತೆಗೆದುಕೊಳ್ಳಿ. ಆ ರೀತಿಯಾದಂಥ ರಾಜಕೀಯ ಇಚ್ಛಾಶಕ್ತಿ ಇಲ್ಲವೆ? ಆ ರೀತಿಯಾದಂಥ ಕನಸುಗಳು ಬೇಕು. ಆ ರೀತಿಯಾದಂಥ ಆಲೋಚನೆಗಳು, ಚಿಂತನೆಗಳು ನಿಮಗೆ ಬೇಕು ಎನ್ನುವುದನ್ನು ಸಹ ಈ ಸಂದರ್ಭದಲ್ಲಿ ತಮಗೆ ತಿಳಿಸಿ ಹೇಳುತ್ತೇನೆ. ಇನ್ನು ಸರ್ವ ಶಿಕ್ಷಣ ಅಭಿಯಾನ, ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಸಂವಿಧಾನವನ್ನು ಬರೆಯುವಾಗಲೇ Directive Principles ನಲ್ಲಿ ಅವರು ಆಗಲೇ ಹೇಳಿದ್ದರು. ಸ್ವಾತಂತ್ರ್ಯ ಬಂದು ಮೂರು ವರ್ಷಗಳಲ್ಲಿ. ನಮಗೆ ಸ್ವಾತಂತ್ರ್ಯ ಕೊಡುವುದು ಬೇಡ, ಅವರು ಅಮಾಯಕರು, ಅವಿದ್ಯಾವಂತರು ಇದ್ದಾರೆ, ಮೂಢನಂಬಿಕೆ, ಜಾತೀಯತೆ, ತಿಳುವಳಿಕೆ ಇಲ್ಲದಂಥವರಿಗೆ ಏಕೆ ಸ್ವಾತಂತ್ರ್ಯ ಎಂದು Vincent Churchill ಅವರು ಆಗಲೇ ಹೇಳಿದ್ದರು. ಏಕೆಂದರೆ ಅಂದಿನ ಜನಸಂಖ್ಯೆ 30 ಕೋಟಿ. ವಿದ್ಯಾವಂತರು ಅದರಲ್ಲಿ ಶೇಕಡ 20ರಷ್ಟು ಮಾತ್ರ ಇದ್ದರು. ಶೇಕಡ 80ರಷ್ಟು ಅವಿದ್ಯಾವಂತರು ಇದ್ದವರು, ಅವರಿಗೆ ಇನ್ನೂ ತಿಳುವಳಿಕೆ, ಜ್ಞಾನವನ್ನು ಕೊಟ್ಟು ನಂತರ ಅವರಿಗೆ ಸ್ವಾತಂತ್ರ್ಯ ಕೊಡೋಣ ಎನ್ನುವ ಮಾತನ್ನು ಅಂದು Vincent Churchill ಹೇಳಿದ್ದರು. ಆದರೆ ನಮಗೆ ಸ್ವಾತಂತ್ರ್ಯ ಬಂತು, ಗಾಂಧೀಜಿಯವರ Quit India Movement ಪ್ರಕಾರ ಹೋರಾಟ ಮಾಡಿ ನಮಗೆ ಸ್ವಾತಂತ್ರ್ಯ ಬಂದ ಮೇಲೆ ಎಂಥ ಸಂವಿಧಾನವನ್ನು ಅಂಬೇಡ್ಕರ್‌ರವರು ಬರೆದುಕೊಟ್ಟರು. ಸಮಾನತೆಯ ನೆಲೆಗಟ್ಟಿನ ಮೇಲೆ ಸಂವಿಧಾನವನ್ನು ಬರೆದುಕೊಟ್ಟು ಮೊಟ್ಟ ಮೊದಲಿಗೆ Directive Principles ಬಗ್ಗೆ ಹೇಳಿದರು. ಐದು ವರ್ಷಗಳಿಂದ 14 ವರ್ಷಗಳವರೆಗೆ ಪ್ರತಿಯೊಂದು ಮಗುವಿಗೆ

Compulsory and free education ಕೊಡಬೇಕೆಂದು. ಏಕೆಂದರೆ Education is nothing but knowledge. ಇಲ್ಲಿ ಜ್ಞಾನ, ತಿಳುವಳಿಕೆಯ ಕೊರತೆ ಇದೆ, ಪ್ರತಿಯೊಬ್ಬರಿಗೂ ಕಡ್ಡಾಯ ಉಚಿತ ಶಿಕ್ಷಣವನ್ನು ಕೊಡೋಣವೆಂದು ಹೇಳಿದರು. Directive Principles ಅದು ಇತ್ತು, ಆದರೆ ನಾವು ಮಾಡಲಿಲ್ಲ. ಇವತ್ತು Right to Education ತಂದಿದ್ದೇವೆ. ಇವತ್ತು ಸರ್ವ ಶಿಕ್ಷಣ ಅಭಿಯಾನದಲ್ಲಿ ತಂದಿದ್ದೇವೆ. ಇವತ್ತು ಪ್ರತಿಯೊಂದು ಮಗುವಿಗೂ ಶಿಕ್ಷಣವನ್ನು ಕೊಡಬೇಕು. ಕೇವಲ ಬಾಯಿಯಲ್ಲಿ ಹೇಳಿದರೆ ಆಗುವುದಿಲ್ಲ. ಅದಕ್ಕೆ ಸರಿಯಾದಂಥ ವ್ಯವಸ್ಥೆ, ಸೌಲಭ್ಯಗಳನ್ನು ಕೊಡಬೇಕೆಂದು ಯೋಚನೆ ಮಾಡಿ ಇವತ್ತು ಕಾರ್ಯೋನ್ಮುಖರಾಗಿದ್ದೇವೆ. ಪ್ರಾಥಮಿಕ ಶಿಕ್ಷಣ ಎಂದು ಇಲ್ಲೇ ಮಾಡುತ್ತಿದ್ದೇವೆ. ಯಾವುದೇ ರೀತಿ ಬಡವರಿಗೆ, ಪೋಷಕರಿಗೆ ಹೊರೆಯಾಗ ಬಾರದೆಂದು ಹೇಳಿ ಉಚಿತವಾದಂಥ ಪಠ್ಯಪುಸ್ತಕಗಳು, ಸಮವಸ್ತ್ರಗಳನ್ನು ಕೊಡುತ್ತೇವೆ. ಹೈಸ್ಕೂಲ್‌ಗೆ ಬಂದರೆ ಸೈಕಲ್‌ಗಳನ್ನು ಕೊಡುತ್ತೇವೆ. ಇದಕ್ಕಿಂತ ಮಿಗಲಾಗಿ ಇವತ್ತು ನಾನೇಕೆ ಮಾತನಾಡುತ್ತಿದ್ದೇನೆಂದು ಹೇಳಿದರೆ ಇವತ್ತು ನಮ್ಮ ಮುಖ್ಯಮಂತ್ರಿಗಳನ್ನು ನಾನು ಬಹಳಷ್ಟು ಸಾರಿ ಕೇಳುತ್ತಿರುತ್ತೇನೆ. ಇಲ್ಲಿ ಶ್ರೀ ಬೊಮ್ಮಾಯಿ, ಸುರೇಶ್‌ಕುಮಾರ್ ರವರು ಇದ್ದಾರೆ, ನಾನು ಸರ್ವ ಶಿಕ್ಷಣ ಅಭಿಯಾನದಲ್ಲಿ Mid-day meals ಬಗ್ಗೆ ಹೇಳಬಯಸುತ್ತೇನೆ, ಮಾನ್ಯ ಮುಖ್ಯಮಂತ್ರಿಗಳು ಹೊರಟು ಹೋಗುತ್ತಿದ್ದಾರೆ. ಒಂದು ಮಾತನ್ನು ತಾವು ಈಗ ಕೇಳಬೇಕು. ಕಳೆದ ಸಾರಿ ಸಹ ತಮಗೆ ಹೇಳಿದ್ದೇನೆ. ಕೊನೆಯದಿವಸ ಹೇಳುತ್ತೇನೆ. ಒಂದು ನಿಮಿಷ ಕುಳಿತುಕೊಳ್ಳಿ, ತಾವು ಹಣಕಾಸಿನ ಸಚಿವರಾಗಿದ್ದೀರಿ, ನಿಮ್ಮ ಯೋಜನೆಗಳು ಚೆನ್ನಾಗಿವೆ, ಸೈಕಲ್‌ಗಳು ಕೊಡುವುದು, ಈ ಸಾರಿ ಪರಿಶಿಷ್ಟ ಜಾತಿ/ವರ್ಗದ ಮಕ್ಕಳಿಗೆ scholarships ಕೊಡಬೇಕು. ಎಲ್ಲಾ ರೀತಿಯಾದಂಥ ಎಲ್ಲಾ ಸೌಲಭ್ಯಗಳಿವೆ. ಆದರೆ Mid-day mealsಗೆ 500-600 ಕೋಟಿ ರೂಪಾಯಿಗಳನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರದವರು ಇವತ್ತು ಸೇರಿಸಿ ಕೊಡುತ್ತಿದ್ದಾರೆ.

ಎಲ್ಲಾ ರೀತಿಯಲ್ಲಿ ಉಪಹಾರ ಕೂಡ ಎಲ್ಲಾ ಇದೆ. ಆದರೆ, ಮಧ್ಯಾಹ್ನದ ಉಪಹಾರ ರಾಜ್ಯ ಮತ್ತು ಕೇಂದ್ರ ಸರ್ಕಾರ ಸೇರಿಸಿ ಕೊಡುವುದು

ಎಷ್ಟು? 500–700 ಕೋಟಿ ರೂ. ನಾವು ಕೊಡುತ್ತಿದ್ದೇವೆ. ನೀವು ಏಕೆ ಮಧ್ಯಾಹ್ನದ ಉಪಹಾರ ಕಾರ್ಯಕ್ರಮ ಮಾಡಿದ್ದೀರಿ? ನಾನು ಆಹಾರ ಸಚಿವನಾಗಿದ್ದಂತಹ ಸಮಯದಲ್ಲಿ ಈ ಕಾರ್ಯಕ್ರಮ ಬಂತು. ತಮಗೆ ಗೊತ್ತಿದೆ. ಇವತ್ತು ಹಳ್ಳಿಗಾಡಿನಲ್ಲಿರತಕ್ಕಂತಹ ಬಡವರು, ಸ್ಲಮ್‌ಗಳಲ್ಲಿ ವಾಸ ಮಾಡುವವರು, ಈ generationನಲ್ಲಿ ಮಕ್ಕಳನ್ನು ಶಾಲೆಗಳಿಗೆ ಕಳುಹಿಸಿ ಎಂದು ಹೇಳುವಷ್ಟು ತಿಳುವಳಿಕೆ ಇಲ್ಲ. ಗಂಡ ಹೆಂಡತಿ ದುಡಿದರೆ ಆ ಮಗುವಿನ ತುತ್ತಿನ ಚೀಲ ತುಂಬಿಸಬೇಕು ಎನ್ನುವವರು ಇದ್ದಾರೆ. ಶಿಕ್ಷಣದ ಬಗ್ಗೆ ಅಷ್ಟು ಕಾಳಜಿ ಇರುವಂತಹವರು ಇನ್ನೂ ಕೂಡ ಇಲ್ಲ. ಅಂತಹ ಮಕ್ಕಳು ಎಲ್ಲೋ ಬೀದಿಯಲ್ಲಿರುತ್ತವೆ. ತಂದೆ ತಾಯಿ ಕೆಲಸ ಮಾಡುವುದಕ್ಕೆ ಹೋಗುತ್ತಾರೆ ಎಂದು ಒಂದು ಹೊತ್ತು ಒಳ್ಳೆಯ ಊಟವನ್ನು ಕೊಟ್ಟರೆ ಊಟಕ್ಕೋಸ್ಕರವಾದರೂ ಶಾಲೆಗೆ ಬರುತ್ತವೆ. ಆ ಮಕ್ಕಳಿಗೆ ಶಿಕ್ಷಣದ ಬಗ್ಗೆ ಆಸಕ್ತಿ ಬರಲಿ ಎಂದು ಏನೂ ಇಲ್ಲ. Mid day meals ಎಂದರೆ ಅಂತಹ ಒಳ್ಳೆಯ ಕಾರ್ಯಕ್ರಮವದು. ಸುಮಾರು 600–700 ಕೋಟಿ ರೂ.ಗಳ ಕಾರ್ಯಕ್ರಮವದು. ತಮಿಳುನಾಡಿನಲ್ಲಿ ಎಂ.ಜಿ.ಆರ್.ರವರು ಯಾವ ರೀತಿ ತೆಗೆದುಕೊಂಡು ಬಂದರು ಎಂದು ನೋಡಿ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಏಕೆ ಹೇಳುತ್ತಿದ್ದೇನೆ ಎಂದರೆ ಇದನ್ನು ನೀವು ಉಪಾಧ್ಯಾಯರ ಕೈಗೆ ಕೊಡಬೇಡಿ. ಇದು ಬಹಳ ಒಳ್ಳೆಯ ಕಾರ್ಯಕ್ರಮ. ಉತ್ತಮವಾದ ಕಾರ್ಯಕ್ರಮ, ಬಹು ಮುಖ್ಯವಾದ ಕಾರ್ಯಕ್ರಮ. ಇದಕ್ಕೆ ಪ್ರತ್ಯೇಕವಾದಂತಹ ಒಂದು Directorate ಮಾಡಿ ಎಂದು ಮುಖ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ. ನೀವು ಎಲ್ಲಾ ಕುಳಿತು ಚರ್ಚೆ ಮಾಡಿ. ಪ್ರತ್ಯೇಕವಾದ Secretariat, ಪ್ರತ್ಯೇಕವಾದ Cabinet Minister ಮಾಡಿ ನೋಡಿ. You see the effect of this programme. ಮಧ್ಯಾಹ್ನದ ಉಪಹಾರದ ಉಸ್ತುವಾರಿಯನ್ನು ಮೇಷ್ಟ್ರುಗಳಿಗೆ ಕೊಡುವುದಕ್ಕೆ ಹೋಗಬೇಡಿ. ನಾವು ಅಲ್ಲಿ ನೋಡುತ್ತಿದ್ದೇವೆ. ಅವರು ಪಾಠ ಮಾಡುತ್ತಾರೋ ಆ ಕಡೆ ಊಟ ಕೊಡುತ್ತಾರೋ, ಬಹಳ ಕಷ್ಟವಾಗಿದೆ. ಅವರ ಮೇಲೆ ಮತ್ತೆ ಆಪಾದನೆಗಳು ಅವನು ಗ್ಯಾಸ್ ಕದ್ದ, ತರಕಾರಿ ಸರಿಯಾಗಿ ಮಾಡಲಿಲ್ಲ, ಇದು ಬರಲಿಲ್ಲ. ನಾವು ಸರ್ವ ಶಿಕ್ಷಣ ಅಭಿಯಾನದಲ್ಲಿ ಎಲ್ಲಾ ಕೊಟ್ಟಿದ್ದೇವೆ. ಕೊಠಡಿಗಳು,

ಉಪಾಧ್ಯಾಯರು, ಪ್ರತಿಭಾ ಕಾರಂಜಿ ಪುಸ್ತಕಗಳು, ಸಮವಸ್ತ್ರಗಳು, ಸೈಕಲ್ ಶಿಕ್ಷಣದಲ್ಲಿ ಎಲ್ಲಾ ಅವರಿಗೆ ಕೊಡೋಣ. ಆದರೆ, ಅದರಿಂದ ಈ ಮಧ್ಯಾಹ್ನದ ಉಪಹಾರ ಮಾತ್ರ ದಯಮಾಡಿ ನೀವು ಅದಕ್ಕೆ ಬೇರೆ ವ್ಯವಸ್ಥೆ ಮಾಡಲೇಬೇಕು. ನಾನು ಕಳೆದ ಸಾರಿ ಕೂಡ ಹೇಳಿದೆ. ಇಷ್ಟು ದೊಡ್ಡ ಮೊತ್ತದ, ಇಷ್ಟು ಒಳ್ಳೆಯ ಕಾರ್ಯಕ್ರಮ. ಇದರ ಬಗ್ಗೆ ಯೋಚನೆ ಮಾಡಿ. ಮಾನ್ಯ ಮುಖ್ಯಮಂತ್ರಿಗಳು ಒಂದು change ಮಾಡಿಕೊಳ್ಳಿ. ದಯಮಾಡಿ ಮಠಾಧಿಪತಿಗಳಿಗೆ ಬಹಳ liberal ಆಗಿ 300 ಕೋಟಿ ರೂ. ಕೊಡುತ್ತೇವೆ ಎಂದು ಹೇಳಿದ್ದೀರಿ. ನೀವು ಅಂಗನವಾಡಿಗಳ ಸ್ಥಿತಿ ನೋಡಿದ್ದೀರೇನೋ. ಅಲ್ಲಿಗೆ 100 ಕೋಟಿ ಎಂದು ಹೇಳುತ್ತೀರಿ. ಮಕ್ಕಳು ಚಿನ್ನ ಎಂತಹದ್ದು ರೀ. ಮನೆಗೆ ಹೋಗಿ ನೋಡಬೇಕು. ಅವರಿಗೆ 300 ಕೋಟಿ ಕೊಡಿ. 300 ಕೋಟಿ ಅವರಿಗೆ ಕೊಟ್ಟರೆ ಮಠಗಳ ಸ್ವಾಮಿಗಳು ಖುಷಿ ಪಡುತ್ತಾರೆ. ನಿಮ್ಮ ಎರಡು ವರ್ಷಗಳ ಅವಧಿಯಲ್ಲಿ ಅಂಗನವಾಡಿ ಪೂರ್ಣ ಕಟ್ಟಡ ಇರುವಂತಹದ್ದು ಮಾಡಿ. ಆ ಮಕ್ಕಳನ್ನು ಅಲ್ಲಿಗೆ ಹೋಗಿ ನೋಡಿದರೆ ಏನು ಅನಿಸುತ್ತದೋ ಅಲ್ಲಿಗೆ ಹೋಗಿ ನೋಡಿ. ತಾವು ನೋಡಿದಿರೇನು? ತಾವು ನೋಡಿ ಬಂದಂತಹವರು. ಈಗ ನೋಡಿದಿರೇನೋ ಗೊತ್ತಿಲ್ಲ. ಅಂಗನವಾಡಿಗಳ ಸ್ಥಿತಿಗತಿಗಳು ಹೇಗಿದೆ? ಅವರಿಗೆ 300-400 ಕೋಟಿ ಕೊಡಿ. ಎರಡು ವರ್ಷದಲ್ಲಿ ನಿಮ್ಮ ಆಡಳಿತದಲ್ಲಿ ಒಂದೇ ಒಂದು ಅಂಗನವಾಡಿ ಕೂಡ ಬೇರೆ ಕಟ್ಟಡದಲ್ಲಿ ನಡೆಯಬಾರದು, shabby ಆಗಿ ಇರಬಾರದು. ಒಳ್ಳೆಯ ಕಟ್ಟಡದಲ್ಲಿ ಆ ಮಕ್ಕಳಿಗೆ ಒಳ್ಳೆಯ ಪೌಷ್ಟಿಕ ಆಹಾರಾಂಶವನ್ನು ಕೊಡತಕ್ಕಂತಹ ರೀತಿಯಲ್ಲಿ ಅಂಗನವಾಡಿಗಳು ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿದೆ ಎಂದು, ಮಠಕ್ಕೆ ಕೊಡತಕ್ಕಂತಹ ಹಣವನ್ನು ದಯಮಾಡಿ ಕೊಡಿ. ಮಠಗಳು ಯಾವುವು ಬಡತನದಲ್ಲಿಲ್ಲ. ನೀವು ಮಠದ ಸ್ವಾಮಿಗಳಿಗೆ ಏನು ಮಾಡಿದ್ದೀರಾ ಎಂದರೆ, ಮಾನ್ಯ ಮುಖ್ಯಮಂತ್ರಿಗಳೇ ನಿಮಗೆ ಮಹಾಭಾರತ ಹಾಗೂ ರಾಮಾಯಣದ ಬಗ್ಗೆ ಭಾರಿ ಒಲವು ಇದೆ. ಮಹಾಭಾರತದಲ್ಲಿ ಕೂಡ ಭೀಷ್ಮ, ದ್ರೋಣಾಚಾರ್ಯರು ಕೌರವರ ಪಕ್ಷಪಾತಿಗಳಾಗೇ ಇರುತ್ತಾರೆ. ಅವರು ಅನ್ಯಾಯ, ಅಧರ್ಮ ಮಾಡುತ್ತಿದ್ದಾರೆ ಎಂಬುದು ಗೊತ್ತು. ಆದರೆ, ಮಠಗಳಲ್ಲಿ ಇವತ್ತು ಎಲ್ಲೋ ಒಂದು ಕಡೆ ಅವರಿಗೆ ಕೌರವನ ಋಣ ಇರುತ್ತದೆ. ಆಗಾಗ್ಗೆ

ಉಪ್ಪಿನ ಋಣ ಎನ್ನುವುದು ಭಾದಿಸುತ್ತಿರುತ್ತದೆ. ಹಾಗಾಗಿ ಅವರು ಕೌರವರು ಆ ರೀತಿ ಮಾಡುವುದಕ್ಕೆ ಹೋಗಬೇಡಿ. ಮಠಗಳಿಗೆ ಈ ರೀತಿ ಕೊಟ್ಟು ಕೊಟ್ಟು ಅವರಿಗೆ ಭಾದಿಸುತ್ತಿರುತ್ತದೆ. ಎಲ್ಲಿಯೋ ನೀವು ಮಾಡಿದ ತಪ್ಪನ್ನು ಬೆನ್ನಿಗೆ ಹಾಕಿಕೊಳ್ಳುತ್ತಾರೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳೇ ಅದನ್ನು ಮಾಡಿಸಿಕೊಳ್ಳಬೇಡಿ. ಆ ಸ್ವಾಮಿಗಳಿಗೂ ಕೂಡ ಕೆಟ್ಟ ಹೆಸರು ಬರುತ್ತದೆ. ಅವರು ಪಕ್ಷಪಾತಿಗಳಾಗಿ ಹೋಗತಕ್ಕಂತಹದ್ದು ಆಗುತ್ತದೆ. ದಯಮಾಡಿ ಈ ತರಹದ ಕಾರ್ಯಕ್ರಮಗಳನ್ನು ಮಾಡಿ. ಯಾವುದನ್ನೋ ಮುಚ್ಚಿಕೊಳ್ಳುವುದಕ್ಕೋಸ್ಕರ ಯಾವುದೋ ಹಿನ್ನೆಲೆಯಲ್ಲಿ ನೀವು ಹೆಗ್ಗಳಿಕೆಗೆ ಕೃಷಿ ಬಜೆಟ್ ಎಂದು ತಂದು ಇಡೀ ರಾಷ್ಟ್ರ ನಿಮ್ಮ ಕಡೆಗೆ ನೋಡುತ್ತದೆ ಎನ್ನುವುದು ಅಲ್ಲ. ನಾನು ವಾತಾವರಣ ಇವರಿಗೆ ಹೇಳಿದೆ. ಇವತ್ತು ರಾಷ್ಟ್ರದಲ್ಲಿ ತಲೆತಗ್ಗಿಸುವಂತಹ ರೀತಿಯಲ್ಲಿ, ಕರ್ನಾಟಕ ರಾಜ್ಯದ ರಾಜಕಾರಿಣಿ ಎಂದರೆ ಏನು ಮಾಡಿ ಇಟ್ಟುಬಿಟ್ಟಿದ್ದೀರಿ ನಿಮ್ಮ ಆಡಳಿತದಲ್ಲಿ. ಇದು ನಿಮ್ಮ ನೆನಪಿಗೆ ಬರುವುದಿಲ್ಲವೋ ಏನೋ? ಅಭಿವೃದ್ಧಿಯ ಬಗ್ಗೆ ಮಾತನಾಡುತ್ತೇವೆ. ಯಾರ ಅಭಿವೃದ್ಧಿ ಬಗ್ಗೆ ಮಾತನಾಡುತ್ತೀರಿ? ಲೋಕಾಯುಕ್ತದ ಮುಂದೆ ಯಾರದು ಇದೆ? Governor ಯಾರಿಗೆ prosecute ಮಾಡುವುದಕ್ಕೆ ಅವಕಾಶ ಕೊಟ್ಟರು? Mr. Suresh Kumar ಇವತ್ತು ಯಾರ ಅಭಿವೃದ್ಧಿ? ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳುವುದಕ್ಕೆ ತಾಳ್ಮೆ ಇಲ್ಲ. ಪಾಪ ಅವರಿಗೆ ತಾಳ್ಮೆ ಇಲ್ಲ. ನಾನು ಹೇಳಿದೆ. ನಾನು ನಿಮ್ಮ ಹತ್ತಿರ ಒಂದು ಸಲ ಮಾತನಾಡಿ ಎಂದು ಹೇಳಿದೆ. ನನಗೂ ರಾಜಕೀಯದಲ್ಲಿ ಸುಮಾರು ವರ್ಷಗಳ ಅನುಭವವಾಗಿದೆ. I have seen six Prime Ministers, as an uninterrupted Minister at the Center. ನನಗೂ ಅನುಭವ ಇದೆ. Chair makes anyone to become intelligent ಎಂದು ನಮ್ಮ ರಾಜಕೀಯ ಭಾಷೆಯಲ್ಲಿ ಹೇಳುತ್ತೇವೆ. ಅಧಿಕಾರ ಬಂದಾಗ ತಿಳುವಳಿಕೆ ಬರುತ್ತದೆ ಎಂದು ಯಾರು ಬೇಕಾದರೂ ಬುದ್ಧಿವಂತರಾಗುತ್ತೀರಿ, ಎಲ್ಲಿ ಬರಲೇ ಇಲ್ಲವಲ್ಲರೀ? ಆ ಸಿಟ್ಟು ಹೋಗಲೇ ಇಲ್ಲ. ಸಿಟ್ಟು ಇಳಿಯಲೇ ಇಲ್ಲ. ಆ ತಾಳ್ಮೆನೇ ಇಲ್ಲ. ನಾನು ಮುಖ್ಯಮಂತ್ರಿಗಳಿಗೆ ಹೇಳಿದೆ. ಇಲ್ಲಿ ಕುಳಿತಿದ್ದೀರಿ, ಒಬ್ಬ ಮಾನ್ಯ ಮುಖ್ಯಮಂತ್ರಿಗಳಿಗೆ ಎಷ್ಟು ತಾಳ್ಮೆ

ಇರಬೇಕು ಎಂದು ಹೇಳಿದೆ. ಫೈಲ್ ತೆಗೆದುಕೊಂಡು ಹೊಡೆಯುವುದಕ್ಕೆ ಬರುತ್ತೀರಲ್ಲಾ? ಉದಾಹರಣೆಗೆ ಪಾರ್ಲಿಮೆಂಟ್‌ನಲ್ಲಿ ನಡೆದಂತಹದ್ದನ್ನು ನನ್ನ ಅನುಭವದ ಮೇಲೆ ಅವರ ಗಮನಕ್ಕೆ ತಂದೆ. Chair makes anyone to become intelligent ಎಂದು, ಅವರು ಬುದ್ಧಿವಂತರು ಎಂದು ಹೇಳಿದೆ. ಒಂದು ಕುರ್ಚಿ ಅಂತಹ ಅವಕಾಶವನ್ನು ಅವರಿಗೆ ಕೊಟ್ಟಾಗ, ಆ ಸ್ಥಾನಕ್ಕೆ ಎಂತಹ ಗಾಂಭೀರ್ಯತೆ ಇರಬೇಕು, ತಾಳ್ಮೆ ಇರಬೇಕು, ಎಂತಹ ಆಲೋಚನೆಗಳು ಬರಬೇಕು. ನಾನು first time ನೋಡಿದ್ದು, ಇಂತಹ ಒಬ್ಬರು ಮುಖ್ಯಮಂತ್ರಿಗಳನ್ನು. ಮನಸ್ಸಿಗೆ ನೋವಾಗುತ್ತದೆ. ಮುಖ್ಯಮಂತ್ರಿಗಳು ಮುಖ್ಯಮಂತ್ರಿಗಳೇ ಆಗಿರುತ್ತಾರೆ. ಆದರೆ, ಅವರಿಗೆ ಅದು ಇನ್ನೂ ಬರಲೇ ಇಲ್ಲವಲ್ಲಾ? ಬಹುಶ: ಎಡವಿ ಎಡವಿ ನಿಮ್ಮಲ್ಲೂ ಕೂಡ ಇವತ್ತು ಏನು ಆಂತರಿಕವಾಗಿ ನಡೆದಿದೆಯಲ್ಲಾ ಅದು ನಮಗೆ ಸಂಬಂಧಪಟ್ಟಿದ್ದಲ್ಲ. ಬಹುಶ: ಅದು ಕಾರಣ ಎಂದು ನನ್ನ ಮನಸ್ಸಿಗೆ ತುಂಬಾ ನಾಟುತ್ತಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ತಿಳಿಸಿ ಹೇಳುತ್ತೇನೆ. ಈ ಭಾಗ್ಯಲಕ್ಷ್ಮಿ ಯೋಜನೆ ತುಂಬಾ ಚೆನ್ನಾಗಿ ಹೇಳಿದ್ದೀರಿ. ಸೀರೆಗಳಿಗೆ 12 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದಾರೆ. ನನಗೆ ಅನುಭವವಾಗುತ್ತಿದೆ. ನನಗೆ ಯಡಿಯೂರಪ್ಪನವರ ಬಗ್ಗೆ I have no groaning against him. ನಮಗೇನೂ ವೈಯುಕ್ತಿಕವಾಗಿ ದ್ವೇಷವಲ್ಲ. ಸುರೇಶ್ ಕುಮಾರ್‌ರವರೇ, ಗುಂಡ್ಲುಪೇಟೆಗೆ ಬಂದಿದ್ದೀರಿ. ಚಾಮರಾಜನಗರಕ್ಕೆ ಬರುವುದಿಲ್ಲ, ಅದು ಬೇರೆ. ಚಾಮರಾಜನಗರ ಜಿಲ್ಲೆ ಎಂದರೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಭಾಗ್ಯಲಕ್ಷ್ಮಿ ಯೋಜನೆ ಮಾಡಬೇಕು. ಚಾಮರಾಜನಗರದಲ್ಲಿ ಗುಂಡ್ಲುಪೇಟೆ ಆಯ್ಕೆ ಮಾಡಿಕೊಂಡಿದ್ದೀರಿ. ಮಾನ್ಯ ಮಹದೇವಪ್ರಸಾದ್‌ರವರು ಇಲ್ಲಿ ಇರಬಹುದು, ಇಲ್ಲ ಅವರು. ನಮ್ಮ ಕ್ಷೇತ್ರದಲ್ಲಿ ನಾನು ಮಂತ್ರಿಯಾಗಿದ್ದಾಗ ಡಾ: ಬಿ.ಆರ್.ಅಂಬೇಡ್ಕರ್ ಭವನವನ್ನು ಕಟ್ಟಿದೆ. ಬಹುಶ: ಕರ್ನಾಟಕದಲ್ಲಿ ಎಲ್ಲೂ ಇಲ್ಲ. ಮತ್ತೆ ನಾನು ಎಂ.ಪಿ. ಆಗಿದ್ದಾಗ ಎಲ್ಲಾ ಕ್ಷೇತ್ರದಲ್ಲೂ ಸುಮಾರು ಒಂದೂವರೆ ಕೋಟಿಗೆ ಕಡಿಮೆ ಇಲ್ಲದೆ ಹಾಗೆ ನಾವು ಡಾ:ಬಿ.ಆರ್.ಅಂಬೇಡ್ಕರ್ ಭವನಗಳನ್ನು ಕಟ್ಟಿದ್ದೇವೆ. ಅಲ್ಲಿಯೂ ಕೂಡ ಸುಮಾರು ಒಂದು ಕೋಟಿ 60 ಲಕ್ಷಕ್ಕೆ ಕಟ್ಟಿದ್ದೇವೆ. ಇವರು ಭಾಗ್ಯಲಕ್ಷ್ಮಿ ಯೋಜನೆ ಸಂಬಂಧವಾಗಿ ಬರುತ್ತಿದ್ದಾರೆ

ಎಂದು ಅಲ್ಲಿಗೆ ಕರೆದರು. ನಾನು ಕೂಡ ಯಾವುದೇ ಕಾರ್ಯಕ್ರಮಕ್ಕೆ ಹೋಗುತ್ತಿರಲಿಲ್ಲ. ಇವರು ಅಂಬೇಡ್ಕರ್ ಭವನಕ್ಕೆ ಬರುತ್ತಾರೆ ಎಂದು ಹೋದೆ. ಬಂದರು. ಬಂದು ಕೇಕ್ ಕಟ್ ಮಾಡಿ ಎಂತಹ ಸಂದೇಶ ಕೊಡಬಹುದು, ಏನೋ ಮುಖ್ಯಮಂತ್ರಿಗಳು ಮಾಡುತ್ತಾರೆ ಎಂದು ನೋಡಿದೆ. ಎರಡು ನಿಮಿಷನೂ ಆಗಿಲ್ಲ. ಭಾಗ್ಯಲಕ್ಷ್ಮಿ ಯೋಜನೆಗೆ ಹೋದರು. ಭಾಗ್ಯಲಕ್ಷ್ಮಿ ಯೋಜನೆ ಒಂದು ಒಳ್ಳೆಯ ಕಾರ್ಯಕ್ರಮವೆಂದು ಇಟ್ಟುಕೊಳ್ಳೋಣ. ಹೆಣ್ಣುಮಕ್ಕಳಿಗೆ ಬಾಂಡ್ ಕೊಡಬೇಕು. ಎರಡು ಹೆಣ್ಣುಮಕ್ಕಳಿಗೆ ಬಾಂಡ್ ಕೊಡುತ್ತಾರೆ, ಅವರಿಗೆ 18 ವರ್ಷವಾದ ಮೇಲೆ lifeನಲ್ಲಿ ಒಂದು security ಸಿಗುತ್ತದೆ. ಇದು ಒಂದು ಒಳ್ಳೆಯ ಅವಕಾಶ. So, ಈ ಭಾಗ್ಯಲಕ್ಷ್ಮಿ ಕಾರ್ಯಕ್ರಮ ಮಾಡಬೇಕಾದರೆ, ಹೆಣ್ಣುಮಕ್ಕಳ ತಾಯಂದಿರಿಗೆ ಒಂದು ಸೀರೆ ಕೊಡಬೇಕು ಎಂದು ಹೇಳಿದರು. ಕೊಡಿ, ಬೇಡ ಎಂದು ಯಾರು ಹೇಳಿದರು? ಯಾವ ರೀತಿ ಕೊಡುತ್ತೀರಿ, ನಿಮಗೆ ಯೋಚನೆ ಮಾಡುವ ಶಕ್ತಿಯಿಲ್ಲವೇ? ನಾನು ಗುಂಡ್ಲು ಪೇಟೆಗೆ ಹೋಗಿದ್ದೆ. ಚಾಮರಾಜನಗರ ಜಿಲ್ಲೆಯಲ್ಲಿ ಗುಂಡ್ಲುಪೇಟೆಯಿದೆ. ಆವತ್ತು ಚಾಮರಾಜನಗರ ಜಿಲ್ಲೆಯಲ್ಲಿ ಮಹದೇಶ್ವರ ಬೆಟ್ಟದಿಂದ ಮುಂದೆ ಪೊನ್ನಾಚಿ ಎಂದು ಇದೆ. ಒಬ್ಬ ಹೆಂಗಸು ಪೊನ್ನಾಚಿಯಿಂದ ಹೆಣ್ಣುಮಗುವನ್ನು ಎತ್ತುಕೊಂಡು ಬೆಳಗ್ಗೆ ಬಂದಿದ್ದಾಳೆ. ಆವತ್ತು, ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದು ಎಷ್ಟು ಹೊತ್ತಿಗೆ? ಮಡಿಕೇರಿಯಲ್ಲಿ ನಮ್ಮ ಬೋಪಯ್ಯನವರ ಕ್ಷೇತ್ರದಲ್ಲಿ ಮೀಟಿಂಗ್, ಅಲ್ಲಿಂದ ಎಲಿಕಾಪ್ಟರ್‌ನಲ್ಲಿ ವಾಪಸ್ಸು ಬೆಂಗಳೂರು, ಬೆಂಗಳೂರಿನಲ್ಲಿ press conference, ಆಮೇಲೆ ಗುಂಡ್ಲುಪೇಟೆಗೆ ಬಂದಿದ್ದಾರೆ. ಪೊನ್ನಾಚಿಯಿಂದ ಆ ಹೆಂಗಸು ಗುಂಡ್ಲುಪೇಟೆಗೆ ಬರಬೇಕಾದರೆ ಮಹದೇಶ್ವರ ಬೆಟ್ಟದ ತುದಿಯಿಂದ ಗುಂಡ್ಲುಪೇಟೆಗೆ ಬರಬೇಕಾದರೆ ಕಷ್ಟ. ಸಾಯಂಕಾಲದವರೆಗೆ ಇಲ್ಲಿ ಕಾಯಬೇಕು. ನೀವು ಏನೂ ಕರೆದುಕೊಂಡು ಬರುತ್ತೀರಾ? ಇಲ್ಲಿ ಕಾರ್ಯಕ್ರಮ ಮುಗಿದ ಮೇಲೆ, ಇಲ್ಲಿ ಸೀರೆ ಕೊಟ್ಟ ಮೇಲೆ ಇಲ್ಲಿಂದ ಸೀರೆ ತೆಗೆದುಕೊಂಡು ಮಧ್ಯ ರಾತ್ರಿ ಅಲ್ಲಿಗೆ ತೆರಳಬೇಕು. ಒಂದು ಸೀರೆ ತೆಗೆದುಕೊಳ್ಳುವುದಕ್ಕೆ ಇಷ್ಟು. ನಾನು ಭಾಗ್ಯಲಕ್ಷ್ಮಿ ಯೋಜನೆಯಲ್ಲಿ ಸೀರೆ ಕೊಡಬೇಡಿ ಎಂದು ಹೇಳಲಿಲ್ಲ. ಅದಕ್ಕೆ ಎಷ್ಟು ಕಮೀಷನ್ ತೆಗೆದು

ಕೊಂಡಿದ್ದೀರೋ ಏನೋ? ಭಾಗ್ಯಲಕ್ಷ್ಮಿ ಯೋಜನೆಯಡಿಯಲ್ಲಿ ಸೀರೆ ಕೊಡಬೇಕಾದರೆ ಆಯಾಯ ಕ್ಷೇತ್ರದಲ್ಲಿಯೇ ಶಾಸಕರಿಗೆ ಕೊಡಬಹುದಲ್ಲವಾ? ನಿಮ್ಮ ಸರ್ಕಾರದವರೇ ಕೊಟ್ಟರೆ ಆಯಿತು. ಅದು ಏನು ಮಾನ್ಯ ಮುಖ್ಯಮಂತ್ರಿಗಳೇ ಜಿಲ್ಲಾ ಕೇಂದ್ರದಲ್ಲಿ ಬಂದು ಕೊಡಬೇಕೇ? ಇಷ್ಟೆಲ್ಲಾ ಅವಾಂತರಗಳನ್ನು ಮಾಡಿ, ಯಾರಾದರೂ ಈ ತರಹ ಮಾಡುತ್ತಾರಾ? ಎಲ್ಲಾದರೂ ಇದು ಉಂಟೇ? ಆಯಾಯ ಕ್ಷೇತ್ರದಲ್ಲಿ ಈ ಕಾರ್ಯಕ್ರಮ ಮಾಡಿದ್ದರೆ ಆಗಿತ್ತು. ಇನ್ನೆಷ್ಟು ಜನಕ್ಕೆ ಭಾಗ್ಯಲಕ್ಷ್ಮಿ ಯೋಜನೆಯಡಿಯಲ್ಲಿ ಬಾಂಡ್‌ಗಳನ್ನು ಕೊಡಬೇಕಾಗಿತ್ತು, ಸೀರೆಗಳನ್ನು ಕೊಡಬೇಕಾಗಿತ್ತು. ಆಯಾಯ ಕ್ಷೇತ್ರದಲ್ಲಿ ಶಾಸಕರು ಇದ್ದರು, ಇದನ್ನು ಕೊಟ್ಟರೆ ನಿಮ್ಮ ಬಿಜೆಪಿ ಸರ್ಕಾರಕ್ಕೆ ಕ್ರೆಡಿಟ್ ಅಲ್ಲವೇ? ದಕ್ಷಿಣ ಭಾರತದಲ್ಲಿ ಹೆಬ್ಬಾಗಿಲನ್ನು ಮಾಡಿಕೊಂಡು ಬಂದಿರುವಂತಹ ಬಿಜೆಪಿ ಸರ್ಕಾರ, ಇವರು ಎಂತಹ ಕಾರ್ಯಕ್ರಮ ಹಾಕಿದ್ದಾರೆ? ನಿಮಗೆ ಕ್ರೆಡಿಟ್ ಬರುತ್ತಿತ್ತು. ಆ ಜಿಲ್ಲಾ ಕೇಂದ್ರದಲ್ಲಿ ಎಲ್ಲಾ ಕಡೆಗಳಿಂದ ಜನರನ್ನು ಹೊತ್ತುಕೊಂಡು ಬಂದು ಮಾಡುವುದು. ಇದು ಪ್ರಚಾರ. ನಿಮ್ಮಲ್ಲಿ ನಡೆಯುವಂತಹ ಆಂತರಿಕ ಕಲಹವನ್ನು ಮುಚ್ಚಿಕೊಳ್ಳುವುದಕ್ಕೆ ಎಲ್ಲೋ ಒಂದು ಕಡೆ ಇದು ಒಂದು ಪ್ರಚಾರ. ನಮ್ಮ ನಮ್ಮ ಕ್ಷೇತ್ರಗಳಲ್ಲಿ ನಾವು ಕೊಡೋಣ. ಬೇಕಾದರೆ ಜಿಲ್ಲಾ ಮಂತ್ರಿಗಳು ಬರಲಿ. ಏಕೆ ಇಷ್ಟೊಂದು ಅವಾಂತರ ಮಾಡಿಕೊಂಡು ಇಷ್ಟು ದುಂದುವೆಚ್ಚ ಮಾಡುವಂತಹದ್ದು, ಹೆಣ್ಣು ಮಕ್ಕಳಿಗೆ ಇಷ್ಟೊಂದು ತೊಂದರೆ ಕೊಡುತ್ತೀರಿ? ನನಗೆ ಇದು ಅರ್ಥವಾಗುತ್ತಿಲ್ಲ. ನೀವು ಏನು ಮಾಡುತ್ತಿದ್ದೀರಾ? ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇಲ್ಲ. ನಮ್ಮ ಕಾನೂನು ಸಚಿವರು ಇದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಕುಳಿತುಕೊಳ್ಳಬೇಕಾಗಿತ್ತು. ಮಾತು ಕೇಳಬೇಕಾಗಿತ್ತು. ಇವತ್ತು ಅಂತರಾಷ್ಟ್ರೀಯ ಮಹಿಳಾ ದಿನ. ಅವರು 2 ಗಂಟೆಗೆ ಕಾರ್ಯಕ್ರಮವಿರುವುದರಿಂದ ಕಾರ್ಯಕ್ರಮಕ್ಕೆ ಹೋಗಿದ್ದಾರೆ. ಮತ್ತೆ ಬರುತ್ತಾರೆ.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್: ನೋಡಿ ಮಾನ್ಯ ಸಚಿವರೇ, ಈಗ ನಾನು ಮಾತನಾಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಸದನದ ನಾಯಕರು. ಕೆಲವು

ಸಾರಿ ಗಲಾಟೆ ಏಕೆ ಆಗುತ್ತಿದೆ ಎಂದು ನಾನು ಸದನದಲ್ಲಿ ನೋಡಿದ್ದೇನೆ. ಸದನದ ನಾಯಕ emotional ಆದರೆ, ಉದ್ವೇಗಕ್ಕೆ ಒಳಗಾದರೆ, ಸಹಜವಾಗಿ ಅಲ್ಲಿರತಕ್ಕಂತಹ ಶಾಸಕರು ಅವರನ್ನು ಮೆಚ್ಚಿಸುವುದಕ್ಕೋಸ್ಕರ ಮಾತನಾಡುತ್ತಾರೆ. ನಾನು ಕೆಲವು ಸಾರಿ ನೋಡಿದ್ದೇನೆ. ಈಗ ಮಾನ್ಯ ಮುಖ್ಯಮಂತ್ರಿಗಳು ಹೋಗುವುದು ಏಕೆ? ನಾನು ಮಾತನಾಡುವಾಗ ಕೆಲವು ಸಾರಿ Opposition Leader ರೇಗುತ್ತಿದ್ದರು. ಏನು ನಮ್ಮ ಒಬ್ಬ ಹಿರಿಯ ಮುಖಂಡರು ಮಾತನಾಡುವಾಗ ಈ ರೀತಿ ಎಂದು ಎದ್ದಿದ್ದರೆ ಅದೇ ಗಲಾಟೆಯಾಗುತ್ತಿತ್ತು. ನಾವು ಸುಮ್ಮನೆ ಇದ್ದೇವೆ. ಹೋದರೆ ಹೋಗಲಿ ಎಂದು. ನಾವೇ ಕರೆದು ಕುಳ್ಳಿರಿಸಬೇಕು. ಒಂದು ನಿಮಿಷ ಸಮಯದಲ್ಲಿ ಈ ರೀತಿ ಇದೆ ಎಂದು ಸೌಜನ್ಯಕ್ಕಾದರೂ ಹೇಳುವುದು ಬೇಡವೇ?

ಶ್ರೀ ಎಸ್. ಸುರೇಶ್ ಕುಮಾರ್: ಒಂದೂವರೆ ಗಂಟೆಗೆ ಹೋಗಬೇಕಾಗಿತ್ತು. ತಮ್ಮ ಭಾಷಣಕ್ಕೋಸ್ಕರ ಕುಳಿತಿದ್ದರು.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್: ಹೋಗುವಾಗಲೂ ಸಿಡುಕಿನಿಂದ ಹೋದರು. ನಾನು ಅದಕ್ಕೆ ಹೇಳಿದೆ, Chair makes anyone to become intelligent. ಇವರು ಬದಲಾವಣೆ ಆಗಲಿಲ್ಲವಲ್ಲಾ ಎಂದು ಹೇಳಿದೆ. ನಿಮ್ಮ ದೃಷ್ಟಿಯಲ್ಲಿ ನಿಮಗೆ ಒಳ್ಳೆಯ ಆಡಳಿತ ಬರಲಪ್ಪಾ. ಒಳ್ಳೆಯ ಕೆಲಸ ಮಾಡಿ. ನೀವು ಸರಿಯಾಗಿ ಯೋಚನೆ ಮಾಡುತ್ತಿಲ್ಲ. ನಿಮ್ಮ ಸರ್ಕಾರಕ್ಕೆ ಸರಿಯಾದಂತಹ ಕನಸುಗಳು ಇಲ್ಲ. ನಿಮಗೆ ರಾಜಕೀಯ ಇಚ್ಛಾ ಶಕ್ತಿ ಇಲ್ಲವಲ್ಲಾ ಎಂದು ನೆನಪಿಸುತ್ತಿದ್ದೆ ಸ್ವಾಮಿ. ಒಂದು ನಿಮಿಷ ನಮಗೆ ಹೇಳಿ ಹೋಗಬಹುದಾಗಿತ್ತು. ಪರವಾಗಿಲ್ಲ ಬಿಡಿ.

ನನ್ನ ಇಲಾಖೆಯ ಬಗ್ಗೆ ಬರುತ್ತಿದ್ದೆ. ಸಾರ್ವಜನಿಕ ವಿತರಣಾ ವ್ಯವಸ್ಥೆ ಬಗ್ಗೆ, Public Distribution System, ಅದರ ಬಗ್ಗೆ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಏನು ಮಾಡುತ್ತಿದ್ದೀರಿ, ಎಷ್ಟು ಅವಾಂತರವಾಗಳಿವೆ ಎಂದು ನಾನು ಮಾತನಾಡುವ ಸಂದರ್ಭದಲ್ಲಿ ಹೇಳಿದೆ. ಇವತ್ತು ಬಡತನ ರೇಖೆ, Below Poverty Line ಇರುವಂತವರಿಗೆ ಸಹಾಯ ಮಾಡಬೇಕೆಂದು ಬಹಳ ಮುಖ್ಯವಾಗಿ ಆಹಾರ ಪದಾರ್ಥಗಳನ್ನು ಅವರಿಗೆ

ಕಡಿಮೆ ದರದಲ್ಲಿ ಕೊಡಬೇಕು. ಬಡತನ ರೇಖೆಗಿಂತ ಕಡಿಮೆ ಇರುವವರಿಗೆ ನಾನು ಮೊದಲೇ ಹೇಳಿದೆ, ಅವರು ದುಡಿಮೆ ಮಾಡಿದರು ಕೂಡ ಅವರಿಗೆ ನಮ್ಮ ಹಾಗೆ 15-20ರೂಪಾಯಿ ಕೊಟ್ಟು open marketನಲ್ಲಿ ಕೊಳ್ಳುವಂತಹ ಶಕ್ತಿ ಇರುವುದಿಲ್ಲ. ಅವರ ನೆರವಿಗೆ ಹೋಗಬೇಕೆಂದು ಹೇಳಿ subsidized rate ನಲ್ಲಿ ನಾವು 3 ರೂಪಾಯಿ ಕೆ.ಜಿಗೆ ಕೊಡಬೇಕೆಂಬ ರೀತಿಯಲ್ಲಿ ಇತ್ತು. ಇದರಲ್ಲಿ ಏನಾಗಿದೆ ಎಂದರೆ, ನಮ್ಮ ವಿರೋಧಪಕ್ಷದ ನಾಯಕರು ಆಗ್ಗಾಗ್ಗೆ ಹೇಳುತ್ತಿರುತ್ತಾರೆ. ಇವರು ಎಲ್ಲಿ ತಪ್ಪು ಮಾಡಿದ್ದಾರೆ ಎಂದು. ಒಂದು ಕುಟುಂಬಕ್ಕೆ At the rate of Rs.3/-. 29 ಕೆ.ಜಿ ಅಕ್ಕಿ. 6 ಕೆ.ಜಿ ಗೋಧಿಯನ್ನು ನೀವು ಕೊಡಬೇಕು. ಕೇಂದ್ರ ಸರ್ಕಾರದಲ್ಲಿ ಆ ರೀತಿ ಇದೆ. I don't think, ಇದರಲ್ಲಿ ನಿಮ್ಮ ಅಧಿಕಾರಿಗಳು ಏನಾದರೂ ಇದ್ದಾರೆಯೇ ಗೊತ್ತಿಲ್ಲ. It is a uniform Policy decision of the Government of India. ಈ ರೀತಿ ಕೊಡುವುದು ಎಲ್ಲಾ ರಾಜ್ಯಗಳಲ್ಲಿ ಕಡ್ಡಾಯವಾಗಿ ಅನ್ವಯಿಸುತ್ತದೆ. ಇದರಲ್ಲಿ ಫಲಾನುಭವಿಗಳನ್ನು ನಿಮ್ಮ ಮುಖದ ನೇರಕ್ಕೆ ನೀವು ಮಾಡಿಕೊಳ್ಳುವುದಲ್ಲ. Through Planning Commission, ನಾವು Experts Committee ಯನ್ನು appoint ಮಾಡಿ ಆಗ ಪ್ರೊ.ನಡಕವಾಲಾ ಎಂದು ಇದ್ದರು.

(ಈ ಹಂತದಲ್ಲಿ ಮಾನ್ಯ ಎನ್.ಯೋಗೀಶ್‌ಭಟ್‌ರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಆಗ ನಾವು ಅವರನ್ನು Experts Committee ಅಧ್ಯಕ್ಷರನ್ನಾಗಿ ಮಾಡಿ throughout the country ದೇಶದ ತುಂಬ ಎಲ್ಲಾ ರಾಜ್ಯಗಳಲ್ಲಿಯೂ BPL ಎಷ್ಟಿದೆ ಎನ್ನುವುದನ್ನು ನಾವು identify ಮಾಡುತ್ತೇವೆ, ನಮ್ಮದೇ ಆದಂತಹ ಒಂದು criteria ಇರುತ್ತದೆ. ಅದರ ಮೇಲೆ ಮಾಡಿರುತ್ತೇವೆ. ನಾವು ಇಲ್ಲಿ ಕೊಡತಕ್ಕಂಥದ್ದು ನಿಮಗೆ 32 ಲಕ್ಷ ಎಂದು identify ಮಾಡಿದ್ದೇವೆ. ನೀವು ಮಾಡಿರುವುದು ಎಷ್ಟು? ಒಂದು ಕೋಟಿ. ಒಂದು ಕೋಟಿ ಪಡಿತರ ಚೀಟಿ ಹಂಚಿಕೆ ಮಾಡಲಾಗಿದೆ.

ಶ್ರೀ ಸಿದ್ದರಾಮಯ್ಯ: 86 ಲಕ್ಷ ಪಡಿತರ ಚೀಟಿ ಕೊಡಲಾಗಿದೆ.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್: ಈಗ ಒಂದು ಕೋಟಿ ಬಂದಿದೆ. ನಾನು ಇದರಲ್ಲಿ ಅಂಕಿ-ಅಂಶಗಳನ್ನು ನೋಡಿದೆ ಹೆಚ್ಚು ಕಡಿಮೆ ಒಂದು ಕೋಟಿ ಬಂದಿದೆ. ನೀವು ಹೇಳಿದ ಹಾಗೆ 98,44,338 ಅಂದರೆ ಹತ್ತಿರ ಹತ್ತಿರ ಒಂದು ಕೋಟಿ. ಇವರು ಒಂದು ಕೋಟಿಯಷ್ಟು ಬಿಪಿಎಲ್ ಕಾರ್ಡ್ ಕೊಟ್ಟಿದ್ದಾರೆ. ಆನಂತರ ಗೋಡೌನ್‌ನಲ್ಲಿ ಆಹಾರ ಕೊಳೆಯುತ್ತಿದೆಯಲ್ಲಾ ಎಪಿಎಲ್ ರವರಿಗೂ ಕೊಡಿ ಎಂದು ಸುಪ್ರೀಂಕೋರ್ಟ್ decision ಆದ ಮೇಲೆ ಕೊಡುತ್ತಿದ್ದಾರೆ. ನಾನು ಏಕೆ ಈ ವಿಷಯವನ್ನು ಹೇಳುತ್ತಿದ್ದೇನೆಂದರೆ, it has created a mess. ಈ ವಿತರಣೆ ವ್ಯವಸ್ಥೆಯಲ್ಲಿ ಅರ್ಹ ಫಲಾನುಭವಿಗಳಿಗಿಂತ ಅನರ್ಹ ಫಲಾನುಭವಿಗಳು ಇವತ್ತು ಜಾಸ್ತಿಯಾಗಿದ್ದಾರೆ. ಅಧಿಕಾರಿಗಳು, ರಾಜಕಾರಣಿಗಳು ಎಲ್ಲರೂ ಸೇರಿ ಇವತ್ತು ಸರಿಯಾದಂತಹ ರೀತಿಯಲ್ಲಿ ಮಾಡಲಿಲ್ಲ. ಬಿಪಿಎಲ್ ಕಾರ್ಡ್‌ನ್ನು ಸರಿಯಾದಂತಹ ರೀತಿಯಲ್ಲಿ ವಿತರಣೆ ಮಾಡಬೇಕೆಂದು ಕೋಮ್ಯಾಟ್ ಎನ್ನುವ ಸಂಸ್ಥೆಗೆ ವಹಿಸಲಾಗಿತ್ತು. ಏಕೆ ನಿಮಗೂ ಅವರಿಗೂ ಸರಿಯಾದ understanding ಆಗಲಿಲ್ಲವೋಗೊತ್ತಿಲ್ಲ ಅದು ಸರಿಯಾದ ರೀತಿಯಲ್ಲಿ ಆಗಲಿಲ್ಲ. ಅಂತ್ಯೋದಯ ಅನ್ನ ಯೋಜನೆಯಡಿಯಲ್ಲಿ 35 ಕೆ.ಜಿ ಅಕ್ಕಿಯನ್ನು ಕೊಡಬೇಕೆಂದು ಹೇಳಿರುವುದರಲ್ಲಿ ನೀವು ಹೇಳಿದ ಹಾಗೆ ಇವರು ಒಂದು ಯೂನಿಟ್ ಅಕ್ಕಿ ಕೊಡುವುದಕ್ಕೆ ಆಗುವುದಿಲ್ಲ. 32 ಲಕ್ಷ ಜನಕ್ಕೆ ಸಬ್ಸಿಡಿ ಕೊಟ್ಟಿದ್ದೀರಿ, ಒಂದು ಕೋಟಿ ಮಾಡಿದರೆ ಇನ್ನು 68 ಲಕ್ಷ ಜನರಿಗೆ ನೀವು ಎಲ್ಲಿಂದ ತಂದು ಕೊಡುತ್ತೀರಿ ಮಾನ್ಯ ಸುರೇಶ್‌ಕುಮಾರ್‌ರವರೇ? Food Minister ಎಲ್ಲಿ? ಅವರು ಎಲ್ಲೋ ಹೊರಟು ಹೋದರು. 68 ಲಕ್ಷ ಜನಕ್ಕೆ, ನಾವು ಕೊಟ್ಟಿರುವುದೇ 32 ಲಕ್ಷ ಜನಕ್ಕೆ. ನೀವು ಕೊಟ್ಟಿರುವುದು ಒಂದು ಕೋಟಿ ಬಿಪಿಎಲ್ ಕಾರ್ಡ್ ಇನ್ನು ಉಳಿದಂತಹ 68 ಲಕ್ಷ ಜನರಿಗೆ, ನೀವು open marketನಲ್ಲಿ ಮೂರು ರೂಪಾಯಿಗೆ ಕೊಡುವುದು. 15,18,20 ರೂಪಾಯಿ ಕೊಟ್ಟು ಯಾವ ರೀತಿಯಾಗಿ ತರುತ್ತೀರಿ? ನಿಮಗೆ ಹೊರೆ ಎಷ್ಟು ಬೀಳುತ್ತದೆ? ಅದಕ್ಕೆ ಇವರು ಏನು ಮಾಡಿದರೆಂದರೆ, ಒಬ್ಬರಿಗೆ 4 ಕೆ.ಜಿ ರೀತಿಯಾಗಿ ಒಂದು ಕುಟುಂಬಕ್ಕೆ 20–22 ಕೆ.ಜಿ ಕೊಡುವುದು. ಅದನ್ನು distribute ಮಾಡುವುದಕ್ಕೆ ಹೊರಟರು. Government of Indiaದವರು ಸುಮ್ಮನೆ ಆಗುತ್ತಾರೆಯೇ? ಆ

ರೀತಿ ಮಾಡಬಾರದೆಂದು ನಮ್ಮ ಅಧಿಕಾರಿಗಳಿಗೆ ಗೊತ್ತಿಲ್ಲವೇ? ಇದನ್ನು ತಾವು ಇವತ್ತು ಮಾಡಿ ಇಲ್ಲಿ ನಿಜವಾದ ಫಲಾನುಭವಿಗಳಿಗೆ ಬಹಳ ತೊಂದರೆಯಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಬಿಪಿಎಲ್ ಕಾರ್ಡ್ ಏನಿದೆ, ಈಗ ಅದನ್ನು ನೀವು ತೆಗೆಯುವುದಕ್ಕೆ ಹೋಗಿದ್ದೀರಿ, ಎಷ್ಟು ಅರ್ಹ ಫಲಾನುಭವಿಗಳನ್ನು ತೆಗೆದುಬಿಟ್ಟಿದ್ದೀರಿ. ದೊಡ್ಡ ಗಲಾಟೆಗಳು ಆಗುತ್ತಿವೆ. ಸರಿಯಾದ ರೀತಿಯಲ್ಲಿ ಇವತ್ತು ಅವರಿಗೆ ಆಹಾರ ಪದಾರ್ಥಗಳು ಸಿಗುತ್ತಿಲ್ಲವೆಂದು ನಾವು ನೋಡುತ್ತಿದ್ದೇವೆ. ಹಾಗಾಗಿ ನೀವು ಈಗಿರುವ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ಸರಿಪಡಿಸಬೇಕು. ನನಗೆ ಒಂದು ಆಶ್ಚರ್ಯವೇನೆಂದರೆ, ಇವತ್ತು ನಮ್ಮ ರಾಜ್ಯದಲ್ಲಿರುವ ಕುಟುಂಬಗಳಿಗಿಂತ ಪಡಿತರ ಚೀಟಿಗಳನ್ನೇ ಜಾಸ್ತಿ ಕೊಟ್ಟಿದ್ದೀರಿ. ಮಾಧ್ಯಮಗಳಲ್ಲಿ ನೋಡಿದೆ. ಕೆಲವು ಹಳ್ಳಿಗಳಲ್ಲಿ 200 ಕುಟುಂಬಗಳು ಇದ್ದರೆ, 300 ಬಿಪಿಎಲ್ ಕಾರ್ಡ್‌ಗಳನ್ನು ಕೊಟ್ಟಿದ್ದೀರಿ. ಎಷ್ಟು ಅವ್ಯವಸ್ಥೆಯಾಗಿದೆ. ಇದು ಅಧಿಕಾರಿಗಳಿಗೆ ಗೊತ್ತಿಲ್ಲವೇನೋ? ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಬಹಳಷ್ಟು ತೊಂದರೆಯಾಗಿದೆ. ಬಹಳ ದುರುಪಯೋಗವಾಗುತ್ತಿದೆ. ಇದನ್ನು ಸರಿಯಾದ ರೀತಿಯಲ್ಲಿ ತಾವು ವ್ಯವಸ್ಥೆ ಮಾಡಬೇಕು. 2 ರೂಪಾಯಿಗೆ ಕೆ.ಜಿ ಅಕ್ಕಿ ಕೊಡುವುದು ಇರಲಿ, ಚುನಾವಣಾ ಪ್ರಣಾಳಿಕೆಯಲ್ಲಿ ಎರಡು ರೂಪಾಯಿಗೆ ಕೆ.ಜಿ. ಅಕ್ಕಿ ಕೊಡುತ್ತೇವೆಂದು ಹೇಳಿದ್ದಾರೋ ಇಲ್ಲವೋ? ಆ ರೀತಿಯಲ್ಲಿ ಹೇಳಿ, ಇದನ್ನಾದರೂ ಸರಿಪಡಿಸಿ ಸರಿಯಾದಂತಹ ರೀತಿಯಲ್ಲಿ ಅರ್ಹ ಫಲಾನುಭವಿಗಳಿಗೆ 35 ಕೆ.ಜಿ ಅಕ್ಕಿ ಸಿಗುವಂತಹ ರೀತಿಯಲ್ಲಿ ತಾವು ಮಾಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಸುರೇಶ್‌ಕುಮಾರ್‌ರವರೆ, ಕಾನೂನು ಇಲಾಖೆಗೆ ಸಂಬಂಧಿಸಿದಂತೆ Chief Justice Statement ಬಗ್ಗೆ ಹೇಳೋಣ ಎಂದು ಇದ್ದೇನೆ. ಕೇಹರ್‌ರವರು ಹೇಳಿದರಲ್ಲ, ಹಂಪಿ ದೇವಸ್ಥಾನದ ಒಂದು dispute ಅವರ ಮುಂದೆ ಹೋದಾಗ, ಎಷ್ಟೋ ಬಾರಿ ನಾವು ಕೇಳುತ್ತಿದ್ದೇವೆ. ನಮ್ಮ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳು ತುಂಬಾ ಇವೆ. ಅದನ್ನು ವಿಚಾರಣೆ ಮಾಡಬೇಕಾಗಿದೆ, ನಮಗೆ ಸೌಲಭ್ಯಗಳು ಕೊಡಿ ಎಂದು ಹೇಳಿ, ಕೊಡುವುದಿಲ್ಲ,

ಮಠಗಳಿಗೆ ಮಾತ್ರ ದುಡ್ಡು ಕೊಡುತ್ತೀರಿ ಎಂದು ಬಹಳ ನೊಂದು ಹೇಳಿದರು ಅಲ್ಲವೇ? ನಿಮಗೂ ಗೊತ್ತಿರಬೇಕು. ನಿಮ್ಮ ಹತ್ತಿರ ಮಾತನಾಡಿರಬೇಕು. ಒಂದು ಸಾರಿ ನಿಮ್ಮ ಮಾತನ್ನು ನಾನು ಬಹಳ ಮೆಚ್ಚುತ್ತೇನೆ. ನಾನು ಹೇಳುವುದೇನೆಂದರೆ, Justice delayed will be justice denied. ನೀವು ಒಂದು ಹೆಜ್ಜೆ ಮುಂದು ಹೋಗಿ, justice denied will be justice buried ಎಂದು ಹೇಳಿದಿರಿ ಅಲ್ಲವೇ? ಬಹಳ ಚೆನ್ನಾಗಿ ಹೇಳಿದಿರಿ. Law minister ಆಗಿ ನಿಮ್ಮ ಮಾತನ್ನು ನಾನು ಮೆಚ್ಚುತ್ತೇನೆ. Justice denied will be justice buried. ತಾವು ಕಾನೂನು ಸಚಿವರಾಗಿರುವವರು, ಮುಖ್ಯ ನ್ಯಾಯಾಧೀಶರ ಜೊತೆಯಲ್ಲಿ ನೀವು ಮಾತನಾಡಿ ಅವರಿಗೆ ಬೇಕಾಗಿರುವ ರೀತಿಯಲ್ಲಿ ನ್ಯಾಯಾಲಯಕ್ಕೆ ಬಹಳ ಬೇಗ ಕೇಸ್‌ಗಳು, ಮೊಕದ್ದಮೆಗಳು ಇತ್ಯರ್ಥವಾಗುವ ರೀತಿಯಲ್ಲಿ ಮಾಡಿದ್ದೀರಿ ಎಂದು ಕಾಣಿಸುತ್ತದೆ. 70 ಕೋಟಿ ರೂ. ಏನೋ ಕೊಟ್ಟಿದ್ದೀರಿ, ಅದು ಸಾಲುತ್ತದೆಯೋ ಇಲ್ಲವೋ ಗೊತ್ತಿಲ್ಲ. ಕಳೆದ ಬಾರಿ 30–35 ಕೋಟಿ ರೂ. ಕೊಟ್ಟಿದ್ದೀರಿ. ಏಕೆಂದರೆ ನಾವು judiciary ಕೂಡ ನೋಡಬೇಕಾಗುತ್ತದೆ. ಪ್ರತಿಯೊಂದಕ್ಕೂ ನ್ಯಾಯಾಂಗಕ್ಕೆ ಹೋಗುತ್ತೇವೆ. ನಮಗೆ ನ್ಯಾಯ ಕೊಡಿ ಎಂದು ಹೋಗತಕ್ಕಂಥವರು ನ್ಯಾಯಾಂಗಕ್ಕೆ ಬೇಕಾದಂತಹ ಸವಲತ್ತುಗಳನ್ನು ಕೊಡಿಸುವ ರೀತಿಯಲ್ಲಿ ನಾವು ಮಾಡಬೇಕೆಂದು ಯೋಚನೆ ಮಾಡಬೇಕು.

ಕೊನೆಯದಾಗಿ, statement ಮಾಡಿರುವ ಬಗ್ಗೆ ಮಾತನಾಡುತ್ತೇನೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಮಾನ್ಯ ಗೋವಿಂದ ಕಾರಜೋಳರವರು ಇಲ್ಲೇ ಇದ್ದಾರೆ, ಈಗ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತದೆ. ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಯಾವ ರೀತಿಯಾಗಿ ಮಾಡುತ್ತೇವೆಂದು ತಾವು ಮುಖ್ಯವಾಗಿ ಯೋಚನೆ ಮಾಡಬೇಕಾಗಿದೆ. ಮೊನ್ನೆ ನಾನು ಹೇಳಿದೆ, ಕನ್ನಡಪ್ರಭ ಪತ್ರಿಕೆಯಲ್ಲಿ ಎಲ್ಲೋ ಬಂದಿತ್ತು. ತುಂಬಾ ಒಳ್ಳೆಯ ಲೇಖನ ಇತ್ತು. ಬಹಳ ಸಮಯೋಚಿತವಾದ ಲೇಖನ. ಮಾನ್ಯ ಸುರೇಶ್‌ಕುಮಾರ್‌ರವರು ಬರೆದಿರುವ ಲೇಖನ ಪೂರ್ಣ ಓದಿದ್ದೇನೆ. ತಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಏಕೆಂದರೆ ನಮಗೆ ನಮ್ಮ ಭಾಷೆಯ ಬಗ್ಗೆ

ತುಂಬಾ ಹೆಮ್ಮೆ, ಹೆಗ್ಗಳಿಕೆ ಇರುತ್ತದೆ. ಶಾಸ್ತ್ರೀಯ ಭಾಷೆಗೆ ಸಂಬಂಧಿಸಿದಂತೆ ನಾನು ಸ್ವಲ್ಪ ಇದರಲ್ಲಿ ಹೋರಾಟ ಮಾಡಿದ್ದೇನೆ. ಏನು ಮೊನ್ನೆ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡವನ್ನು ಅಭಿಜಾತ ಭಾಷೆ ಎಂದು ಕರೆಯಬೇಕೆಂದು, ಶಾಸ್ತ್ರೀಯ ಭಾಷೆ ಎನ್ನುವುದು ಬೇಡ ಎಂದು ಚರ್ಚಿಸಲಾಯಿತು. Sanskritಗೆ ಮಾತ್ರ ಶಾಸ್ತ್ರೀಯ ಭಾಷೆ ಎಂದು ಇತ್ತು. ಆದಾದನಂತರ ತಮಿಳಿನವರು ಮಾತ್ರ ಕೊಟ್ಟಿದ್ದರು. ತಮಿಳರು ಹಾಕಿರುವಂತಹ ಷರತ್ತು ಅವರು ಕೊಟ್ಟಮೇಲೆ ಐದು ವರ್ಷಗಳ ಕಾಲ ಯಾವುದೇ Dravidian languages ಅಥವಾ ಬೇರೆ ಯಾವುದೇ ಭಾಷೆಗಳಿಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಕೊಡಬಾರದು ಎಂದು ಆಯಿತು. ಅದು ನಮಗೆ ಬೇಕಾಯಿತು. ನಾವು ಯಾವ ರೀತಿ ಮಾಡಿದೆವು ಅಂದರೆ, ಒಂದು ಶಾಸ್ತ್ರೀಯ ಭಾಷೆ ಅಥವಾ ಅಭಿಜಾತ ಭಾಷೆಗೆ, ಸುಮಾರು ಎರಡು, ಎರಡೂವರೆ ಸಾವಿರ ವರ್ಷಗಳ ಇತಿಹಾಸ ಇರಬೇಕು, ಅದಕ್ಕೆ ತನ್ನದೇ ಆದಂತಹ ಪರಂಪರೆ, ಸಂಸ್ಕೃತಿ, ಎರಡೂವರೆ ಸಾವಿರ ವರ್ಷಗಳಿಂದ ಅದು ಆಡು ಭಾಷೆಯಾಗಿರಬೇಕು, ಲಿಪಿ ಇರಬೇಕು, ಶಾಸನಗಳು ಇರಬೇಕು, ಇಷ್ಟೂ ಕೂಡ ಬೇಕು. ಇಷ್ಟೆಲ್ಲಾ ಇತ್ತು. ತಮಿಳಿಗಿಂತಲು ಕೂಡ ನಮ್ಮ ಭಾಷೆಗೆ ನಮ್ಮದೇ ಆದಂತಹ ಇತಿಹಾಸ, ಲಿಪಿ ಇತ್ತು, ಅದು ಆಡು ಭಾಷೆಯಾಗಿತ್ತು, ಶಾಸನಗಳು ಇತ್ತು ಎಂದು ಹೇಳಿದ ಮೇಲೆ ಅದು ಅಭಿಜಾತ ಭಾಷೆ ಆಯಿತು. ಇದು ನಾವೆಲ್ಲಾ ಹೆಮ್ಮೆ ಪಡತಕ್ಕಂಥದ್ದು ಅಲ್ಲವೇ? ನಾವೆಲ್ಲಾ, ವಿಶ್ವ ಕನ್ನಡಿಗರೆಲ್ಲಾ ಒಂದು ಕಡೆ ಸೇರಿ, ಇಂತಹ ಭಾಷೆಯ ಹಿನ್ನೆಲೆಯಲ್ಲಿ ನಾವೆಲ್ಲಾ ಕನ್ನಡಿಗರಾಗಿತಕ್ಕಂಥವರು, ನಾವೆಲ್ಲರೂ ಒಂದು ಕಡೆ ಸೇರಿ ನಡೆಯತಕ್ಕಂಥದ್ದು, ಕೇವಲ ಕರ್ನಾಟಕದ ಏಕೀಕರಣ, ಭಾಷಾವಾರು ಪ್ರಾಂತ್ಯಗಳಾಗಬೇಕಾಗಿಲ್ಲ. ನಾವು ಏಕೆ ಬೆಳಗಾಂನಲ್ಲಿ ಮಾಡುತ್ತಿದ್ದೇವೆ ಎಂದು ಯೋಚನೆ ಮಾಡಬೇಕಾಗುತ್ತದೆ. ಕೇವಲ ಭೌಗೋಳಿಕವಾಗಿ ಒಂದಾಗುವುದಕ್ಕೆ ಆಗುವುದಿಲ್ಲ. ಇವತ್ತು ಬೆಳಗಾಂ ಅಧಿವೇಶನ ಎಂದು ಹೇಳಿದರೆ, ಅದು ಭಾವನಾತ್ಮಕವಾಗಿ ಕೂಡ ನಾವು ಒಂದು ಎಂದು. ಎಲ್ಲೂ ಅಪಸ್ವರ ಬರುತ್ತಿಲ್ಲವೇ? Article 371, ಹೈದಾರಬಾದ್-ಕರ್ನಾಟಕ ವಿಶೇಷವಾದಂತಹ ಸವಲತ್ತುಗಳು ಸಿಗಬೇಕು, ಇಲ್ಲವಾದರೆ ನಾವು ಬೇರೆ ಹೋಗುತ್ತೇವೆ ಎಂದು

ಹೇಳುತ್ತಾರೆ. ಕರ್ನಾಟಕ ಏಕೀಕರಣವಾಗಿ, ಭೌಗೋಳಿಕವಾಗಿ ಒಂದಾಗಿ, ಹರಿದು ಹಂಚಿ ಹೋಗಿದ್ದ ಕನ್ನಡಿಗರೆಲ್ಲಾ ನಾವೆಲ್ಲಾ ಒಂದಾದ ಮೇಲೆ ಭಾವನಾತ್ಮಕವಾಗಿಯೂ ನಾವು ಒಂದು ಎಂದು ಬರಲಿಲ್ಲ. ಇನ್ನೂ ಕೊಡುಗು ಪ್ರತ್ಯೇಕವಾದ ಜಿಲ್ಲೆ ಎಂದು ಕೇಳುತ್ತಾರೆ. ಬಹುಶ: ಈ ಹಿನ್ನೆಲೆಯಲ್ಲಿ ನಾವು ಬೆಳಗಾಂನಲ್ಲಿ ನಮ್ಮ ಭಾವನಾತ್ಮಕವಾದ ಒಂದು ಸಂಬಂಧದ ಹಿನ್ನೆಲೆಯಲ್ಲಿ, ನಮ್ಮ ಭಾಷೆಯ ಬಗ್ಗೆ ನಾವು ಎಲ್ಲರೂ ಹೆಮ್ಮೆಪಡುವಂತಹ ರೀತಿಯಲ್ಲಿ ನಾವು ವಿಶ್ವ ಕನ್ನಡ ಸಮ್ಮೇಳನ ಮಾಡುವುದು. ಏಕೀಕರಣವಾದ ಮೇಲೆ ಇವತ್ತು ಕರ್ನಾಟಕದ ಸಮಗ್ರ ಅಭಿವೃದ್ಧಿ ಬದಲಾವಣೆಯಾಗಿದೆ. ಭಾರತ ದೇಶದ ಭೂಪಟದಲ್ಲಿಯೂ ನಮ್ಮದು ಅಗ್ರಸ್ಥಾನದಲ್ಲಿರಬೇಕು, ಎದ್ದು ಕಾಣಬೇಕೆನ್ನುವ ಕಾಳಜಿ ಇರುವಂಥದ್ದು, ವಿಶ್ವ ಕನ್ನಡಿಗರ ಸಮ್ಮೇಳನದಲ್ಲಿ ನಡೆಯತಕ್ಕಂಥದ್ದು, ಭಾವನಾತ್ಮಕವಾಗಿ ನಾವೆಲ್ಲರು ಕೂಡ ಯೋಚನೆ ಮಾಡತಕ್ಕಂಥದ್ದು.

Why we have chosen Belgaum? ಬೆಳಗಾಂ ಅನ್ನು ಏಕೆ ಆಯ್ಕೆ ಮಾಡಿಕೊಂಡಿರಿ? 25 ವರ್ಷಗಳ ಹಿಂದೆ ಮೈಸೂರಿನಲ್ಲಿ ಆಯಿತು? ಬೆಳಗಾಂ ಅನ್ನು ಆಯ್ಕೆ ಮಾಡಿಕೊಂಡಂತಹದು ಏಕೆ ಅಂದರೆ ಅಲ್ಲಿ ವಿವಾದ ಇದೆ. ಉತ್ತರ ಕರ್ನಾಟಕದಿಂದ ಬರತಕ್ಕಂತಹ ಮಾನ್ಯ ಬಸವರಾಜ ಬೊಮ್ಮಾಯಿಯವರಿಗೆ ಗೊತ್ತಿರತಕ್ಕಂತಹದು. ಇವತ್ತು ಕೂಡ ಮಹಾರಾಷ್ಟ್ರದವರು ಯಾವ ರೀತಿಯಾದಂತಹ ಪ್ರಚೋದನೆಯನ್ನು ಮಾಡುತ್ತಿದ್ದಾರೆ? ಇವತ್ತು ಯಾವ ರೀತಿಯಾದಂತಹ ವಿವಾದ ಇದೆ. ಅದಕ್ಕೋಸ್ಕರ ಅಲ್ಲವೇನು, ಅದು ಕರ್ನಾಟಕ ರಾಜ್ಯದ ಅವಿಭಾಜ್ಯ ಅಂಗ ಎನ್ನತಕ್ಕಂತಹ ರೀತಿಯಲ್ಲಿ ತಾನೇ ಅಲ್ಲಿ ನಡೆಯುತ್ತಿರುವುದು. ಬೆಳಗಾಂನಲ್ಲಿ ವಿಶೇಷ ಅಧಿವೇಶನ ಏಕೆ ಮಾಡಿದಿರಿ? ಅಲ್ಲಿ ಸುವರ್ಣ ಸೌಧ ಏಕೆ ಕಟ್ಟುತ್ತಿದ್ದೀರಿ? ಇವತ್ತು ಮಹಾರಾಷ್ಟ್ರದಲ್ಲಿ ಒತ್ತಿ ಒತ್ತಿ ನಾವು ಹೇಳಬೇಕಾಗಿದೆ ಬೆಳಗಾಂ ಕರ್ನಾಟಕ ರಾಜ್ಯಕ್ಕೇ ಸೇರಿದಂತಹದು. ಆ ಒಂದು ದೃಷ್ಟಿಯಿಂದ ಇವತ್ತು ನಾವು ಬೆಳಗಾಂ ಅನ್ನು ನಾವು ಆಯ್ಕೆ ಮಾಡಿರತಕ್ಕಂತಹದು. ಬೆಳಗಾಂ ಬಗ್ಗೆ ನಾವು ಇವತ್ತು ಭಾಷಾವಾರು ಪ್ರಾಂತ್ಯಗಳಾದ ಮೇಲೆ ಒಪ್ಪದೇ ಇದ್ದರೂ ನಾವು ಪಾರ್ಲಿಮೆಂಟ್‌ನಲ್ಲಿ ಮಾತನಾಡಿದೆವು. ಅವತ್ತು ಮಾನ್ಯ ಶರದ್ ಪವಾರ್

ಅವರು ಕೂಡ ಇದ್ದರು. ಮಾನ್ಯ ವೀರೇಂದ್ರ ಪಾಟೀಲ್ ಅವರು ಈ ಬೆಳಗಾಂನ ಪ್ರಶ್ನೆ ಬಂದಾಗ ಅವತ್ತು ಮಹಾರಾಷ್ಟ್ರದ ಒಬ್ಬರೇ ಒಬ್ಬ ಪಾರ್ಲಿಮೆಂಟ್ ಮೆಂಬರ್ ಕೂಡ ಶರದ್ ಪವಾರ್ ಆದಿಯಾಗಿ ಯಾರೂ ಕೂಡ ಮಾತನಾಡಲಿಲ್ಲ. ಅಷ್ಟು ಚೆನ್ನಾಗಿ ಮಾನ್ಯ ವೀರೇಂದ್ರ ಪಾಟೀಲ್ ಅವರು ಮನದಟ್ಟಾಗುವ ರೀತಿಯಲ್ಲಿ ಬೆಳಗಾಂನ ಆ ವಿವಾದವನ್ನು ತೆಗೆದು ಹೇಳಿದರು. ಭಾಷಾವಾರು ಪ್ರಾಂತ್ಯಗಳಾದ ಮೇಲೆ ಏನಾಯಿತು? ಅದಾದ ಮೇಲೆ ಅಂದಿನ ಮುಖ್ಯಮಂತ್ರಿಗಳು ವಿ.ಪಿ. ನಾಯಕ್, ನಿಜಲಿಂಗಪ್ಪನವರ ಮಧ್ಯೆ ಆದಂತಹ ಮಾದುಕತೆ. ಮಹಾಜನ್ ಆಯೋಗ ನೇಮಕ ಮಾಡಿದ್ದು. ಮಹಾಜನ್ ಆಯೋಗಕ್ಕೆ ನಾವು ಯಾವ ರೀತಿ ಬದ್ಧರಾಗಿದ್ದೇವೆ ಎನ್ನತಕ್ಕ ಹಿನ್ನೆಲೆಯಲ್ಲಿ ಅವರು ಪಾರ್ಲಿಮೆಂಟಿನಲ್ಲಿ ಮಾತನಾಡಿದರು. ನಾನೂ ಕೂಡ ಗಡಿಯ ಬಗ್ಗೆ ಮಾತನಾಡಿದ್ದೇನೆ. ಸರೋಜಿನಿ ಮಹಿಷಿ ವರದಿ ಬಗ್ಗೆ ನಾನು ಮಾತನಾಡಿದ್ದೇನೆ. ಹಾಗಾಗಿ ನಾನೇಕೆ ಹೇಳಿದೆ ಎಂದರೆ ಅದು ಇವತ್ತು ಕೂಡ ಬಹಳ ವಿವಾದವನ್ನು ಸೃಷ್ಟಿ ಮಾಡತಕ್ಕ ರೀತಿಯಲ್ಲಿ ಹುನ್ನಾರ ನಡೆಯುತ್ತಿದೆ, ಪ್ರಚೋದನೆ ನಡೆಯುತ್ತಿದೆ. ನಾವು ಬೆಳಗಾಂ ಕೂಡ ಕರ್ನಾಟಕಕ್ಕೇ ಸೇರಿದ್ದು ಎನ್ನತಕ್ಕ ರೀತಿಯಲ್ಲಿ ವಿಶ್ವಕನ್ನಡಿಗರು ಒಂದು ಕಡೆ ಸೇರಬೇಕು ಅಲ್ಲಿ. ಅದರ ಮುಖಾಂತರ ಅವರಿಗೆ ಒಂದು ಸಂದೇಶವನ್ನು ಕೊಡಬೇಕು. ಕೇಂದ್ರ ಸರ್ಕಾರಕ್ಕೆ ಹೇಳಬೇಕು. ಮಹಾರಾಷ್ಟ್ರದವರಿಗೆ ತಿಳುವಳಿಕೆ ಕೊಡಬೇಕು ಎನ್ನತಕ್ಕ ದೃಷ್ಟಿಯಲ್ಲಿ ನಾವು ಇವತ್ತು ಬೆಳಗಾಂ ಅನ್ನು ಆಯ್ಕೆ ಮಾಡಿದ್ದು. ಇಲ್ಲಿ ನಮ್ಮಲ್ಲಿ ಯಾವುದೇ ರೀತಿಯಾದಂತಹ ಅಪಸ್ವರ ಬರಬಾರದಾಗಿತ್ತು, ನನ್ನ ದೃಷ್ಟಿಯಲ್ಲಿ ಇತರ ಹಿನ್ನಲೆಯಲ್ಲಿ ನೋಡಿದಾಗ, ನೀವು ಇನ್ನೂ ಒಂದು board ಹಾಕಬಹುದಾಗಿತ್ತು. ನೀವು ಬ್ಯಾನರ್‌ನಲ್ಲಿ ಆದಿ ಕವಿ ಪಂಪನದು ಬರಲಿಲ್ಲವೇನು? ಮಹಾರಾಷ್ಟ್ರದವರಿಗೆ ನಾವು ತಿಳುವಳಿಕೆ ಕೊಡಬಹುದಲ್ಲವೇ. ನಾವೆಂತಹ ಕನ್ನಡಿಗರು ಎಂದು. ಮನುಜ ಕುಲ ತಾನೊಂದೇ ಒಲಂ ಎನ್ನುವ ಮಾತನ್ನು ಆದಿ ಕವಿ ಪಂಪ ಹೇಳಿದ್ದ. ಅದನ್ನು ನಾವು ಬೆಳಗಾಂನಲ್ಲಿ ಎಲ್ಲರೂ ಕೂಡ ಹೇಳಬಹುದಾಗಿತ್ತು. ನಮಗೆ ಎಂತಹ ಹಿನ್ನೆಲೆ ಇದೆ. ಮರಾಠಿಗರು ಮತ್ತೊಬ್ಬರು ಎಂದಲ್ಲ. ಮಾನವೀಯ ದೃಷ್ಟಿಯ ಮೇಲೆ ಚಿಂತನೆಗಳನ್ನು ಮಾಡಿರತಕ್ಕಂತಹ

ಸಾಹಿತಿಗಳು. ಆ ರೀತಿ ಸಮಾಜ ಸುಧಾರಕರು ಇರತಕ್ಕಂತಹ ನಾಡು ಇದು. ನಾವು ಆ ಹಿನ್ನೆಲೆಯಲ್ಲಿ ಇವತ್ತು ವಿಶ್ವ ಕನ್ನಡಿಗರ ಸಮ್ಮೇಳನವನ್ನು ಮಾಡುತ್ತಿದ್ದೇವೆ. ಉದ್ಘಾಟನೆಗೆ ಯಾರನ್ನು ಕರೆಯುತ್ತೀರಿ ಎನ್ನತಕ್ಕಂತಹ ಪ್ರಶ್ನೆ. ಎಲ್ಲೂ ಕೂಡ ಅದರಲ್ಲಿ ನಮಗೆ ಅಪಸ್ವರ ಬರಲೇಬಾರದು. ನಾವು ಬೆಳಗಾಂ ಅನ್ನು ಆಯ್ಕೆ ಮಾಡಿಕೊಂಡಿದ್ದೇವೆ ಎಂದ ತಕ್ಷಣ ನಾವು ಯಾರೂ ಕೂಡ ಉದ್ಘಾಟನೆಗೆ ಅವರು ಬರಬೇಕಾಗಿತ್ತು, ಇವರು ಬರಬೇಕಾಗಿತ್ತು ಎಂದು ಅದನ್ನು ಮೊದಲು ಚರ್ಚೆ ಮಾಡಬೇಕಾಗಿತ್ತು. ನೀವು ಅದರಲ್ಲಿ ಕೂಡ ಉದ್ಘಾಟನೆಗೆ 4–5 ಹೆಸರುಗಳನ್ನು ಇಟ್ಟುಕೊಂಡು ಮಾಡಬಹುದಾಗಿತ್ತು. ತಪ್ಪೇನೂ ಇರಲಿಲ್ಲ ಅಥವಾ ನಾರಾಯಣಮೂರ್ತಿ ಮಾಡಿದ್ದು ತಪ್ಪು ಎನ್ನತಕ್ಕದ್ದು ಏನಿಲ್ಲ. ಅದನ್ನು ಮಾಡಬಾರದಾಗಿತ್ತು. ನಿಜ ನಾನು ನಾರಾಯಣ ಮೂರ್ತಿಯವರನ್ನು ಬೇರೆ ದೃಷ್ಟಿಯಲ್ಲಿ ನೋಡತಕ್ಕದ್ದು ಇದೆ. ನಾರಾಯಣಮೂರ್ತಿ ಅವರು ಮೈಸೂರಿನಲ್ಲಿಯೇ ಹುಟ್ಟಿದವರು. ಕಡು ಬಡತನದಲ್ಲಿ ಬಂದಿರತಕ್ಕಂತಹವರು. ಇವತ್ತು ಈ infosys ಎಂಬ IP companyಯ ದಿಗ್ಗಜರಾಗಿರತಕ್ಕವರು. ಈ ಕ್ಷೇತ್ರದಲ್ಲಿ ಒಂದು ದೊಡ್ಡ ಸಾಧನೆಯನ್ನು ಮಾಡಿರತಕ್ಕಂತವರು ಒಬ್ಬ ವ್ಯಕ್ತಿ ಅವರು. ಅಂತಹ ವ್ಯಕ್ತಿಯ ಕೈಯಲ್ಲಿ ನಾವು ಉದ್ಘಾಟನೆಯನ್ನು ಮಾಡಿಸಬೇಕು ಎನ್ನತಕ್ಕ ರೀತಿಯಲ್ಲಿ ಇವತ್ತು ನಾವು ಮಾಡಿರತಕ್ಕದ್ದು. ಅದು ನಾವು ಬೇರೆ ಬೇರೆ ದೃಷ್ಟಿಯಿಂದ ಬೇರೆ ಬೇರೆ ರೀತಿಯಲ್ಲಿ ಮಾತನಾಡುವಾಗ ಹೌದಪ್ಪ ಸಾಮಾಜಿಕ ನ್ಯಾಯ ಎಂಬ ದೃಷ್ಟಿ ಬಂದಾಗ ನನಗೂ ಕೂಡ ಅಸಮಾಧಾನ ಆಗುತ್ತದೆ.ಆ ಪ್ರಶ್ನೆ ನಮ್ಮ ಮುಂದೆ ಈಗ ಇಲ್ಲ. ಬೇಕಾಗಿಲ್ಲ. ನಾನು ಹೇಳಿದೆ. ಬೆಳಗಾಂನ ಪ್ರಶ್ನೆ ಬಂದಂತಹ ಸಮಯದಲ್ಲಿ ಯಾವುದೇ ರೀತಿಯ ಅಪಸ್ವರ ಬರಬಾರದು, ಬರಬಾರದಾಗಿತ್ತು. ಸಾಹಿತಿಗಳಾಗಲೀ ಅಥವಾ ಕನ್ನಡ ಸಂಘ ಸಂಸ್ಥೆಗಳು ಹೋರಾಟ ಮಾಡತಕ್ಕಂತಹ ನಮ್ಮ ಯುವಕರು, ಪ್ರತಿಯೊಬ್ಬರೂ ಕೂಡ ಅದರ ಬಗ್ಗೆ ಯೋಚನೆ ಮಾಡಬೇಕಾಗಿತ್ತು. ನಾವು ಬೆಳಗಾಂ ಅನ್ನು ಆಯ್ಕೆ ಮಾಡಿಕೊಂಡಿದ್ದು ಇದೇ ಉದ್ದೇಶಕ್ಕೋಸ್ಕರ. ವಿಶ್ವ ಕನ್ನಡ ಸಮ್ಮೇಳನವನ್ನು 25 ವರ್ಷಗಳ ಹಿಂದೆ ಮೈಸೂರಿನಲ್ಲಿ ನಡೆದಂತಹದನ್ನು ನಾವು ಬೆಳಗಾಂಗೆ ತೆಗೆದುಕೊಂಡು ಹೋಗುತ್ತಿರತಕ್ಕದ್ದು. ಮಹಾರಾಷ್ಟ್ರದವರಿಗೆ, ಕೇಂದ್ರ ಸರ್ಕಾರಕ್ಕೆ

ಮತ್ತು ಇದರ ಬಗ್ಗೆ ಇವತ್ತೂ ಕೂಡ ಪ್ರಚೋದನೆ ಮಾಡತಕ್ಕವರಿಗೆ ಸರಿಯಾದಂತಹ ರೀತಿಯಲ್ಲಿ ನಾವು ಉತ್ತರವನ್ನು ಕೊಡಬೇಕು, ತಿಳುವಳಿಕೆ ಕೊಡಬೇಕು ಎನ್ನುವ ರೀತಿಯಲ್ಲಿ ವಿಶ್ವ ಕನ್ನಡಿಗರ ಸಮ್ಮೇಳನವನ್ನು ನಾವು ಮಾಡುತ್ತಿರತಕ್ಕದ್ದು. ಹಾಗಾಗಿ ತಾವೇನು ಅಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ಮಾಡುತ್ತಿದ್ದೀರೋ, ಈ ಸದನದ ಮುಖಾಂತರ ಕೂಡ ನಾವು ಕರ್ನಾಟಕದ ಜನತೆಗೆ ಹೇಳೋಣ ಎನ್ನತಕ್ಕದ್ದು. ಯಾವುದೇ ಕಾರಣಕ್ಕೂ ಕೂಡ ಅಲ್ಲಿ ಅಚಾತುರ್ಯದ ಯಾವುದೇ ಒಂದು ಸಣ್ಣ ಘಟನೆ, ಯಾವುದೇ ರೀತಿಯಾದ ಅಹಿತಕರ ಘಟನೆ ನಡೆಯಕೂಡದು, ಅಹಿತಕರ ಘಟನೆ ನಡೆಯದೆ ವಿಶ್ವ ಕನ್ನಡ ಸಮ್ಮೇಳನವನ್ನು ಬಹಳ ಯಶಸ್ವಿಯಾಗಿ ನಡೆಸತಕ್ಕ ರೀತಿಯಲ್ಲಿ ನಾವು ಪ್ರಯತ್ನ ಮಾಡಬೇಕು ಎನ್ನತಕ್ಕದ್ದನ್ನು ನಾನು ಈ ಸಂದರ್ಭದಲ್ಲಿ ತಮಗೆ ತಿಳಿಸಿ, ಬಹುಶಃ ಇನ್ನು ಹೆಚ್ಚು ಮಾತನಾಡುವುದಿಲ್ಲ. ಏಕೆಂದು ಹೇಳಿದರೆ ಮಾನ್ಯ ಸುರೇಶ್ ಕುಮಾರ್ ಅವರು ಹೇಳುತ್ತಿರುತ್ತಾರೆ. ನೀವೇನೂ ಹೆಚ್ಚಿಗೆ ಹೇಳುವುದಿಲ್ಲ ಬಿಡಿ, ನಮ್ಮ ಮಾನ್ಯ Chief Minister ಅವರು ಹೇಳುವುದು ಯಾವುದೇ ಎಲೆಕ್ಷನ್ ಬಂದರೂ ನಮಗೆ ಇಲ್ಲಿ ಉತ್ತರ ಕೊಡುತ್ತಿರುತ್ತಾರೆ. ಚುನಾವಣೆ ನೋಡಿ, ಜನ ಏನು ಮಾಡಿದ್ದಾರೆ ಎಂದು ಹೇಳುತ್ತಾರೆ. ನಾವು ಮಾನ್ಯ ಬೊಮ್ಮಾಯಿಯವರೂ ಚುನಾವಣೆ ನೋಡಿರುವವರೆ. ಚುನಾವಣೆ ನಮಗೆ ಗೊತ್ತಿದೆ ಹೇಗಿದೆ ಎಂದು. ಚುನಾವಣೆಯಲ್ಲಿ ಏನ್ರಿ. Means book end ಕೇಳುತ್ತೇವೇನ್ರಿ. ನೀವು ಯಾವ ಮಾರ್ಗದಿಂದ ಗೆಲ್ಲುತ್ತೀರಾ, ಅದನ್ನು ಕೇಳುವುದಿಲ್ಲ. ಫಲಿತಾಂಶ-ಗೆಲುವೂ ಸೋಲೋ ಎನ್ನುವುದು. ನೀವು ಹೋಗುವ ಮಾರ್ಗ ಯಾವುದು ಎಂದು ಯಾರಾದರೂ ಕೇಳುವುದಕ್ಕೆ ಹೋಗುತ್ತಾರೇನ್ರಿ. ಅದಕ್ಕೆ ನಾನು ಹೇಳುವುದು. ಇವತ್ತು ನೀವೇನು ಮೂರು ವರ್ಷಗಳ ಕಾಲದಲ್ಲಿ ಮಾಡಿದ್ದೀರಿ? ಬಹಳ ಮನಸ್ಸಿಗೆ ನೋವಾಗುತ್ತದೆ. ಒಂದು ಕಾಲದಲ್ಲಿ 'Indian voters are the shrewdest voters in the world' ಎನ್ನತಕ್ಕ ಮಾತು ಇತ್ತು. ಬಹಳ ಹೆಗ್ಗಳಿಕೆಯ ಮಾತುಗಳನ್ನು ನಾವು ಹೇಳುತ್ತಿದ್ದೆವು. ಬಹಳ ಪ್ರಬುದ್ಧ ಮತದಾರರು ಇದ್ದರು ಎನ್ನತಕ್ಕ ಮಾತುಗಳನ್ನು ಹೇಳುತ್ತಿದ್ದರು. ಆದರೆ ಇವತ್ತು ಕರ್ನಾಟಕದಲ್ಲಿ ನನಗೆ ಮತದಾರರನ್ನು ನೋಡಿದರೆ ಭಯ ಆಗುತ್ತದೆ. ಆ

ಭ್ರಷ್ಟಾಚಾರ, ಭ್ರಷ್ಟಾಚಾರವನ್ನು ಪೋಷಣೆ ಮಾಡತಕ್ಕಂತಹ ಜಾತೀಯತೆ, ಮತದಾರರನ್ನೇ ಭ್ರಷ್ಟರನ್ನಾಗಿ ಮಾಡಿ ಬಿಟ್ಟಿದ್ದೀರಲ್ಲ. ಏನು ಮಾಡಬೇಕು ಎನ್ನತಕ್ಕದ್ದು. ಪ್ರಜಾಪ್ರಭುತ್ವದಲ್ಲಿ ಧ್ವನಿ ಇರತಕ್ಕದ್ದು ಅವನಿಗೆ, ಆ moral rights, moral courage, ಆ ನೈತಿಕತೆ ಇರತಕ್ಕದ್ದು ಆ ಮತದಾರನಿಗೆ. ಅವನೇ ಪ್ರಶ್ನೆ ಮಾಡತಕ್ಕವನು, ನಮ್ಮನ್ನೆಲ್ಲಾ ಕುತ್ತಿಗೆ ಹಿಡಿದು ಕೇಳತಕ್ಕಂತಹ ಸ್ವರವನ್ನೇ ಉಡುಗಿಸಿದ್ದೀರಿ. ಆ ನೈತಿಕತೆಯನ್ನೇ ಅವನು, ಮತದಾರ ಇವತ್ತು ಕಳೆದುಕೊಂಡಿದ್ದಾನೆ. ಬಹಳ ನೋವಿನಿಂದ ಹೇಳುತ್ತಿದ್ದೇನೆ. ಇದೇನೂ ಹೆಗ್ಗಳಿಕೆ ಅಲ್ಲ. ಫಲಿತಾಂಶ ಇದೆ, ಆದರೆ ನೀವು ಹೋಗುವಂತಹ ಮಾರ್ಗ ಏನು? ನಿಜ means ಅಲ್ಲ ends ಕೇಳುವುದು. ನಾವು end ಕೇಳುತ್ತೇವೆ. ಫಲಿತಾಂಶ ಕೇಳುತ್ತೇವೆ, ಸೋಲೊ ಗೆಲುವೋ. ಗೆಲುವು ನಿಮ್ಮದೇ. ಆದರೆ ನೀವು ಹೋಗತಕ್ಕಂತಹ ಮಾರ್ಗ ಪ್ರಜಾಪ್ರಭುತ್ವಕ್ಕೆ ಒಳ್ಳೆಯದಲ್ಲ. ಅಪಾಯಕಾರಿ ಬೆಳವಣಿಗೆ ಎನ್ನತಕ್ಕದ್ದನ್ನು ಹೇಳಿ ಬಸವಣ್ಣನವರು ಒಂದು ಮಾತು ಹೇಳಿದ್ದರು. "ಒಲೆ ಹತ್ತಿ ಉರಿದರೆ ನಿಲ್ಲಬಹುದು, ಧರೆ ಹತ್ತಿ ಉರಿದರೆ ನಿಲ್ಲಬಹುದೇ". ಹಾಗೆ ಮತದಾರರೇ ಪ್ರಜಾಪ್ರಭುತ್ವದಲ್ಲಿ ಭ್ರಷ್ಟಾರಾದರೆ ಬಹಳ ಕಷ್ಟ. ಬೇರೆ ಏನೇ ಆದರೂ ತಡೆಯಬಹುದು, ಆದರೆ ಮತದಾರ ಭ್ರಷ್ಟ ಆದರೆ, ಮತದಾರ ತನ್ನ ನೈತಿಕ ಶಕ್ತಿಯನ್ನು ಹಾಳು ಮಾಡಿದರೆ ನಮ್ಮ ವ್ಯವಸ್ಥೆಯೇ ಹಾಳಾಗುತ್ತದೆ ಎಂದು ಹೇಳಿ ಇವತ್ತು ಬಹಳ ಆಸೆಯಿಂದ, ಬಹಳ ನಿರೀಕ್ಷೆಯಿಂದ ತಾವು ಒಂದೇ ಬುಕ್ ನಿಂದ Part–1, Part–2, ಭಾಗ ಒಂದು, ಭಾಗ ಎರಡು ಮಾಡಿ ಭಾರಿ ಆಸೆ ಆಕಾಂಕ್ಷೆಗಳನ್ನು ಹೊತ್ತಿ ನಿಮ್ಮಲ್ಲಿರತಕ್ಕಂತಹ ಆಂತರಿಕ ಭಿನ್ನರ ಗಲಾಟೆಗಳೆಲ್ಲವನ್ನೂ ಕೂಡ ಮರೆಮಾಚತಕ್ಕಂತಹ ರೀತಿಯಲ್ಲಿ ಒಂದು ಬಜೆಟ್ ಅನ್ನು ಕೊಡಬೇಕು ಎನ್ನತಕ್ಕ ಒಂದು ಪ್ರಯತ್ನವನ್ನು ಮಾಡಿದ್ದೀರಿ. ನಾನು ಮೊದಲೇ ಹೇಳಿದ ಹಾಗೆ ಅದನ್ನು ಎಷ್ಟರಮಟ್ಟಿಗೆ ಅನುಷ್ಠಾನಕ್ಕೆ ಕೊಡುತ್ತೀರೋ, ಆ ಅನುಷ್ಠಾನ ಕೊಡತಕ್ಕಂತಹ ಆ ಒಂದು ಪಾರದರ್ಶಕತೆ, ಪ್ರಾಮಾಣಿಕತೆ ನಿಮ್ಮಲ್ಲಿ ಬರಲಿ. ಆಗ ಮಾತ್ರ ಬಜೆಟ್ ಯಶಸ್ಸನ್ನು, ಅದರ ಮುಖಾಂತರ ಕರ್ನಾಟಕದ ಜನತೆಗೆ ಒಳ್ಳೆಯದಾಗಬೇಕು ಎಂದು ನಿಮ್ಮ ಬಯಕೆ ಅಲ್ಲ,

ನಮ್ಮೆಲ್ಲರ ಬಯಕೆ ಕೂಡ ಆಗಿದೆ, ಅದು ಆಗಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ): ಸನ್ಮಾನ್ಯ ಅಧ್ಯಕ್ಷರೆ, 2011-12ನೇ ಸಾಲಿನ ಬಜೆಟ್ ಅನ್ನು ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವುದನ್ನು ಹೃತ್ಪೂರ್ವಕವಾಗಿ ಸ್ವಾಗತ ಮಾಡಲಿಕ್ಕಾಗಿ ನನಗೆ ತಾವು ಕೊಟ್ಟಿರುವಂತಹ ಅವಕಾಶಕ್ಕಾಗಿ ಅಭಿನಂದನೆಗಳು. ಈ ಸದನದ ಹಿರಿಯರು, ವಿರೋಧ ಪಕ್ಷದ ಮುಖಂಡರು ಸಾಕಷ್ಟು ವಿಷಯಗಳನ್ನು ಕುರಿತು ಚರ್ಚೆ ಮಾಡಿದ್ದಾರೆ. ನಮಗೆಲ್ಲಾ ಗೊತ್ತಿರುವಂತೆ ನಮ್ಮ ದೇಶ ಭಾರತ ಕೃಷಿ ಪ್ರಧಾನವಾದಂತಹ ರಾಷ್ಟ್ರ. ಇವತ್ತು ಕೃಷಿಗೆ ರಾಜ್ಯದಲ್ಲಿ ಮಾತ್ರವಲ್ಲ, ರಾಷ್ಟ್ರದಲ್ಲಿಯೇ ಸಿಗಬೇಕಾದಂತಹ ಅವಕಾಶಗಳು ಸಿಗದೇ, ಕೃಷಿ ಮಾಡುವಂತಹವರಿಗೆ ಲಾಭ ಆಗದೇ ಬಹಳ ದೊಡ್ಡ ಸಂಖ್ಯೆಯಲ್ಲಿ ರೈತರು ಕೃಷಿಯನ್ನು ಬಿಟ್ಟು ಬೇರೆ ಕಡೆಗೆ ಪಟ್ಟಣಗಳಿಗೆ ವಲಸೆ ಹೋಗುವುದು ಬಹುಶಃ ಎಲ್ಲರಿಗೂ ಗೊತ್ತು. ಇದೊಂದು ರಾಜ್ಯದ ಸಮಸ್ಯೆ ಅಲ್ಲ, ರಾಷ್ಟ್ರದ ಸಮಸ್ಯೆ. ಕೃಷಿ ಲಾಭದಾಯಕ ಆಗಬೇಕು ಎನ್ನುವಂತಹ ಹಿನ್ನೆಲೆಯಲ್ಲಿ ಸಾಕಷ್ಟು ಚಿಂತನೆಗಳು ಆಗಬೇಕಾಗುತ್ತದೆ. ಮಹಾತ್ಮ ಗಾಂಧಿಯವರು ಸ್ವಾತಂತ್ರ್ಯ ಪೂರ್ವದಲ್ಲಿ ದೇಶವನ್ನು ಯಾವ ರೀತಿ ಕಟ್ಟಬೇಕು ಎನ್ನುವ ಚಿಂತನೆ ಮಾಡುವಂತಹ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರು. 'ಜಬ್ ಕಿಸಾನ್ ಉಠೇಗಾ, ತಬ್ ಗಾವ್ ಉಠೇಗಾ, ಜಬ್ ಗಾವ್ ಉಠೇಗಾ ತಬ್ ದೇಶ್ ಉಠೇಗಾ' ಎನ್ನುವಂತಹ ಮಾತನ್ನು ಹೇಳಿದ್ದರು. ಭಾರತ ದೇಶ ಹಳ್ಳಿಗಳ ದೇಶ. ಹಳ್ಳಿಗಳಲ್ಲಿ ಬಹಳ ದೊಡ್ಡ ಸಂಖ್ಯೆಯಲ್ಲಿರುವಂತಹ ರೈತರು ಕೃಷಿಕರು. ಕೃಷಿಕ ಸ್ವಾವಲಂಬಿಯಾಗಿ ನಗುನಗುತ್ತಾ ಇದ್ದರೆ ಇಡೀ ಗ್ರಾಮವೇ ಅವನ ಮೇಲೆ ಅವಲಂಬಿತವಾದಂತಹ ಸಮಾಜವೇ ನಗುನಗುತ್ತಾ ಇರುತ್ತದೆ ಎನ್ನುವಂತಹ ಚಿಂತನೆಯಲ್ಲಿ ಮಹಾತ್ಮ ಗಾಂಧಿಯವರು ಈ ಮಾತನ್ನು ಹೇಳಿದ್ದರು. ಆದರೆ ನನಗೆ ಅನಿಸುತ್ತದೆ, ಕಳೆದ 60 ವರ್ಷಗಳಲ್ಲಿ ಕೃಷಿ ಬಗ್ಗೆ ಯಾವ ಚಿಂತನೆ ದೇಶದಲ್ಲಿ ಆಗಬೇಕಾಗಿತ್ತು ಆದಾಗದೇ, ಅನೇಕ ಪಂಚವಾರ್ಷಿಕ ಯೋಜನೆಗಳು ದೇಶದಲ್ಲಿ ಜಾರಿಗೆ ಬಂದರೂ ಕೂಡ ಗ್ರಾಮಗಳ ಕಡೆಗೆ, ಕೃಷಿಯ ಕಡೆಗೆ ಗಮನ

ಕೊಡದೇ ಇರುವುದರಿಂದ ಇವತ್ತು ಸಮಸ್ಯೆ ಆಗುತ್ತಿದೆ. ಮಾತನಾಡುವಾಗ ನಮ್ಮ ಹಿರಿಯ ಸದಸ್ಯರಾದ ಮಾನ್ಯ ವಿರೋಧ ಪಕ್ಷದ ಉಪನಾಯಕರು ಹೇಳಿದರು. ಒಂದು ಕಡೆಗೆ ರೈತರ ಪರವಾಗಿ ಚಿಂತನೆ ಮಾಡಿದಂತಹ, ಬಹುಶಃ ಇಡೀ ದೇಶದಲ್ಲಿಯೇ ಒಂದು ಆದರ್ಶವಾದಂತಹ ಕೃಷಿ ಬಜೆಟ್ ಅನ್ನು ಮಂಡಿಸಿದಂತಹ ಸನ್ಮಾನ್ಯ ಯಡಿಯೂರಪ್ಪನವರು ಕೃಷಿ ಬಜೆಟ್ ಮಂಡಿಸುತ್ತಿರುವಂತಹ ಸಂದರ್ಭದಲ್ಲಿ ದಾವಣಗೆರೆಯಲ್ಲಿ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಂಡ ಎಂದು ಹೇಳಿದರು.

ಬಹುಶಃ ಇದು ಚಿಂತನೆ ಮಾಡತಕ್ಕದ್ದು. ನಮ್ಮೆಲ್ಲರ ರಾಜಕೀಯ ಪಕ್ಷಭೇದ ಮರೆತು ಒಟ್ಟಾರೆ ರೈತರ ಅಭಿವೃದ್ಧಿಯ ದೃಷ್ಟಿಯಿಂದ ದೇಶವನ್ನು ಮತ್ತಷ್ಟು ಗಟ್ಟಿಯಾಗಿ ಕಟ್ಟಿನಿಲ್ಲಿಸಲು ಚರ್ಚೆ ಅಗಬೇಕಾಗಿದೆ. ದತ್ತೋಪಂತ್‌ಠೇಂಗಡೆಜಿಯೆಂದು ಅನೇಕ ಚಿಂತಕರು ಈ ದೇಶದಲ್ಲಿ ಆಗಿಹೋದರು. ಕೃಷಿ ಬಗ್ಗೆ ವಿಶೇಷವಾದ ಗ್ರಂಥಗಳನ್ನು ಬರೆದು ಇದರಲ್ಲಿ ಮೂಲಭೂತವಾಗಿ ಆಗಬೇಕಾಗಿರುವ ವಿಷಯಗಳ ಬಗ್ಗೆ ಚರ್ಚೆ ಮಾಡಿದ್ದಾರೆ. ಇಲ್ಲಿ ಮಾತನಾಡಿದ ಅನೇಕ ಹಿರಿಯ ಸದಸ್ಯರು ಇದರ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಯಾವ ರೈತ ಬೆಳೆಯನ್ನು ಬೆಳೆಯುತ್ತಾನೆ ಅವನಿಗೆ ವೈಜ್ಞಾನಿಕವಾದ ಬೆಂಬಲ ಬೆಲೆ ಸಿಗಬೇಕು. ಆದರೆ ಇವತ್ತು ಇದು ಆಗುತ್ತಿಲ್ಲ. ಯಾರೊ ಉತ್ಪಾದನೆ ಮಾಡುತ್ತಾರೆ, ಆದರೆ ಅದರ ಲಾಭ ಮತ್ತಾರಿಗೊ, ವ್ಯಾಪಾರಿಗಳಿಗೊ ಸಿಗುತ್ತದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಆದ್ದರಿಂದ ಹಿಂದಿಯಲ್ಲಿ ಒಂದು ಗಾದೆಮಾತು ಬರುತ್ತದೆ. "ಮೆಹನತ್ ಕಿಯಾ ಮುರ್ಗಿನೇ ಮಗರ್ ಅಂಡಾ ಕಾಯ ಪಕೀರ್‌ನೇ!" ಎಂದು. ರೈತ ಪರಿಶ್ರಮ ಹಾಕಿ ದುಡಿದರು ಅವನು ಸುರಿಸಿದ ಬೆವರಿಗೆ ಸರಿಯಾದ ಬೆಲೆ ಸಿಗದೆಯೆ ಈ ದೇಶದಲ್ಲಿ ದೊಡ್ಡ ಅನಾಹುತವಾಗಿ ಹೋಗಿದೆ. ಅದನ್ನು ಸರಿಮಾಡಬೇಕು. ರೈತರು ಏಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆಂದರೆ, ಅವರು ಬೆಳೆದಂಥ ಬೆಳೆಗೆ ಬೆಂಬಲ ಬೆಲೆ ಕೊಡದೆ ಕೃಷಿ ಲಾಭದಾಯಕವಲ್ಲವೆಂದು ಅನ್ನದಾತ ಇವತ್ತು ತನ್ನ ಪ್ರಾಣವನ್ನು ಕಳೆದುಕೊಳ್ಳುತ್ತಿದ್ದಾನೆ. ರೈತ ಸ್ವಾಭಿಮಾನಿ. ಅವನು ಅಭಿಮಾನದಿಂದ ಪರಿಶ್ರಮದಿಂದ ಕೆಲಸ ಮಾಡತಕ್ಕಂಥವನು. ಸಾಲ ಕೊಟ್ಟ

ಸಂಸ್ಥೆಗಳು ಅವನಿಗೆ ನೋಟೀಸ್‌ನ್ನು ಕಳುಹಿಸಿದರೆ, ಸಾಲ ಕೊಟ್ಟಿರುವ ಸಂಸ್ಥೆಯ ಅಧಿಕಾರಿಗಳು ಮನೆ ಬಾಗಿಲಿಗೆ ಬಂದರೆ, ಖಾಸಗಿಯಾಗಿ ಸಾಲ ಕೊಟ್ಟವರು ಮನೆಯ ಬಾಗಿಲಿಗೆ ಬಂದಾಗ, ತನ್ನ ಮರ್ಯಾದೆ ಹೋಗಬಾರದು ಎಂಬ ಹಿನ್ನೆಲೆಯಲ್ಲಿ ಸ್ವಾಭಿಮಾನಿ,ಅಭಿಮಾನಿ ರೈತ ತನ್ನ ಪ್ರಾಣವನ್ನು ಕಳೆದುಕೊಳ್ಳುತ್ತಾನೆ. ಆ ರೀತಿಯ ಮನೋಸ್ಥಿತಿಗೆ ರೈತ ಬಂದುಬಿಟ್ಟಿದ್ದಾನೆ. ಇದು ಕೇವಲ ಕರ್ನಾಟಕ, ಆಂಧ್ರ, ಮಹಾರಾಷ್ಟ್ರದಲ್ಲಿ ಇಲ್ಲ. ಇಡೀ ದೇಶದ ತುಂಬ ಪ್ರತಿ ರಾಜ್ಯದಲ್ಲಿ ರೈತರು ತಮ್ಮ ಉತ್ಪನ್ನಕ್ಕೆ ಲಾಭ ಸಿಗದೇ ಇದ್ದುದ್ದರಿಂದ ಮರ್ಯಾದೆಗೆ ಅಂಜಿ ಪ್ರಾಣವನ್ನು ಕಳೆದುಕೊಳ್ಳುವುದು ನಡೆದಿದೆ. ಇದನ್ನು ರಾಜ್ಯ ಸರ್ಕಾರ ಮಾಡುವ ಕೆಲಸವಲ್ಲ. ನಮ್ಮ ಅನೇಕ ಹಿರಿಯ ನಾಯಕರು ಮಾತನಾಡುವಾಗ ಅದನ್ನು ಒಪ್ಪಿಕೊಂಡರು. ರೈತ ಬೆಳೆದಂಥ ಬೆಳೆಗೆ ಬೆಂಬಲ ಬೆಲೆಯನ್ನು ಕೊಡಬೇಕಾದ್ದು ಕೇಂದ್ರ ಸರ್ಕಾರದ

ಮೇಲಿದೆ. ಕೇಂದ್ರವು ಆಗಾಗ್ಯೆ ರೈತರು ಬೆಳೆದಂಥ ಬೆಳೆಗೆ ಬೆಂಬಲ ಬೆಲೆಯನ್ನು ಕೊಡುವ ಬಗ್ಗೆ ಅನೇಕ ಸಲ ಚರ್ಚೆಯಾಗಿದೆ. ಕಿಸಾನ್ ಎನ್ನುವ ಒಂದು ಪುಸ್ತಕದಲ್ಲಿ ದಿವಂಗತ ದತ್ತೋಪಂತ್‌ಟೇಂಗಡೆಜಿಯವರು ಬರೆಯುತ್ತಾರೆ. 27.12.1972ನೇ ಇಸವಿಯಲ್ಲಿ ಕೇಂದ್ರದ ಮಾಜಿ ಕೃಷಿ ಸಚಿವರಾದ ರಾವ್‌ಬೀರೇದ್ರ ಸಿಂಗ್‌ರವರು ಒಂದು ಸಂದರ್ಭದಲ್ಲಿ ರೈತ ಬೆಳೆದಂಥ ಬೆಳೆಗೆ ಬೆಂಬಲದ ಬೆಲೆಯನ್ನು ಕೊಡಲು ನಮ್ಮಿಂದ ಆಗಲಿಲ್ಲವೆಂದು ತಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಾರೆ. ಏಕೆಂದರೆ imputes of the Agriculture ಎಂದು ಏನು ಹೇಳುತ್ತೇವೊ, ರೈತ ಕೃಷಿ ಮಾಡಬೇಕಾದರೆ ಏನೇನು ಬೇಕೊ ಅವೆಲ್ಲದರ ವೆಚ್ಚವನ್ನು ಸೇರಿಸಬೇಕಾಗುತ್ತದೆ. ರೈತ ಯಾವ ರೀತಿ ಬೀಜ, ಗೊಬ್ಬರ ಬಳಸುತ್ತಾನೆ, ಕೃಷಿ ಕೂಲಿಕಾರರಿಗೆ ಸಂಬಳ ಕೊಟ್ಟಿರುತ್ತಾನೆ, ಕೃಷಿ ಕಾರ್ಯಕ್ಕಾಗಿ ಬಳಸಿದಂಥ ಎತ್ತುಗಳು, ಟ್ರಾಕ್ಟರ್‌ಗಳು, ಬಿಡಿ ಭಾಗಗಳು ಇರಬಹುದು, ಬೆಳೆ ಮಾರಾಟ ಮಾಡುವಾಗ ಬರತಕ್ಕಂಥ ವೆಚ್ಚ ಇರಬಹುದು, 4–5 ವರ್ಷಕ್ಕೆ ಒಂದು ಸಲ ಪ್ರಕೃತಿ ವಿಕೋಪವಾಗಿ, ಒಂದು ಸಲ ಅತಿಯಾದ ಮಳೆಯಾಗಬಹುದು, ಮತ್ತೊಂದು ಸಲ ಮಳೆ ಆಗದೆಯೂ ಇರಬಹುದು, ಬೆಳೆಗಳಿಗೆ ಬರುವಂಥ ವಿಶೇಷವಾದ ರೋಗಗಳನ್ನೂ ಲೆಕ್ಕ ಹಾಕಿದರೆ ಬಹುಶ:

ಆ ರೈತನಿಗೆ ಏನು ಕೊಡಬೇಕಾಗಿತ್ತೊ ಅಷ್ಟು ದುಡ್ಡನ್ನು ಕೊಡಲು ಆಗಲಿಲ್ಲ. ಆದ್ದರಿಂದ ರೈತರಿಗೆ ಅನ್ಯಾಯ ಮಾಡಿದ್ದೇವೆಯೊ ಎನ್ನುವ ಮಾತನ್ನು ಕೇಂದ್ರದ ಮಾಜಿ ಕೃಷಿ ಸಚಿವರು ಒಪ್ಪಿಕೊಂಡಿದ್ದಾರೆ. 1974ನೇ ಇಸವಿಯಲ್ಲಿ ಉತ್ಪನ್ನಗಳ ಮೌಲ್ಯ ಅಯೋಗ ಈ ಮಾತನ್ನು ಒಂದು ಕಡೆ ಒಪ್ಪುತ್ತದೆ. ಇನ್ನೊಂದು ಕಡೆ ಹೇಳುತ್ತದೆ, ರೈತರಿಗೆ ಸರಿಯಾದ ಬೆಂಬಲ ಬೆಲೆಯನ್ನು ಕೊಟ್ಟರೆ ಬೆಲೆ ಏರಿಕೆ ಬಹಳ ದೊಡ್ಡ ಪ್ರಮಾಣದಲ್ಲಿ ಆಗುತ್ತದೆ, ಸಾರ್ವಜನಿಕವಾಗಿ ಅದನ್ನು control ಮಾಡುವುದಕ್ಕೆ ಆಗುವುದಿಲ್ಲ ಎನ್ನುವ ಹಿನ್ನೆಲೆಯಲ್ಲಿ ಚರ್ಚೆ ಮಾಡುತ್ತಾರೆ. ಇಂದು ಮಾನ್ಯ ಯಡಿಯೂರಪ್ಪನವರು ಕರ್ನಾಟಕದಲ್ಲಿ ಕಳೆದ 20–30 ವರ್ಷಗಳಿಂದ ರೈತರ ಪರವಾಗಿ ಹಂತ ಹಂತವಾಗಿ ಹೋರಾಟವನ್ನು ಮಾಡುತ್ತಾ ಗ್ರಾಮಗಳಲ್ಲಿ ಪ್ರವಾಸವನ್ನು ಮಾಡಿ ಅನುಭವವನ್ನು ಹೊಂದಿರುವಂಥ ಒಬ್ಬ ಮುಖ್ಯಮಂತ್ರಿಯಾಗಿದ್ದಾರೆ. ರೈತರ ಬಗ್ಗೆ ನಿಜವಾಗಿಯೂ ಕಳಕಳಿ ಇಟ್ಟುಕೊಂಡು ಕೆಲಸ ಮಾಡುತ್ತಿರುವ ಒಬ್ಬ ಮುಖ್ಯಮಂತ್ರಿ. ಈ ದೇಶದಲ್ಲಿ ಯಾವುದೇ ಸರ್ಕಾರ ಘೋಷಣೆ ಮಾಡದಿರುವ ಪ್ರತ್ಯೇಕ ಕೃಷಿ ಬಜೆಟ್‌ನ್ನು ಮಂಡಿಸಿ ವಿಶೇಷವಾದ ಪ್ರಯತ್ನವನ್ನು ಮಾಡಿದ್ದಾರೆ. ಒಂದು ದೊಡ್ಡ ಹೊಸ ಸಾಧನೆಯನ್ನು ಮಾಡಿದ್ದಾರೆಂದು ನಾನು ಹೇಳಬಯಸುತ್ತೇನೆ. ಇವತ್ತು ರೈತರು ಕೃಷಿಯಲ್ಲಿ ಯಾರು ಸಾಲ ಪಡೆಯುತ್ತಾರೆ ಅಂಥವರಿಗೆ ಬಡ್ಡಿಯನ್ನು ಕಡಿಮೆ ಮಾಡಿಕೊಂಡು ಬಂದಿರುವ ಮುಖ್ಯಮಂತ್ರಿ ಯಾರಾದರು ಇದ್ದರೆ ಅದು ಮಾನ್ಯ ಯಡಿಯೂರಪ್ಪನವರು. ಈ ವರ್ಷದ ಬಜೆಟ್‌ನಲ್ಲಿ ಸಹಕಾರಿ ಕ್ಷೇತ್ರದಲ್ಲಿ ಸಾಲ ಪಡೆಯುವ ರೈತರಿಗೆ ಕೇವಲ ಒಂದು ಪರ್ಸೆಂಟ್ ಬಡ್ಡಿಯನ್ನು ಆಕರಣೆ ಮಾಡಿದ್ದು ಇಡೀ ರಾಜ್ಯದ ಜನರು ಹೊಗಳುತ್ತಿದ್ದಾರೆ.

ಕೇಂದ್ರದ ಬಜೆಟ್‌ನಲ್ಲೂ ಬಡ್ಡಿಯನ್ನು ಕಡಿಮೆ ಮಾಡುತ್ತಾರೆ ಎಂಬುದು ಕರ್ನಾಟಕ ಸರ್ಕಾರಕ್ಕೆ, ನಮಗ್ಯಾರಿಗೂ ಗೊತ್ತಿರಲಿಲ್ಲ. ಇವತ್ತು ಒಂದು ಪರ್ಸೆಂಟ್ ಬಡ್ಡಿಯಲ್ಲಿ ರಿಯಾಯಿತಿ ಮಾಡಿ 3 ಲಕ್ಷ ರೂಪಾಯಿವರೆಗೆ ಸಾಲ ಪಡೆಯುವಂಥ ರೈತರಿಗೆ ಒಂದು ಅವಕಾಶವನ್ನೇನು ಕೊಟ್ಟಿದ್ದಾರೆ ಅದನ್ನು ದೊಡ್ಡ ಸಾಧನೆಯೆಂದು ಹೇಳಬಯಸುತ್ತೇನೆ. ನ್ಯಾಷನಲ್ ಬ್ಯಾಂಕ್‌ನವರು ಯಾವ ರೀತಿ ಸಾಲವನ್ನು ಮರುಪಾವತಿ ಮಾಡಿದ ತಕ್ಷಣ ಮರುದಿವಸವೇ

ಮತ್ತೇ ಸಾಲವನ್ನು ಮಂಜೂರು ಮಾಡುತ್ತಾರೋ ಆ ವ್ಯವಸ್ಥೆ ಗ್ರಾಮೀಣ ಬ್ಯಾಂಕುಗಳಲ್ಲಿ, ಪಿಎಲ್‌ಡಿ ಬ್ಯಾಂಕುಗಳಲ್ಲಿ ಇಲ್ಲ. ಪಿಎಲ್‌ಡಿ ಬ್ಯಾಂಕ್‌ನವರಿಗೆ 60–70 ಪರ್ಸೆಂಟ್ ಸಾಲವನ್ನು ವಸೂಲಿ ಮಾಡಿದಾಗ ಮಾತ್ರ ಮತ್ತೆ ಸಾಲವನ್ನು ಮಂಜೂರು ಮಾಡಲು ಅವಕಾಶವಿದೆ. ಆದ್ದರಿಂದ ಈ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ಮಾಡಿ ರೈತ ಯಾರು ಪಿಎಲ್‌ಡಿ ಬ್ಯಾಂಕ್‌ನಲ್ಲಿ ಸಾಲವನ್ನು ಕಟ್ಟುತ್ತಾನೆ ತಕ್ಷಣ ಮತ್ತೆ ಸಾಲವನ್ನು ಮಂಜೂರು ಮಾಡುವ ವ್ಯವಸ್ಥೆಯನ್ನು ಅವರಿಗೂ ಕೊಡಬೇಕೆಂದು ಸರ್ಕಾರಕ್ಕೆ ಮತ್ತು ಸಂಬಂಧಪಟ್ಟ ಸಚಿವರಿಗೆ ಈ ಸಲಹೆಯನ್ನು ಕೊಡುತ್ತೇನೆ. ಇವತ್ತು ಇಡೀ ದೇಶದಲ್ಲಿ ಸಾವಯವ ಕೃಷಿ ಬಗ್ಗೆ ಗಮನ ಕೊಟ್ಟಿರುವ ಸರ್ಕಾರವೆಂದರೆ ಕರ್ನಾಟಕ ಸರ್ಕಾರ. ಮಾನ್ಯ ಯಡಿಯೂರಪ್ಪನವರು ಕಳೆದ ವರ್ಷ ಸಾವಯವ ಕೃಷಿಯ ಬಗ್ಗೆ ಒಂದು ಸಂಸ್ಥೆಯನ್ನು ಹುಟ್ಟುಹಾಕಿ ನೂರು ಕೋಟಿ ಬಜೆಟ್‌ನ್ನು ಕೊಟ್ಟಿದ್ದರು. ಈ ವರ್ಷದ ಬಜೆಟ್‌ನಲ್ಲಿ ಅದಕ್ಕೆ 200 ಕೋಟಿ ಕೊಟ್ಟು ಡಾ:ಆನಂದ್ ಎನ್ನುವ ಕ್ರಿಯಾಶೀಲ ಯುವಕರ ನೇತ್ರತ್ವದಲ್ಲಿ ಈ ಸಂಸ್ಥೆಯನ್ನು ಇಡೀ ರಾಜ್ಯದ್ಯಂತ ಜನರಲ್ಲಿ ಮತ್ತು ರೈತರಲ್ಲಿ ಜಾಗ್ರತೆಯನ್ನು ತಂದು ನಮ್ಮ ಗೋವು ಆಧಾರಿತ ಕೃಷಿ ಸಾವಿರಾರು ವರ್ಷದಿಂದ ಈ ದೇಶದಲ್ಲಿ ನಡೆದು ಬಂದಿದೆ. ಅದು ಮತ್ತೊಮ್ಮೆ ಪುನರುಜ್ಜೀವನ ಆಗಬೇಕು. ರಾಸಾಯನಿಕ ವಸ್ತುಗಳು ಬಳಕೆಯಾಗುವುದು ಕಡಿಮೆಯಾಗಬೇಕು ಎನ್ನುವ ಹಿನ್ನೆಲೆಯಲ್ಲಿ ಚಿಂತನೆ ನಡೆದಿದೆ. ಹೊರಗಿನಿಂದ ಅನೇಕರು ಈ ವ್ಯವಸ್ಥೆಯನ್ನು ನೋಡಲು ಬಂದಿದ್ದಾರೆ. ಸುಭಾಷ್ ಪಾಲೇಕರ್‌ರಂಥ ಕೃಷಿ ವಿಜ್ಞಾನಿಗಳು ಪ್ರತಿಪಾದನೆ ಮಾಡುವುದೇನೆಂದರೆ, ನಮ್ಮ ಗೋ ಸಂಪತ್ತು, ದೇಶೀಯ ಆಕಳುಗಳು, ಅದರ ಸಗಣಿ ಮತ್ತು ಮೂತ್ರವನ್ನು ಬಳಸಿದರೆ ಬಹುಶ: ಯಾವುದೇ ರಾಸಾಯನಿಕ ವಸ್ತುವನ್ನು ಬಳಸದೆಯೇ,ಈ ಭೂಮಿಗೆ ವಿಷವನ್ನು ಉಣ್ಣಿಸದೆ ರೈತರು ಸ್ವಾಭಿಮಾನದಿಂದ ಬೆಳೆಯನ್ನು ಬೆಳೆಯಬಹುದು. ಅದು ಆರೋಗ್ಯಕ್ಕೆ ಉತ್ತಮ ಎನ್ನುವುದನ್ನು ಗೊತ್ತುಮಾಡಿಕೊಂಡಿದ್ದಾರೆ. ಒಬ್ಬ ಕವಿ, ಸಾಹಿತಿ ಒಂದು ಕಡೆ ಬರೆದಿದ್ದನ್ನು ಓದಿದ್ದೇನೆ. ರಾಸಾಯನಿಕ ಎಂಬ ಪದದ long form ಏನು ಎಂದರೆ ರೈತರನ್ನು ಸಾಯಿಸಿ ಯುಮದೂತರ ಕಡೆಗೆ ಕೊಂಡೊಯ್ಯುವ ವಸ್ತು ಎಂದು

ಬರೆದಿದ್ದಾರೆ. ಆ ರೀತಿ ಇವತ್ತು ರಾಸಾಯನಿಕ ವಸ್ತುವನ್ನು ಬಳಸಿ ಬಳಸಿ ಮಣ್ಣಿನ ಫಲವತ್ತತೆಯೇ ಹೊರಟುಹೋಗಿದೆ. ಇನ್ನೊಂದು ಕಡೆ ಈ ಭೂಮಿಗೆ ವಿಷವನ್ನು ಉಣ್ಣಿಸಿ ಬೆಳೆದಂಥ ಬೆಳೆ ಆರೋಗ್ಯಕ್ಕೆ ಯೋಗ್ಯವಲ್ಲ ಎನ್ನುವ ಹಿನ್ನೆಲೆಯಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ದೇಶದಲ್ಲಿ ಚಿಂತನೆ ನಡೆಯಬೇಕಾಗಿದೆ. ಕರ್ನಾಟಕ ಸರ್ಕಾರ ಒಂದು ಹೆಜ್ಜೆ ಮುಂದಿಟ್ಟು ಸಾವಯವ ಕೃಷಿಯ ಬಗ್ಗೆ ವಿಶೇಷವಾಗಿ ಚಿಂತನೆ ನಡೆಸಿರುವುದನ್ನು ಸ್ವಾಗತಿಸಬೇಕಾಗುತ್ತದೆ. ಪ್ರತಿ ತಿಂಗಳು ಒಂದು ಸಲ ಸಾವಯವ ಕೃಷಿಕ ರೈತರ ಮನೆಗೆ ಮಾನ್ಯ ಮುಖ್ಯಮಂತ್ರಿಗಳು ಭೇಟಿ ಕೊಟ್ಟಿ ಅವರಿಂದ ಅನೇಕ ವಿಚಾರಗಳನ್ನು ತಿಳಿದುಕೊಂಡು ಸರ್ಕಾರದಿಂದ ಆಗಬೇಕಾಗಿರುವ ಕಾರ್ಯಕ್ರಮದ ಬಗ್ಗೆ ಚಿಂತನೆ ಮಾಡುವುದು ಒಂದು ಆದರ್ಶವೆಂದು ಚಿಂತನೆ ಮಾಡಬೇಕಾಗುತ್ತದೆ. ಇಲ್ಲಿ ಹಿರಿಯರು ಮಾತನಾಡುತ್ತಾ ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ದಿವಂಗತ ಬೈರೋನ್ ಸಿಂಗ್ ಖಾವತ್‌ರವರನ್ನು ನೆನಪು ಮಾಡಿಕೊಂಡರು.

ದಿವಂಗತ ಭೈರೋನ್‌ಸಿಂಗ್ ಶೆಖಾವತ್‌ರವರು 'ಅಂತ್ಯೋದಯ ಯೋಜನೆ' ಜಾರಿಗೆ ತಂದವರು. ಇತ್ತೀಚೆಗೆ ಸನ್ಮಾನ್ಯ ಗೋವಿಂದ ಕಾರಜೋಳರವರ ಕ್ಷೇತ್ರದ ಬಾಗಲಕೋಟೆ ಜಿಲ್ಲೆ ಮುಧೋಳ್ ತಾಲ್ಲೂಕಿನ ಶಿರೋಳಕ್ಕೆ ಮಾನ್ಯ ಮುಖ್ಯಮಂತ್ರಿಗಳು ಬಂದಾಗ, ಅಲ್ಲಿ ನಡೆದಂತಹ ಕಾರ್ಯಕ್ರಮ ನನ್ನ ಮೇಲೆ ಬಹಳ ಪ್ರಭಾವವನ್ನು ಬೀರಿತು. ಆಗ ಸನ್ಮಾನ್ಯ ಮುಖ್ಯಮಂತ್ರಿಗಳು, ಆ ಒಂದು ಶಿರೋಳ ಗ್ರಾಮದಲ್ಲಿ ಸಾವಯವ ಕೃಷಿ ಮಾಡಿಕೊಂಡು ಬದುಕಿದಂತಹ ಸ್ವಾವಲಂಬಿ ಕುಟುಂಬವಾದ ಸೋಮಲಿಂಗಯ್ಯ ಗಣಾಚಾರಿ ಮತ್ತು ದಂಪತಿಗಳಿಗೆ ಸಾರ್ವಜನಿಕ ಸಭೆಯಲ್ಲಿ ಪಾದ ಸ್ಪರ್ಶ ಮಾಡಿ ನಮಸ್ಕಾರ ಮಾಡಿ, ಅವರನ್ನು ಕೊಂಡಾಡಿದರು. ಆ ಸಂದರ್ಭದಲ್ಲಿ ದಿವಂಗತ ಬೈರೋನ್‌ಸಿಂಗ್ ಶೆಖಾವತ್‌ರವರ ರೂಪದಲ್ಲಿ ನಾನು ಸನ್ಮಾನ್ಯ ಯಡಿಯೂರಪ್ಪ ನವರನ್ನು ಕಂಡೆ. ಏಕೆಂದರೆ, ಸನ್ಮಾನ್ಯ ಭೈರೋನ್‌ಸಿಂಗ್ ಶೆಖಾವತ್‌ರವರೂ ಕೂಡ ರಾಜಾಸ್ಥಾನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ ಮಾಡಿದ ನಂತರ ತಕ್ಷಣ ಹೊರಗಡೆ ಬಂದು, ರಸ್ತೆಯ ಮೇಲೆ ಕಾಯಿಪಲ್ಯೆ ಮಾರತಕ್ಕಂಥ ಒಬ್ಬ ವಯೋವೃದ್ಧೆ ಬಡವಳ ಪಾದ ಮುಟ್ಟಿ ನಮಸ್ಕಾರ ಮಾಡಿದರು. ನಾನು

ಮುಖ್ಯಮಂತ್ರಿಯಾಗಿದ್ದು ಏತಕ್ಕೆಂದರೆ, ನಿಮ್ಮಂತಹ ಕಡು ಬಡವರಿಗೆ ಆರ್ಥಿಕವಾಗಿ ನಿಮ್ಮನ್ನು ಮೇಲೆತ್ತ ಬೇಕೆನ್ನುವಂತಹ ಹಿನ್ನೆಲೆಯಲ್ಲಿ ನಾನು ಸಂಕಲ್ಪ ತೊಟ್ಟಿದ್ದೇನೆ ಎನ್ನುವಂತಹ ಮಾತನ್ನು ಅವರೇನು ಹೇಳಿದ್ದರು, ಇವತ್ತು ನಮ್ಮ ಮುಖ್ಯಮಂತ್ರಿಗಳೂ ಕೂಡ ಆ ರೀತಿ ಒಂದು ಪ್ರಯತ್ನವನ್ನು ಪ್ರಾರಂಭ ಮಾಡಿದ್ದಾರೆಂದು ಬಹಳ ಸಂತೋಷದಿಂದ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಅನೇಕ ಕ್ಷೇತ್ರಗಳಲ್ಲಿ, ಜೈವಿಕ ಇಂಧನ ಇರಬಹುದು, ಕೃಷಿ ಯಂತ್ರೋಪಕರಣಗಳಿಗೆ ಸಹಾಯ ಧನ ಘೋಷಣೆ ಮಾಡಿದ್ದು ಇರಬಹುದು, ಇದು ಸ್ವಾಗತಾರ್ಹವಾದುದು. ಇದಲ್ಲದೆ ಇವತ್ತು ತುಂತುರು ನೀರಾವರಿ, drip irrigationಗೆ ಸಬ್ಸಿಡಿಯನ್ನು ಘೋಷಣೆ ಮಾಡಿದ್ದಾರೆ. ಈ ಬಗ್ಗೆ ನನ್ನದೊಂದು ಸಲಹೆ ಏನೆಂದರೆ, ಇವತ್ತು ಬಿಜಾಪುರ, ಬಾಗಲಕೋಟೆ, ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಸಾಕಷ್ಟು ಮಳೆಯಾಗಿದೆ. ವಿಶೇಷವಾಗಿ ಬರಗಾಲಕ್ಕೆ ತುತ್ತಾಗತಕ್ಕಂಥ ಜಿಲ್ಲೆಗಳಲ್ಲಿ ಒಂದು ಕಡೆ ನೀರು ಕಡಿಮೆ ಇದೆ, ಇನ್ನೊಂದು ಕಡೆ ತೋಟಗಾರಿಕೆ ಬೆಳೆ ಬೆಳೆಯುವುದಕ್ಕೆ ವಿಶೇಷವಾದ ವಾತಾವರಣ ಇದೆ. ಇಡೀ ಜಗತ್ತಿನಲ್ಲಿ ಒಳ್ಳೆಯ ಗುಣಮಟ್ಟದ ಹಣ್ಣುಗಳನ್ನು ಬೆಳೆಯತಕ್ಕಂಥ ಈ 3–4 ಜಿಲ್ಲೆಗಳಲ್ಲಿ drip irrigation ಯಾರು ಅಳವಡಿಸಿಕೊಳ್ಳುತ್ತಾರೋ ಅವರಿಗೆ ನೂರಕ್ಕೆ ನೂರರಷ್ಟು ಸಬ್ಸಿಡಿಯನ್ನು ಘೋಷಣೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಸಲಹೆಯನ್ನು ಕೊಡುತ್ತೇನೆ. ಇವತ್ತು ಕೃಷಿ ಆವರ್ತಕ ನಿಧಿಯನ್ನು ಒಂದು ಸಾವಿರ ಕೋಟಿ ರೂ.ಗಳು ಎಂದು ಮಾಡಿದ್ದು ಸ್ವಾಗತಾರ್ಹ. 1 ಲಕ್ಷ ಅಕ್ರಮ ಪಂಪ್‌ಸೆಟ್ಟುಗಳನ್ನು ಸಂಪರ್ಕ ಮಾಡಿ, ವಿದ್ಯುತ್ ಅನ್ನೂ ಸಹಿತ ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದನೆ ಮಾಡಿ ರೈತರಿಗೆ ಕೊಡತಕ್ಕಂಥ ವ್ಯವಸ್ಥೆಯನ್ನು ಸರ್ಕಾರ ಇವತ್ತು ಮಾಡುತ್ತಿದೆ. ಅಲ್ಪ ಸ್ವಲ್ಪ ವ್ಯತ್ಯಾಸಗಳು, ಕೊರತೆಗಳಿದ್ದರೂ ಸಹ ಅವುಗಳನ್ನು ಸರಿಪಡಿಸಿಕೊಂಡು, ಈ ಕರ್ನಾಟಕದ ತುಂಬಾ ಇರತಕ್ಕಂಥ ರೈತರಿಗೆ ಮತ್ತು ಸಾರ್ವಜನಿಕರಿಗೆ ವಿದ್ಯುತ್ ಅನ್ನು ಸರಿಯಾಗಿ ಕೊಡಬಹುದು ಎಂದು ನಾನು ಭರವಸೆ ಇಟ್ಟುಕೊಂಡಿದ್ದೇನೆ. ನಿನ್ನೆ–ಮೊನ್ನೆ ಎರಡು ದಿವಸಗಳವರೆಗೆ ಚರ್ಚೆ ನಡೆದಂತಹ ಸಂದರ್ಭದಲ್ಲಿ ಉದ್ಯೋಗ ಖಾತ್ರಿ ಯೋಜನೆ ಬಗ್ಗೆ ಅನೇಕ ಸಲಹೆ/ಸೂಚನೆಗಳು

ಪ್ರಸ್ತಾಪವಾದವು. ನನಗೆ ವೈಯಕ್ತಿಕವಾಗಿ ಅನಿಸುವುದೇನೆಂದರೆ, ಉದ್ಯೋಗ ಖಾತ್ರಿ ಯೋಜನೆ ಇಡೀ ದೇಶದ ತುಂಬಾ, ರಾಜ್ಯದ ತುಂಬಾ ಬಂದಿರುವಂತಹ ಸಂದರ್ಭದಲ್ಲಿ, ಇದರಿಂದ ಒಂದು ರೀತಿಯಲ್ಲಿ ನೇರವಾಗಿ ಕೃಷಿ ಮೇಲೆ ಅಪ್ರತ್ಯಕ್ಷವಾಗಿ ಹೊಡೆತ ಬಿದ್ದಿದೆ ಎಂದು ನನಗನಿಸುತ್ತದೆ. ಕಾರಣವೇನೆಂದರೆ, ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಇವತ್ತು ಕೃಷಿ ಕೂಲಿಕಾರರು ಆ ಕಡೆಗೆ ಹೋಗುತ್ತಿರುವುದರಿಂದ, ಕೃಷಿಕನಿಗೆ ದೊಡ್ಡ ಸಮಸ್ಯೆಯಾಗುತ್ತಿದೆ. Labour problem ಉಂಟಾಗುತ್ತಿದೆ. ಕೃಷಿ ಮೊದಲೇ ಒಂದು ತರಹ ಲಾಭದಾಯಕವಲ್ಲದ ಉದ್ಯೋಗವೆನ್ನುವಂತಹ ಸಂದರ್ಭದಲ್ಲಿ ಕೃಷಿ ಕಾರ್ಮಿಕರ ಕೊರತೆಯಿಂದ ಮತ್ತಷ್ಟು ಅದರ ಮೇಲೆ ವಿಪರೀತವಾದ ಪರಿಣಾಮವಾಗುತ್ತಿದೆ. ನಾನು ಸರ್ಕಾರಕ್ಕೆ ಸಲಹೆ ಕೊಡುವುದೇನೆಂದರೆ, ಈ ಉದ್ಯೋಗ ಖಾತ್ರಿ ಯೋಜನೆ ನಡೆಯಬೇಕು. ಯಾವ್ಯಾವ ಪ್ರದೇಶಗಳಲ್ಲಿ ಕೃಷಿ ಚಟುವಟಿಕೆ season ಇರುತ್ತದೋ, ಅದನ್ನು ಬಿಟ್ಟು ಇತರ ಸಂದರ್ಭಗಳಲ್ಲಿ NREGA ಮೂಲಕ ಕೆಲಸಗಳನ್ನು ಕೊಡಬೇಕೆಂದು ನನಗನಿಸುತ್ತದೆ. ಕೆಲವು ಕಡೆ ಫೆಬ್ರವರಿ, ಮಾರ್ಚ್‌ನಲ್ಲಿ ಕೆಲಸ ಇರುತ್ತದೆ. ನಮ್ಮ ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ಹಿಂಗಾರಿನ ದೊಡ್ಡ ಪ್ರಮಾಣದ season ಇರುತ್ತದೆ. ಜೋಳ, ಕಡಲೆ, ಗೋಧಿ ಇತ್ಯಾದಿ ಕಿತ್ತು ರಾಶಿ ಮಾಡುವಂತಹ ಸಂದರ್ಭ ಇರುತ್ತದೆ. ಒಂದು ಕಡೆ ಕಬ್ಬಿನ ಕಟಾವು ಇರುತ್ತದೆ. ಎಲ್ಲಿಯೂ ಕಾರ್ಮಿಕರು ಸಿಗದೆ, ಮಹಾರಾಷ್ಟ್ರದಿಂದ ಕೂಲಿಕಾರರನ್ನು ಕರೆಸಿಕೊಂಡು ಕಬ್ಬು ಕಟಾವು ಮಾಡುವಂತಹ ಸ್ಥಿತಿ ಬಂದಿದೆ. ಇಂತಹ ಸಂದರ್ಭದಲ್ಲಿ ಇವತ್ತು ಉದ್ಯೋಗ ಖಾತ್ರಿ ಯೋಜನೆ ಗ್ರಾಮಾಂತರ ಪ್ರದೇಶಗಳಲ್ಲಿ ಅನುಷ್ಠಾನಗೊಂಡರೆ ಕೃಷಿಕರಿಗೆ ಹೊಡೆತ ಬೀಳುತ್ತದೆ. ಹೀಗಾಗಿ ಉದ್ಯೋಗ ಖಾತ್ರಿ ಯೋಜನೆ ನಡೆಯಬೇಕು, ಆದರೆ seasonಗಳ ಮೇಲೆ, ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಅವಕಾಶಗಳನ್ನು ಕೊಟ್ಟು NREGA ಜಾರಿಗೆ ತರಬೇಕೆಂದು ನನಗನಿಸುತ್ತದೆ. NREGA ಅಡಿಯಲ್ಲಿ ಬಂದಿರುವಂತಹ ದುಡ್ಡನ್ನು ಹೆಚ್ಚಾಗಿ ಯಾವುದಕ್ಕೆ ಉಪಯೋಗ ಮಾಡಬೇಕೆಂದರೆ, ಗುಜರಾತ್‌ನಲ್ಲಿ ಯಾವ ರೀತಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ನರೇಂದ್ರ ಮೋದಿಯವರು ಒಂದು ಕ್ರಾಂತಿಯನ್ನೇ

ಮಾಡಿದ್ದಾರೋ, ಹಾಗೆ ಇಲ್ಲಿಯೂ ಮಾಡಬೇಕು. ಅಲ್ಲಿ ಬೀಳತಕ್ಕಂಥ ಮಳೆ ನೀರನ್ನು, ಓಡಿ ಹೋಗುವಂತಹ ನೀರನ್ನು ನಡೆಯುವಂತೆ ಮಾಡಿ, ನಡೆಯುವಂತಹ ನೀರನ್ನು ನಿಲ್ಲುವಂತೆ ಮಾಡಿ, ನಿಲ್ಲುವಂತಹ ನೀರನ್ನು ಇಂಗುವಂತೆ ಮಾಡಿದ್ದಾರೆ. ಗುಜರಾತ್‌ನಲ್ಲಿ ನೀರಿನ ಮಟ್ಟ ಮೇಲಕ್ಕೆ ಬಂದಿದೆ. ಅದೇ ರೀತಿಯಲ್ಲಿ ನಾವೂ ಕೂಡ ಕರ್ನಾಟಕದಲ್ಲಿ ವಿಶೇಷವಾಗಿ ಸರಿಯಾಗಿ ಮಳೆಯಾಗದ ಉತ್ತರ ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ಬಂಡಿಂಗ್, ಕೃಷಿ ಹೊಂಡ ಮತ್ತು ಬಾಂದಾರುಗಳನ್ನು ನಿರ್ಮಾಣ ಮಾಡುವುದಕ್ಕೆ NREGA ಯೋಜನೆ ಜಾರಿಗೆ ತಂದರೆ ಬಹುಶ: ದೊಡ್ಡ ಪ್ರಮಾಣದಲ್ಲಿ ಜನರಿಗೆ ಅನುಕೂಲವಾಗುತ್ತದೆ, ನೀರಿನ ಮಟ್ಟ ಮೇಲಕ್ಕೆ ಬರುತ್ತದೆ. ಅದರಿಂದ ಕೃಷಿಕರಿಗೆ ಒಂದು ಒಳ್ಳೆಯ ಅವಕಾಶ ಸಿಗುತ್ತದೆ. ಇದನ್ನು ನೀರಾವರಿ ದಶಕ ಎಂದು ಘೋಷಣೆ ಮಾಡಿ, 2011–2020ನೇ ಇಸವಿಯವರೆಗೆ ಏನಿವತ್ತು ಕೃಷ್ಣಾ ಇರಬಹುದು, ಮತ್ತೊಂದು ನದಿ ಇರಬಹುದು, ಆ ನದಿ ನೀರನ್ನು ಉಪಯೋಗ ಮಾಡಿಕೊಂಡು, ಹತ್ತು ವರ್ಷಗಳಲ್ಲಿ ದೊಡ್ಡ ಪ್ರಮಾಣದಲ್ಲಿ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ಸುಮಾರು 7800 ಕೋಟಿ ರೂ.ಗಳನ್ನು ಮೀಸಲಿಟ್ಟಿರುವಂತಹ ಸರ್ಕಾರದ ಕ್ರಮವನ್ನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತೇನೆ. ನಮ್ಮ ಅಖಂಡ ಬಿಜಾಪುರ ಜಿಲ್ಲೆ, ಬಿಜಾಪುರ ಮತ್ತು ಬಾಗಲಕೋಟೆ, ಜಿಲ್ಲೆಯಲ್ಲಿ ಕೃಷ್ಣಾ ನದಿ ಹರಿದಿದೆ. UKP ಅಡಿಯಲ್ಲಿ ಆಲಮಟ್ಟಿ ಡ್ಯಾಂ ಆದ ನಂತರ ಸಾಕಷ್ಟು ಹಿನ್ನೀರು ಬಂದು ನಮಗೆ ತೊಂದರೆಯಾಗಿದೆ. ಜಿಲ್ಲೆಯ ರೈತರಿಗೆ ಯಾವುದೇ ರೀತಿಯಲ್ಲೂ ಅನುಕೂಲವಾಗಿಲ್ಲ. ಆದ್ದರಿಂದ, ಮಾನ್ಯ ಮುಖ್ಯಮಂತ್ರಿಗಳು ನಿರ್ಧಾರ ಮಾಡಿ, ಇಲ್ಲಿರುವಂತಹ ಅನೇಕ ಯೋಜನೆಗಳು ಕಳೆದ ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಿವೆಯೋ, ಆ ಯೋಜನೆಗಳನ್ನು ಪೂರ್ತಿ ಮಾಡುವುದಕ್ಕೆ ಎಷ್ಟು ಹಣ ಬೇಕೋ, ಅದನ್ನು ಸಂಪೂರ್ಣ ಮಂಜೂರು ಮಾಡಿ, ಅವುಗಳನ್ನು ಜಾರಿಗೆ ತಂದರೆ, ದೊಡ್ಡ ಪ್ರಮಾಣದಲ್ಲಿ ಬಿಜಾಪುರ ಜಿಲ್ಲೆಯ ಜನರ ಕಣ್ಣೀರನ್ನು ಒರೆಸುವಂತಹ ಪ್ರಯತ್ನ ಸರ್ಕಾರ ಮಾಡಬೇಕು. ಈ ಸಂದರ್ಭದಲ್ಲಿ 524 ಮೀಟರ್‌ವರೆಗೆ ಆಲಮಟ್ಟಿ ಎತ್ತರ ಆಗುವುದು ನಿಶ್ಚಿತ. ನ್ಯಾಯ ಮಂಡಳಿ ಈ

ಬಗ್ಗೆ ಆದೇಶ ಕೊಟ್ಟಿದೆ. ಈ ನ್ಯಾಯ ಮಂಡಳಿಯ ಆದೇಶದಿಂದ ಕರ್ನಾಟಕಕ್ಕೆ ಸರಿಯಾದ ನ್ಯಾಯ ಸಿಕ್ಕಿದೆಯೋ, ಇಲ್ಲವೋ ಎಂದು ಚರ್ಚೆ ನಡೆದಿದೆ. ನ್ಯಾಯ ಸಿಕ್ಕಿಲ್ಲವೆಂದರೆ, ಆ ಬಗ್ಗೆ ಅಪೀಲ್ ಮಾಡಬಹುದು. ಅದು ಸರ್ಕಾರಕ್ಕೆ ಬಿಟ್ಟಿದ್ದು. ಆದರೆ ಅಪೀಲ್ ಆದರೂ ಕೂಡ ಇವತ್ತು ಕೊಟ್ಟಿರುವಂತಹ ನೀರಿನ ಹೊರತು ಹೆಚ್ಚು ನೀರು ಬರುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ. ನೀರಿನ ಸಂಗ್ರಹದ ಬಗ್ಗೆ ಮಾತ್ರ ಚಿಂತನೆ ಮಾಡದೆ ನೀರನ್ನು ಉಪಯೋಗ ಮಾಡಿ ರೈತರ ಜಮೀನುಗಳಿಗೆ ಕೊಡತಕ್ಕ ಯೋಜನೆಗಳಿಗೆ ನಮ್ಮ ಸರ್ಕಾರ ವಿಶೇಷ ಗಮನ ಕೊಟ್ಟು ಕೆಲಸ ಮಾಡಬೇಕು. ಸರ್ಕಾರ ಆ ಕೆಲಸ ಮಾಡುತ್ತಿದೆ ಎಂದು ನನಗನಿಸುತ್ತದೆ. ನಿನ್ನೆ ತಾನೇ ಜಮಖಂಡಿ ಭಾಗದ, ಸಾವಳಗಿ ಭಾಗದ ಮತ್ತು ಬಿಜಾಪುರ ಜಿಲ್ಲೆಯ ಕೆಲವು ಪ್ರದೇಶಗಳಿಗೆ ನೀರನ್ನು ಕೊಡುವುದಕ್ಕೆ ಹಣವನ್ನು ಮೀಸಲಿಡುವ ಬಗ್ಗೆ ಚರ್ಚೆಯಾದಾಗ ಸರ್ಕಾರ ಸಕಾರಾತ್ಮಕವಾಗಿ ಸ್ಪಂದನೆ ಮಾಡಿದ್ದನ್ನು ನಾನು ಸ್ವಾಗತ ಮಾಡುತ್ತೇನೆ. ಒಟ್ಟಾರೆ, ಕರ್ನಾಟಕ ರಾಜ್ಯದಲ್ಲಿ ರೈತರ ಬಗ್ಗೆ ಚಿಂತನೆ ಮಾಡಿದಂತಹ, ಹೊಸ ಹೊಸ ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ತರುತ್ತಾ, ಸಾಮಾನ್ಯ ಜನರಿಗೆ, ಸಾಮಾನ್ಯ ರೈತರಿಗೆ ವಿಶೇಷ ವ್ಯವಸ್ಥೆ ಮಾಡಲಿಕ್ಕೆ ಹೊಸ ಬಜೆಟ್ಟೊಂದನ್ನು ಮಾನ್ಯ ಯಡಿಯೂರಪ್ಪನವರು ಏನು ತಂದಿರುತ್ತಾರೋ, ಆ ಬಜೆಟನ್ನು ಬೆಂಬಲಿಸಿ, ಅದು ಸಂಪೂರ್ಣ ಅನುಷ್ಠಾನಕ್ಕೆ ಬರಲೆಂದು ಹಾರೈಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ): ಮಾನ್ಯ ಅಧ್ಯಕ್ಷರೆ, 2011–12ರ ಆಯವ್ಯಯದ ಮೇಲೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿರುವುದಕ್ಕಾಗಿ ಮೊಟ್ಟ ಮೊದಲಿಗೆ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಹೊಸದಾಗಿ ಕೃಷಿ ಬಜೆಟ್ ಅನ್ನು ಮಂಡಿಸಲಾಗುತ್ತದೆ ಎಂಬ ಸಂದೇಶ ಮೊದಲೇ ಹೋಗಿತ್ತು. ಆದರೆ ತಮಗೆ ಗೊತ್ತಿದೆ. ಇಡೀ ರಾಜ್ಯದಲ್ಲಿ ಸುಮಾರು ಶೇಕಡ 70ರಷ್ಟು ಜನರು ಕೃಷಿ ಮೇಲೆ depend ಆಗಿದ್ದಾರೆ. ವಿಶೇಷವಾಗಿ ರೈತ ನಮ್ಮ ದೇಶದ ಬೆನ್ನೆಲುಬು ಆಗಿದ್ದಾನೆ. ಈ ರೈತ, ಅನ್ನದಾತನ ಬಗ್ಗೆ ಮುಖ್ಯಮಂತ್ರಿಗಳು ಚಿಂತನೆ ಮಾಡುತ್ತಾರೆ, ಆ ನಿಟ್ಟಿನಲ್ಲಿ

ದೊಡ್ಡ ಪ್ರಮಾಣದಲ್ಲಿ ಕೃಷಿಕರಿಗೆ ಸವಲತ್ತುಗಳನ್ನು ಘೋಷಿಸುತ್ತಾರೆಂದು ಮೊದಲೇ ಪೇಪರ್‌ನಲ್ಲಿ ವರದಿಯಾಗಿತ್ತು. ಆ ನಿರೀಕ್ಷೆಯಂತೆಯೇ ಮಾನ್ಯ ಮುಖ್ಯಮಂತ್ರಿಗಳು 'ಭಾಗ-1 ಕೃಷಿ' ಮತ್ತು 'ಭಾಗ-2 ಸಾಮಾನ್ಯ' ಎಂಬ ಎರಡು ಬಜೆಟ್ presentation ಮಾಡಿದರು. ಸನ್ಮಾನ್ಯ ಅಧ್ಯಕ್ಷರೆ, ತಮಗೆ ಹೇಳುವುದಕ್ಕೆ ಬಯಸುತ್ತೇನೆ, ಇವತ್ತು ಈ ರಾಜ್ಯದಲ್ಲಿ ಸುಮಾರು 75 ಲಕ್ಷ ರೈತರಿದ್ದಾರೆ.

ಅದರಲ್ಲಿ ಸಣ್ಣ ಅತಿ ಸಣ್ಣ ರೈತರು ಸುಮಾರು 54 ಲಕ್ಷ ಇದ್ದಾರೆ. ಇವತ್ತು ರೈತರ ಬಗ್ಗೆ ಒಂದು ವಿಶೇಷ ಬಜೆಟ್ ಕೊಡುವ ಮುಖಾಂತರ ನಾವೆಲ್ಲಾ ಬಹಳ ಒಳ್ಳೆಯ ರೀತಿಯಲ್ಲಿ ನಿರೀಕ್ಷೆ ಮಾಡುತ್ತಿದ್ದೇವು. ಆದರೆ ತಮಗೆ ಗೊತ್ತಿದೆ, ಇವತ್ತು ಇಡೀ ವಿಧಾನಸಭೆಯ ಇತಿಹಾಸವನ್ನು ನೋಡಿದರೆ, ಮೊಟ್ಟ ಮೊದಲು ಹೆಚ್.ಡಿ.ದೇವೇಗೌಡರು ಸಿ.ಎಂ. ಇದ್ದಾಗ, ಭೈರೇಗೌಡರು ಕೃಷಿ ಸಚಿವರಾಗಿದ್ದರು, ಆಗ ಒಂದು ಕೃಷಿ ನೀತಿಯನ್ನು ತಂದಿದ್ದರು. ಆದಾದ ಮೇಲೆ ಹೆಚ್.ಡಿ. ಕುಮಾರಸ್ವಾಮಿಯವರು ಸಿ.ಎಂ. ಇದ್ದಾಗ ನಾನೇ ಕೃಷಿ ಸಚಿವನಾಗಿದ್ದೆ, ಆಗ 2ನೇ ಕೃಷಿ ನೀತಿಯನ್ನು ತೆಗೆದುಕೊಂಡು ಬಂದೆವು. ಸನ್ಮಾನ್ಯ ಮುಖ್ಯಮಂತ್ರಿಗಳು ಹಸಿರು ಶಾಲು ಹಾಕಿಕೊಂಡು ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದರು, ಈ ಒಂದು ಕೃಷಿ ಬಜೆಟ್ ಅನ್ನು ಕೊಡುವುದರ ಮೂಲಕ 3ನೇ ಪ್ರಯಾಸವನ್ನು ಮಾಡಿದ್ದಾರೆ. ಇವತ್ತು ತಮಗೆ ಹೇಳಬಯಸುತ್ತೇನೆ, ಇದರಲ್ಲಿ ಮೊಟ್ಟಮೊದಲಿಗೆ "Agriculture is State subject" ಎಂದು ಹೇಳಿದ್ದಾರೆ, ಅದು ಬಹಳ ಸಂತೋಷ. ಏಕೆಂದರೆ, ಕೆಲವು ಜನ ಯಾವುದಾದರೊಂದು MSPA announce ಮಾಡಿ ಎಂದರೆ, ನಮಗೆ ಗೊತ್ತಿಲ್ಲ, ಇದು ಕೇಂದ್ರ ಸರ್ಕಾರದ್ದು ಎಂಬ ನಿಟ್ಟಿನಲ್ಲಿ ಮಾತನಾಡುತ್ತಿದ್ದರು. ಹಾಗಾಗಿ ಆ ಬಜೆಟ್‌ನಲ್ಲಿ ಅವರು ಮೊಟ್ಟ ಮೊದಲನೆಯದಾಗಿ, Agriculture is a State subject and therole of State Government in the development of agriculture sector is very important ಎಂದು ಹೇಳಿದರು. ಹಾಗಾಗಿ ಅವರಿಗೆ ಮೊಟ್ಟ ಮೊದಲನೆಯದಾಗಿ ಧನ್ಯವಾದಗಳನ್ನು ಹೇಳುತ್ತೇನೆ. ಕೃಷಿಯ ಸಂಪೂರ್ಣ ಜವಾಬ್ದಾರಿಯನ್ನು ರಾಜ್ಯ ಸರ್ಕಾರ

ತೆಗೆದುಕೊಂಡಿದ್ದು, ನಮ್ಮ ಜವಾಬ್ದಾರಿ ಇದೆ ಎಂಬ ನಿಟ್ಟಿನಲ್ಲಿ ಹೇಳಿದ್ದಾರೆ. ಇವತ್ತು ಮುಖ್ಯವಾಗಿ ಕೃಷಿ ನೀತಿಯಲ್ಲಿ ಲೆಕ್ಕ ಹಾಕಬೇಕೆಂದರೆ, 2006ರ ಕೃಷಿ ನೀತಿಯಲ್ಲಿ ಒಂದು ಮಾತನ್ನು ಹೇಳಿದ್ದೆವು. ಮುಂದಿನ ದಿನಗಳಲ್ಲಿ ಈ ಒಂದು ಕೃಷಿ ಉತ್ಪಾದನೆ ಹೆಚ್ಚಿಗೆ ಮಾಡಬೇಕು. 10 ವರ್ಷದಲ್ಲಿ ಡಬಲ್ ಆಗಬೇಕು. ಆಮೇಲೆ ಗ್ರೋತ್ ರೇಟ್ ಏನಿದೆ 4.5%ಗೆ ಬರಬೇಕೆಂಬ ನಿಟ್ಟಿನಲ್ಲಿ ಆ ಒಂದು ಆಧಾರದ ಮೇಲೆ ಅವತ್ತು ಕೃಷಿ ನೀತಿಯನ್ನು ಮಾಡಿದ್ದು, ಆಗ ಶ್ರೀಮಾನ್ ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಗಳಾಗಿದ್ದರು. ನಾನು ಬೇರೆ ವಿಚಾರಗಳ ಬಗ್ಗೆ ಮಾತನಾಡದೆ ಕೃಷಿ ಬಗ್ಗೆ ಬೆಳಕನ್ನು ಚೆಲ್ಲುತ್ತೇನೆ. ಇವತ್ತು ಈ ಒಂದು ಗ್ರೋತ್ ಅನ್ನು ಅಚೀವ್ ಮಾಡಬೇಕೆಂದರೆ, ನಾವು ಯಾವ ರೀತಿಯಾಗಿ ಯೋಜನೆಗಳನ್ನು ಕೊಡುತ್ತಿದ್ದೇವೆಂಬುದು ಮುಖ್ಯವಾಗಿದೆ. ಮೊಟ್ಟ ಮೊದಲು ಬಿಜೆಪಿ ಸರ್ಕಾರ ಬಂದ ಮೇಲೆ 3 ವರ್ಷಗಳ ಇತಿಹಾಸ ತೆಗೆದುಕೊಂಡಾಗ ನಮಗೂ ಬಹಳ ನಿರೀಕ್ಷೆ ಇತ್ತು. ಮೊಟ್ಟ ಮೊದಲ ವರ್ಷ ಪ್ರಮಾಣವಚನ ಸ್ವೀಕಾರ ಮಾಡುವಾಗ ಟಿ.ವಿ. ನೋಡುತ್ತಿದ್ದೆ, ನನ್ನ ಮನಸ್ಸಿನಲ್ಲೇ ಒಂದು ತರಹ ಸಂತೋಷವಾಯಿತು, ಏಕೆಂದರೆ, ಮುಖ್ಯಮಂತ್ರಿಗಳು ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡುತ್ತಿದ್ದಾರೆಂದರೆ, ರೈತರಿಗೆ ಏನಾದರೂ ಕಲ್ಯಾಣವಾಗಬಹುದೆಂದು ಸಂತೋಷವಾಯಿತು. ಆದರೆ ಎಂಟೇ ದಿವಸದಲ್ಲಿ fertilizers ಸಲುವಾಗಿ, ದಾವಣಗೆರೆಯಲ್ಲಿ ಗೋಲಿಬಾರ್ ಆಗಿ ರೈತರು ಸತ್ತಂಥ ದೃಶ್ಯವನ್ನು ನಾವು ನೋಡಿದೆವು. ಅವತ್ತು ಒಂದು ತಿಂಗಳಿನಲ್ಲಿ, ಅಧಿವೇಶನದಲ್ಲಿ ನಾವು ಮಾತನಾಡಿ, ಗೊಬ್ಬರ ದಾಸ್ತಾನು ಹೆಚ್ಚು ಮಾಡಬೇಕಾಗಿತ್ತು ಮಾಡಿಲ್ಲ, ಅದಕ್ಕೆ ವಿಶೇಷವಾಗಿ ಫಂಡ್ ತೆಗೆದಿಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಪ್ರಯತ್ನ ಮಾಡಬೇಕೆಂದು ನಾನು ಕೂಡ ಮುಖ್ಯ ಮಂತ್ರಿಗಳಿಗೆ ಹೇಳಿದ್ದೇವೆ. ಅದು ಹೇಗೆ ಆಗುತ್ತದೆ, ರಾಜ್ಯ ಸರ್ಕಾರದವರು ನಾವು ಹೇಗೆ ತೆಗೆದುಕೊಳ್ಳುವುದಕ್ಕೆ ಬರುತ್ತದೆ, ನಾವು ಬೇಕಾದರೆ ನಿಮಗೆ ಕೊಡುತ್ತೇವೆ, ನಾಳೆ 500 ಕೋಟಿ ದಾಸ್ತಾನನ್ನು ತರಿಸಿ ಎನ್ನುವ ನಿಟ್ಟಿನಲ್ಲಿ ಅವತ್ತು ಅವರು ಮಾತನಾಡಿದರು. ಆದರೆ ನಾವು ಹಿಂದಿನ ದಾಖಲೆಗಳನ್ನೆಲ್ಲಾ ತೆಗೆದು ತೋರಿಸಿದೆವು. ಮಾನ್ಯ ಉದಾಸಿಯವರೆ, ನಾನು ಏನು ಹೇಳುತ್ತಿದ್ದೇನೆಂದರೆ, ಅವತ್ತು ಮೊದಲು ಬಂದ ತಕ್ಷಣ ಅವರು ಗಮನ

ಕೊಟ್ಟಿಲ್ಲ, ಒಂದು ತಿಂಗಳಾದ ಮೇಲೆ ನಾವು ಅಧಿವೇಶನದಲ್ಲಿ ಮಾತನಾಡಿದ್ದೇವೆ. ನಾನು ಹೇಳುವುದೇನೆಂದರೆ, ನೀವು ಎಷ್ಟರ ಮಟ್ಟಿಗೆ ರೈತರ ಬಗ್ಗೆ ಚಿಂತನೆ ಮಾಡುತ್ತಿದ್ದೀರಿ ಎನ್ನುವ ನಿಟ್ಟಿನಲ್ಲಿ ಮಾತನಾಡುತ್ತಿದ್ದೇನೆ. ಹಾಗೆ ಹಿಂದೆ ಬಜೆಟ್‌ನಲ್ಲಿ, ಒಂದು ಸಾವಿರ ರೂಪಾಯಿಯಂತೆ ನಾವು 50 ಲಕ್ಷ ರೈತರಿಗೆ ಕೊಡುತ್ತೇವೆಂದು 500 ಕೋಟಿಯನ್ನು ಬಜೆಟ್‌ನಲ್ಲಿ ಪ್ರಕಟಣೆ ಮಾಡಿ ಹೇಳಿದರು, ಯಾರಾದರು ರೈತರು ಕೇಳುವುದಕ್ಕೆ ಬಂದಿದ್ದರೇ? ಇಲ್ಲ, ನೀವು ಹೇಗೆ ಕೊಟ್ಟಿರಿ? ಅದರಲ್ಲಿ ಎಷ್ಟು ಕೊಟ್ಟಿರಿ ಸ್ವಾಮಿ, 210 ಕೋಟಿ ಕೊಟ್ಟು, ಎಷ್ಟೋ ಜನ, ಆ ಒಂದು ಸಾವಿರ ಚೆಕ್ ಬೌನ್ಸ್ ಆಗಿ ಇವತ್ತಿನವರೆಗೆ ಓಡಾಡುತ್ತಿದ್ದಾರೆ. ನಾವು ಕ್ಷೇತ್ರದ ಶಾಸಕರು ನಾವು ನೋಡುತ್ತಿದ್ದೇವೆ, ಹಳ್ಳಿಕಡೆ ಹೋದಾಗ ಇದೆಲ್ಲಾ ಬರುತ್ತದೆ. ಹಾಗಾಗಿ ನಾನು ಏನು ಹೇಳುವುದೆಂದರೆ, 3 ವರ್ಷದ ಸಮಯದಲ್ಲಿ ನಾವು ಕೃಷಿ ನಿಟ್ಟಿನಲ್ಲಿ ಎಷ್ಟರ ಮಟ್ಟಿಗೆ ಪ್ರಾಮಾಣಿಕ ಪ್ರಯತ್ನ ಮಾಡಿದ್ದಿರೆಂಬುದನ್ನು ಮೊದಲು ಅಳೆಯಬೇಕಾಗುತ್ತದೆ. ಇವತ್ತು ಆ ಒಂದು scheme utter failure ಆಯಿತು, ಅದೇ 210 ಕೋಟಿ ರೂಪಾಯಿಗಳಲ್ಲಿ infrastructure ಅನ್ನು ಬೇರೆ ಬೇರೆ ರೀತಿಯಲ್ಲಿ ಮಾಡಿದ್ದರೆ ಇನ್ನು ಸಾಕಷ್ಟು ಸೌಲತ್ತುಗಳು ಸಿಗುತ್ತಿದ್ದವು. ಸನ್ಮಾನ್ಯ ಕುಮಾರಸ್ವಾಮಿಯವರು ಸಿ.ಎಂ. ಆಗಿದ್ದಾಗ ಮಾನ್ಯ ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಗಳಾಗಿದ್ದರು ಆಗ ನಾವು 75% ಸಬ್ಸಿಡಿ ಸೀಡ್ಸ್‌ಗೆ ಕೊಟ್ಟೆವು. ನೀವು ಬಂದ ತಕ್ಷಣ ಏನು ಮಾಡಿದಿರಿ, 50%ಗೆ ತಂದಿದ್ದೀರಿ, 25% ರಐತರ ಜೇಬು ಕಟ್ ಆಯಿತು. ನಾನು ಏನು ಹೇಳುವುದೆಂದರೆ, ನೀವು ರೈತರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕಾರ ಮಾಡಿ ರೈತರಿಗೆ ನಮಗಿಂತ ಜಾಸ್ತಿಕೊಡಬೇಕಾಗಿತ್ತು, ಆದರೆ ಅದರಲ್ಲೂ ಕಟ್ ಆಯಿತು. ಟ್ರ್ಯಾಕ್ಟರ್ ಸಬ್ಸಿಡಿ ಕಟ್ ಆಯಿತು, ಏಕಾಯಿತು? ಇವತ್ತು ನಾವು ರೈತರ ಬಗ್ಗೆ ಕಾಳಜಿ ಮಾಡಬೇಕೆಂದರೆ, ಹೌದು, ನಾವು ಒಪ್ಪಿಕೊಳ್ಳುತ್ತೇವೆ, ಒಂದೇ ಒಂದು ಸ್ಕೀಂ, ಹಿಂದೆ ಕುಮಾರ ಸ್ವಾಮಿಯವರು ಸಿ.ಎಂ. ಆಗಿದ್ದಾಗ ಶ್ರೀಮಾನ್ ಯಡಿಯೂರಪ್ಪನವರು ಉಪಮುಖ್ಯಮಂತ್ರಿಗಳಾಗಿದ್ದರು, 4% ಬಡ್ಡಿ ಮಾಡಿದರೆ ಆಮೇಲೆ 3% ಮಾಡಿದಿರಿ, 1% ಕಡಿಮೆಯಾಯಿತು. ಅದನ್ನು Co-operative Banks,

Commercial Banks ಎರಡೂ ಕ್ಷೇತ್ರಕ್ಕೆ ಮಾಡಿದಿರಿ. ಇವತ್ತು ಉತ್ತರ ಕೊಡುವಾಗ ಎಷ್ಟು ವಾಣಿಜ್ಯ ಬ್ಯಾಂಕ್ಸ್ 3% ಬಡ್ಡಿದರದಲ್ಲಿ ಸಾಲವನ್ನು ಕೊಟ್ಟಿದ್ದಾರೆಂದು ಹೇಳಬೇಕು. ಇವತ್ತು ಎಲ್ಲಾ ಕಡೆ 7% ಚಾರ್ಜ್ ಮಾಡಿದ್ದಾರೆ. ಏಕೆಂದರೆ, ಸರ್ಕಾರದಿಂದ reimbursement ಬರುವುದು ತೊಂದರೆಯಾಗುತ್ತದೆಂಬ ನಿಟ್ಟಿನಲ್ಲಿ 7% ಬಡ್ಡಿಯನ್ನು ಅವರು ಚಾರ್ಜ್ ಮಾಡಿದ್ದಾರೆ, Co–operative Banks ಮಾತ್ರ 3% ಮಾಡಿದ್ದಾರೆ. ಇಂಥ ಹತ್ತಾರು ಹಲವಾರು ಸಂಕಷ್ಟದಲ್ಲಿ ರೈತರು ಇವತ್ತು ಇರುವಾಗ, ಒಂದು ಮಾತನ್ನು ಹೇಳುತ್ತೇನೆ, ಮೊನ್ನೆ ಗುಲ್ಬರ್ಗಾದಲ್ಲಿ ತೊಗರಿ ಬೆಳೆಗಾರರು ರೂ. 4000ಕ್ಕೆ ಬೆಂಬಲ ಬೆಲೆಗೆ ಖರೀದಿ ಮಾಡಿರೆಂದು ಹೇಳಿದಾಗ ಸರ್ಕಾರದ ಮುಂದೆ ಬಂತಾ? ಖರೀದಿ ಮಾಡಲಿಲ್ಲ, ರೈತರು ವಿಷ ತೆಗೆದುಕೊಂಡು ಆತ್ಮಹತ್ಯೆಗೆ ಪ್ರಯತ್ನ ಮಾಡಿದಾಗ, ಸನ್ಮಾನ್ಯ ನಮ್ಮ ಕೃಷಿ ಸಚಿವರಿಲ್ಲ, ಅವತ್ತು ಮುಗಲುಕೊಡಿಗೆ ಬಂದಿದ್ದರು, ಏನ್ರಿ ಸಚಿವರೆ, ಅಲ್ಲಿ ರೈತರು ತೊಂದರೆಯಲ್ಲಿದ್ದಾರೆಂದರೆ, ಅವರು ಉಡಾಫೆ ಮಾತನ್ನಾಡಿದರು, ಈ ಮಾತನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ, ಏಕೆಂದರೆ, ನಾನು ಒಬ್ಬ ಕೃಷಿ ಸಚಿವನಾಗಿ ಕೆಲಸ ಮಾಡಿದ್ದೇನೆ. ಇಲ್ಲ, ನಾವು ಚಾಲು ಮಾಡಿ 8 ದಿವಸವಾಯಿತು ಎಂದರು.

ಮಾನ್ಯ ಸದಸ್ಯರೊಬ್ಬರು: ಸಚಿವರು ಉಡಾಫೆಯಾಗಿ ಮಾತನಾಡಿದರೆಂದು ಹೇಳುವುದು ಸರಿಯಲ್ಲ, ತಿಳಿದುಕೊಂಡು ಮಾತನಾಡ ಬೇಕು, ಸದನಕ್ಕೆ ತಪ್ಪು ಮಾಹಿತಿ ನೀಡಬಾರದು.

ಶ್ರೀ ಬಂಡೆಪ್ಪ ಕಾಶೆಂಪೂರ್: ಜವಾಬ್ದಾರಿಯುತ ಮಂತ್ರಿಗಳು ಕರೆಕ್ಟ್ ಆಗಿ ಹೇಳಬೇಕು, ಅದಕ್ಕೆ ನಾನೆ ಹೇಳುತ್ತಿದ್ದೇನೆ, ಮಂತ್ರಿಗಳಿಗೆ ಗೊತ್ತಿಲ್ಲ, ತಿಳಿದುಕೊಳ್ಳುವುದು ಬೇಕಿಲ್ಲ, ಇದ್ದದ್ದನ್ನೆ ಹೇಳುತ್ತಿದ್ದೇನೆ. ನಾನು ಏಕೆ ಹೇಳುತ್ತಿದ್ದೇನೆಂದರೆ, ನಾನು ಜೀವರ್ಗಿಯಲ್ಲಿ ಜನರನ್ನು ಭೇಟಿ ಮಾಡಿ ಮುಗುಲು ಕೊಡಿಗೆ ಬಂದಿದ್ದೆ, ಆಗ ಹೇಳಿದೆ, ನೋಡಿ ಸಚಿವರೆ, ಅಲ್ಲಿ ಜನರು ಧರಣಿಗೆ ಕುಳಿತುಕೊಳ್ಳುತ್ತಿದ್ದಾರೆಂದು ಹೇಳುವ ಮೊದಲು, ಇಲ್ಲ, ನಿಮಗೆ ತಪ್ಪು ಮಾಹಿತಿ ಇದೆ, ನಾವು ಅಲ್ಲಿ ಈಗಾಗಲೇ ಚಾಲು ಮಾಡಿದ್ದೇವೆಂದು ಹೇಳಿದರು. ನನ್ನದು ಹಾಗೆ ತಪ್ಪು ಮಾಹಿತಿ ಇದ್ದರೆ ನಾನು ವಾಪಸ್ ಹೋಗುತ್ತಾ ಆ

ರೈತರಿಗೆ ಬುದ್ಧಿ ಮಾತನ್ನು ಹೇಳಿ ಹೋಗುತ್ತೇನೆ, ಈ ರೀತಿ ತಪ್ಪು ರೀತಿಯಲ್ಲಿ ಹೇಳಬಾರದೆನ್ನುವ ನಿಟ್ಟಿನಲ್ಲಿ ನಾನು ಹೇಳಿದೆ. ಆಗಲೇ ನಾನು ಫೋನ್ ಮಾಡಲು ಪ್ರಯತ್ನಿಸಿದೆ ನನಗೆ ಫೋನ್‌ನಲ್ಲಿ ಸಿಗಲಿಲ್ಲ. ಅಂದರೆ, ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಆಮೇಲೆ ಎಂಥ extreme ಆಯಿತು, ತಹಶೀಲ್ದಾರ್ ಕಛೇರಿಯಲ್ಲಿ ರೈತರು ವಿಷ ತೆಗೆದುಕೊಂಡು ಆತ್ಮಹತ್ಯೆಗೆ ಪ್ರಯತ್ನ ಮಾಡಿದರು. ಆಗ ಮರುದಿವಸ ತೊಗರಿ ಖರೀದಿ ಮಾಡಲು ಆರಂಭಿಸಿದರು. ನಾನು ಏನು ಹೇಳುತ್ತೇನೆಂದರೆ, ಸರ್ಕಾರ 3 ವರ್ಷಗಳಲ್ಲಿ ಯಾವುದಾದರೂ ಬದ್ಧತೆಯನ್ನು ರೈತರ ಬಗ್ಗೆ ತೋರಿಸಿದ್ದಾರೆಯೇ ಎಂಬುದನ್ನು ಮೊದಲು ನಾವು ಅಳೆಯಬೇಕಾಗುತ್ತದೆ. ನಾನು ಹೆಚ್ಚಿಗೆ ಹೇಳುವುದಿಲ್ಲ, ಇನ್ನು ಇವರೇನು ಕೃಷಿ ಬಜೆಟ್ ಪ್ರತ್ಯೇಕವಾಗಿ ಮಂಡನೆ ಮಾಡಿದ್ದಾರೆ, ಇವತ್ತು ಸಾಕಷ್ಟು ರೈತ ಮುಖಂಡರು ಪ್ರಗತಿಪರ ರೈತರ ಚಿಂತಕರ ಒಂದು ಬೇಡಿಕೆ ಇತ್ತು. ಹಲವಾರು ಈ studies conduct ಮಾಡಿದಾಗ, ಅವರು, ನಮ್ಮ ರಾಜ್ಯಕ್ಕೆ ಪ್ರತ್ಯೇಕ ಒಂದು ಕೃಷಿ ಬಜೆಟ್ ಕೊಡಬೇಕೆನ್ನುವ ಬೇಡಿಕೆ ಇತ್ತು.

ಸೆಪರೇಟ್ ಬಜೆಟ್ ಕೊಡಬೇಕೆಂಬ ನಿಟ್ಟಿನಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಸ್ವಲ್ಪ ಪ್ರಯಾಸ ಮಾಡಿದ್ದಾರೆ. ನನಗನ್ನಿಸುತ್ತದೆ, ಯಾವ ನಿಟ್ಟಿನಲ್ಲಿ ಅಗ್ರಿಕಲ್ಚರ್ ಸೆಪರೇಟ್ ಬಜೆಟ್ ಅಂದರೆ ಅದರದೇ ಆದ ಒಂದು ಸೆಪರೇಟ್ ಬಜೆಟ್ ಕೊಟ್ಟು ಬೇರೆ ಯಾರೂ interference ಇಲ್ಲದ ಹಾಗೆ ಇವತ್ತು ರಾತ್ರಿ ಏನಾದರೂ ಆಗಿದ್ದರೆ ಬೆಳಿಗ್ಗೆಯವರೆಗೆ ಅವರಿಗೆ ಆರ್ಡರ್ ಮಾಡಿ, ರೈತರ ಬಗ್ಗೆ ಚಿಂತನೆ ಹಾಗೂ ಸ್ಕೀಮ್ಸ್ ಬರಬೇಕೆಂಬ ನಿಟ್ಟಿನಲ್ಲಿ ಅವರಿಗೆ ಒಂದು ಚಿಂತನೆ ಇತ್ತು. ಹಾಗಾಗಿ ನನ್ನ ಪ್ರಕಾರ ಇವತ್ತು ನಾವು ರೈತರ ಬಗ್ಗೆ ಚಿಂತನೆ ಮಾಡಬೇಕೆಂದರೆ ಎರಡೇ ಎರಡು. ಅದರ ಬಗ್ಗೆ ನಾನು ಬರುತ್ತೇನೆ. ಅವರು ಸುಮಾರು ಸ್ಕೀಮ್ಸ್ ಅನೌನ್ಸ್ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೆ, ಆ ಸ್ಕೀಮ್ಸ್ ಬಗ್ಗೆ ಕೂಡ ಮಾತನಾಡುತ್ತೇನೆ. ಇವತ್ತು ನಾನು ಏನು ಹೇಳುವುದು ಎಂದರೆ, ನಮ್ಮ ಸ್ನೇಹಿತರು BJP ಪಕ್ಷದಿಂದ ಅವರು ಮಾತನಾಡುತ್ತಾ ಹೇಳಿದರು. ರೈತರಿಗೆ ಏನು ಬೇಕು? ಬೆಳೆದ ಬೆಳೆಗೆ ಒಳ್ಳೆಯ ರೀತಿಯಿಂದ ಬೆಲೆ ಬಂದರೆ ಸಾಕು. ಇಷ್ಟೇ. The farmers do not get remunerative prices

because of lack of grading facilities, ware house, cold storage, processing centers and Marketing facilities. ಬಜೆಟ್‌ನಲ್ಲಿ ತಾವೇ ಇದು ಬೇಕೆಂದು ಹೇಳಿದ್ದೀರಿ. ಹಾಗಾಗಿ ಇವತ್ತು ರೈತರು ಬೆಳೆದ ಬೆಳೆಗೆ ಒಳ್ಳೆಯ ಬೆಲೆಸಿಗಬೇಕು. ಒಳ್ಳೆಯ ಬೆಲೆ ಎಂದರೆ ಜಾಸ್ತಿಯೂ ಅಲ್ಲ, ಕಡಿಮೆಯೂ ಅಲ್ಲ. ಅದಕ್ಕೇ ಒಂದು ಕಮಿಟಿ ಇದೆ. ಹಿಂದೆಯೂ ಒಂದು ಕಮಿಟಿ ಇತ್ತು.

ಶ್ರೀ ಸಿ.ಎಂ. ಉದಾಸಿ: Statutory minimum price ಬೇರೆ, State advisory price ಬೇರೆ. Statutory minimum price fix ಮಾಡುವುದು Central Government ನವರು.

ಶ್ರೀ ಬಂಡೆಪ್ಪ ಕಾಶಂಪೂರ್: ಮಿನಿಮಮ್ ಸಪೋರ್ಟ್ ಪ್ರೈಸ್ ಫಿಕ್ಸ್ ಮಾಡುವುದು Central Government ನವರು. ಆದರೆ ಮಿನಿಮಮ್ ಸಪೋರ್ಟ್ ಪ್ರೈಸ್‌ಗಿಂತ ಜಾಸ್ತಿ ಕೊಡುವುದಕ್ಕೆ ನಿಮಗೆ ಹಕ್ಕು ಇಲ್ಲವಾ?

ಶ್ರೀ ಸಿ.ಎಂ. ಉದಾಸಿ: ಅವರು ರೇಟ್ ಫಿಕ್ಸ್ ಮಾಡಿದ ಮೇಲೆ ಮುಂದಿನದೆಲ್ಲಾ ಆಗುತ್ತದೆ.

ಶ್ರೀ ಬಂಡೆಪ್ಪ ಕಾಶಂಪೂರ್: ಇವತ್ತು ನಾವು ರೆಮ್ಯುನರೇಟಿವ್ ಪ್ರೈಸ್ ರೈತರು ಬೆಳೆದಂತಹ ಬೆಳೆಗೆ ನಾವು ಮೊದಲು ಬೆಲೆ ಕೊಡುವಂತಹ ಪ್ರಯತ್ನ ಮಾಡಬೇಕು. ಕೇಂದ್ರ ಸರ್ಕಾರದ ಮೇಲೆ ಹಾಕಿ ಅವರು ಇಷ್ಟಕ್ಕೆ ಫಿಕ್ಸ್ ಮಾಡಿದ್ದಾರೆ, ನಾವು ಅದರ ಮೇಲೆ ಹೋಗುವುದಿಲ್ಲ ಎಂಬ ನಿಟ್ಟಿನಲ್ಲಿ ನಾವು ಬರಬಾರದು. ಮೊಟ್ಟ ಮೊದಲು ತಮ್ಮ ಆವರ್ತ ನಿಧಿಯಿಂದ ತೆಗೆದುಕೊಳ್ಳುತ್ತೀರಾ? ಬೇರೆ ನಿಧಿಯಿಂದ ತೆಗೆದುಕೊಳ್ಳುತ್ತೀರೋ ನಮಗೆ ಗೊತ್ತಿಲ್ಲ. ಆದರೆ ರೈತರು ಬೆಳೆದಂತಹ ಬೆಳೆಗೆ ಒಳ್ಳೆಯ ರೀತಿಯಿಂದ ಪ್ರೈಸ್ ಕೊಡುವಂತಹ ಪ್ರಯತ್ನ ಈ ಸರ್ಕಾರದಿಂದ ಆಗಬೇಕು. ಇನ್ನೊಂದು ಹೇಳುತ್ತೇನೆ, ಇವತ್ತು ಇವರು ಹಲವಾರು ಸ್ಕೀಮ್‌ಗಳನ್ನು ತಂದಿದ್ದಾರೆ. ಹೋದ ಸಲ 500 ಕೋಟಿ ತಂದು ಒಂದು ಸಾವಿರ ರೂ. ಕೊಟ್ಟು, ಬರೀ 210 ಕೋಟಿಗೆ ಬಂದು ಟಾಪಿಕ್ ಕ್ಲೋಸ್. ಈ ವರ್ಷ ಒಂದು ಸಾವಿರ ಕೋಟಿ ಅದು 10 ಲಕ್ಷ farmers ಅದರಲ್ಲಿ SC/STಗೆ ಎರಡು ಲಕ್ಷ, ಒಂದು ಲಕ್ಷ, ಬಾಕಿ

ಜನರಲ್‌ನವರಿಗೆ ಕೊಡುವಂತಹ ಈ ಯೋಜನೆ ಸುವರ್ಣ ಭೂಮಿ ಯೋಜನೆ ಮಾಡಿದ್ದಾರೆ. ಇವತ್ತು ನಾನು ಒಂದು ಮಾತು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ರೈತರಿಗೆ 5,000 ಒಂದು ಸಲ, 5000 ಒಂದು ಸಲ ಕೊಡುವ ಯೋಜನೆ ಇವರು ಹಾಕಿಕೊಂಡಿದ್ದಾರೆ. ಇವರ ಉದ್ದೇಶ ಏನಿದೆ ಎಂದು ನನಗೆ ಗೊತ್ತಿಲ್ಲ. ಆದರೆ ಹಿಂದೆ ನಾವು ಬೀಜ ಗೊಬ್ಬರ ತೆಗೆದುಕೊಳ್ಳುವುದಕ್ಕೆ ಒಂದು ಸಾವಿರ ರೂಪಾಯಿ ಕೊಡುವ ಹಾಗೆ ಅವರಿಗೆ ಕಣ್ಣು ಒರೆಸುವಂತಹ ಕೆಲಸ ಏನಾಗಿದೆ, ಇವತ್ತು ಇದೂ ಕೂಡ ಅದೇ ರೀತಿಯಲ್ಲಿ ಆಗಬಹುದು ಎಂಬ ಸಂಶಯ ಇದೆ. ವಿಶೇಷವಾಗಿ ನಾವು ಹಿಂದೆ ಬಹಳಷ್ಟು ರೈತ ಮುಖಂಡರಿಗೆ, ವಿಜ್ಞಾನಿಗಳಿಗೆ ಎಲ್ಲಾ ಕರೆಸಿ ಕೇಳಿದಾಗ ಅವರಿಗೆ ಸವಲತ್ತುಗಳಿಗಿಂತ ಹೆಚ್ಚಿಗೆ ತಾವು ಬೆಳೆದ ಬೆಳೆಗೆ ಸಪೋರ್ಟ್ ಪ್ರೈಸ್ ಸಿಕ್ಕಿದರೆ ಸಾಕು ಎನ್ನತಕ್ಕಂತಹ ರೀತಿಯಲ್ಲಿ ಎಲ್ಲಾ ರೈತರು ಹೇಳುತ್ತಿದ್ದರು. ಈ ಸಪೋರ್ಟ್ ಪ್ರೈಸ್ ಕೊಡುವ ಬಗ್ಗೆ ಇವರು ಎಲ್ಲಿಯೂ ಹೇಳಲಿಲ್ಲ. ಮಿನಿಮಮ್ ಸಪೋರ್ಟ್ ಪ್ರೈಸ್ ಯಾವಾಗ ಬೆಲೆ ಬಿದ್ದು ಹೋಗುತ್ತದೆ ಆಗ ನಾವು ಮಾರ್ಕೆಟ್ intervention ಆಗುತ್ತೇವೆ. ಆಗ ನಾವು ಆವರ್ತ ನಿಧಿ ಮುಖಾಂತರ ಖರೀದಿ ಮಾಡುತ್ತೇವೆಂದು ಹೇಳಿದ್ದಾರೆ. ಮುಖ್ಯವಾಗಿ ಆ ಒಂದು ವಿಷಯ ಇವರು ಕವರ್ ಮಾಡಬೇಕು. ಅದರಲ್ಲಿ 10 ಲಕ್ಷ farmers ಗೆ ಕೊಡಬೇಕೆಂದು ಹೇಳುತ್ತಾರೆ. ಅದು ಯಾವ ಮಾನದಂಡ, ಯಾವ ರೂಲ್ಸ್ ರೆಗ್ಯುಲೇಷನ್ಸ್ ಅವರು ಫೋಟೋ ತೆಗೆದುಕೊಂಡು ಡಿಸಿ ಆಫೀಸ್ ಹತ್ತಿರ ಹೋಗಬೇಕು. 5,000 ರೂ. ತೆಗೆದುಕೊಳ್ಳುವುದಕ್ಕೆ ಎಷ್ಟು ಸಲ ಚಕ್ಕರ್ ಹೊಡೆಯಬೇಕೋ ಗೊತ್ತಿಲ್ಲ. 5,000 ರೂ. ಯಾವ ಯಾವ ಹಂತದಲ್ಲಿ ಅದು ಡೈರೆಕ್ಟ್ ಅಕೌಂಟ್‌ಗೆ ಕೊಡುತ್ತೇನೆಂದು ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಹಾಗಾಗಿ ಇದು ಒಂದು ರೀತಿಯಲ್ಲಿ farmer is more scientific than the scientist. ಅವರ ಹತ್ತಿರ ಅಷ್ಟೊಂದು ಜ್ಞಾನ ಇದೆ. ಇವತ್ತು ನಾವು ಮಾಡಬೇಕಾಗಿರುವುದು ಏನೆಂದರೆ, ಅವರು ಬೆಳೆದಂತಹ ಬೆಳೆಗೆ ಮೊದಲು ನಾವು ಬೆಲೆ ಕೊಡೋಣ. ಅದಕ್ಕೆ ನಾವು ಸಪೋರ್ಟ್ ಮಾಡೋಣ. ನಾವು ಆವರ್ತ ನಿಧಿಯಲ್ಲಿರುವ ಹಣವನ್ನು ಕನ್‌ವರ್ಟ್ ಮಾಡಿ ಅದಕ್ಕೆ ಇನ್ನೂ

ಹೆಚ್ಚಿನ ಪ್ರಕಾರದಲ್ಲಿ 125 ಲಕ್ಷ ಟನ್ ಆಹಾರೋತ್ಪಾದನೆ ಏನು ಆಗಿದೆ ಅದರಲ್ಲಿ ಹೆಚ್ಚು ಕಡಿಮೆ ಡ್ರೈ ಲ್ಯಾಂಡ್‌ನಲ್ಲಿ ಬರುವಂತಹ ಎಲ್ಲಾ ಪದಾರ್ಥಗಳಿಗೆ ಸಪೋರ್ಟ್ ಪ್ರೈಸ್ ಕೊಡುತ್ತೇವೆಂದು ನಾವು ಮುಂ ಬಂದರೆ, ರೈತ ನಗು ನಗುತಾ ಬೆಳೆದು ಕೊಡುವುದಕ್ಕೆ ತಯಾರಿದ್ದಾನೆ. ಅಂತಹ ಕೆಲಸವನ್ನು ಸರ್ಕಾರ ಮಾಡಬೇಕಾಗಿದೆ. ಹಾಗಾಗಿ ಇವತ್ತು ಇನ್ನೊಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ರೈತ production ಹೆಚ್ಚಿಗೆ ಮಾಡಬೇಕಾದರೆ ಅವನಿಗೆ ನಾವು ಸಪೋರ್ಟ್ ಕೊಡಬೇಕಾಗುತ್ತದೆ. ಅರ್ದಕ್ಕಿಂತ ಹೆಚ್ಚಿಗೆ ನೀವು ಒಂದು ಪರ್ಸೆಂಟ್‌ಗೆ ತಂದಿದ್ದೀರಿ. ಒಂದು ಪರ್ಸೆಂಟ್ ಅನ್ನು ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ ನಾವು ಎಷ್ಟರ ಮಟ್ಟಿಗೆ ಉಳಿಸುತ್ತೇವೆ ಅಷ್ಟು ರೈತರಿಗೆ ಅನುಕೂಲವಾಗುತ್ತದೆ. ಆದರೆ ಇದರ ಹಿನ್ನೆಲೆಯಲ್ಲಿ 3%, 4%, 1% ಹಿನ್ನೆಲೆಯಲ್ಲಿ ಒಂದು ಚಿಂತನೆ ಮಾಡುವುದು ಬಹಳ ಜರೂರು ಇದೆ. ಏನೆಂದರೆ, ಇಡೀ ರಾಜ್ಯದಲ್ಲಿ co–operative ಬ್ಯಾಂಕುಗಳಲ್ಲಿ ಲೋನ್ ತೆಗೆದುಕೊಂಡಂತಹ ರೈತರು ಅವರು ವರ್ಷ ವರ್ಷ ರಿನೀವಲ್ ಮಾಡುತ್ತಿದ್ದಾರೆ ವಿನ: ಅವರ ಕೈಯಲ್ಲಿ ದುಡಿಯಲಿಕ್ಕೆ ಯಾವುದೇ ದುಡ್ಡು ಸಿಗುತ್ತಿಲ್ಲ. ನನಗೆ ಚೆನ್ನಾಗಿ ಗೊತ್ತಿದೆ, ಬೀದರ್‌ನಲ್ಲಾಗಲಿ, ಬೇರೆ ಕಡೆ ಆಗಲಿ ರೈತರು co–operative ಬ್ಯಾಂಕಿನಲ್ಲಿ 10,000 ರೂ. ತೆಗೆದುಕೊಂಡಿರುತ್ತಾರೆ. ಮುಂದಿನ ವರ್ಷ ಅದನ್ನು ವಾಪಸ್ ಕಟ್ಟಬೇಕು. ಅವರು ವಾಪಸ್ ಕಟ್ಟುವುದಿಲ್ಲ. ಆ ಬ್ಯಾಂಕಿನವರು ಏನು ಮಾಡುತ್ತಾರೆ, 15% ಹೆಚ್ಚಿಗೆ ಮಾಡಿ ಆ ಇಂಟರೆಸ್ಟ್ ಅಡ್ಜೆಸ್ಟ್ ಮಾಡಿ ಬಾಕಿ ಎಲ್ಲಾ ಜಮಾ ಖರ್ಚು ಮಾಡಿ ಅವರ ಹತ್ತಿರ ಒಂದು ಚೆಕ್ ತೆಗೆದುಕೊಳ್ಳುತ್ತಾನೆ. ಹಾಗಾಗಿ ಇವತ್ತು ಕೃಷಿ ಕ್ಷೇತ್ರ ಬಹಳಷ್ಟು ಸಮಸ್ಯೆಯಲ್ಲಿದೆ. ಹಿಂದೆ ಮಾನ್ಯ ಕುಮಾರಸ್ವಾಮಿಯವರು ಮುಖ್ಯ ಮಂತ್ರಿಗಳಾಗಿದ್ದಾಗ ಆತ್ಮಹತ್ಯೆ ಮಾಡಿಕೊಂಡ ರೈತರ ಮನೆ ಬಾಗಿಲಿಗೆ ಹೋಗಿ ಸಾಂತ್ವನ ಹೇಳಿದ್ದಾರೆ. ಆದರೆ ತಾವು ಮುಖ್ಯಮಂತ್ರಿಗಳಾದ ಮೇಲೆ ಎಷ್ಟು ಜನ ರೈತರಿಗೆ ಸಾಂತ್ವನ ಹೇಳಿದ್ದೀರಿ? ಸಾವಯವ ಕೃಷಿ ರೈತರ ಮನೆಗೆ ಹೋಗಿರುವುದು ನಾನು ಪೇಪರ್‌ನಲ್ಲಿ ನೋಡುತ್ತಿದ್ದೇನೆ. ಯಾರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಅವರ ಮನೆಗೆ ಹೋಗಿ ಕುಳಿತುಕೊಂಡು ಅವರ

ಬಗ್ಗೆ ಚಿಂತನೆ ಮಾಡಿದ್ದರೆ ನಿಜವಾಗಿಯೂ ಅವರ ಸಮಸ್ಯೆಗಳು ಏನು ಎಂದು ನಾವು ಅರ್ಥಮಾಡಿಕೊಳ್ಳಬಹುದಾಗಿತ್ತು. ಸನ್ಮಾನ್ಯ ಕುಮಾರಸ್ವಾಮಿಯವರು ಮುಖ್ಯ ಮಂತ್ರಿಗಳಾಗಿದ್ದಾಗ ರೈತರೊಡನೆ ಸಂವಾದ ಮಾಡಿ ರೈತರು ಬಹಳಷ್ಟು ಸಂಕಷ್ಟದಲ್ಲಿದ್ದಾರೆ ಎಂದು ಹೇಳಿ 25,000 ರೂ. ಸಮಸ್ತ ರೈತರಿಗೆ ಕೊಟ್ಟು 2,500 ಕೋಟಿ ರೂ. ಖರ್ಚು ಮಾಡಿದರು. ಆಗ ಮಾನ್ಯ ಉಪ ಮುಖ್ಯ ಮಂತ್ರಿಗಳಾಗಿ ಯಡಿಯೂರಪ್ಪನವರೇ ಇದ್ದರು. ನಮಗೆ ಚೆನ್ನಾಗಿ ಗೊತ್ತಿದೆ. ಕ್ಯಾಬಿನೆಟ್‌ನಲ್ಲಿ ರೈತರಿಗೆ ಕೊಡುವ 125 ಕೋಟಿ ರೂ. ಗೆ ಮಾನ್ಯ ಕುಮಾರಸ್ವಾಮಿಯವರು ಎಷ್ಟು ಸರ್ಕಸ್ ಮಾಡಿದರು ಎಂದು ನಮಗೆ ಗೊತ್ತಿದೆ. ಅಂತಹ ನಿಟ್ಟಿನಲ್ಲಿ ನಾವು ಲೆಕ್ಕ ಹಾಕಬೇಕಾಗಿದೆ. ಯಾವ co-operative ಬ್ಯಾಂಕ್‌ನಲ್ಲಿಯೂ ರೈತರ ಕೈಗೆ ದುಡ್ಡೇ ಸಿಗುವುದಿಲ್ಲ. ಬರೀ ಜಮಾ ಖರ್ಚು ಮಾಡಿಕೊಂಡು ಖಾತಾ ಬದಲಾವಣೆ ಮಾಡಿ ರಿಪೀಟ್ ಆಗುತ್ತವೆ ವಿನ: ಅವರ ಕೈಯಲ್ಲಿ ದುಡ್ಡು ಸಿಗುವುದಿಲ್ಲ. ದುಡ್ಡು ಸಿಗುವುದಿಲ್ಲವೆಂದರೆ ಒಂದು ಪರ್ಸೆಂಟ್ ಕೊಟ್ಟರೂ ಅಷ್ಟೆ, 3% ಕೊಟ್ಟರೂ ಅಷ್ಟೆ. ನಾವು 4% ಕೊಟ್ಟಾಗಲೂ ಹೇಳಿದೆವು. 25,000 ರೂ. ಮನ್ನಾ ಮಾಡಿದಾಗ ಕೂಡ ಸಂಪೂರ್ಣ ಸಾಲ ಮನ್ನಾ ಮಾಡಬೇಕೆಂದು ಹೇಳಿದ್ದೇವೆ. ಹಾಗಾಗಿ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ರಾಜ್ಯದ ರೈತರ ಪರವಾಗಿ ಅವರ ಸಂಕಷ್ಟಗಳನ್ನು ಕಂಪ್ಲೀಟ್ ಆಗಿ ನಿವಾರಣೆ ಮಾಡಿದಾಗ ಮಾತ್ರ ಸಾಧ್ಯವಾಗುತ್ತದೆ ವಿನಃ ಇಲ್ಲದೇ ಹೋದರೆ ರೈತರಿಗೆ ಅನುಕೂಲವಾಗುವುದಿಲ್ಲ. ತಾವು ಇಡೀ ದೇಶದಲ್ಲಿ ಬ್ಯಾಂಡ್ ಬಾಜಾ ಹಾಕಿಕೊಂಡು ಕೃಷಿ ಬಜೆಟ್ ಮಂಡನೆಯನ್ನು ತಾವು ಮಾಡಿದ್ದೀರಿ. ಮುಂದೆ ಇನ್ನು ಚೆನ್ನಾಗಿ ಮಾಡಿ. ನೀವು ರಿಪ್ಲೈ ಕೊಡುವ ಸಂದರ್ಭದಲ್ಲಿ ನೀವು ಕೊಟ್ಟಿರುವ 1% ರೈತರಿಗೆ ಸಹಕಾರಿಯಾಗುವುದಿಲ್ಲ. ಅದಕ್ಕಾಗಿ ತಾವು ಸಂಪೂರ್ಣವಾಗಿ ಸಾಲ ಮನ್ನಾ ಮಾಡಿ ಮುಂದಿನ ದಿನಗಳಲ್ಲಿ ಹೊಸದಾದ ಒಂದು ಸಿಸ್ಟಮ್ ತಂದರೆ ಆಗ ರೈತರ ಜೇಬಿಗೆ ದುಡ್ಡು ಹೋಗಿ ಅವನು ಕೆಲಸ ಮಾಡುವುದಕ್ಕೆ ಒಳ್ಳೆಯ ರೀತಿಯಿಂದ ಸಹಾಯವಾಗುತ್ತದೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಅದೇ ರೀತಿಯಲ್ಲಿ ಒಬ್ಬ ರೈತ ಅವನ ಪ್ರೊಡಕ್ಷನ್ ಹೆಚ್ಚಿಗೆ ಮಾಡಬೇಕೆಂದರೆ, ಅವನಿಗೆ scientific approach ನಾವು

ಕೊಡಬೇಕಾಗುತ್ತದೆ. ನಾವು ಹಿಂದಿನ ನೀತಿಯನ್ನು ತೆಗೆದುಕೊಂಡು ಬಂದಿದ್ದೇವೆ. ನಾವು ಏನೇನು ವಿಜ್ಞಾನ ಕಂಡುಹಿಡಿದಿದ್ದೇವೆ ಅವೆಲ್ಲಾ fridge ಮತ್ತು lab ಗಳಲ್ಲಿ ಇವೆ. ಅದನ್ನು ಲ್ಯಾಂಡ್‌ವರೆಗೆ ತೆಗೆದುಕೊಂಡು ಹೋಗಬೇಕೆಂದು ನಾವು ಹೇಳಿದ್ದೇವೆ. ಹಾಗಾಗಿ ಇವತ್ತು ನಮ್ಮ ಎಲ್ಲಾ Agriculture University ಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ ಅವುಗಳನ್ನು ಭರ್ತಿ ಮಾಡಬೇಕು. ರೂರಲ್ ಸೆಕ್ಟಾರ್‌ನಲ್ಲಿ ಏನು ಅಗ್ರಿಕಲ್‌ಚರ್ ಆಫೀಸರ್ ಪೋಸ್ಟ್‌ಗಳು ಖಾಲಿ ಇವೆ ಅವುಗಳನ್ನು ಭರ್ತಿ ಮಾಡಬೇಕು. ನಮ್ಮ ನೀತಿಯಲ್ಲಿ ಒಂದು ಮಾತು ಹೇಳಿದ್ದೇವು. ಪಂಚಾಯಿತಿಗೊಂದು ಅಗ್ರಿಕಲ್ಚರ್ consultants ತೆಗೆದು ಕೊಳ್ಳಬೇಕೆಂದು ಹೇಳಿದ್ದೆವು.

ಹಿಂದೆ ಆರ್‌ಡಿಪಿಆರ್ ಇಲಾಖೆ ಮಂತ್ರಿಗಳಾಗಿ ಮೇಡಮ್ ಇದ್ದರು. ಆಗ ಅವರು ಪಂಚಾಯತ್ ಡೆವಲಪ್‌ಮೆಂಟ್ ಆಫೀಸರ್ಸ್‌ಗಳ ಹುದ್ದೆಗಳನ್ನು ನೇಮಕಾತಿ ಮಾಡುವುದಕ್ಕೆ ಮುಂಚೆ ನಾನು ಎದ್ದು ನಿಂತು ಅವರಿಗೆ ಒಂದು ಸಲಹೆಯನ್ನು ಕೊಟ್ಟೆ. ನೋಡಿ ತಾವು ಪಿ.ಡಿ.ಒ. ಗಳು ಎಂದು ಅಪಾಯಿಂಟ್ ಮಾಡುತ್ತಿದ್ದೀರಿ. ಆದರೆ ಇಂದಿನ ದಿನಗಳಲ್ಲಿ ರೂರಲ್‌ನಲ್ಲಿ ಕೆಲಸ ಮಾಡಬೇಕಾದರೆ, ರೈತರ ಜೊತೆಯಲ್ಲಿ ಸ್ವಲ್ಪ ಮಿಂಗಲ್ ಆಗಿ ಕೆಲಸ ಮಾಡಬೇಕಾದರೆ ಅದೇ ಪಿ.ಡಿ.ಒ. ಹುದ್ದೆಗಳಿಗೆ ನೀವು ಅಗ್ರಿಕಲ್ಚರ್ ಗ್ರಾಜ್ಯುಯೆಟ್ಸ್‌ಗಳನ್ನು ತೆಗೆದುಕೊಳ್ಳಿ. ಅವರು ರೈತರ ಸಂಪರ್ಕದಲ್ಲಿದ್ದು ಮತ್ತೆ ಸ್ವಲ್ಪ ಕೃಷಿ ವಿಚಾರದಲ್ಲಿ ಬದಲಾವಣೆಯಾಗತಕ್ಕಂಥ ಒಂದು ಪ್ರಯತ್ನವಾಗುತ್ತದೆ ಎಂದು ಅವತ್ತು ಹೇಳಿದೆ. ಆದರೆ ಅವತ್ತು ನೀವು ಮಾಡಲಿಲ್ಲ. ಆದರೆ ನೀವು ಅದೇ ಬಿ.ಎ., ಬಿಎಸ್ಸಿ ಪದವೀಧರರನ್ನೇ ತೆಗೆದುಕೊಂಡಿದ್ದೀರಿ. ಇವತ್ತು ಏನಾಗಿದೆ ಹೇಳಿ. ಇವತ್ತು ಆ ಒಂದು ನಿಟ್ಟಿನಲ್ಲಿ ನಾವು ರೈತರಿಗೆ ಸೈಂಟಿಫಿಕ್ ಅಪ್ರೋಚ್ ಕೊಟ್ಟು ಹೊಸ ಹೊಸ ತಳಿಗಳನ್ನು ಇಂಟ್ರಡ್ಯೂಸ್ ಮಾಡಿ ಅವರು ಉತ್ಪಾದನೆಯನ್ನು ಹೆಚ್ಚು ಮಾಡುವ ನಿಟ್ಟಿನಲ್ಲಿ ನಾವು ಪ್ರಯತ್ನವನ್ನು ಮಾಡಿದರೆ ಒಳ್ಳೆಯದಾಗುತ್ತದೆ. ಹೀಗಾಗಿ ಲ್ಯಾಬ್‌ನಲ್ಲೇನಿದೆ ಅದು ಲ್ಯಾಂಡ್‌ಗೆ ಮುಟ್ಟಬೇಕೆಂದರೆ ಆ ಆಫೀಸರ್ಸ್ ಸರಿಯಾದವರು ಇರಬೇಕಾಗುತ್ತದೆ. ಆ ಆಫೀಸರ್ಸ್‌ಗಳು ಹೇಗಿರುತ್ತಾರೆಂದು ನಾನು ಸಚಿವನಾಗಿದ್ದಾಗಲೂ ನೋಡಿದ್ದೇನೆ. ಅದಕ್ಕಾಗಿಯೇ ನಾನು ಹೇಳಿದ್ದು,

ಪಂಚಾಯತ್‌ಗೊಬ್ಬ ಅಗ್ರಿಕಲ್ಚರ್ ಆಫೀಸರ್ಸ್ ಬೇಕೆಂದು. ಬರೇ ನಾವು ರೈತರಿಗೆ ಸ್ಕೀಮ್ ಕೊಡುತ್ತೇವೆ, ಆ ಸ್ಕೀಮ್ ಕೊಡುವುದರಲ್ಲಿ ಬೆಳಗ್ಗೆಯಿಂದ ಸಂಜೆಯವರೆಗೂ ಅವರು ಬ್ಯುಸಿ ಇರುತ್ತಾರೆ. ಆ ರೈತರ ಕಟ್ಟೆ ಮೇಲೆ ಕುಳಿತು ಕೆಲಸ ಮಾಡುವಂಥ ಪ್ರಯತ್ನ ಯಾರೂ ಮಾಡುವುದಿಲ್ಲ. ಆ ಒಂದು ನಿಟ್ಟಿನಲ್ಲಿ ಇಂದು ಗಂಭೀರವಾಗಿ ಚಿಂತನೆ ಮಾಡುವಂಥ ಒಂದು ಸಬ್ಜೆಕ್ಟ್ ಇದೆಯೆಂದು ನಾನು ಹೇಳಬಯಸುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ: ಈಗ ಡಿಪ್ಲೋಮೋ ಆದವರಿಗೂ allow ಮಾಡಿದ್ದಾರೆ.

ಶ್ರೀ ಬಂಡೆಪ್ಪ ಕಾಶ್ಯೆಂಪೂರ್: ನಾನು ನೋಡಿದೆ. ಈಗ ಡಿಪ್ಲೋಮೋದವರಿಗೂ allow ಮಾಡಿದ್ದಾರೆ. ಒಳ್ಳೆಯದು. ನಾವು 2006 ರಲ್ಲಿಯೇ ಈ ರೀತಿ ಮಾಡಲು ಹೇಳಿದ್ದೆವು. ಡಿಪ್ಲೋಮೋದವರಿಗೆ ಆದಷ್ಟು ಮಟ್ಟಿಗೆ ಕೊಡಬೇಕು. ಏಕೆಂದರೆ ರೈತರ ಮಕ್ಕಳು ಎಲ್ಲಿ ಬೇಕೆಂದರಲ್ಲಿ ಚೆನ್ನಾಗಿ ಕಲಿತು ತಮ್ಮ ಜಮೀನಿನಲ್ಲಿ ಅವರುಗಳು ಕೆಲಸ ಮಾಡಿದರೆ ಸಾಕು ಎಂದು ನಾವು ಹೇಳಿದ್ದೆವು. ಹೀಗಾಗಿ ಈ ಒಂದು ನಿಟ್ಟಿನಲ್ಲಿ ಅಂದು ಹೇಳಿದರು ತೆಗೆದುಕೊಳ್ಳಲಿಲ್ಲ. ಏಕೆಂದರೆ ಈಗ ನೀವು ಮತ್ತೆ ಅಗ್ರಿಕಲ್ಚರ್ ಕನ್ಸಲ್‌ಟೆಂಟ್ಸ್ ಎಂದು ಇಡೀ ಪಂಚಾಯತಿಗೆ ತೆಗೆದುಕೊಳ್ಳಬೇಕಾದರೆ ಬಹಳ ಕಷ್ಟವಾಗುತ್ತದೆ. ಆದರೆ ಅವತ್ತು ಮಾಡಬಹುದಿತ್ತು. ಕಡೇ ಪಕ್ಷ ಶೇಕಡ 50 ರಷ್ಟು ಹುದ್ದೆಗಳಿಗೆ ನಾವು ಅಗ್ರಿಕಲ್ಚರ್ ಪದವೀಧರರನ್ನು ಅಂದು ಹಾಕಿದ್ದರೆ ಇವತ್ತು ಎಷ್ಟೋ ಜನ ರೈತರು ಇವರ ಬಳಿ ಬಂದಾಗ ಅವರ ಸಂಪರ್ಕದಲ್ಲಿ ಸಮಸ್ಯೆಗಳನ್ನು ಅವರೇ ಕ್ಲಿಯರ್ ಮಾಡಿ ರೈತರಿಗೆ ನಾಲೆಡ್ಜ್ ಕೊಡುವಂಥ ಕೆಲಸವಾಗುತ್ತಿತ್ತು ಎಂದು ನಾನು ಹೇಳಬಯಸುತ್ತೇನೆ. ಈಗ ತಾವು infrastructure ಮಾಡುತ್ತೇವೆ, ವೇರ್‌ಹೌಸ್‌ಗಳನ್ನು ಮಾಡುತ್ತೇವೆಂದು ಹೇಳಿದ್ದೀರಿ. ಆ ಬಗ್ಗೆ ಪ್ರಾಮಾಣಿಕ ಪ್ರಯತ್ನ ನಿಮ್ಮಿಂದ ಆಗಬೇಕು. ಏಕೆಂದರೆ ನಾವು ಹಿಂದೆ 5 ಕಿ.ಮೀ. ಗೆ ಒಂದು ಗೋಡೌನ್ ಇರಬೇಕೆಂದು ಹೇಳಿದ್ದೆವು. ರೈತ ಬೆಳೆದದ್ದು ಆ ಗೋಡೌನ್‌ನಲ್ಲಿಟ್ಟರೆ 50 percent of the product value ನಷ್ಟು interest free loan ಕೊಡುತ್ತೇವೆಂದು ಕೃಷಿ ನೀತಿಯಲ್ಲಿ ನಾವು ಹೇಳಿದ್ದೆವು. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಹೇಳಬೇಕು. ಏಕೆಂದರೆ ಇದು ರೈತರಿಗೆ ಸಪೋರ್ಟ್ ಆಗುತ್ತದೆ. ಇವತ್ತು ರೈತ ಬೆಳೆದ

ಬೆಳೆಗಳಿಗೆ ಒಳ್ಳೆಯ ರೀತಿಯ ಬೆಲೆ ಕೊಡಬೇಕು. ಅದಕ್ಕೆ ಫಾರ್ವ್‌ರ್ಡ್, ಬ್ಯಾಕ್‌ವರ್ಡ್, ಯಾವ ರೀತಿ ಸರ್ಕಾರ ವರ್ಕ್‌ಔಟ್ ಮಾಡುತ್ತದೆ ಅದು ಬಹಳ ಮುಖ್ಯ. ಮತ್ತೆ ಇನ್ನೂ ಒಂದು ಮುಖ್ಯವಾದ ವಿಷಯವೆಂದರೆ ಬೆಳೆ ವಿಮೆ. ನಾನು ಏಕೆ ಈ ವಿಷಯವನ್ನು ಹೇಳಿದೆನೆಂದರೆ,

ಶ್ರೀ ಟಿ.ಬಿ. ಜಯಚಂದ್ರ: ಕಾಶೆಂಪೂರ್‌ರವರೆ ಒಂದು ನಿಮಿಷ, ಮಾನ್ಯ ಉಪಾಧ್ಯಕ್ಷರೆ, demand and supply decides the price of the commodity. ಅದಕ್ಕೆ ಒಂದು ವಿಧಾನವಿದೆ. ಏಕೆಂದರೆ ಈಗ ಮಾರ್ಚ್ ತಿಂಗಳಿನಲ್ಲಿ ಮಾನ್ಸೂನ್ ಪ್ರಾರಂಭವಾಗುತ್ತದೆ. ಈ ಹಾರ್ವೆಸ್ಟ್ ಸೀಸನ್‌ಗೆ ಒಂದು ತಿಂಗಳಿಗೆ ಮುಂಚೆಯೇ ನಿಮಗೆ ಪ್ರೊಡಕ್ಷನ್ ಎಷ್ಟು ಬರುತ್ತದೆ ಎನ್ನುವ ಬಗ್ಗೆ ಅಂದಾಜು ಸಿಗುತ್ತದೆ. ಆ ಅಂದಾಜು plus or minus 10 percent ಇದ್ದೇ ಇರುತ್ತದೆ. ಎಲ್ಲಿ ಪ್ರೊಡಕ್ಷನ್ ಆಗಿ glut ಆಗತಕ್ಕಂಥ ಸಂದರ್ಭ ಬರುತ್ತದೋ ಅದನ್ನು ಹೊರಗಡೆ ರವಾನೆ ಮಾಡತಕ್ಕಂಥ ವಾತಾವರಣವನ್ನು ಮಾಡಿದರೆ ಒಳ್ಳೆಯದು. ಏಕೆಂದರೆ ಈಗ ನೀವು ಏನು ಮಾಡಿದ್ದೀರೆಂದರೆ ಈಗ Integrated Business Development Policy ಕೂಡ ಬಂದಿದೆ. ಆ ರೀತಿಯಲ್ಲಿ glut ಆದಂಥ ಮೆಟೀರಿಯಲ್‌ಗಳನ್ನು ಹೊರಗಡೆ ಕಳುಹಿಸತಕ್ಕಂಥದ್ದಕ್ಕೆ ನೀವು ಚಿಂತನೆ ಮಾಡಿದರೆ ಒಳ್ಳೆಯದು. ಇದು ಒಂದು ವಿಚಾರ. ಯಾವುದೇ ದೇಶದಲ್ಲಿ, ಇಲ್ಲಿ ಜೋಳದ ಬೆಳೆ ಚೆನ್ನಾಗಿ ಬಂತೆಂದರೆ ಉತ್ತರ ಪ್ರದೇಶದಲ್ಲಿ ಬೆಳೆ ಚೆನ್ನಾಗಿ ಬರುವುದಿಲ್ಲ. ಎಲ್ಲೋ ಒಂದು ಕಡೆಗೆ ಗ್ಯಾಪ್ ಇದ್ದೇ ಇರುತ್ತದೆ, deficiency ಇದ್ದೇ ಇರುತ್ತದೆ. ಅದರ ಬಗ್ಗೆ ನೀವು all India level figure ಇಟ್ಟುಕೊಂಡು ಏನು ಮಾಡಬಹುದು ಎಂಬ ಬಗ್ಗೆ ನೀವು ಯೋಚನೆ ಮಾಡಿ. ಅದನ್ನು ನೀವು ರವಾನೆ ಮಾಡುವುದಕ್ಕೆ ಪ್ರೈವೇಟ್ ಟ್ರೇಡರ್ಸ್‌ಗಳಿಗೆ encourage ಮಾಡಬಹುದು. You can invite people from Haryana and Punjab to come and purchase the things here. ಈ ರೀತಿಯಾಗಿ ನೀವು coordinate ಮಾಡಿದರೆ marketing surveillance ಮಾಡಿದರೆ ಬಹುಶ: ಎಂಎಸ್‌ಪಿ ಎನ್ನುವ ಪ್ರಶ್ನೆ ಬರುವುದಿಲ್ಲ, remunerative price ಯಾವಾಗಲೂ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ demand and supply ನಲ್ಲಿ ಎಷ್ಟು ಪ್ರೊಡಕ್ಷನ್ ಬರುತ್ತದೆ ಎಂಬ ಬಗ್ಗೆ ನಿಮಗೆ ಮೊದಲೇ ಅಂದಾಜು ಮಾಡುವುದಕ್ಕೆ

ಅವಕಾಶವಿದೆ. ಇದೇನೇನಾದರೂ ನೀವು ಸಿಸ್ಟಮ್ಯಾಟಿಕಲಿ ಮಾಡಿದರೆ ಅದು help ಆಗುತ್ತದೆ. ಈಗ Agriculture Commission ಮಾಡಿದ್ದೀರಿ. ಕಮಿಶನ್ ಮಾಡಿದ ಉದ್ದೇಶವೇ ಇದಾಗಿದೆ. ಆದರೆ ಆ ಕಮಿಶನ್ ಏನು ಕೆಲಸ ಮಾಡುತ್ತಿದೆಯೋ ನನಗೆ ಅರ್ಥವಾಗುತ್ತಿಲ್ಲ. ಅದನ್ನು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಮಾಡಬೇಕೆಂದು ಇರಬಹುದೇನೋ. ಈಗ ಯಾರೋ ಒಬ್ಬರನ್ನು ಮಾಡಿದ್ದೀರಿ. ನೀವು ಯಾರನ್ನೇ ಮಾಡಿ but that is the thing that you have to do. ಆ ರೀತಿ ಪ್ಲಾನಿಂಗ್ ಮಾಡಿದರೆ ಮಾತ್ರ you can solve this problem.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕಾಶ್ಯಂಪುರ್‌ರವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದರು. ಮಾನ್ಯ ಜಯಚಂದ್ರರವರು ಹೇಳಿದ ಹಾಗೆ ನಮ್ಮ all India scenario ತೆಗೆದುಕೊಂಡು demand and supply totally ಹೇಳಿದ್ದೇನೆ. ಈಗ ಎಲ್ಲಿ ಕಮಾಡಿಟೀಸ್ ಮೂವ್‌ಮೆಂಟ್ ಆಗಬೇಕಾದರೂ ಮಿನಿಮ್‌ಮ್ ಪ್ರೈಸ್ ಮತ್ತು ಮ್ಯಾಕ್ಸಿಮಮ್ ಪ್ರೈಸ್‌ಗಳನ್ನು ನಾವು ನೋಡಬೇಕಾಗುತ್ತದೆ. ಇವತ್ತು ತಾವು ಹೇಳಿದ ಹಾಗೆ ಇಲ್ಲಿ ಜೋಳ ಒಂದು ಸಾವಿರ ರೂಪಾಯಿ ಬೆಲೆ ಇದ್ದರೆ ಪಕ್ಕದ ರಾಜ್ಯದಲ್ಲಿ ಏಳುನೂರು ರೂಪಾಯಿ ಆಗುತ್ತದೆ, ಒಂದು ಸಾವಿರ ರೂಪಾಯಿಗೆ ಇಲ್ಲಿಗೆ ತಂದು ನಮಗೆ ಸಪ್ಲೈ ಮಾಡುವಂಥ ಪರಿಸ್ಥಿತಿ ಆಗುವಂಥದ್ದು, ಆದ್ದರಿಂದ ಈ ಎರಡೂ ಪ್ರೈಸಸ್‌ಗಳನ್ನು ತಾವು ಹೇಳಿದ ಹಾಗೆ ನೋಡಬೇಕಾಗುತ್ತದೆ. ಈಗಿರುವಂಥ ಪರಿಸ್ಥಿತಿಯಲ್ಲಿ, ಇವತ್ತು ತಾವು ಹೇಳಿದ ಹಾಗೆ ನಾವು minimum supporting price ಕೊಡುವಂಥದ್ದು. ಈ ದೃಷ್ಟಿಯಲ್ಲಿ ನಮ್ಮ demand and supply ಮೇಲೆ totally it is affecting on that. ಅದರ ಬಗ್ಗೆ ತಾವೇನಾದರೂ ಬೆಳಕು ಚೆಲ್ಲುತ್ತೀರೇನೋ ಎಂದು ನಾನು ತಿಳಿದುಕೊಂಡಿದ್ದೆ. ಏಕೆಂದರೆ ತಾವು integrated policy ಬಗ್ಗೆ ಹೇಳಿದರೆ. ಆ ದೃಷ್ಟಿಯಲ್ಲಿ ಈ ಪರಿಸ್ಥಿತಿ ಆಗಿರುವ ಬಗ್ಗೆ ಹೇಳಬೇಕಾಗುತ್ತದೆ. ಈಗ ಈರುಳ್ಳಿ ಬೆಲೆ 80 ರೂಪಾಯಿ ಕೂಡ ಆಯಿತು, 8 ರೂಪಾಯಿ ಕೂಡ ಆಯಿತು. Import ಮಾಡಿಕೊಂಡು export policy ಮಾಡುತ್ತೇವೆ. ಆದುದರಿಂದ ಟೋಟಲಿ ಇವೆಲ್ಲಾ ವರ್ಕ್‌ಔಟ್ ಆಗಬೇಕಲ್ಲಾ ಸಾರ್. It should affect all. As an example I am talking.

ಶ್ರೀ ಟಿ.ಬಿ. ಜಯಚಂದ್ರ: ಈಗ onion ಬೆಳೆ ಸಾಮನ್ಯವಾಗಿ ಮಾರ್ಚ್, ಏಪ್ರಿಲ್‌ನಲ್ಲಿ ಬರುತ್ತದೆ. ಬೇಸಿಗೆ ಕಾಲದಲ್ಲಿ ಸಾಮಾನ್ಯವಾಗಿ ಬೆಳೆ ಬರುತ್ತದೆ. ಕೋಲಾರದಲ್ಲಿ ಬೆಳೆಯುವ onion ಎಂದೂ ಕೆಡುವುದಿಲ್ಲ. ಅಕ್ಟೋಬರ್, ನವೆಂಬರ್ ತಿಂಗಳಿನಲ್ಲಿ onion ಬೆಳೆ ಬರತಕ್ಕಂಥದ್ದು ಉತ್ತರ ಕರ್ನಾಟಕದಲ್ಲಿ. ಈ ಕಡೆಗೆ ಬೆಳಗಾಂ ಇರಬಹುದು, ಹುಬ್ಬಳ್ಳಿ ಇರಬಹುದು ಅಥವಾ ಗದಗ್ ಇರಬಹುದು. ಆಗ ನೀವು ಏನು ಮಾಡಬೇಕೆಂದರೆ ಇಡೀ ಇಂಡಿಯಾದಲ್ಲಿ except in Maharastra ಇನ್ನೆಲ್ಲೂ ಕೂಡ ಇಲ್ಲಿ ನೀವು drying units ಹಾಕಿಲ್ಲ. ನಾನು ಹೇಳುತ್ತೇನೆ ನೀವು ಏಕೆ ಇಲ್ಲಿಯವರೆಗೂ ಇದನ್ನು ಮಾಡಿಲ್ಲ. ನಿಮಗೆ ಕೆಪೆಕ್ ಇದೆ, ಸಾಕಷ್ಟು ದುಡ್ಡು ಇದೆ, ರೈತರಿಂದ ವಸೂಲಿ ಮಾಡಿರುವ ದುಡ್ಡೇ ಇದೆ. Drying stations ಅನ್ನು ಗದಗ್‌ಗೆ ಒಂದು, ಹುಬ್ಬಳ್ಳಿಗೊಂದು ಎಲ್ಲಿ glut ಆಗುತ್ತದೋ ಅಂಥ ಸಂದರ್ಭದಲ್ಲಿ ರೈತರು ಹೋಗದೆಯೇ drying ಎಂದರೆ ತೆಗೆದುಕೊಂಡು ಹೋಗಿ ಒಂದು ಶೆಡ್‌ನಲ್ಲಿ ಹಾಕಿ ಅದನ್ನು ಡ್ರೈ ಮಾಡತಕ್ಕಂಥದ್ದು safeguard ಮಾಡತಕ್ಕಂಥದ್ದು ಅದನ್ನು ನೀವು ಮಾಡಿ. ಆ ರೀತಿಯ ಸ್ಟೋರೇಜ್‌ನ್ನು ಇಲ್ಲಿಯವರೆವಿಗೂ ಮಾಡಿಲ್ಲ. ಈ ಬಗ್ಗೆ ಪ್ರತಿ ಸಂದರ್ಭದಲ್ಲಿಯೂ ನಾನು ಸಲಹೆಗಳನ್ನು ಕೊಡುತ್ತಲೇ ಇದ್ದೇನೆ. ಆ ತರಹದ್ದನ್ನು ಮಾಡಬೇಕು. ನಿಮಗೆ ಈಗಾಗಲೇ ಎ.ಪಿ.ಎಂ.ಸಿ. ಮಾರ್ಕೆಟ್‌ನಲ್ಲಿ ಮಾಹಿತಿ ಇದೆ. All India level ನಲ್ಲಿ ಪ್ರಾಡಕ್ಟ್‌ಗಳ ಬಗ್ಗೆ ಮಾಹಿತಿ ಮತ್ತು ಅವುಗಳ ರೇಟ್ ಏನು ಇರುತ್ತದೆ ಎಂಬುದು ನಿಮಗೆ ಗೊತ್ತಾಗುತ್ತದೆ. ಟಮೋಟೋ ರೇಟ್ 3 ರೂಪಾಯಿ ಇದ್ದಾಗ ಅದನ್ನು ದೆಹಲಿಗೆ ತೆಗೆದುಕೊಂಡು ಹೋದರೆ 20 ರೂಪಾಯಿ ಬೆಲೆ ಸಿಗುತ್ತದೆ. ನಿಮಗೇನಾಗುವುದು ಕೇವಲ ಟ್ರಾನ್ಸ್‌ಪೋರ್ಟೇಶನ್ ಖರ್ಚಷ್ಟೆ. ನೀವು ಟ್ರೇಡರ್ಸ್‌ಗಳನ್ನು ಇನ್‌ವೈಟ್ ಮಾಡಬಹುದು, ಕನ್ಸೆಶನ್ ಕೊಡಬಹುದು. ಆದರೆ day to day ನೀವು market surveillance ಮಾಡಿ interact ಮಾಡಿದರೆ you can solve this problem permanently. ಆದರೆ ಆ ಸಿಸ್ಟಂ ನಮ್ಮಲ್ಲಿ ಇನ್ನೂ ಬಂದಿಲ್ಲ. ಈಗ Integrated policy ಮಾಡಿದ್ದೀರಲ್ಲ. ಆ ಪಾಲಿಸಿಯಲ್ಲಿ ಯಾವ ಕಡೆಯಿಂದ ನೀವು ನೋಡಿದರೂ ಕೂಡ ಅದೇ ಅರ್ಥ ಬರುತ್ತದೆ. ಅದಕ್ಕೆ ಯಾವುದಾದರೊಂದು ಜವಾಬ್ದಾರಿಕೆ ಕೊಡಬೇಕು. ನಮ್ಮಲ್ಲೇನಾಗಿದೆಯೆಂದರೆ ಪಾಲಿಸಿ ಪ್ರಿಂಟ್ ಮಾಡಿಕೊಟ್ಟು ಬಿಟ್ಟರೆ ಅವರ ಕೆಲಸ ಮುಗಿದುಹೋಯಿತು.

ಪಾಲಿಸಿಯನ್ನು ನಾವು ಮಾಡಿದ್ದೇವೆಂದು ಹೇಳುವುದನ್ನು ಬಿಟ್ಟರೆ ಬೇರೆ ಇನ್ನೇನೂ ಆಗುವುದಿಲ್ಲ. ಅದು ಇಂಪ್ಲಿಮೆಂಟೇಶನ್ ಆಗಬೇಕು. ಏಕೆಂದರೆ ಅಗ್ರಿಕಲ್ಚರ್‌ಗೆ ಏನು ಬೇಕಾದರೂ ಕಾಯಬಹುದು. ಆದರೆ ಕೃಷಿ ಕಾಯುವುದಿಲ್ಲ. Everyday you have to interact with that. ಆ ರೀತಿ ಮಾಡಿದರೆ ಮಾತ್ರ ಸಾಧ್ಯ.

ಉಪಾಧ್ಯಕ್ಷರು: ಮಾನ್ಯ ಜಯಚಂದ್ರರವರೆ, ನಿಮ್ಮ ಸಲಹೆ ಚೆನ್ನಾಗಿದೆ. ಅದೇ ರೀತಿ ಎಂಡೋಸಲ್ಫಾನ್ ಬಗ್ಗೆ ನೀವು ಯಾವುದೇ ಪ್ರಸ್ತಾಪ ಮಾಡಲಿಲ್ಲ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಉಪಾಧ್ಯಕ್ಷರೆ, ನೀವು ನಮಗೆ ಟೈಂ ಕೊಡಲಿಲ್ಲ. ನೀವು ಕುಳಿತುಕೊಳ್ಳಿ, ಕುಳಿತುಕೊಳ್ಳಿ ಎಂದು ನಮಗೆ ಹೇಳುತ್ತಿರುತ್ತೀರಿ. ನಾವು ಅನಿವಾರ್ಯವಾಗಿ ಆಗ ಕುಳಿತುಕೊಳ್ಳಲೇಬೇಕಾಗುತ್ತದೆ. ಈ ಎಂಡೋಸಲ್ಫಾನ್ ಎನ್ನತಕ್ಕಂಥದ್ದು ನಮ್ಮ ದಕ್ಷಿಣ ಕರ್ನಾಟಕದಲ್ಲಿ ಮಂಗಳೂರು ಮತ್ತು ಸುತ್ತಮುತ್ತ spray ಮಾಡಿ ಸಾಕಷ್ಟು ಅನಾಹುತ ಆಗಿರತಕ್ಕಂಥದ್ದು ನನಗೂ ಗೊತ್ತಿರತಕ್ಕಂಥ ವಿಷಯವಾಗಿದೆ. ಅದು ಏಕೆ? ನೋಡಿ ನಾವು ಒಂದು ವಿಷಯವನ್ನು ಅರ್ಥ ಮಾಡಿಕೊಳ್ಳಬೇಕು, All India levelನಲ್ಲಿ ಕೃಷಿ ವಿಚಾರವಾಗಿ ಸಭೆಯನ್ನು ಕರೆದಂಥ ಸಂದರ್ಭದಲ್ಲಿ ಪ್ರತಿಯೊಂದು ರಾಜ್ಯದವರು ಕೂಡ ಎಂಡೋಸಲ್ಫಾನ್ ಇರಬೇಕೆಂದು ಹೇಳುತ್ತಾರೆ. Endosolphon is not bad. I am not advocating for Endosolphon. Endosolphon is not as bad as we are thinking. ಇಲ್ಲೇನಾಗಿದೆ ಬೇರೆ ಬೇರೆಯವರೆಲ್ಲರೂ ಕೂಡ ಪ್ಲಾಂಟ್‌ಗೆ ನೇರವಾಗಿ ಅದನ್ನು ಸಿಂಪಡಣೆ ಮಾಡಿರುವುದರಿಂದ ಅಲ್ಲಿ ಯಾವುದೇ ಪ್ರಾಬ್ಲಂ ಆಗಿಲ್ಲ. ಇಲ್ಲಿ ಪ್ರಾಬ್ಲಂ ಆಗಿದ್ದು ಏನೆಂದರೆ aerial survey ಮಾಡಿದ್ದರಿಂದ. ನಾವು ಇಲ್ಲಿ ಕ್ಯಾಶಿಯೋ ಕ್ರಾಪ್‌ಗೆ ಯಾವ ಮಹಾತ್ಮ advise ಮಾಡಿದನೋ ಗೊತ್ತಿಲ್ಲ. Cashew Development Corporation aerial surve ಮಾಡಿದೆ.

Cashew Development Corporationನವರು Aerial survey ಮಾಡಿದರು. Aerial survey ಮಾಡುವುದರ ಜೊತೆಗೆ ಅದು ಕುಡಿಯುವ ನೀರಿಗೂ ಕೂಡ ಸೇರಿ ಜನ ಆ ನೀರನ್ನು ನೇರವಾಗಿ ಕುಡಿಯುವ ಪರಿಸ್ಥಿತಿಯಾಗಿ ಈ ಅನಾಹುತವಾಯಿತು. ಬಹುಶ: ಈ ಪ್ರಮಾಣದಲ್ಲಿ

ಯಾವ ರಾಜ್ಯದಲ್ಲೂ ಕೂಡ human life ಮೇಲೆ ಈ ರೀತಿಯ ಪರಿಣಾಮವಾಗಿಲ್ಲ. ಇಲ್ಲಿ ಮಾತ್ರ ಆಯಿತು. ಕೇರಳ ಮತ್ತು ಕರ್ನಾಟಕ ಬಾರ್ಡರ್‌ನಲ್ಲಿ ಆ ಊರು ಇರುವುದು. Chemical applicationನಲ್ಲಿ ಸ್ವಲ್ಪ ತಪ್ಪಾದರೂ ಕೂಡ ಏನಾಗುತ್ತದೆ ಎನ್ನುವುದಕ್ಕೆ this is the example. ನಮ್ಮ ರೈತರಿಗೆ ಏನಾಗಿದೆ ಎಂದರೆ ನಾನು ಆಗ ಮಾತನಾಡುವಾಗ ಹೇಳಿದೆನು. ನಾವು ಕೊಡತಕ್ಕಂಥ ಗೊಬ್ಬರ 75% waste ಆಗುತ್ತದೆ. 25% ಅಷ್ಟೇ rootಗೆ ಹೋಗುತ್ತದೆ. ಏಕೆಂದರೆ method of feeding the fertilizer ಗೊತ್ತಿಲ್ಲ, ನಾವು ಅದನ್ನು ಹೇಳಿಕೊಟ್ಟಿಲ್ಲ. ಆ ರೀತಿ ಸರಿಯಾಗಿ ಮಾಡಿದಾಗ ಮಾತ್ರ ನಾವು ಇದನ್ನೆಲ್ಲ solve ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈಗ ನಾವು macro level ಬಗ್ಗೆ ಮಾತನಾಡುತ್ತೇವೆ. ನಾವು micro levelಗೆ ಹೋಗಬೇಕು. Micro level ಗೆ ಹೋಗಿ ಅದನ್ನು management ಮಾಡಿದಾಗ ಮಾತ್ರ ಅದನ್ನು solve ಮಾಡುವುದಕ್ಕೆ ಆಗುತ್ತದೆ. ಎಂಡೋಸಲ್ಫಾನ್ ಈಗ ನಮ್ಮ ಕರ್ನಾಟಕ ರಾಜ್ಯದಲ್ಲಿ ಹಾಕುತ್ತಿಲ್ಲ. ಈ ಎಂಡೋಸಲ್ಫಾನ ಬಹಳಷ್ಟು crop ಮೇಲೆ ಒಳ್ಳೆಯ effect ಇದ್ದು, ಇವತ್ತು ಕೂಡ ಎಂಡೋಸಲ್ಫಾನ್ ಉಪಯೋಗ ಮಾಡುವುದು ಜಾರಿಯಲ್ಲಿದೆ ಮತ್ತು ಬಳಕೆಯಲ್ಲಿದೆ. ಅದು different phases ನಲ್ಲಿ ಬೇರೆ ಬೇರೆ ಹೆಸರಿನಲ್ಲಿ ಕೂಡ ಬರುತ್ತಿದೆ. ಆದರೆ form ಕೂಡ change ಆಗಿದೆ. ಎಂಡೋಸಲ್ಫಾನ ಬೇಡ, ಅದೇ ರೀತಿಯಾಗಿ ಬೇರೆ plantಗೆ effect ಆಗುವ ರೀತಿಯಲ್ಲಿ chemical ತರಿಸುವುದರ ಬಗ್ಗೆ ಇಲ್ಲಿ ಕುಳಿತುಕೊಂಡು ಇಲಾಖೆಯವರು ಚರ್ಚೆ ಮಾಡಿ ಅದನ್ನು ಮಾಡುವುದಕ್ಕೆ ಸಾಧ್ಯವಿದೆ. ನಾನು ಕುಮಾರಿ ಶೋಭಾ ಕರಂದ್ಲಾಜೆಯವರ ವಾದವನ್ನು ಒಪ್ಪುತ್ತೇನೆ. Yes,. it has created a problem. Chief Minister ಕೂಡ ಮಾಡಿದ್ದಾರೆ. ಅವತ್ತು ಅನಾಹುತವಾಗಿದೆ, ಆದರೆ ಅದು ಒಂದು management ನಲ್ಲಿ ಆಗಿರುವುದು. ನಾವು ಯಾರಿಗೂ ಹೇಳಲಿಲ್ಲ, ಕೇರಳದಲ್ಲಿ aerial survey ಮಾಡಿದರು, ನಾವೂ ಮಾಡಿದೆವು. Cashew Development Corporation ಮಾಡಿದಂತಹ ಒಂದು ತಪ್ಪಿನಿಂದ ಇವತ್ತು ಇಷ್ಟು ತೊಂದರೆಯಾಗಿದೆ. ಇವತ್ತು ಯಾವುದೇ ರಾಜ್ಯಕ್ಕೆ ಹೋದರೂ ಕೂಡ ಎಂಡೋಸಲ್ಫಾನ್ ಬೇಕು ಎಂದು ಹೇಳುತ್ತಾರೆ. ಏಕೆಂದರೆ monoprotopause and endosulphan ಪ್ರತಿಯೊಂದು insects ಕೊಲ್ಲುವುದಕ್ಕೆ ಬೇಕೇ ಬೇಕಾಗುತ್ತದೆ. ಅದು ಒಂದು ರೀತಿ ಸರ್ವರೋಗ

ನಿವಾರಣೆಗೆ ಮದ್ದು ಇರುವ ಹಾಗೆ ಇದೆ. ಆದರೆ ಅಂದು ನಮ್ಮಲ್ಲಿ ತಪ್ಪಾಗಿದ್ದರಿಂದ ಏನಾಗಿದೆಯೆಂದರೆ ಅದರ ಮೇಲೆ ದೊಡ್ಡ ಗೂಬೆ ಕುಳಿತಿದೆ. ಅದನ್ನು ಸರಿಪಡಿಸುವುದಕ್ಕೆ ಬೇರೆ formನಲ್ಲಿ ಮಾಡಬೇಕು. ಆಮೇಲೆ ನಾವು ಯಾವುದೇ ಕಾರಣಕ್ಕೂ ಕೂಡ Cashew Developmentಗೆ aerial surveyಗೆ ಅವಕಾಶ ಕೊಡಬಾರದು. Chemicalಗೆ ಆಗಲಿ, ಕುಡಿಯುವ ನೀರಿಗಾಗಲಿ ಇನ್ನೊಂದು ಕಡೆಗೆಗಾಗಲಿ ಅದರ contact ಬರದ ರೀತಿಯಲ್ಲಿ ಮಾಡಿದರೆ ಮಾತ್ರ 100% success ಆಗುತ್ತದೆ. ಆದರೆ ಈಗಾಗಲೇ ಅಲ್ಲಿ problem ಆಗಿರುವುದನ್ನು ಅವರು ಸಾಯುವವರೆಗೂ ನಾವು ನೋಡಲೇಬೇಕು, ಏನೂ ಮಾಡುವುದಕ್ಕಾಗುವುದಿಲ್ಲ, ಆ ಪರಿಸ್ಥಿತಿಗೆ ಹೋಗಿದೆ. ಆದರೆ ನಾವು ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕು. ನಾನು ಎಂಡೋಸಲ್ಫಾನ್ ಬಗ್ಗೆ ಎಲ್ಲಾ ಕಡೆ ನೋಡುತ್ತಿರುತ್ತೇನೆ. ಎಲ್ಲಿಯೂ ಕೂಡ ಈ ರೀತಿಯಾದಂತಹ ಸಲಹೆಗಳನ್ನು ಕೊಟ್ಟು ಮಿನಿಮೈಜ್ ಮಾಡುವುದಕ್ಕೆ ಚಿಂತನೆ ಮಾಡಿದ್ದನ್ನು ನೋಡಲೇ ಇಲ್ಲ. ಇದು ಏನಾಗುತ್ತದೆ ಎಂದರೆ ಒಂದು ಪತ್ರಿಕೆಯಲ್ಲಿ ಹೇಳಿಕೆ ಬರುತ್ತದೆ, ಅಲ್ಲಿಗೆ ನಿಂತು ಹೋಗುತ್ತದೆ. ಮಾನ್ಯ ಸುರೇಶ್ ಕುಮಾರ್‌ರವರೇ, ನಾನು ಹೇಳುತ್ತೇನೆ ನಮ್ಮ ಇಲಾಖೆಯಲ್ಲಿ ಏನಾಗಿದೆ ಎಂದರೆ totally bureaucrat, totally compartmentalize. ಈ ಕೃಷಿ ಬಜೆಟ್ ಎಂದು ನಾನು ಕರೆಯದಿದ್ದರೂ ಕೂಡ ಆ compartment ತೆಗೆದುಹಾಕಿ ಒಂದು ಕಡೆ ತರುವುದಕ್ಕೆ ಪ್ರಯತ್ನ ಪಡುತ್ತಿದ್ದೆನು. That was my idea, you are doing it. But I donot call it has Budget. ಹಾಗೆ ಕರೆಯದಿದ್ದರೂ ಕೂಡ compartmental ತೆಗೆಯುವಂತಹ ಪ್ರಯತ್ನ ಆಗುತ್ತದೆ. Atleast ಅಷ್ಟಾದರೂ ಕೂಡ it is greater.

ಶ್ರೀ ಬಂಡೆಪ್ಪ ಕಾಶೆಂಪೂರ್: ಮಾನ್ಯ ಬಚ್ಚೇಗೌಡರು ಬಹಳ ಮುಖ್ಯವಾದ ವಿಷಯವನ್ನು ಕೇಳಿದರು. ಏಕೆಂದರೆ support price ಏನಿದೆ, ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿ ಆಗಿದ್ದಾಗ 14ನೇ ಜೂನ್ 2007ರಲ್ಲಿ ರೈತರ ಸಂವಾದ ಕಾರ್ಯಕ್ರಮ ಮಾಡಿದ್ದರು. ಆಗ ತುಂಬಾ ಸಲಹೆಗಳು ಬಂದಿದ್ದವು. ಅದೇ ಆಧಾರದ ಮೇಲೆ ನಾವು ಕೃಷಿ ನೀತಿ ಅಲ್ಲದೆ ಇನ್ನು ಹೆಚ್ಚಿನ ಪ್ರಮಾಣದಲ್ಲಿ ರೈತರಿಗೆ ಅನುಕೂಲ ಆಗುವ ರೀತಿಯಲ್ಲಿ improving the economic condition of the farmers ಎಂದು ಹೇಳಿ, ಅಧಿಕಾರಿಗಳ ಒಂದು ಕಮಿಟಿ ಮಾಡಿ ಸುಮಾರು 13 Principal

Secretaries, concerned to the agriculture department, ಸುಮಾರು 56 ಜನ Commissioners, University Vice-Chancellor, Finance Department Secretaryಯವರಾದ ಮಾನ್ಯ ಶ್ರೀನಿವಾಸ ಮೂರ್ತಿಯವರು ಇದರ ಚೇರ್‌ಮನ್ ಆಗಿದ್ದರು, ಇವರೆಲ್ಲರೂ ಒಳಗೊಂಡಂತೆ ಇದರ ಬಗ್ಗೆ 15 ದಿವಸದಲ್ಲಿ ಎರಡು ಮೀಟಿಂಗ್ ಮಾಡಿ, ಇದರ ಬಗ್ಗೆ ಒಂದು ಸಮಗ್ರವಾದ ರಿಪೋರ್ಟ್ ಕೂಡ ತಯಾರು ಮಾಡಿ ಕೊಟ್ಟಿದ್ದಾರೆ. ಇದರಲ್ಲಿ ಏನಿದೆ ಎಂದರೆ; ಐದು ವರ್ಷದಲ್ಲಿ ಸುಮಾರು 7,000 ಕೋಟಿ ರೂಪಾಯಿಗಳಲ್ಲಿ farmers' condition improve ಮಾಡುವುದಕ್ಕೆ ಏನೇನು ಮಾಡಬೇಕೆಂದು ಹೇಳಿದ್ದಾರೆ. ರೈತರ ಸಂವಾದದಲ್ಲಿ support price ಬಗ್ಗೆ ಒಂದು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಅದರಲ್ಲಿ ಹೇಳಿದ್ದಾರೆ, minimum support price of the crops have to be announced prior to sowing of the crop. ಈಗ ಕಬ್ಬು ಬೆಳೆಯುತ್ತಾರೆ ಎಂದಾಗ ಅದಕ್ಕೆ 2,000 ರೂಪಾಯಿ ಕೊಡುತ್ತೇವೆಂದು ಮೊದಲೇ ಹೇಳಿದರೆ, ಯಾರಿಗೆ ಬೇಕು ಅವರು 2,000 ರೂಪಾಯಿಗೆ ಸೀಮಿತವಾಗಿ ಬೆಳೆಯುತ್ತಾರೆ. 4,000 ರೂಪಾಯಿ ಅವರ ತಲೆಯಲ್ಲಿರುವುದಿಲ್ಲ. ಇದರಲ್ಲಿ ಕೇಂದ್ರ ಸರ್ಕಾರ strict ಆಗಿ ಮಾಡಬೇಕಾಗುತ್ತದೆ. ಏಕೆಂದರೆ ತಾವು ಹೇಳಿದ ಹಾಗೆ ಬೇರೆ ರಾಜ್ಯಗಳಲ್ಲಿ ಬೆಲೆ ಹೆಚ್ಚಿಗೆ ಇತ್ತು ಎಂದರೆ ನಮ್ಮ ರಾಜ್ಯದವರು ಅಲ್ಲಿಗೆ ತೆಗೆದುಕೊಂಡು ಹೋಗುತ್ತಾರೆ. ಹಾಗಾಗಿ ಇದೊಂದು equal ಆಗಿ ತೆಗೆದುಕೊಂಡು ಬರುವ ನಿಟ್ಟಿನಲ್ಲಿ ಸಮಗ್ರವಾಗಿ ಇಬ್ಬರೂ ಚಿಂತನೆ ಮಾಡಬೇಕು, ಆದರೆ ಅವರು ಚಿಂತನೆ ಮಾಡಲಿಲ್ಲ. ಆದರೆ ನಾವು ನಮ್ಮ ರಾಜ್ಯದ ರೈತರ ಹಿತವನ್ನು ಕಾಪಾಡಬೇಕಲ್ಲವೇ? ನಮ್ಮದೇ ಆದಂತಹ APMC strict ಆಗಿ, remunerative prices, minimum support price ಕೇಂದ್ರ ಸರ್ಕಾರ ಏನು ಕೊಡುತ್ತದೆ ಅದರ ಬಗ್ಗೆ ತಲೆ ಕೆಡಿಸಿಕೊಳ್ಳುವುದು ಬೇಡ. ಅದರ ಮೇಲೆ ನಮ್ಮದೇ ಆದಂತಹ ಒಂದು ಕಮಿಟಿ ಮಾಡಿ, ಅವರು ಏನು ಬೆಳೆಯುತ್ತಾರೆ, minimum support price for crops to be decided scientifically, based on cost of production of the crops. ಅವರು ಅದರಲ್ಲಿ ಎಷ್ಟು ದುಡಿಯುತ್ತಾರೆ, ಎಷ್ಟು ಬಂಡವಾಳ ಹಾಕುತ್ತಾರೆ, ಅದರ ಮೇಲೆ ಅವನಿಗೆ ಎಷ್ಟು ಲಾಭ ಸಿಗಬೇಕು ಎನ್ನುವುದರ ಬಗ್ಗೆ scientifically calculation ಮಾಡಿ ನಾವು ಇಂತಿಷ್ಟು ಬೆಲೆ

ಕೊಡುತ್ತೇವೆಂದು ರಾಜ್ಯ ಸರ್ಕಾರ ನಿಗದಿ ಮಾಡಬೇಕು. ಮಾನ್ಯ ಬಚ್ಚೇಗೌಡರೇ ನಮ್ಮ ನೀತಿಯನ್ನು ತಂದಾಗ ನಾವು ಮಾಡಿದ್ದೇವೆ. ತಾಲ್ಲೂಕಿಗೆ ಒಂದು agriculture plan ನಾವು ಮಾಡಿದ್ದೇವೆ. ಆ ತಾಲ್ಲೂಕಿನಲ್ಲಿ agriculture products, ಯಾವ್ಯಾವ crops ಎಷ್ಟೆಷ್ಟು ಬೆಳೆಯುತ್ತಾರೆ ಎಂಬುದನ್ನು forecast ಮಾಡಿ ನಮಗೆ ಹೇಳಬೇಕು. ನಮ್ಮ ಕೈಗಾರಿಕಾ ಸಚಿವರಾದ ಮುರುಗೇಶ್ ನಿರಾಣಿ ಕೂಡ ಕುಳಿತಿದ್ದಾರೆ. ನಿರಾಣಿಯವರೇ ರೈತರು ಬೆಳೆದ ಬೆಳೆಗೆ APMC ಗಿಂತ ಹೆಚ್ಚಿಗೆ ನಿಮ್ಮ rural based industries, value addition ಬಗ್ಗೆ ನೀವು ಹಲವಾರು ಬಾರಿ ಅವರ ಜೊತೆಯಲ್ಲಿ ಕುಳಿತಾಗ ನಾನು ಹೇಳುತ್ತಿರುತ್ತೇನೆ. ನಾವು general industriesಗೆ ಎಷ್ಟು subsidy ಕೊಡುತ್ತೇವೆನ್ನುವುದು ಮುಖ್ಯ ಅಲ್ಲ. ನಾವು ಹೊರಗಡೆ 25 % ಸಬ್ಸಿಡಿ ಕೊಟ್ಟರೆ ಬೇಕಾದರೆ village levelನಲ್ಲಿ 50% ಸಬ್ಸಿಡಿ ಕೊಟ್ಟು ಅಲ್ಲಿಯೇ encourage ಮಾಡೋಣ. ಒಂದು ಊರಿನಲ್ಲಿ tomato ಬೆಳೆಯುತ್ತಾನೆ ಎಂದರೆ ಆ ಊರಿನಲ್ಲಿ ketchup ಮಾಡುವ ಒಂದು industry ಬಂತೆಂದರೆ value ಅಲ್ಲಿಯೇ add ಆಗುತ್ತದೆ, transportation ಅವನಿಗೆ ಉಳಿಯುತ್ತದೆ. ನಿಮ್ಮ ಸರ್ಕಾರಕ್ಕೂ ಅದರಿಂದ revenue ಬರುತ್ತದೆ. ಹಾಗಾಗಿ ಇದರ ಬಗ್ಗೆ ಒಂದು ಸಮಗ್ರ ನೀತಿ ಮಾಡುವಂತಹ ಪ್ರಯತ್ನವನ್ನು ಮಾಡಬೇಕು. ಆಗ ಈ support priceಗೆ ಒಂದು ಒಳ್ಳೆಯ ರೀತಿಯಲ್ಲಿ ಬೆಂಬಲ ಸಿಗುತ್ತದೆ.

ಶ್ರೀ ಮುರುಗೇಶ್ ಆರ್. ನಿರಾಣಿ: ಮಾನ್ಯ ಅಧ್ಯಕ್ಷರೇ, ನಮ್ಮ ಸ್ನೇಹಿತರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಅವರಿಗೆ ಕೃಷಿ ಮಂತ್ರಿಯಾಗಿ ಕೆಲಸ ಮಾಡುವಂತಹ ಅವಕಾಶ ಸಿಕ್ಕಿತ್ತು. ಮಾನ್ಯ ಮುಖ್ಯಮಂತ್ರಿಗಳು ದೇಶದ ಇತಿಹಾಸದಲ್ಲಿ ಮೊಟ್ಟಮೊದಲಿಗೆ ಕೃಷಿ ನೀತಿಯನ್ನು ಜಾರಿಗೆ ತಂದು ಕೃಷಿ ಬಜೆಟ್‌ನ್ನು ಮಂಡನೆ ಮಾಡಿ ಇಡೀ ದೇಶದ ಎಲ್ಲಾ ರೈತರ ಪ್ರೀತಿಗೆ ಪಾತ್ರರಾಗಿದ್ದು, ಪ್ರತಿಯೊಬ್ಬರೂ ಕೂಡ ಪ್ರಶಂಸೆಯನ್ನು ಮಾಡುತ್ತಿದ್ದಾರೆ. ಮಾನ್ಯ ಬಂಡೆಪ್ಪ ಕಾಶೆಂಪೂರ್‌ರವರು ಮಂತ್ರಿಗಳಾಗಿದ್ದಾಗ ಕೂಡ ಇದೇ ಕೆಲಸವನ್ನು ಅಂದು ಮಾಡಬಹುದಾಗಿತ್ತು. ಅವರು ಬೆಂಬಲ ಬೆಲೆ ಬಗ್ಗೆ ಹೇಳಿದರು. ಇವತ್ತು ರಾಜ್ಯದ ಐದು ಪ್ರಮುಖ ಬೆಳೆಗಳಾದ ಬಿಳಿಜೋಳ, ತೊಗರಿ, ಭತ್ತ ಗೋವಿನಜೋಳ ಇತ್ಯಾದಿಗಳಿಗೆ ಬೆಂಬಲ ಬೆಲೆಗಳನ್ನು ನಾವು ಈ ವರ್ಷ announce ಮಾಡುತ್ತಿದ್ದೇವೆ. ಅಲ್ಲದೆ ರೈತರು ತೆಗೆದುಕೊಳ್ಳುವ

ಸಾಲಕ್ಕೆ ಒಂದು ಪರ್ಸೆಂಟ್ ಬಡ್ಡಿ ದರದಲ್ಲಿ ಸಾಲ ಕೊಡುವುದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾರೆ. ಹಿಂದಿನ ಸರ್ಕಾರ ಇದ್ದಾಗ ಮಾನ್ಯ ಮುಖ್ಯಮಂತ್ರಿಗಳು ಹಣಕಾಸಿನ ಸಚಿವರಾಗಿದ್ದಾಗ 3–4% ಬಡ್ಡಿ ದರದಲ್ಲಿ ಸಾಲ ಕೊಡುವಂತಹ ವ್ಯವಸ್ಥೆಯನ್ನು ಮಾಡಿದರು. ಆದರೆ ನೀವು ವಿಶೇಷವಾಗಿ ಮಂತ್ರಿಗಳಿದ್ದಾಗ ಇಡೀ ದೇಶದಲ್ಲಿ ಬೇರೆ ರಾಜ್ಯಗಳು ಮಾಡದಿರುವಂತಹ ಕೆಲಸವನ್ನು ನಾನು ಮಾಡಿದೆ, ನಮ್ಮ ಸರ್ಕಾರ ಈ ಕೆಲಸವನ್ನು ಮಾಡಿತು ಎನ್ನುವುದನ್ನು ಹೇಳಬೇಕು. ಹೇಳುವುದು ಬಹಳ ಸರಳ.

ಉಪಾಧ್ಯಕ್ಷರು: ಮಾನ್ಯ ಸಚಿವರೇ, Food processing industries ಬಗ್ಗೆ ಏನು ಯೋಚನೆ ಮಾಡಿದ್ದೀರಿ?

ಶ್ರೀ ಟಿ.ಬಿ ಜಯಚಂದ್ರ: ಮಾನ್ಯ ಉಪಾಧ್ಯಕ್ಷರೇ, ನಾನು ಹೇಳಬೇಕೆಂದು ಇದ್ದೆ. ಅವರು ಮಾಡಲಿಲ್ಲವೆಂದು ನೀವು ಅಲ್ಲಿ ಬಂದು ಕುಳಿತಿದ್ದೀರಿ. National level ನಲ್ಲಿ industries investment ಆಯಿತು. ಈಗ food processing investment ಮಾಡಬೇಕೆಂದು ಹೊರಟಿದ್ದೀರಿ. ಅದನ್ನು ಮಾಡಿ that is important, ನಾನು ಮಾಡುವುದನ್ನು ಬೇಡ ಎಂದು ಹೇಳುವುದಿಲ್ಲ. ಆದರೆ ಈಗಾಗಲೇ ನಮ್ಮ ರಾಜ್ಯದಲ್ಲಿ ನಾಲ್ಕು Food parks ಮಂಜೂರು ಆಗಿ ಹತ್ತು ವರ್ಷವಾಯಿತು. ಒಂದು ಹೊಸಕೋಟೆಯಲ್ಲಿ, ಜೇವರ್ಗಿ, ಹಿರಿಯೂರು ಇನ್ನೊಂದು ಎಲ್ಲೋ ಆಗಿದ್ದು, ಒಟ್ಟು ನಾಲ್ಕು ಅಥವಾ ಏಳೋ food park ಆಗಿವೆ.

ಅವರು ಐದೈದು ಕೋಟಿ ರೂ.ಗಳನ್ನು ತೆಗೆದುಕೊಂಡಿದ್ದಾರೆ. ಇವತ್ತಿನವರೆಗೂ Food processing park ಗಳು ಪ್ರಾರಂಭವಾಗಿಲ್ಲ. ಇಲ್ಲಿಗೆ Industrialist ಗಳು ಏಕೆ ಬರುತ್ತಾರೆಂದರೆ, industries ನವರೆಂದರೆ ತಾವು ಬೇಸರ ಮಾಡಿಕೊಳ್ಳಬೇಡಿ. ಅವರು ಇಲ್ಲಿ land ಸಿಗುತ್ತದೆಂದು ಬರುತ್ತಾರೆ. ಹೊಸಕೋಟೆಯಲ್ಲಿ 120 ಎಕರೆ ಜಮೀನು @ 10 lakh, ಈ 120 ಎಕರೆ ಜಮೀನನ್ನು ಕೊಟ್ಟರು. ಇವತ್ತು ಒಂದು ಎಕರೆಗೆ 5 ಕೋಟಿ ರೂ.ಗಳಿದೆ. ಇವತ್ತಿನವರೆಗೂ ಅವರು ಒಂದೇ ಒಂದು indutry ಯನ್ನು start ಮಾಡಿಲ್ಲ. ಹೈದರಬಾದ್‌ನಲ್ಲಿ ಒಂದು industry ಇದೆ, ancillary unit ಹಾಕಿಕೊಂಡು ನಡೆಸುತ್ತಿದ್ದಾನೆ. ತಾವು ನಿನ್ನೆ ಯಾರು ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದಿಲ್ಲ, ಆ ಜಮೀನು ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ತಾವು ನಿಜವಾಗಿಯೂ ಕೂಡ If you are really enough effective

minister ಈ ನಾಲ್ಕು Food parkಗಳನ್ನು ಯಾರ್ಯಾರು ಮಾಡದೇ ಇರುವವರ ಜಮೀನುಗಳನ್ನು ವಾಪಸ್ಸು ತೆಗೆದುಕೊಳ್ಳಿ ನೋಡೋಣ.

ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ: ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಆದಿಕೇಶವಲು ಎನ್ನುವವರಿಗೆ ನಾಲ್ಕು Food parkಗಳನ್ನು ಮಾಡಲು ಕೇಂದ್ರ ಸರ್ಕಾರದಿಂದ ಅನುಮತಿ ಕೊಡಲಾಗಿತ್ತು. ಈಗಾಗಲೇ 4 ರಿಂದ 5 ಕೋಟಿ ರೂ.ಗಳನ್ನು ಅವರು ಸಬ್ಸಿಡಿ ರಿಯಾಯಿತಿ ದರದಲ್ಲಿ ಕೊಟ್ಟಿರುವಂಥದ್ದನ್ನು ತೆಗೆದುಕೊಂಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ಬಾಗಲಕೋಟೆ ಜಿಲ್ಲೆಯ ನವನಗರದಲ್ಲಿ ಅತ್ಯಂತ ಬೆಲೆ ಬಾಳುವಂಥ ಭೂಮಿಯನ್ನು ಪ್ರತಿ ಎಕರೆಗೆ ಒಂದು ಲಕ್ಷ ರೂ.ಗಳಂತೆ ನಾವು ಕೊಟ್ಟಿದ್ದೇವೆ. ಅದರಲ್ಲಿ 10% ಕೂಡ construction ಮಾಡಿಲ್ಲ. ನಾನು ಅವರಿಗೆ ಎರಡು ಬಾರಿ notice ಕೊಟ್ಟಿದ್ದೇನೆ. ಅಲ್ಲಿ ಏನಾಗಿದೆಯೆಂದರೆ ನೂರು ಎಕರೆ ಜಮೀನು ಮೇಲೆ ತೆಗೆದುಕೊಂಡಿರುವ ಸಾಲವನ್ನು entire ಅದರ ಮೇಲೆ ಭೋಗ್ಯ ಮಾಡಿದ್ದಾರೆ. ಅವರಿಗೆ ಮತ್ತೊಂದು revised ಆಗಿ ಕೊಡಬೇಕೆಂದು ನಾನು ಕೇಂದ್ರ ಸರ್ಕಾರದಲ್ಲಿ ಸುಬೋಧ್ ಕಾಂತ್ ಸಾಹಿ ಹಿಂದಿನ Food Processing Minister ಇದ್ದರು. ಈಗ ಅವರು Tourism Minister ಆಗಿದ್ದಾರೆ. ಅವರು ಬಂದಾಗ ನಾನು ಮತ್ತು ನಮ್ಮ Principal Secretary ಬಳಿಗಾರ್‌ರವರು ಮತ್ತು Commissioner ಡಾ:ಕತ್ರಿಯವರು ಹೋಗಿ ಕನಿಷ್ಟ 5–6 ಗಂಟೆಗಳ ಕಾಲ ಚರ್ಚೆ ಮಾಡಿದ್ದೇವೆ. Principal Secretary ಮೋಹನ್ ಎಂಬುವವರು ಕೇಂದ್ರ ಸರ್ಕಾರದಲ್ಲಿದ್ದಾರೆ. ಅವರು ಬಂದಾಗ ಇದೊಂದು ಬಾರಿ ಅವರಿಗೆ revise ಮಾಡಿ ಕೊಡೋಣವೆಂದು ಹೇಳಿದರು. ಅವರಿಗೆ notice ಕೊಟ್ಟದ್ದಕ್ಕೆ ಅಲ್ಲಿಗೆ ಹೋಗಿದ್ದರು. ಆಗ ಆದಿಕೇಶವಲು ಅವರನ್ನು ಕರೆಸಿದ್ದರು. ಇವರೊಡನೆ group discussion ಮಾಡಿದಾಗ ಮಾರ್ಚ್ 31ನೇ ತಾರೀಖಿನವರೆಗೂ ಸಮಯವನ್ನು ವಿಸ್ತರಣೆ ಮಾಡಿಕೊಟ್ಟಿದ್ದಾರೆ. ಈ ಏಪ್ರಿಲ್ 1ನೇ ತಾರೀಖಿನವರೆಗೆ ಯಾರ್ಯಾರು Food Processingಗೆ ರಾಜ್ಯ ಸರ್ಕಾರದಿಂದ ಮತ್ತು ಕೇಂದ್ರಸರ್ಕಾರದಿಂದ ಇಷ್ಟೆಲ್ಲಾ ಸವಲತ್ತುಗಳನ್ನು ಕೊಟ್ಟರೂ ಸಹಿತ ಅವರು ಕೈಗಾರಿಕೆಗಳನ್ನು ಸ್ಥಾಪನೆ ಮಾಡದೇ ಹಾಗೆ ಇಟ್ಟುಕೊಂಡಿರುವಂಥವವರು ನಿರ್ದಾಕ್ಷಿಣ್ಯವಾಗಿ ಜಮೀನುಗಳನ್ನು ವಾಪಸ್ಸು ಮಾಡುವಂತೆ ಈಗಾಗಲೇ notice ಅನ್ನು ಕೊಟ್ಟಿದ್ದೇವೆ. ಮುಂದಿನ ತಿಂಗಳು

ಆ date ಮುಗಿಯುತ್ತದೆ. ಅದನ್ನು ನಾವು ವಾಪಸ್ಸು ತೆಗೆದುಕೊಳ್ಳುತ್ತಿದ್ದೇವೆ. ಎರಡನೆಯದಾಗಿ, ತಾವು ನಿನ್ನೆ ಪತ್ರಿಕೆಯನ್ನು ಗಮನಿಸಿರಬಹುದು. ತಾವು ಕೇಳಿದ ಪ್ರಶ್ನೆಗೆ ಉತ್ತರ ಇದೆ. ಈಗ ಒಟ್ಟು ಇಲ್ಲಿಯವರೆಗೆ ಅಂದಾಜು ಸುಮಾರು 75,000 ಎಕರೆಯಷ್ಟು KIADB act ಬಂದಮೇಲೆ ನಾವು land acquisition ಮಾಡಿಕೊಂಡು ಅಂದಾಜು 71,000 ಎಕರೆಯಷ್ಟು allotment ಮಾಡಿದ್ದೇವೆ. ನಾವು acquisition ಮಾಡಿಕೊಂಡಿರುವಂಥದ್ದರಲ್ಲಿ ನಮ್ಮ ಅಂದಾಜು ಇನ್ನೂ 3,000 ದಿಂದ 4,000 ಎಕರೆಯಷ್ಟು ಜಮೀನು ನಮ್ಮ ಹತ್ತಿರ ರೆಡಿ ಇದೆ. ನಾವು allotment ಮಾಡಿರುವುದರಲ್ಲಿ ಕನಿಷ್ಟ ಇನ್ನು 18% ನಿಂದ 20%ನಷ್ಟು ಕೈಗಾರಿಕೆಗಳು ಪ್ರಾರಂಭವಾಗದೇ ಇರುವಂಥದ್ದು ನಮ್ಮ ಹತ್ತಿರ ಇದೆ. ಮೊದಲನೆಯದಾಗಿ ಬೆಂಗಳೂರಿನಲ್ಲಿರುವಂಥವರಿಗೆ notice ಜಾರಿ ಮಾಡಿದ್ದೇವೆ. ಅದರಲ್ಲಿ ಅಂದಾಜು 480 ಎಕರೆ ಒಳ್ಳೆಯ costly land ನಲ್ಲಿರುವಂಥದ್ದನ್ನು ನಾವು ವಾಪಸ್ಸು ತೆಗೆದುಕೊಂಡಿದ್ದೇವೆ. ಅದನ್ನು ಇವತ್ತಿನ ಬೆಲೆಗೆ ಯಾರು ಜರೂರಾಗಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ಕೆಲಸಕ್ಕೆ ಮುಂದೆ ಬರುತ್ತಿದ್ದಾರೆ. ಅವರಿಗೆ 2 ವರ್ಷಗಳ ಅವಧಿಯನ್ನು ಕೊಟ್ಟು ಹೊಸದಾಗಿ re–allotment ಮಾಡುತ್ತಿದ್ದೇವೆ. ಎರಡನೆಯದಾಗಿ, tire II city ಅದು ಮೈಸೂರು, ಮಂಗಳೂರು, ಬೆಳಗಾಂ, ಗುಲಬರ್ಗಾ, ಹುಬ್ಬಳ್ಳಿ, ಈ cityಗಳಲ್ಲಿ notice ಅನ್ನು ಜಾರಿ ಮಾಡಿದ್ದೇವೆ. ನಾವು notice ಕೊಟ್ಟ ತಕ್ಷಣ ಅವರು serious ಆಗಿ ಕೈಗಾರಿಕೆಗಳನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಇದೇ ರೀತಿಯಾಗಿ ಗ್ರಾಮೀಣ ಪ್ರದೇಶಗಳಲ್ಲಿ tire II ನಲ್ಲಿರುವಂಥವರಿಗೆ ಅಲ್ಲಿ ಯಾವುದೇ ರೀತಿಯಲ್ಲಿ ಕೈಗಾರಿಕೆಗಳು ಬರುವುದಿಲ್ಲವೆಂಬುದು ಅವರ ಗಮನಕ್ಕೆ ಬರಲಿ ಎನ್ನುವ ದೃಷ್ಟಿಯಿಂದ notice ಅನ್ನು issue ಮಾಡಿದ್ದೇವೆ. ಇದರಿಂದ ಅವರು ಎಚ್ಚೆತ್ತುಕೊಂಡರೂ ಸಹಿತ ಅವರು more than 50% ಕೆಲಸ ಮಾಡುತ್ತಿದ್ದಾರೆ. ಯಾವುದೇ ಕಾರಣಕ್ಕೂ ಸಹಿತ ನಾವು allotment ಮಾಡಿರುವಂಥ land ನಲ್ಲಿ ಕೈಗಾರಿಕೆಯನ್ನು ಪ್ರಾರಂಭ ಮಾಡದೇ ಇದ್ದರೆ, ಎರಡು ವರ್ಷಗಳಲ್ಲಿ ನಿರ್ದಾಕ್ಷಿಣ್ಯವಾಗಿ land ಅನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ. ನಾವು effective step ತೆಗೆದುಕೊಂಡು ಯಾವುದಾದರೂ ಸ್ವಲ್ಪ incomplete ಆಗಿರುವಂಥದ್ದು, ಅವರಿಗೆ Bank loan ಸಿಗದೇ ಇರಬಹುದು, ಅಥವಾ ಬೇರೆ ಬೇರೆ ಕಾರಣಗಳಿಂದ in complete ಆಗಿದ್ದರೆ,

ಅವರಿಗೆ ಮತ್ತೆ time ಒಂದು ವರ್ಷ, ಎರಡು ವರ್ಷ, ಸಂದರ್ಭ ನೋಡಿಕೊಂಡು ವಿಸ್ತರಣೆ ಮಾಡಿ ಕೊಡುವ ಕೆಲಸವನ್ನು ಮಾಡುತ್ತಿದ್ದೇವೆ.

ಶ್ರೀ ಬಂಡೆಪ್ಪ ಕಾಶಂಪೂರ್: ಮಾನ್ಯ ಉಪಾಧ್ಯಕ್ಷರೆ, ನಾನು ಮಾತನಾಡುವಾಗ ಏಕೆ yield ಆಗಿದ್ದು ಎಂದರೆ, ಮಾನ್ಯ ಮಂತ್ರಿಯವರು ಗ್ರಾಮೀಣ ಪ್ರದೇಶಗಳ ರೈತರ ಬಗ್ಗೆ ಏನಾದರೂ ಹೇಳಬಹುದೆಂದು ನಾನು yield ಆದೆ.

ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ: ನಾನು ಒಂದು ನಿಮಿಷ ಹೇಳಿಬಿಡುತ್ತೇನೆ. ಗ್ರಾಮೀಣ ಪ್ರದೇಶಗಳಲ್ಲಿ ಕೈಗಾರಿಕೆಗಳು ಬರಬೇಕೆಂಬ ವಿಚಾರದಿಂದ ಸನ್ಮಾನ್ಯ ಮುಖ್ಯಮಂತ್ರಿಯವರು 50 ಕೋಟಿ ರೂ.ಗಳಿಗಿಂತ ಮಿಕ್ಕಿರುವಂಥ ಬಂಡವಾಳವನ್ನು ಹೂಡಲು ಮುಂದೆ ಬಂದರೆ, ಅವರಿಗೆ ಮೊದಲನೇ ಎರಡು ಕೈಗಾರಿಕೆಗಳಿಗೆ ಒಂದು ಕೋಟಿ ರೂ.ಗಳ ರಿಯಾಯಿತಿ ದರದಲ್ಲಿ ಕೊಡುತ್ತಿದ್ದೇವೆ.

ಶ್ರೀ ಬಂಡೆಪ್ಪ ಕಾಶಂಪೂರ್: ತಾಲ್ಲೂಕು ಮಟ್ಟದಲ್ಲಿ, ಹಳ್ಳಿಗಳಲ್ಲಿ industry ಬರಬೇಕು. ಅದಕ್ಕೆ ಏಕೆ ಪ್ರೋತ್ಸಾಹ ಕೊಡಬೇಕು? ನೀವು ಬರೀ ಬಂಡವಾಳ ಶಾಹಿಗಳಿಗೆ 100 ಕೋಟಿ, 50 ಕೋಟಿ ಎಂದರೆ ಹಳ್ಳಿಗೆ ಯಾರು ಬರುತ್ತಾರೆ? ಅವರು ನೂರು-ಇನ್ನೂರು ಎಕರೆ ಜಮೀನು ಕೇಳುತ್ತಾರೆ. ಅವುಗಳಿಗೇನು ಮಾಡುತ್ತೀರೆಂಬುದನ್ನು ಹೇಳಿ.

ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ: ಯಾರು ಎಷ್ಟೆ ಕೇಳಿದರೂ ನಾವು Audit Committee ಮಾಡಿಕೊಂಡಿದ್ದೇವೆ. ಈ committee ಯಲ್ಲಿ 5 ಜನ technical experts ಇದ್ದಾರೆ. ಅವರು ಯಾವ್ಯಾವ sectorನಲ್ಲಿ ಪರಿಣಿತರಿದ್ದಾರೆ; ಅವರನ್ನು ಸೇರಿಸಿಕೊಂಡು.. ..

ಶ್ರೀ ಬಂಡೆಪ್ಪ ಕಾಶಂಪೂರ್: ನೀವು ರೈತರ ಪರವಾಗಿ ಬಜೆಟ್ ಮಂಡನೆ ಮಾಡಿದ್ದೀರಿ. ನಾನು ಮೊದಲು ಮಾನ್ಯ ಮಂತ್ರಿಯವರನ್ನು ಕೇಳ ಬಯಸುವುದೇನೆಂದರೆ, ಹಳ್ಳಿಗಳಲ್ಲಿ industry, ಏಕೆಂದರೆ, value addition is must. ಅದರ ಸಲುವಾಗಿ ಇವರು ಏನು ಮಾಡಿದ್ದಾರೆಂದು ಕೇಳುತ್ತೇನೆ.

ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ: ಯಾವುದೇ sectorನಲ್ಲಿ value addition ಮಾಡಬೇಕೆಂದು ಮಾನ್ಯ ಬಂಡೆಪ್ಪ ಕಾಶಂಪೂರ್‌ರವರು ಏನು ಸಲಹೆ ಕೊಡುತ್ತಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತಿದ್ದೇನೆ. ಅದರಿಂದ

ರೈತರಿಗೆ ಹೆಚ್ಚು ಲಾಭವಾಗುತ್ತದೆ, ಅದರ ಸಲುವಾಗಿ Food processingಗೆ ಬರುವಂಥದ್ದನ್ನು ನೇರವಾಗಿ ಮಧ್ಯವರ್ತಿಗಳಿಗೆ ಇದರಿಂದ ಲಾಭವಾಗ ಬಾರದೆಂಬ ದೃಷ್ಟಿಯಿಂದ ಇವತ್ತು ನಾವು Food processing unitಗಳನ್ನು ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ವಿಭಾಗೀಯ ಮಟ್ಟದಲ್ಲಿ ತರುತ್ತಿದ್ದೇವೆ. ಉದಾಹರಣೆಗೆ ಹೇಳುವುದಾದರೆ, ಕಳೆದ ವರ್ಷ ನಾವು ಧಾರವಾಡ ಮತ್ತು ಬಾಗಲಕೋಟೆಗೆ 12 ಕೋಟಿ ರೂ.ಗಳನ್ನು ನಮ್ಮ industries Departmentನಿಂದ ಹಣ್ಣು ಸಂಸ್ಕರಣಾ ಕೇಂದ್ರಗಳನ್ನು ನೂರಕ್ಕೆ ನೂರರಷ್ಟು implement ಮಾಡುತ್ತಿದ್ದೇವೆ. ಈ ವರ್ಷದಲ್ಲಿ ಇನ್ನು ಸ್ವಲ್ಪ ಹೆಚ್ಚಿಗೆ ಮಾಡುತ್ತಿದ್ದೇವೆ. ಈ ರೀತಿ ಪ್ರತಿ ವರ್ಷ ಮಾಡುತ್ತಿದ್ದೇವೆ.

ಶ್ರೀ ಬಂಡೆಪ್ಪ ಕಾಶಂಪೂರ್: ನಾನು ಏನು ಹೇಳುವುದೆಂದರೆ ದೊಡ್ಡ ದೊಡ್ಡ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಅಲ್ಲಿ Food processing park ಬರುವುದು ಬೇರೆ. ನೀವು ಈ ರೀತಿ ಒಂದು ಯೋಜನೆಯನ್ನು ಮಾಡಿ, ಅಲ್ಲಿ ಸಂಬಂಧಪಟ್ಟ ರೈತರು ಏನು ಬೆಳೆ ಬೆಳೆಯುತ್ತಾರೊ, ಅಲ್ಲಿ ಹೋಗಿ ಇಂತಿಂಥ industry ಹಾಕಿದರೆ ನಿಮಗೆ ಸವಲತ್ತುಗಳನ್ನು ಕೊಡುತ್ತೇವೆಂದು general ಆಗಿ ಒಂದು scheme announce ಮಾಡಿದರೆ, ಅವರು ಅಲ್ಲಿಗೆ ಹೋಗಿ industryಯನ್ನು ಹಾಕಿದರೆ, ಅಲ್ಲಿ value addition ಆಗುತ್ತದೆ. ಇನ್ನೊಂದು ವಿಚಾರವನ್ನು ಅವರು ಏನು ಹೇಳಿದ್ದಾರೆಂದರೆ ನೀವು ನಿಮ್ಮ ಕಾಲದಲ್ಲಿ ಏನು ಮಾಡಿದ್ದೀರೆಂಬುದನ್ನು ಹೇಳಿ ಎಂದು ಹೇಳಿದರು. ಮಾನ್ಯ ಮಂತ್ರಿಯವರೆ ಒಂದು ಮಾತನ್ನು ಹೇಳಬಯಸುತ್ತೇನೆ. ನಾವು ಫೆಬ್ರವರಿ ತಿಂಗಳಲ್ಲಿ ಮಂತ್ರಿಯಾಗಿ ಪ್ರಮಾಣವಚನವನ್ನು ಸ್ವೀಕಾರ ಮಾಡಿದ್ದು, ಡಿಸೆಂಬರ್ ತಿಂಗಳಿಗೆ ಈ 55 ವರ್ಷಗಳ ಇಡೀ ಇತಿಹಾಸದಲ್ಲಿ ಮೊದಲು ಮಾನ್ಯ ಭೈರೇಗೌಡರು ಕೃಷಿ ನೀತಿಯನ್ನು ತಂದರು. ಎರಡನೆದಾಗಿ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರ ನೇತೃತ್ವದಲ್ಲಿ ನಾನು ಮಂತ್ರಿಯಾಗಿ ಈ ಕೃಷಿ ನೀತಿಯನ್ನು ಜಾರಿಗೆ ತಂದಿದ್ದೇನೆ. ಇದು ಮೊದಲ ಸಾಧನೆಯಾಗಿದೆ, ಎರಡನೆಯ ಸಾಧನೆ ಏನೆಂದರೆ, ಮಾನ್ಯ ಮುಖ್ಯಮಂತ್ರಿಯವರು ರೈತರ ಸಂಕಷ್ಟಗಳನ್ನು ಅರಿತುಕೊಂಡು ನನಗೆ ಗೊತ್ತಿದೆ. ಬೀದರ್ ಕಡೆ ಮುಖ್ಯಮಂತ್ರಿಯವರು ಬಂದಾಗ ರೈತರ ಮನೆ ಬಾಗಿಲಿಗೆ ಬಂದು ಒಂದು ಲಕ್ಷ ರೂ.ಗಳನ್ನು ಕೊಟ್ಟು ಹೋಗಿದ್ದರು. ಆ ರೈತರ ಸಂಕಷ್ಟಗಳನ್ನು ಅರ್ಥ

ಮಾಡಿಕೊಂಡು ಇಡೀ ದೇಶದಲ್ಲೆ ಸಾಲ ಮನ್ನಾ ಯಾರೂ ಮಾಡಲಿಲ್ಲ. ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು 2,500 ಕೋಟಿ ರೂ.ಗಳ ಸಾಲ ಮನ್ನಾ ಮಾಡಿದರು. ನಿಮಗೆ ಜನ ಪೂರ್ತಿ ಅಧಿಕಾರವನ್ನು ಕೊಟ್ಟಿದ್ದಾರಲ್ಲಾ, ಮಾಡಿ ಬೇಡವೆಂದು ಹೇಳಿದ್ದೆವೆಯೇ?

(ಗೊಂದಲ)

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಬಂಡಪ್ಪ ಕಾಶಂಪೂರ್: ಮಾನ್ಯ ಮಂತ್ರಿಯರೆ, ಅಷ್ಟಕ್ಕೂ ಸಾಲದೇ 2007ರಲ್ಲಿ ಅಧಿಕಾರಿಗಳ ತಂಡವನ್ನು ಮಾಡಿ ಸಮಗ್ರ report ಅನ್ನು ಜಾರಿ ಮಾಡಿದೆವು. ಶೇ.75 ರಷ್ಟು ಸಬ್ಸಿಡಿಯನ್ನು ಕೊಟ್ಟಿದ್ದೆವು, ಅದನ್ನು ನೀವು ಶೇ.50ಕ್ಕೆ ತಂದಿರಿ. Tractor subsidy ಸಬ್ಸಿಡಿ ಇತ್ತು, farm plough implement subsidy ಇತ್ತು. 60 ಸಾವಿರ ಇತ್ತು, ಈಗ 50 ಸಾವಿರ ಮಾಡಿದ್ದೀರಿ.

ಅಧ್ಯಕ್ಷರು: ತಾವು ಬಜೆಟ್ ಬಗ್ಗೆ ಮಾತನಾಡಿ, ವಿಷಯಾಂತರ-ವಾಗುವುದು ಬೇಡ.

ಶ್ರೀ ಬಂಡೆಪ್ಪ ಕಾಶಂಪೂರ್: ನಾನು ಬಜೆಟ್ ಮೇಲೆ ಮಾತನಾಡುತ್ತಿದ್ದೇನೆ. ಈ ವರ್ಷ ಬೀಜಕ್ಕೆ 60 ಕೋಟಿ ಸಬ್ಸಿಡಿ ಇಟ್ಟಿದ್ದಾರೆ. ಆಗ ಮಾನ್ಯ ಯಡಿಯೂರಪ್ಪನವರೇ ಹಣಕಾಸಿನ ಸಚಿವರಾಗಿದ್ದರು. ಮೊದಲನೇ ವರ್ಷ 87 ಕೋಟಿ ರೂ.ಗಳನ್ನು ಕೊಟ್ಟಿದ್ದೀರಿ. ಈಗ ನಿಮ್ಮ ಕೈಯಲ್ಲೆ ಇದ್ದು ರೈತರಿಗೆ ಏಕೆ ಕಡಿಮೆ ಮಾಡಿದ್ದೀರೆಂಬುದನ್ನು ಹೇಳಿ. ಇದು ನಮಗೆ ಬೇಕಾಗಿದೆ, ಈಗ ಮಾನ್ಯ ಸಚಿವರು support price 5 cropsಗೆ ಕೊಡುತ್ತಿದ್ದೇವೆಂದು ಹೇಳಿದರು. ಅದು support price ಅಲ್ಲ, ನೀವು ಏನು ಹೇಳಿದ್ದೀರೆಂದರೆ minimum support price ಅನ್ನು Central Government ಈ ಐದು cropಗಳಿಗೆ announce ಮಾಡುತ್ತದೆ. ಅದಕ್ಕೆ ನಾವು ಆವರ್ತ ನಿಧಿಯಿಂದ purchase ಮಾಡುತ್ತೇವೆಂದು ಹೇಳಿದ್ದೀರಿ. ನಾನು ಕೇಳುವಂಥದ್ದು ಏನೆಂದರೆ remunerative prices ರೈತರಿಗೆ ಕೊಡಬೇಕೆಂಬ ನಿಟ್ಟಿನಲ್ಲಿ ನಾನು ಮೊದಲಿನಿಂದಲೂ ವಾದ ಮಾಡುತ್ತಿದ್ದೇನೆ. ನಾನು important ವಿಷಯವನ್ನು ಹೇಳುತ್ತಿದ್ದೆ, ಅದು ಏನೆಂದರೆ ಎರಡನೇ ಭಾಗ ರೈತರಿಗೆ lose ಅದಾಗ ಸರ್ಕಾರ ಯಾವ ರೀತಿಯಲ್ಲಿ ಧಾವಿಸಿ ಅವರ

ಬೆಂಬಲಕ್ಕೆ ನಿಲ್ಲುತ್ತದೆಂಬದು ಬೇಕಾಗಿದೆ. ರೈತ ಬೆಳೆದ ಬೆಳೆಗೆ support price ಕೊಟ್ಟು ಒಳ್ಳೆಯ ರೀತಿಯಲ್ಲಿ remunerative ಕೊಟ್ಟು ಖರೀದಿ ಮಾಡುವುದು ಒಂದು ಅಂಶ. ಇನ್ನೊಂದು ಅಂಶ ಬೆಳೆ ಪ್ರವಾಹ ಬಂದು ಲಾಸ್ ಆಗಬಹುದು, ಬೀಜ ಸರಿಯಾಗಿ ಬಂದಿಲ್ಲವೆಂದು ಲಾಸ್ ಆಗಬಹುದು. ಅದಕ್ಕೆ insurance scheme ಇದೆ. ಅವು general insurance ಇದೆ, weather insurance ಇದೆ. ಈ insurance ಗಳಲ್ಲಿ ಯಾವುದು ಬಲ ಬರುತ್ತದೆಂಬ ನಿಟ್ಟಿನಲ್ಲಿ ಯಾವ ನಿರ್ಧಾರವನ್ನು ತೆಗೆದುಕೊಂಡಿಲ್ಲ. ರೈತರು ಕಂಗಾಲಾದಾಗ ಧಾವಿಸಿ ಅವರಿಗೆ ನೀವು support ಮಾಡುವುದಿಲ್ಲವೆಂದ ಮೇಲೆ ನಿಮ್ಮ ಈ ಕೃಷಿ ಬಜೆಟ್ ಎಲ್ಲಿಗೆ ಹೋಗಿ ನಿಲ್ಲುತ್ತದೆಂಬುದರ ಬಗ್ಗೆ ಲೆಕ್ಕ ಹಾಕಿ. ಇವತ್ತು ಎಷ್ಟೋ ಕಡೆಗಳಲ್ಲಿ ಪ್ರವಾಹ ಬಂದಿದೆ. ರೈತರ ಬೆಳೆಗಳು ಕೊಚ್ಚಿಕೊಂಡು ಹೋಗಿದೆ. ಅದೇ C.R.F. Fund 800 ರೂ.ಗಳು ಮತ್ತು 1,500 ರೂ.ಗಳು. ಅದಕ್ಕಿಂತ ಹೆಚ್ಚಿಗೆ ಕೊಟ್ಟಿಲ್ಲ.

ಹಾಗಾಗಿ ಇವತ್ತು ನಾವು ಸಮಗ್ರವಾಗಿ ಇನ್‌ಷೂರೆನ್ಸ್ ಬಗ್ಗೆ, ಅದು ಜನರಲ್ ಇನ್‌ಷೂರೆನ್ಸ್ ಆಗಲೀ, ವೆದರ್ ಇನ್‌ಷೂರೆನ್ಸ್ ಆಗಲೀ ಇವೆರಡರ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಅಗ್ರಿಕಲ್ಚರ್ ನಮ್ಮ ಸ್ಟೇಟ್ ಸಬ್ಜೆಕ್ಟ್ ಎಂದು ರಾಜ್ಯ ಸರ್ಕಾದವರೇನು ಹೇಳಿದ್ದಾರೆ, ಅದರಂತೆ ಇವರು ಕೇಂದ್ರ ಸರ್ಕಾರದ ಕಡೆಗೆ ಬೆರಳು ತೋರಿಸದೇ ರೈತರಿಗೆ ಪ್ರೊಟೆಕ್ಷನ್ ಕೊಡುವಂಥ ಕೆಲಸ ಮಾಡಬೇಕಾಗುತ್ತದೆ. ಇನ್ಷೂರೆನ್ಸ್ ಬಗ್ಗೆ ಹೇಳಬೇಕೆಂದರೆ ರೈತರಿಗೆ ಇನ್‌ಷೂರೆನ್ಸ್ ಎನ್ನುವುದೇ ಗೊತ್ತಿಲ್ಲ. ಯಾರು ಬ್ಯಾಂಕ್ ಸಾಲ ತೆಗೆದು ಕೊಳ್ಳುತ್ತಾರೋ ಅಂಥ ರೈತರಿಗೆ ಆಟೋಮೆಟಿಕ್ ಆಗಿ ಆ ಬ್ಯಾಂಕಿನವರೇ ಇನ್‌ಷೂರೆನ್ಸ್ ಕಟ್ಟುತ್ತಾರೆ. ನಂತರ ಬ್ಯಾಂಕಿನವರು ಅದನ್ನು ಸಾಲದ ಜೊತೆಗೆ ತೀರಿಸಿಕೊಳ್ಳುತ್ತಾರೆ. ಆಗಲೂ ಅವರಿಗೆ ಗೊತ್ತಾಗುವುದಿಲ್ಲ. ಕ್ಲೇಮ್ ಬಂದ ಮೇಲಷ್ಟೇ ಅವರಿಗೆ ಗೊತ್ತಾಗುತ್ತದೆ. ಸರ್ಕಾರದವರೇ ಮುಂದೆ ಬಂದು ಇನ್‌ಷೂರೆನ್ಸ್ ಪ್ರೀಮಿಯಂಅನ್ನು ನಾವು ಶೇರ್ ಮಾಡಿಕೊಳ್ಳುತ್ತೇವೆ ಎಂದು ಮಾಡಬೇಕಾಗಿತ್ತು. ರೈತರ ಬಗ್ಗೆ ನೀವು ಕಾಳಜಿ ಮಾಡುತ್ತೀರಿ ಎಂದು ಆಗ ನಾವು ಹೇಳುತ್ತೇವೆ. ನಾನು ಅಗ್ರಿಕಲ್ಚರ್ ಮಿನಿಸ್ಟರ್ ಆಗಿದ್ದಾಗ ಈ ಜನರಲ್ ಇನ್‌ಷೂರೆನ್ಸ್ ಬಗ್ಗೆ ಒಂದು ಸಣ್ಣ ಪ್ರಯತ್ನವನ್ನು ಮಾಡಿದೆ. ಏನೆಂದರೆ, ಕ್ರಾಪ್ ಕಟಿಂಗ್ ಎಕ್ಸ್‌ಪೆರಿಮೆಂಟ್ಸ್ ಹೋಬಳಿ ಲೆವೆಲ್‌ನಲ್ಲಿ ಇತ್ತು, ಅದು ಕ್ಲೀನಾಗಿ, ಕರೆಕ್ಟಾಗಿ ಬರುತ್ತಿಲ್ಲ ಎಂದು

ನಾವು ಇನ್ನೂ 20% ಕ್ರಾಪ್ ಕಟಿಂಗ್ ಎಕ್ಸ್‌ಪೆರಿಮೆಂಟ್ಸ್‌ಅನ್ನು ಹೆಚ್ಚಿಗೆ ಮಾಡಿ, ಲಾಂಗ್ ಡ್ಯೂರೇಷನ್ ಕ್ರಾಪ್ಸ್ ಮತ್ತು ಷಾರ್ಟ್ ಡ್ಯೂರೇಷನ್ ಕ್ರಾಪ್ಸ್ ಎಂದು ಎರಡು ತರಹದ ಇನ್‌ಷೂರೆನ್ಸ್‌ಗಳಿಗೆ ಸೇಮ್ ಕ್ಲೇಮ್ ಕೊಟ್ಟೆವು. ಲಾಂಗ್ ಡ್ಯೂರೇಷನ್ ಕ್ರಾಪ್‌ಗೆ ಆಮೇಲೆ ಅಂದರೆ ಮೇ–ಜೂನ್‌ಗೆ ಕೊಡುವುದು, ಷಾರ್ಟ್ ಡ್ಯೂರೇಷನ್ ಕ್ರಾಪ್‌ಗೆ ಅಕ್ಟೋಬರ್–ನವೆಂಬರ್‌ನಲ್ಲಿ ಕೊಡಬೇಕು ಎನ್ನುವ ರೀತಿಯಲ್ಲಿ ನಾವು ಪ್ರಯತ್ನ ಮಾಡಿದ್ದು ಒಂದು ವರ್ಷ ಅದು ಸಕ್ಸಸ್ ಆಗಿದೆ. ಮುಂದಿನ ವರ್ಷದಿಂದ ಅದು ಕ್ಲೋಸ್ ಆಗಿದೆ. ಈಗ ಒಂದು ವರ್ಷ ಕಳೆದರೂ ಇನ್‌ಷೂರೆನ್ಸ್ ಸಿಗುತ್ತಿಲ್ಲ. ವೆದರ್ ಇನ್‌ಷೂರೆನ್ಸ್ ಬಹಳ ಚೆನ್ನಾಗಿದೆ. ಏಕೆಂದರೆ ಮಳೆ ಆಧಾರಿತ . . . . . .

ಅಧ್ಯಕ್ಷರು: ನೀವು ಪ್ರಾರಂಭ ಮಾಡಿ ಈಗಾಗಲೇ ಒಂದು ಗಂಟೆಯಾಯಿತು.

ಶ್ರೀ ಬಂಡೆಪ್ಪ ಕಾಶೆಂಪೂರ್: ಇವರೆಲ್ಲ ಮಧ್ಯದಲ್ಲಿ ಡಿಸ್ಟರ್ಬ್ ಮಾಡಿ ಮಾತನಾಡಿದ್ದಾರೆ. ನಾನು ಮಾತನಾಡಿರುವ ಸಮಯವನ್ನು ನೀವು ಲೆಕ್ಕಹಾಕಿ. ಜಾಸ್ತಿ ಮಂತ್ರಿಗಳೇ ಮಾತನಾಡಿದ್ದಾರೆ. ಜಯಚಂದ್ರರವರೂ ಮಾತನಾಡಿದರು.

ಅಧ್ಯಕ್ಷರು: ಅದು ಲೆಕ್ಕಕ್ಕೆ ಬರುವುದಿಲ್ಲ, ನೀವು ಬೇಗ ಮುಗಿಸಿ.

ಶ್ರೀ ಬಂಡೆಪ್ಪ ಕಾಶೆಂಪೂರ್: ನಾನು ಕೇವಲ ಎರಡು ವಿಷಯಗಳ ಬಗ್ಗೆ ಮಾತ್ರ ಮಾತನಾಡುತ್ತೇನೆ. ಇನ್‌ಷೂರೆನ್ಸ್ ಬಗ್ಗೆ ಇವರು ಚಕಾರ ಎತ್ತಲಿಲ್ಲ. ಅಂದ ಮೇಲೆ ಇವರಿಗೆ ರೈತರ ಬಗ್ಗೆ ಕಾಳಜಿ ಏನಿದೆ? ಎಷ್ಟೋ ಜನ ರೈತರು ಪ್ರಕೃತಿ ವಿಕೋಪದಿಂದ ಕಂಗಾಲಾಗಿದ್ದಾರೆ. ಇಂಥ ಸಂದರ್ಭಗಳಲ್ಲಿ ಸರ್ಕಾರದವರು ವೆದರ್ ಇನ್‌ಷೂರೆನ್ಸ್ ಮಾಡಿ ಅವರ ನೆರವಿಗೆ ಧಾವಿಸಬೇಕಲ್ಲವೇ? ಇಂಥ ವಿಕೋಪಗಳಿಂದ ರೈತರಿಗೆ ಎಲ್ಲಿಯವರೆಗೆ ಒಳ್ಳೆಯ ರೀತಿಯಲ್ಲಿ ಬೆಳೆ ಬರುವುದಿಲ್ಲ, ಅಲ್ಲಿಯವರೆಗೆ ಸರ್ಕಾರ ಮುಂದೆ ಬಂದು ಅವರಿಗೆ ಬೆಂಬಲ ಕೊಡುವಂಥ ಕೆಲಸ ಮಾಡಬೇಕು. ಆಗ ಮಾತ್ರ, ನಾವು ಬೆಳೆದ ಬೆಳೆಗೆ ಸಪೋರ್ಟ್ ಪ್ರೈಸ್ ಸಿಗುತ್ತದೆ, ನಮಗೆ ಯಾವುದೋ ರೂಪದಲ್ಲಿ ಇನ್‌ಷೂರೆನ್ಸ್ ಸಿಗುತ್ತದೆ ಎಂದು ಆಗಬೇಕು. ಇವೆರಡು ಕೆಲಸವನ್ನು ಸರ್ಕಾರ ಕರೆಕ್ಟಾಗಿ ಮಾಡಿದರೆ ನಿಜಕ್ಕೂ ರೈತರ ಬಾಳು ಹಸನಾಗುತ್ತದೆ ಎಂದು ನಾನು ಹೇಳಲು ಬಯಸುತ್ತೇನೆ.

ಮತ್ತೊಂದು ವಿಷಯವೆಂದರೆ, ಬಹಳಷ್ಟು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ನಮ್ಮ ಬೀದರ್‌ನಲ್ಲಿ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಂಡಿದ್ದು, ಮುಖ್ಯಮಂತ್ರಿಗಳ ಹೆಸರಿಗೇ ಒಂದು ಲೆಟರ್ ಬರೆದಿಟ್ಟಿದ್ದನು. ಅವರ ಹೆಸರಿನಲ್ಲಿತ್ತು ಎಂದರೆ ಡೈರೆಕಟ್ ಅವರಿಗೆ ಅಲ್ಲ. ನಾನು ಮೆಣಸಿನಕಾಯಿ ಹಾಕಿದ್ದೇನೆ, ಇನ್ನೊಂದು ಬೆಳೆ ಹಾಕಿದ್ದೇನೆ, ಕರೆಂಟ್ ಸಪ್ಲೈ ಸರಿಯಾಗಿ ಇಲ್ಲದಿರುವುದುರಿಂದ ನೀರಿಲ್ಲದೇ ಬೆಳೆಗಳೆಲ್ಲ ಒಣಗಿ ಹೋಗಿವೆ. ನಾನು ತೆಗೆದುಕೊಂಡಿರುವ ಸಾಲವನ್ನು ತೀರಿಸಲು ಆಗದೇ ಇರುವುದರಿಂದ ನಾನು ಸಾಯುತ್ತೀದ್ದೇನೆ ಎಂದು ಪತ್ರ ಬರೆದು ಸತ್ತಿದ್ದ. ಆ ಪತ್ರವನ್ನು ತಂದು ನಾನು ಇಲ್ಲಿ ಹೌಸ್‌ನಲ್ಲಿ ಕೊಟ್ಟಿದ್ದೇನೆ. ಇಂಥ ಸಂದರ್ಭಗಳಲ್ಲಿ ರೈತರಿಗೆ ನಾವು ಯಾವುದೋ ಐದು ಸಾವಿರ ರೂಪಾಯಿ ಕೊಟ್ಟು ಕೈ ತೊಳೆದುಕೊಳ್ಳುತ್ತೇವೆ ಎಂದಲ್ಲ. ಅವರಿಗೆ ಸಮಗ್ರವಾಗಿ ವಿದ್ಯುತ್ ಕೊಡುವಂತಾಗಬೇಕು. ನಮ್ಮ ಕಡೆ 6 ಗಂಟೆಗಳ ಕಾಲ ವಿದ್ಯುತ್ ಕೊಡುತ್ತೇವೆ ಎಂದು ಹೇಳಿದ್ದರೂ, 3 ಗಂಟೆಯೂ ವಿದ್ಯುತ್ ಕೊಟ್ಟಿಲ್ಲ. ಆ ನಿಟ್ಟಿನಲ್ಲೂ ಈ ಸರ್ಕಾರದವರು ಸಮಗ್ರ ಚಿಂತನೆ ಮಾಡಬೇಕು.

ಮತ್ತೊಂದು ವಿಚಾರವೆಂದರೆ, ಗುಡಿಸಲು ರಹಿತ ಗ್ರಾಮಗಳನ್ನಾಗಿ ಮಾಡಲು ಮನೆಗಳನ್ನು ಕೊಡುತ್ತಿದ್ದಾರೆ. ನನಗೆ ತಿಳಿದ ಮಟ್ಟಿಗೆ ಇದು ಹೌಸಿಂಗ್ ಮಿನಿಸ್ಟರ್‌ರವರಿಗೆ ಬರುತ್ತದೆ. ಎಲ್ಲಾ ಎಂ.ಎಲ್.ಎ.ಗಳಿಗೂ ಗೊತ್ತಿದೆ, ನಾವು ಲಾಟರಿ ಮುಖಾಂತರ ಗುಡಿಸಲು ರಹಿತ ಮನೆಗಳನ್ನು ಕೊಡಲು ಹಳ್ಳಿಗಳನ್ನು ಆಯ್ಕೆ ಮಾಡಿದ್ದೇವೆ. ಆ ಹಳ್ಳಿಗಳಿಗೆ ಹೋಗಿ ಅವರ ಪರಿಸ್ಥಿತಿಯನ್ನು ನೋಡಿಕೊಂಡು ಸಮಗ್ರವಾಗಿ ಸೆಲೆಕ್ಟ್ ಮಾಡುತ್ತಿದ್ದೇವೆ. ಎಂ.ಎಲ್.ಎ.ಗಳೇ ಅದಕ್ಕೆ ಚೇರ್‌ಮನ್. ಆದರೆ ಈ ಮನೆಗಳನ್ನು ಕಟ್ಟಿಕೊಳ್ಳಲು ಬೇಸ್‌ಮೆಂಟನ್ನು ಅವರು ಹಾಕಿಕೊಳ್ಳಬೇಕಂತೆ. ಗುಡಿಸಲಿನಲ್ಲಿರುವವನಿಗೆ ಕೊಡುವ 60 ಸಾವಿರದಲ್ಲಿ 20–25 ಸಾವಿರ ರೂಪಾಯಿಗಳನ್ನು ಇದಕ್ಕೆ ಬಂಡವಾಳ ಹಾಕು ಎಂದರೆ ಅವನು ಯಾವ ರೀತಿ ಹಾಕಲು ಸಾಧ್ಯ? ಅದಕ್ಕಾಗಿ, ನಾವು ಬೇರೆ ಹಾದಿ ಹಿಡಿದುಕೊಂಡು ಹೋಗುತ್ತಿದ್ದೇವೆ ಎನ್ನುವುದನ್ನು ನಾನು ಹೇಳಲು ಬಯಸುತ್ತೇನೆ. ಈ ಯೋಜನೆಯಲ್ಲಿ ಸರ್ಕಾರದವೇ ಸಂಪೂರ್ಣ ಜವಾಬ್ದಾರಿ ತೆಗೆದುಕೊಂಡು ಅದನ್ನು ಕಟ್ಟಿಸಿಕೊಡಲಿ. ಇದು ಎಲ್ಲ ಶಾಸಕರಿಗೆ ಗೊತ್ತಿದೆ. ಬೇಸ್‌ಮೆಂಟ್ ಅವನು ಹಾಕಿಕೊಳ್ಳಬೇಕು, ನಂತರ ಅದರ ಫೋಟೋ ತೆಗೆದು

ನಿಮಗೆ ಕೊಟ್ಟರೆ ಅವನಿಗೆ 25% ರಿಲೀಸ್ ಆಗುತ್ತದೆ. ಗುಡಿಸಲುಗಳಲ್ಲಿರುವವರಲ್ಲಿ ಬೇಸ್‌ಮೆಂಟ್ ಹಾಕಲು ದುಡ್ಡು ಎಲ್ಲಿರುತ್ತದೆ? ಅದೂ ಸಹ ಚಿಂತನೆ ಮಾಡುವಂಥ ವಿಷಯವಾಗಿದೆ ಎಂದು ನಾನು ಹೇಳಲು ಬಯಸುತ್ತೇನೆ.

ಈಗ ಸದನದಲ್ಲಿ ಮೆಡಿಕಲ್ ಎಜುಕೇಷನ್ ಮಿನಿಸ್ಟರ್ ಇಲ್ಲ. ರಾಜ್ಯದಲ್ಲಿ ಹೊಸದಾಗಿ ತೆರೆದಿರುವ ಆರು ಮೆಡಿಕಲ್ ಕಾಲೇಜುಗಳಲ್ಲಿ ಬೀದರ್‌ನಲ್ಲಿಯೂ ಒಂದು ಮೆಡಿಕಲ್ ಕಾಲೇಜ್ ಇದೆ. ಈಗ ಆ ಕಾಲೇಜಿಗೆ ಹೆಚ್ಚು ಕಡಿಮೆ ಇನ್‌ಫ್ರಾಸ್ಟ್ರಕ್ಚರ್ ಬಂದಿದೆ. ಈ ಸರ್ಕಾರ ಬಂದು ಮೂರು ವರ್ಷವಾದರೂ ಅಲ್ಲಿ ಹಾಸ್ಪಿಟಲ್‌ಗೆ ಇನ್ನೂ ದುಡ್ಡು ಕೊಟ್ಟಿಲ್ಲ. ಕ್ಯಾಬಿನೆಟ್‌ನಲ್ಲಿ ಅದು ಅಪ್ರೂವ್ ಆಗಿದೆ ಎನ್ನುವ ಮಾತನ್ನು ಮೂರು ವರ್ಷಗಳಿಂದ ಹೇಳುತ್ತಿದ್ದಾರೆ. ನಮ್ಮ ಮಲಕರೆಡ್ಡಿಯವರಿಗೂ ಗೊತ್ತಿದೆ. ಬೀದರ್‌ಗೆ ಮಂತ್ರಿಗಳು ಬಂದು ಇನ್ಸ್‌ಪೆಕ್ಷನ್ ಮಾಡಿಕೊಂಡು ಬಂದಿದ್ದಾರೆ. ಈ ಮೆಡಿಕಲ್ ಕಾಲೇಜುಗಳಲ್ಲಿ ಒಂದೆರಡು ಕಾಲೇಜುಗಳು ಹೋದ ವರ್ಷವೇ ಸಸ್ಪೆಂಡ್ ಆಗುತ್ತವೆ ಎನ್ನುವ ಭಾವನೆ ನಮಗಿತ್ತು. ಅಲ್ಲಿ, ನಾಳೆ ಬೆಳಗ್ಗೆ ಕೆಲಸಕ್ಕೆ ಬರುವ ಡಾಕ್ಟರ್ ಇವತ್ತೇ ಅಟೆಂಡೆನ್ಸ್ ಹಾಕಿದ್ದಾನೆ. ಅದನ್ನು ಇನ್ಸ್‌ಪೆಕ್ಷನ್ ಮಾಡಿಕೊಂಡು ಬಂದಿದ್ದಾರೆ. ಇದುವರೆಗೂ ಅವನು ಸಸ್ಪೆಂಡ್ ಆಗಿಲ್ಲ. ಇಂಥವುಗಳ ಬಗ್ಗೆ ಚಿಂತನೆ ಮಾಡಬೇಕು. ಹೊಸದಾಗಿ ಕೊಟ್ಟಿರುವ ಮೆಡಿಕಲ್ ಕಾಲೇಜುಗಳಲ್ಲಿ ಹಾಸ್ಪಿಟಲ್‌ಗಳಿಗೆ ಇನ್‌ಫ್ರಾಸ್ಟ್ರಕ್ಚರ್ ಕೊಡದೇ ಹೋದರೆ, ಬೀದರ್‌ನಂಥ ಕಡೆಗಳಲ್ಲಿ ಪೇಷೆಂಟ್‌ಗಳನ್ನು ಚಿಕಿತ್ಸೆಗಾಗಿ ಹೈದರಾಬಾದಿಗೆ ಕಳುಹಿಸುತ್ತಾರೆ. ಅದರ ಬಗ್ಗೆ ಗಮನ ಕೊಡಬೇಕು.

ಇನ್ನು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನ ಬಗ್ಗೆ ಹೇಳುವುದಾದರೆ, ಈ ಇಲಾಖೆಯಲ್ಲಿ ಗಂಗಾ ಕಲ್ಯಾಣ ಯೋಜನೆಯನ್ನು ಮಾಡುತ್ತಿದ್ದಾರೆ. ಸಾಮಾಜಿಕ ಸಮತೋಲನ ಎಂದು ನಾವೆಲ್ಲ ಮಾತನಾಡುತ್ತೇವೆ. ನೀರಾವರಿ ವಿಚಾರಕ್ಕೆ ಬಂದರೆ, ಕಾವೇರಿ ಅಚ್ಚುಕಟ್ಟಿನವರು ಚೆನ್ನಾಗಿದ್ದಾರೆ. ನಮ್ಮ ಬೀದರ್‌ನಲ್ಲಿ ಯಾವ ನೀರಾವರಿ ಸವಲತ್ತೂ ಇಲ್ಲ. ಇವತ್ತು ಅಲ್ಲಿ ತಮ್ಮ ಸ್ವಂತ ರೊಕ್ಕದಿಂದ ಬೋರ್‌ವೆಲ್ ಹೊಡೆಸಿ, ಡೆಪಾಸಿಟ್ ಕಟ್ಟಿ ಕರೆಂಟ್ ತೆಗೆದುಕೊಂಡ ಮೇಲೂ ಅವರಿಗೆ ಸಹಾಯವಾಗುತ್ತಿಲ್ಲ. ಬಡವರಿಗೆ ಕೊಡುತ್ತಿರುವ ಈ ಗಂಗಾ ಕಲ್ಯಾಣ ಯೋಜನೆಯನ್ನು ಈ ಸರ್ಕಾರ ಬಂದ ಮೇಲೆ ಕಡಿತ ಮಾಡಿದೆ. ಹಿಂದೆ ಕುಮಾರಸ್ವಾಮಿಯವರು ಇದ್ದಾಗ ಜಾಸ್ತಿ ಇದ್ದವು. ಎಂ.ಎಲ್.ಎ.ಗಳಾಗಿ

ನಾವೂ ನಮ್ಮ ಕ್ಷೇತ್ರಗಳಲ್ಲಿ ಕೊಟ್ಟಿದ್ದೇವೆ. ಎಸ್.ಸಿ./ಎಸ್.ಟಿ., ಬ್ಯಾಕ್‌ವರ್ಡ್ ಕ್ಲಾಸ್ ಮತ್ತು ಮೈನಾರಿಟಿಯ ಬಡವರಿಗೆ ಕೊಡುವ ಈ ಯೋಜನೆಯನ್ನು ಹೆಚ್ಚಿಗೆ ಮಾಡಬೇಕು. ಆ ನಿಟ್ಟಿನಲ್ಲಿ ಇವರು ಕೆಲಸ ಮಾಡುತ್ತಿಲ್ಲ. ಯಾವುದೋ ಒಂದಕ್ಕೆ 20–25 ಕೋಟಿ ಕೊಟ್ಟುಬಿಡುತ್ತೀರಿ. ಆದರೆ ಇಡೀ ರಾಜ್ಯಕ್ಕೆ ಕೊಡುತ್ತಿಲ್ಲ.

(ಈ ಹಂತದಲ್ಲಿ ಸಚಿವರಾದ ಶ್ರೀ ಎಂ. ಗೋವಿಂದ ಕಾರಜೋಳರವರು ಮಾತನಾಡಲು ಪ್ರಯತ್ನ ಪಟ್ಟರು)

ಅಧ್ಯಕ್ಷರು: ಕಾರಜೋಳರವರೇ, ಅವರು ಮುಗಿಸಲಿ. ಪ್ರಶ್ನೆ, ಉತ್ತರ ಎಂದಾದರೆ ಮುಗಿಯುವುದಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ: ನಾವು ಬಂದ ಮೇಲೆ ಏನು ಮಾಡಿದ್ದೇವೆ ಎನ್ನುವುದು ಗೊತ್ತಾಗಲಿ.

ಶ್ರೀ ಸಿದ್ದುಸವದಿ: ಹಿಂದೆ ಇದ್ದುದನ್ನು ಮೂರುಪಟ್ಟು ಹೆಚ್ಚು ಮಾಡಿದ್ದಾರೆ.

ಶ್ರೀ ಬಂಡೆಪ್ಪ ಕಾಶೆಂಪೂರ್: ನಾನೂ ಶಾಸಕನಾಗಿದ್ದೇನೆ, ನನಗೂ ಕೋಟಾ ಬರುತ್ತದೆ. ಗಂಗಾ ಕಲ್ಯಾಣ ಯೋಜನೆಯನ್ನು ನಮಗೆ ಬಿಟ್ಟು ಬರೀ ಬಿ.ಜೆ.ಪಿ.ಯರಿಗೆ ಕೊಡುತ್ತಿದ್ದಾರೇನು? ಹಿಂದಿಗಿಂತ ಮೂರು ಪಟ್ಟು ಹೆಚ್ಚಿಗೆ ಕೊಟ್ಟಿದ್ದಾರಂತೆ. ಅದರ ಅಧ್ಯಕ್ಷರು ಯಾರಿದ್ದಾರೆ ಎಂದು ಹೇಳಿ.

ಅಧ್ಯಕ್ಷರು: ನೀವು ಆ ಕಡೆ ಏಕೆ ನೋಡುತ್ತೀರಿ, ಈ ಕಡೆ ನೋಡಿ.

ಶ್ರೀ ಗೋವಿಂದ ಎಂ ಕಾರಜೋಳ: ನಮ್ಮ ಸರ್ಕಾರ ಬಂದ ಮೇಲೆ ಮೈನರ್ ಇರಿಗೇಷನ್ ಇಲಾಖೆಯಿಂದಲೂ ಕೂಡ ಗಂಗಾ ಕಲ್ಯಾಣ ಯೋಜನೆಯನ್ನು ಕೈಗೆತ್ತಿಕೊಂಡಿದ್ದೇವೆ. ಎಸ್.ಸಿ./ಎಸ್.ಟಿ. ಜನಾಂಗದವರ ಕೃಷಿ ಭೂಮಿಗೆ ಸಾಮೂಹಿಕ ಏತ ನೀರಾವರಿ ಯೋಜನೆಗಳನ್ನು ಮಾಡಿಕೊಡುತ್ತಿದ್ದೇವೆ. ಕಳೆದ 60 ವರ್ಷಗಳಲ್ಲಿ ಬಹುಶ: ಇದನ್ನು ಯಾರೂ ಕೂಡ ಮಾಡಿರಲಿಲ್ಲ. ಡಾ: ಮಾಲಕರೆಡ್ಡಿಯವರು ನನಗೆ ಒಂದು ಅಭಿನಂದನಾ ಪತ್ರ ಬರೆದಿದ್ದಾರೆ. ಗಂಗಾ ಕಲ್ಯಾಣ ಯೋಜನೆಯಲ್ಲಿ ಬಹಳ ಒಳ್ಳೆಯ ಕೆಲಸ ಮಾಡಿದ್ದೀರಿ, ಹಿಂದೆ ಈ ರೀತಿ ಮಾಡುತ್ತಿರಲಿಲ್ಲ ಎಂದು ಹೇಳಿದ್ದಾರೆ. ನಾವು ಯೋಜನೆಯ ಫಲಾನುಭವಿಗಳಿಗೆ ಒಂದು ರೂಪಾಯಿಯ ಖರ್ಚು ವೆಚ್ಚವನ್ನೂ ಹಾಕುವುದಿಲ್ಲ. ಅಷ್ಟೇ ಅಲ್ಲದೇ, 65 ಸಾವಿರ ರೂಪಾಯಿಗಳಿದ್ದಂಥ ಗಂಗಾ

ಕಲ್ಯಾಣ ಯೋಜನೆಯ ಯೂನಿಟ್ ಕಾಸ್ಟನ್ನು ಇವತ್ತು ಒಂದೂವರೆ ಲಕ್ಷ ರೂಪಾಯಿಗಳಿಗೆ ಏರಿಸಿದ್ದೇವೆ.

ಶ್ರೀ ಬಂಡೆಪ್ಪ ಕಾಶೆಂಪೂರ್: ಅದನ್ನು ಹಿಂದೆಯೇ ಮಾಡಿದ್ದೇವೆ.

ಶ್ರೀ ಗೋವಿಂದ ಎಂ ಕಾರಜೋಳ: ಯಾವಾಗ ಮಾಡಿದ್ದಿರಿ? ಅದನ್ನು ನೀವು ತೋರಿಸಿದರೆ ನಾನು ರಾಜೀನಾಮೆ ಕೊಟ್ಟು ಇಲ್ಲಿಂದ ಹೊರಗೆ ಹೋಗುತ್ತೇನೆ.

(ಗೊಂದಲ)

ಶ್ರೀ ಗೋವಿಂದ ಎಂ ಕಾರಜೋಳ: ಒಂದೂವರೆ ಕೋಟಿ ರೂಪಾಯಿಗಳನ್ನು ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್: ಹಿಂದಿನ ಸರ್ಕಾರವೇ ಅದನ್ನು ಒಂದು ಲಕ್ಷ ಮಾಡಿತ್ತು.

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಅದು ಒಂದೂವರೆ ಲಕ್ಷವಲ್ಲ, ಒಂದು ಲಕ್ಷ ಮಾಡಿರುವುದು.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್: 65 ಸಾವಿರ ರೂಪಾಯಿ ಎಂದು ಮಾಡಿದ್ದುದು ಎಸ್.ಎಂ. ಕೃಷ್ಣರವರ ಕಾಲದಲ್ಲಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ: ಯಡಿಯೂರಪ್ಪನವರ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಗಂಗಾಕಲ್ಯಾಣದ unit cost ಅನ್ನು 1.5 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಿರತಕ್ಕಂಥ ಕೀರ್ತಿ ಯಾರಿಗಾದರೂ ಸಲ್ಲುತ್ತದೆ ಎಂದರೆ ಅದು ಯಡಿಯೂರಪ್ಪನವರ ಸರ್ಕಾರಕ್ಕೆ ಮಾತ್ರ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: Contractor ರ bill rate ಜಾಸ್ತಿ ಆಯಿತೇ ಹೊರತು ಅದರಿಂದ ರೈತರಿಗೆ ಏನು ಅನುಕೂಲವಾಯಿತು? 1ರಿಂದ 1.5 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಿದರೆ ಆ ಹಣ contractor ಗೆ ಬರುತ್ತದೆ. ಅದರಿಂದ ರೈತರಿಗೆ ಏನು ಬರುತ್ತದೆ?

(ಗೊಂದಲ)

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ: Unit cost ಜಾಸ್ತಿ ಮಾಡಿದ್ದೇವೆಂದು ಹೇಳಿಕೊಂಡಿರಿ. ಇದರಿಂದ contractor ಗೆ ಅನುಕೂಲವಾಗಿದೆಯೇ ಹೊರತು ರೈತರಿಗೆ benefit ಆಗಿದೆಯೇ? ಇದರಿಂದ ರೈತರಿಗೆ benefit ಆಗಿಲ್ಲ.

(ಗೊಂದಲ)

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: Contractor ಗೆ benefit ಆಗಿದೆಯೇ ಹೊರತು ರೈತರಿಗೆ benefit ಅಗಿಲ್ಲ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ: ಡಾಕ್ಟರ್ ಶರಣ ಪ್ರಕಾಶ್‌ರವರೆ ಕುಳಿತುಕೊಳ್ಳಿ.

(ಗೊಂದಲ)

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: Contractor ಗೆ ಫಾಯಿದೆ ಆದರೆ ಏನು ಬಂತು? 1 ಲಕ್ಷ ರೂಪಾಯಿಗಳಲ್ಲಿ ಮಾಡುವ ಕೆಲಸವನ್ನು 1.5 ಲಕ್ಷ ರೂಪಾಯಿ ಕೊಟ್ಟು ಒಳ್ಳೆಯದು ಮಾಡಿದ್ದೇವೆಂದು ನೀವು ಹೇಳಿದಿರಲ್ಲಾ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ: Land purchase scheme ನಲ್ಲಿ 30 ಸಾವಿರ ರೂಪಾಯಿ ಒಣಬೇಸಾಯಕ್ಕೆ ಇತ್ತು, 60 ಸಾವಿರ ರೂಪಾಯಿ ನೀರಾವರಿ ಜಮೀನಿಗೆ ಇತ್ತು, maximum 2 ಎಕರೆ ಒಣ ಬೇಸಾಯ, ಒಂದು ಎಕರೆ ನೀರಾವರಿ ಬೇಸಾಯ ಎನ್ನತಕ್ಕಂಥದ್ದು ಇತ್ತು. ಅದನ್ನು ಇವತ್ತು 2.5 ಲಕ್ಷ ರೂಪಾಯಿಗಳಿಗೆ ಹೆಚ್ಚು ಮಾಡಿರತಕ್ಕಂಥದ್ದು ಮಾನ್ಯ ಯಡಿಯೂರಪ್ಪನವರ ಸರ್ಕಾರ.

(ಗೊಂದಲ)

ಅಧ್ಯಕ್ಷರು: ಎಲ್ಲರೂ ಕುಳಿತುಕೊಳ್ಳಿ. ಬಂಡೆಪ್ಪರವರೆ, ತಾವು continue ಮಾಡಿ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ: ಈಗ ಸಾಮಗ್ರಿಗಳ ಬೆಲೆ ಹೆಚ್ಚಾಗಿದ್ದರಿಂದ rate ಜಾಸ್ತಿ ಮಾಡುವುದಕ್ಕೆ ಒತ್ತು ಕೊಟ್ಟಿದ್ದೀರಿ. ಹಾಗಾಗಿ ನೀವು ಏನು ದೊಡ್ಡ ಸಾಧನೆ ಮಾಡಿದ್ದೀರಿ? ಹಿಂದೆ 50 ಸಾವಿರ ರೂಪಾಯಿಗಳಿಗೆ ಬರುತ್ತಿದ್ದದ್ದು ಈಗ 70–80 ಸಾವಿರ ರೂಪಾಯಿಗಳಿಗೆ ಬರುತ್ತಿದೆ. ನಮಗೆ ಗೊತ್ತಿಲ್ಲವೇ? ನಾವು ಕೂಡ ರೈತರೇ. ದಿನ ಬೆಳಗಾದರೆ ಅದೇ ಕೆಲಸವನ್ನು ನಾವು ಮಾಡುತ್ತೇವೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ: ಸಣ್ಣ ನೀರಾವರಿ ಇಲಾಖೆಯಿಂದ ಅವರು ಮಾಡಿರಲಿಲ್ಲ. ಅವರೂ ಸಹ ಮಂತ್ರಿಯಾಗಿದ್ದರು.

(ಗೊಂದಲ)

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ: ಮಂತ್ರಿಯವರೆ, ನೀವು ಸಣ್ಣ ನೀರಾವರಿ ಇಲಾಖೆಯಿಂದ ಏತ ನೀರಾವರಿ ಯೋಜನೆ ಮಾಡಿದ್ದೀರಿ, ನಿಮಗೆ ಧನ್ಯವಾದಗಳು, ನಾವು ಇಲ್ಲವೆಂದು ಹೇಳಿಲ್ಲ. ನೀವು ಗಂಗಾಕಲ್ಯಾಣ ಯೋಜನೆಯಲ್ಲಿ ಏನು ಮಾಡಿದ್ದೀರಿ? ಕೇವಲ unit cost ಜಾಸ್ತಿ ಮಾಡಿದ್ದನ್ನು ನೀವು ಏನು ಹೇಳುತ್ತೀರಿ?

ಶ್ರೀ ಗೋವಿಂದ ಎಂ. ಕಾರಜೋಳ: ಅದೂ ಕೂಡ ಗಂಗಾಕಲ್ಯಾಣ ಯೋಜನೆ. SC/ST ಯವರ ಕಲ್ಯಾಣಕ್ಕಾಗಿಯೇ ಮಾಡಿರುವಂಥದ್ದು.

ಶ್ರೀ ಅಮರೇಗೌಡ ಲಿಂಗನಗೌಡ ಬೈಯ್ಯಾಪುರ: ಅದು ಸಾಮೂಹಿಕ ಗಂಗಾಕಲ್ಯಾಣ ಯೋಜನೆ. ನಾವು ಒಪ್ಪುತ್ತೇವೆ, ಇಲ್ಲವೆಂದು ಹೇಳುವುದಿಲ್ಲ. ಈ ವರ್ಷದ ಬಜೆಟ್‌ನಲ್ಲಿ ಗಂಗಾಕಲ್ಯಾಣಕ್ಕಾಗಿ 100 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಅದು ಎಲ್ಲಿಗೆ ಸಾಕಾಗುತ್ತದೆ? ಒಂದು constituency ಗೆ 10 borewell ಗಳನ್ನು ಕೊಡುವುದಕ್ಕೆ ಸಹ ಸಾಕಾಗುವುದಿಲ್ಲ.

ಅಧ್ಯಕ್ಷರು: ಬಯ್ಯಾಪುರರವರೆ, ತಾವು ಕುಳಿತುಕೊಳ್ಳಿ. ಹೀಗೆ ಪ್ರತಿಸಲ ಮಾತನಾಡಿದರೆ ಹೇಗೆ?

ಶ್ರೀ ಬಂಡೆಪ್ಪ ಕಾಶೆಂಪೂರ: ಗಂಗಾಕಲ್ಯಾಣ ಯೋಜನೆಯಲ್ಲಿ ಆಯ್ಕೆ ಸಮಿತಿ ಅಧ್ಯಕ್ಷರಾಗಿ ಆಯಾ ಶಾಸಕರೇ ಆಗಿರುತ್ತಾರೆ. ಈಗ ನಮ್ಮ ಕ್ಷೇತ್ರಗಳಲ್ಲಿ

ನಾವು SC ಗೆ 30, ST ಗೆ 32, ಬಿಸಿಎಂಗೆ 17–18, ಅಂದರೆ ಇವರು ಯಾವ್ಯಾವುದಕ್ಕೋ 2 ಕೋಟಿ, 5 ಕೋಟಿ, 25 ಕೋಟಿ ರೂಪಾಯಿಗಳನ್ನು ಕೊಡುತ್ತಾರೆ. ಈ SC/ST, minority ಗೆ ಇವರಿಗೆಲ್ಲ ಏಕೆ 50 ಕೋಟಿ, 100 ಕೋಟಿ ರೂಪಾಯಿಗಳನ್ನು ಕೊಡಬಾರದು? ಕೊಡಿ. ಅದು ಬಿಟ್ಟು ಎಲ್ಲೋ 4 borewell ಗಳನ್ನು ಕೊಟ್ಟಿದ್ದಕ್ಕೆ, ಸ್ವಲ್ಪ ಹಣ ಹೆಚ್ಚು ಮಾಡಿದ್ದಕ್ಕೆ ನಾವು ಅಷ್ಟು ಮಾಡಿದ್ದೇವೆ, ನಾವು ಇಷ್ಟು ಮಾಡಿದ್ದೇವೆಂದು ಹೇಳುತ್ತಾರೆ. ಕಾರಜೋಳರವರಿಗೆ ಕಳಕಳಿ ಇದೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ಜನಾಂಗಕ್ಕೆ ಇನ್ನೂ ಹೆಚ್ಚಿನ ಸವಲತ್ತನ್ನು ಕೊಡಬೇಕು. ನಾವು ಹಿಂದೆ ಎಂ.ಎಲ್.ಎ ಆಗಿದ್ದಾಗ ನೋಡಿದ್ದೇವೆ. ಆವಾಗ ಗಂಗಾಕಲ್ಯಾಣ ಯೋಜನೆಗೆ ಹೆಚ್ಚು ಇದ್ದ ಹಣ ಈಗ ಬಜೆಟ್‌ನಲ್ಲಿ ಕಡಿಮೆಯಾಗಿದೆ. ನಮ್ಮ ಭಾಗದಲ್ಲಿ ನಂಜುಂಡಪ್ಪ ಕಮಿಷನ್‌ಗೆ ಹಣ ಬರುತ್ತಿದೆ. ಸನ್ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರು ಇದ್ದಾಗ ಬೆಳಗಾಂ ಅಧಿವೇಶನದಲ್ಲಿ ಅದಕ್ಕೆ approve ಮಾಡಿ 1,500 ಕೋಟಿ ರೂಪಾಯಿಗಳು ಮೊದಲ ವರ್ಷ release ಆಯಿತು. ಆಗ ಯಡಿಯೂರಪ್ಪನವರೇ Finance Minister ಆಗಿದ್ದರು. 2500 ಕೋಟಿ ರೂಪಾಯಿಗಳನ್ನು ವರ್ಷ ವರ್ಷಕ್ಕೆ ಇಟ್ಟುಕೊಂಡು ಬಂದಿದ್ದಾರೆ. ಆದರೆ, ಇವತ್ತಿನ ವರೆಗೆ ಕೇವಲ 4605 ಕೋಟಿ ರೂಪಾಯಿಗಳಷ್ಟು ಮಾತ್ರ ಖರ್ಚು ಮಾಡಿದ್ದಾರೆ. ಇದು ಸುಮಾರು 10 ಸಾವಿರ ಕೋಟಿ ರೂಪಾಯಿ ಆಗಬೇಕಾಗಿತ್ತು. ನಾವೆಲ್ಲ ಆ most backward areaದಿಂದ ಬರುತ್ತೇವೆ. ಅಲ್ಲಿ ಇವತ್ತಿಗೂ ಸರಿಯಾಗಿ ಕುಡಿಯುವುದಕ್ಕೆ ನೀರು ಇಲ್ಲ. ಇಂಥ ಸಮಯದಲ್ಲಿಯೂ ಸಹ ಅಲ್ಲಿಗೆ regular plan ನಲ್ಲಿ ಹಣ ಹೋಗುತ್ತಿದೆಯೇ ವಿನ: special package ನಲ್ಲಿ ಇದಕ್ಕೆ ಹಣ ಹೋಗುತ್ತಿಲ್ಲ ಎಂದು ತಮ್ಮ ಗಮನಕ್ಕೆ ನಾನು ತರುವುದಕ್ಕೆ ಬಯಸುತ್ತೇನೆ. ಈ ವರ್ಷ 2975 ಕೋಟಿ ರೂಪಾಯಿಗಳ allocation ಕೊಟ್ಟಿದ್ದಾರೆ. ಅಂದರೆ, ಸುಳ್ಳು, bogus ಏಕೆ ನೀವು ಹೇಳುತ್ತಿದ್ದೀರಿ. Correct ಆಗಿ ಪ್ರಾಮಾಣಿಕತೆಯಿಂದ ನೀವು ಮಾಡಿದರೆ ನಾವು ಮೆಚ್ಚುಗೆ ನೀಡುತ್ತೇವೆ, ನಾವೂ table ತಟ್ಟುತ್ತೇವೆ. ಒಳ್ಳೆಯ ಕೆಲಸ ಮಾಡಿದರೆ ನಾವು ವಿರೋಧ ಪಕ್ಷದವರು ಸಹ ಚಪ್ಪಾಳೆ ತಟ್ಟುತ್ತೇವೆ. ನಾವು

table ತಟ್ಟುವುದಿಲ್ಲವೇ? ಇನ್ನೊಂದು shocking news ಹೇಳುತ್ತೇನೆ. ನಮ್ಮ ಜಿಲ್ಲಾ incharge ಮಂತ್ರಿಯವರು ಸದನದಲ್ಲಿಲ್ಲ. ನಾನು ನಮ್ಮ ಜಿಲ್ಲಾ KDP ಯಲ್ಲಿದ್ದೆ. 2007ರಲ್ಲಿ ಸುವರ್ಣ ಗ್ರಾಮ ಯೋಜನೆ ಬಂತು. 2007ರ ಒಂದೇ ವರ್ಷದಲ್ಲಿ ಈ ಯೋಜನೆಗೆ 17 ಕೋಟಿ ರೂಪಾಯಿಗಳನ್ನು release ಮಾಡಿದ್ದಾರೆ. ಬಿಜೆಪಿ ಸರ್ಕಾರ ಬಂದ ಮೂರು ವರ್ಷಗಳಲ್ಲಿ ಕೇವಲ 14 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದ್ದೀರಿ. ಈಗ ನೀವು ಬೆಂಚು ತಟ್ಟಿ. ಗೊತ್ತಾಗುತ್ತದೆ. ಆವತ್ತು ಕೂಡ ಯಡಿಯೂರಪ್ಪನವರೇ Finance Minister ಆಗಿದ್ದರು. 3 ಸಲ ಗುಲಬರ್ಗಾದಲ್ಲಿ cabinet meeting ಮಾಡಿದರು. ರಾತ್ರಿಯೆಲ್ಲ ಪಟ್ಟಿ ಮಾಡಿ ಎಲ್ಲ ಶಾಸಕರಿಗೆ 8–10 ಹಳ್ಳಿಗಳನ್ನು ಕೊಡಬೇಕು. ಒಂದೇ ವರ್ಷದಲ್ಲಿ ಸುವರ್ಣ ಗ್ರಾಮದಿಂದ ಇಡೀ ಭಾರತ ದೇಶವೇ change ಆಗುತ್ತದೆಂಬ ನಿಟ್ಟಿನಲ್ಲಿ ಇದ್ದಿರಿ. ಎಲ್ಲಿ ಹೋಯಿತು? ಹಣವನ್ನು ಏಕೆ ಕೊಡಲಿಲ್ಲ? ಗ್ರಾಮೀಣ ಪ್ರದೇಶದ ಉದ್ಧಾರವಾಗಬೇಕೆಂದರೆ ಹೇಗೆ ಆಗುತ್ತದೆ? ಈ ನಿಟ್ಟಿನಲ್ಲಿ ಈ ಸರ್ಕಾರ ಇವರ ಇಚ್ಛಾಶಕ್ತಿ ಪ್ರದರ್ಶಿಸಬೇಕು. ನಾವು ಏಕೆ ಇಷ್ಟು ಟೀಕೆಟಿಪ್ಪಣಿ ಮಾಡುತ್ತಿದ್ದೇವೆಂದರೆ, ಇವರು 3 ವರ್ಷಗಳಿಂದ ರೈತರ ಬಗ್ಗೆ ಚಿಂತನೆ ಮಾಡಿ ರೈತರ ಪರವಾಗಿ ಹಲವಾರು ಕೆಲಸ ಮಾಡಿದ್ದರೆ ಇವರದು ಸರಿ, ಇವರು ಇವತ್ತು ಪ್ರಾಮಾಣಿಕವಾಗಿ ರೈತರ ಪರವಾಗಿ ಬಜೆಟ್ ತಂದಿದ್ದಾರೆ, ರೈತರ ಪರವಾಗಿ ಮಾಡುತ್ತಿದ್ದಾರೆಂದು ಹೇಳಬಹುದಾಗಿತ್ತು. ಆದರೆ, ಇವರ ಭ್ರಷ್ಟತೆ, ಇವರ ಹಗರಣಗಳು, ಇಡೀ India level ನಲ್ಲಿ, ಎಲ್ಲಾ magazine ಗಳಲ್ಲಿ ಎಲ್ಲಕ್ಕಿಂತ ಭ್ರಷ್ಟ ಸರ್ಕಾರ ಯಾವುದೆಂದರೆ ಕರ್ನಾಟಕದಲ್ಲಿರುವ ಬಿಜೆಪಿ ಸರ್ಕಾರದ್ದು ಎಂದು ಬಂತು. ಅದನ್ನೆಲ್ಲ ಮುಚ್ಚಿಹಾಕಬೇಕೆಂದು ಸದನ ಕರೆಯಬೇಕು, ಇದಕ್ಕೊಂದು immediate ಹೊಸ ರೂಪ ಕೊಡಬೇಕೆಂಬ ನಿಟ್ಟಿನಲ್ಲಿ ಇದೊಂದು ನಾಟಕದ ರೀತಿಯಲ್ಲಿ ಆಗಿದೆ ಎಂದು ನನಗನ್ನಿಸುತ್ತದೆ. ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡಿ, ಬೇಡ ಎಂದು ಹೇಳುವುದಿಲ್ಲ. ಏಕೆಂದರೆ ರೈತರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕಾರ ಮಾಡಿದ್ದೀರಿ. ಹಿಂದೆ ಎಲ್ಲ ಸಣ್ಣ ಸಣ್ಣ ಸುಳ್ಳು ಹೇಳಿದ್ದಾರೆ, ಈ ಬಜೆಟ್ ಮುಖಾಂತರ ದೊಡ್ಡ ಸುಳ್ಳು ಹೇಳುವವರಿದ್ದಾರೆಂದು ನಾನು ಟಿ.ವಿ. ಮೂಲಕ interview ಮಾಡಿದಾಗ

ಹೇಳಿದ್ದೆ. ಅದಕ್ಕಾಗಿ ನೀವು, ನಾವು ಸುಳ್ಳು ಹೇಳಿಲ್ಲ, ನಾವು ರೈತರ ಪರವಾಗಿ ಕೆಲಸ ಮಾಡುತ್ತಿದ್ದೇವೆಂಬ ನಿಟ್ಟಿನಲ್ಲಿ ಇಚ್ಛೆ ಪ್ರದರ್ಶನ ಮಾಡಿ. ಅದಕ್ಕೆ ದೇವರು ಒಳ್ಳೆಯದು ಮಾಡುತ್ತಾರೆ, ರೈತರೂ ಒಳ್ಳೆಯದು ಮಾಡುತ್ತಾರೆ. ಹಾಗಾಗಿ ನೀವು ಭಾಗ-1, ಭಾಗ-2 ಎಂದು ಮಾಡಿ ಏನು ಬಜೆಟ್ present ಮಾಡಿದ್ದೀರಿ, ಇದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ, ಏನೋ ಉದ್ದೇಶವಿದೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, urgent election ಬರುತ್ತದೆ ಎಂದು ಹೇಳುತ್ತಿದ್ದರು. Election ಬರಲಿ, ಯಾವುದೇ ಬರಲಿ ಎಲ್ಲದಕ್ಕೂ ready ಇದ್ದೇವೆ. ಇಷ್ಟು ಹೊತ್ತು ಮಾತನಾಡಲಿಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ದಿನೇಶ್ ಗುಂಡೂರಾವ್(ಗಾಂಧಿನಗರ): ಮಾನ್ಯ ಅಧ್ಯಕ್ಷರೆ, 2011-12ನೇ ಸಾಲಿನ ಆಯವ್ಯಯದ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಧನ್ಯವಾದ ಹೇಳುತ್ತಾ, ಈ ಆಯವ್ಯಯ ಇಡೀ ದೇಶದ ಗಮನ ಸೆಳೆದಿದೆ. ಏಕೆಂದರೆ, ಹೊಸ ರೀತಿಯಲ್ಲಿ ಕೃಷಿ ಬಜೆಟ್ ಅನ್ನು ಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದರು. ಬಹುಶ: ರಾಷ್ಟ್ರಮಟ್ಟದಲ್ಲಿ ಇದೊಂದು ಚರ್ಚೆಯಾಗತಕ್ಕಂಥ ವಿಷಯವಾಯಿತು. ಆದರೆ, ನಾನು ಹೇಳುವುದಕ್ಕೆ ಬಯಸುವುದೇನೆಂದರೆ, ಇದು ಕೃಷಿ ಬಜೆಟ್ ಅಲ್ಲ. ಬಜೆಟ್ ಪುಸ್ತಕವನ್ನು ಎರಡು ಪುಸ್ತಕವನ್ನಾಗಿ ಮಾಡಿ ಕೊಟ್ಟಿದ್ದಾರೆಯೇ ಹೊರತು ಇದನ್ನು ಪ್ರತ್ಯೇಕ ಬಜೆಟ್ ಎಂದು ನಾವು ಕರೆಯುವುದಕ್ಕೆ ಸಾಧ್ಯವೇ ಇಲ್ಲ. ಕೇಂದ್ರದಲ್ಲಿ railway budget ಎಂದು ಕೊಡುತ್ತಾರೆ ಮತ್ತು ಸಾಮಾನ್ಯ ಬಜೆಟ್ ಎಂದು ಪ್ರಸ್ತಾಪ ಮಾಡುತ್ತಾರೆ. Railway budget ಮಾಡಿದಾಗ ಅದಕ್ಕೆ ಬರುವ ಆದಾಯಗಳು, ಅದಕ್ಕೆ ಬರತಕ್ಕಂಥ ಖರ್ಚುಗಳು, ಎಲ್ಲವನ್ನೂ ಕೂಡ ಪ್ರಸ್ತಾವನೆ ಮಾಡುತ್ತಾರೆ ಮತ್ತು ಎಲ್ಲಾ account statementಗಳನ್ನೂ ಕೊಡುತ್ತಾರೆ. ಯಾವ್ಯಾವ ರಾಜ್ಯಗಳಲ್ಲಿ ಎಷ್ಟೆಷ್ಟು ಖರ್ಚು ಮಾಡುತ್ತಿದ್ದೇವೆ, ಯಾವ್ಯಾವ ಹೊಸ ಹೊಸ ಯೋಜನೆಗಳನ್ನು ಹಾಕಿಕೊಳ್ಳುತ್ತಿದ್ದೇವೆ, ಎಲ್ಲವನ್ನೂ ಕೂಡ ಒಂದು statement of accounts, Receipts and expenditure ಮಾಡುತ್ತಾರೆ. ಆದರೆ, ಇದು ಆ ರೀತಿ

ಅಲ್ಲ. ಬಜೆಟ್ ಎಂದು ಹೇಳಿದಾಗ ಒಂದು statement of accounts ಇರಬೇಕಾಗಿತ್ತು. ಅದು ಕೂಡ ಕೊಟ್ಟಿಲ್ಲ. ಆದ್ದರಿಂದ, ಇದು ಒಂದು ರೀತಿಯಾಗಿ ಜನಪ್ರಿಯತೆಗೋಸ್ಕರ ಮತ್ತು ಜನರ ದೃಷ್ಟಿಯನ್ನು, ಗಮನವನ್ನು ಬೇರೆ ಕಡೆಗೆ ಸೆಳೆಯುವುದಕ್ಕೋಸ್ಕರ ಮಾಡಿರತಕ್ಕಂಥದ್ದೇ ಹೊರತು ನಿಜವಾಗಿಯೂ ಕೂಡ ಇದನ್ನು ಕೃಷಿ ಬಜೆಟ್ ಎಂದು ಹೇಳತಕ್ಕಂಥದ್ದು ಅಲ್ಲ.

ಇದನ್ನು ಕೇವಲ ಕೃಷಿ ಪುಸ್ತಕವೆಂದು ಹೇಳಬಹುದಷ್ಟೇ. ಬಹುಶ: ಇದಕ್ಕೆ ನಾವು ಹೆಚ್ಚಿನ ಪ್ರಚಾರ ಕೊಡುವ ಅವಶ್ಯಕತೆ ಇಲ್ಲವೆಂದು ನಾನು ಭಾವಿಸಿದ್ದೇನೆ. ಪತ್ರಿಕೆಗಳಲ್ಲಿ, ಮಾಧ್ಯಮದಲ್ಲಿ ಎಲ್ಲಾ ಕಡೆ ಮುಖ್ಯಮಂತ್ರಿಯವರು ಕೃಷಿಗೆ ಈ ಸಲ ಹೆಚ್ಚು ಒತ್ತು ಕೊಡುತ್ತಿದ್ದಾರೆಂದು ದೊಡ್ಡ headlines ನಲ್ಲಿ ಪ್ರಚಾರ ಕೊಟ್ಟರು. ರೈತರ ಪರ ಇರುವ ಯೋಜನೆಗಳನ್ನು ಹಾಕಿ ಕೊಳ್ಳುತ್ತಿದ್ದಾರೆಂದು ಅಗ್ಗದ ಪ್ರಚಾರ ಆಯಿತು. ಕಳೆದ ಮೂರು ವರ್ಷಗಳಲ್ಲಿ ಎಲ್ಲವೂ ಕೂಡ ಪ್ರಚಾರದ ದೃಷ್ಟಿಯಿಂದ ಹೆಚ್ಚು ಮಾಡುತ್ತಿದ್ದಾರೆಯೇ ಹೊರತು ಅಲ್ಲಿ ಏನು ಅನುಷ್ಠಾನವಾಗುತ್ತಿದೆ? ಅಲ್ಲಿ ಏನು ಕಾರ್ಯಗತವಾಗುತ್ತಿದೆ? ಗುಣಮಟ್ಟವೇನು? ಈ ಕಾರ್ಯಕ್ರಮಗಳು ಜನರಿಗೆ ಮುಟ್ಟುತ್ತಿದೆಯೇ, ಇಲ್ಲವೇ ಎಂದು ನೋಡುವ ತಾಳ್ಮೆ, ಸಂಯಮ ಇಲ್ಲ. ಎಲ್ಲವನ್ನೂ ಚುನಾವಣೆ ದೃಷ್ಟಿಯಿಂದ, ಮತಕ್ಕೋಸ್ಕರ ಮಾಡುವುದು ಮಾಡುತ್ತಿದ್ದಾರೆ. ಆ ರೀತಿಯಾದ ಪರಿಸ್ಥಿತಿ ನಮ್ಮ ರಾಜ್ಯಕ್ಕೆ ಬಂದಿದೆ. ಇದು ಕೃಷಿ ಬಜೆಟ್ ಅಲ್ಲ. ಇದು ಕೇವಲ 2 ಪುಸ್ತಕಗಳಲ್ಲಿ ಕೊಟ್ಟಿರುವ ಒಂದು ಸಾಮಾನ್ಯ ಬಜೆಟ್ ಎಂದು ಹೇಳಬಯಸುತ್ತೇನೆ. ಕೃಷಿಗೆ ನಿಜವಾಗಿ ಒತ್ತು ಕೊಡಬೇಕಾಗಿತ್ತು. ಏಕೆಂದರೆ, ಇವರು ರೈತರ ಹೆಸರಿನಲ್ಲಿಯೇ ಪ್ರಮಾಣವಚನ ಸ್ವೀಕರಿಸಿದ್ದಾರೆ. ರೈತರಿಗೆ ಬೇಕಾಗಿರುವುದು ನೀರಾವರಿ. ಈಗಾಗಲೇ ನಮ್ಮ ವಿರೋಧ ಪಕ್ಷದ ನಾಯಕರು ವಿಷಯ ಪ್ರಸ್ತಾಪಿಸಿ ಪೂರ್ತಿ ಅಂಕಿಅಂಶಗಳನ್ನು ಹೇಳಿದ್ದಾರೆ. ಎಸ್.ಎಂ. ಕೃಷ್ಣ, ಧರಂಸಿಂಗ್ ಸರ್ಕಾರ ಇದ್ದಾಗ, ಸಿದ್ದರಾಮಯ್ಯನವರು ವಿತ್ತ ಸಚಿವರಾಗಿದ್ದ ಸಂದರ್ಭದಲ್ಲಿ ಕೊಟ್ಟ ಆದ್ಯತೆ, ಇವರು ಪ್ರಮಾಣವಚನ ಸ್ವೀಕಾರ ಮಾಡುವಾಗ ಹೇಳಿದಂತೆ irrigation ಗೆ grants ಕೊಡುವುದಕ್ಕೆ plan ಮಾಡಿದ್ದರೆ ಒಪ್ಪಬಹುದಿತ್ತು. ಈ ಸಲ ನೀರಾವರಿಗೆ ಹೆಚ್ಚು ಹಣ ಕೊಟ್ಟಿದ್ದೇವೆಂದು ಪ್ರಚಾರ

ತೆಗೆದುಕೊಂಡಿದ್ದಾರೆ. ಈ ಸಲ ಇವರು 6843 ಕೋಟಿ ರೂಪಾಯಿಗಳನ್ನು ನೀರಾವರಿಗೆ ಕೊಡುತ್ತಿದ್ದೇವೆಂದು ಹೇಳುವ ಮೂಲಕ ಮಹತ್ವ ಕೊಡುವ ಪ್ರಯತ್ನ ಮಾಡಿದ್ದಾರೆ. ಆದರೆ, plan outlay ಯಲ್ಲಿ 6843 ಕೋಟಿ ರೂಪಾಯಿ ಕೊಟ್ಟಿದ್ದಾರೆ, ಇದನ್ನು ಗಮನಿಸಿದಾಗ, ಹಿಂದಿನ ಸರ್ಕಾರಗಳು ಕೊಟ್ಟ percentage ತೆಗೆದುಕೊಂಡಾಗ ಆಗಿನ ಸರ್ಕಾರಗಳ ಪ್ರಕಾರ ಅವರು ನೀರಾವರಿಗೆ ಸುಮಾರು 30–40% ವರೆಗೂ ಕೊಡುತ್ತಿದ್ದರು. ಕೃಷಿ ಕ್ಷೇತ್ರವನ್ನು ನಾವು ಇನ್ನೂ ಮೇಲ್ದರ್ಜೆಗೆ ಏರಿಸಬೇಕು, ಆಹಾರ ಉತ್ಪಾದನೆ ಜಾಸ್ತಿ ಮಾಡಬೇಕು, ಕೃಷಿಗೆ ಇನ್ನೂ ಹೆಚ್ಚಿನ ಭೂಮಿ ಸೇರ್ಪಡೆಯಾಗಬೇಕು ಎನ್ನುವ ಇಚ್ಛಾಶಕ್ತಿ ಇದ್ದಿದ್ದರೆ ಹೆಚ್ಚು percent ಹಣ ಇಡುತ್ತಿದ್ದರು. ತಾವೆಲ್ಲರೂ ನೋಡಿರುವ ಹಾಗೆ ಆಂಧ್ರಪ್ರದೇಶದಲ್ಲಿ ನೀರಾವರಿಗೆ ಸುಮಾರು ಲಕ್ಷ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ಯೋಜನೆ ಹಾಕಿಕೊಂಡಿದ್ದಾರೆ. ಆ ರೀತಿಯ ಯೋಜನೆ ಇಲ್ಲಿ ಮಾಡಬೇಕಾಗಿತ್ತು. ನಾನು ಹಿಂದಿನ ಒಂದು ಉದಾಹರಣೆ ಹೇಳುತ್ತೇನೆ. ಇವರು 30% ಆದರೂ ಹಣ ಕೊಟ್ಟಿದ್ದರೆ ಸುಮಾರು 5 ಸಾವಿರ ಕೋಟಿ ರೂಪಾಯಿಗಳಷ್ಟು ಹೆಚ್ಚು ಅನುದಾನ ನೀರಾವರಿಗೆ ಬರುತ್ತಿತ್ತು. ಸುಮಾರು 11400 ಕೋಟಿ ರೂಪಾಯಿಗಳಷ್ಟು ಆಗುತ್ತಿತ್ತು. ಕಳೆದ 3 ವರ್ಷಗಳಲ್ಲಿ ಈ ರೀತಿ ಮಾಡಿದ್ದರೆ ಎಷ್ಟರಮಟ್ಟಿಗೆ ನೀರಾವರಿ ಯೋಜನೆಗಳು ಅನುಷ್ಠಾನವಾಗುತ್ತಿದ್ದವು? ರೈತರಿಗೆ ಬೇಕಾಗಿರುವುದು ನೀರು ಮತ್ತು ವಿದ್ಯುಚ್ಛಕ್ತಿ. ಈಗಾಗಲೇ ಎಲ್ಲರೂ ಮಾತನಾಡಿದ ಹಾಗೆ, ರೈತರಿಗೆ ರಸಗೊಬ್ಬರ, ಬೀಜ, ಬೆಂಬಲ ಬೆಲೆ ಬೇಕಾಗಿದೆ. ಆದರೆ, ಯೋಚನೆ ಮಾಡಬೇಕಾಗಿರುವುದೇನೆಂದರೆ, ರೈತರಿಗೆ subsidy ಕೊಡುವುದಲ್ಲ. ಉಚಿತವಾಗಿ ಹಣ ಕೊಡುವುದಲ್ಲ. ವರ್ಷಕ್ಕೆ 10 ಸಾವಿರ ರೂಪಾಯಿ ಕೊಡುತ್ತೇವೆಂದು ಹೇಳಿದ್ದಾರೆ. ನನ್ನ ಪ್ರಕಾರ ಅದು ಬೇಕಾಗಿಲ್ಲ. ರೈತರಿಗೆ ತಾವು ತಮ್ಮ ಕಾಲ ಮೇಲೆ ನಿಲ್ಲುವ ಶಕ್ತಿ ಬೇಕಾಗಿದೆ. ಸರ್ಕಾರದ ಹೆಚ್ಚಿನ ಸಹಾಯವಿಲ್ಲದೆ ತಮ್ಮ ಸ್ವಂತ ದುಡಿಮೆ ಮೇಲೆ ನಿಲ್ಲುವ ಶಕ್ತಿ ಬೇಕು. ಅದಕ್ಕೆ ನೀರಿನ ಲಭ್ಯತೆ ಬೇಕಾಗಿದೆ. ನಾವು ಮೈಸೂರು ಪ್ರಾಂತ್ಯದಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಅಭಿವೃದ್ಧಿ ಆಗಿರುವುದನ್ನು ನೋಡಿದರೆ, ಹಿಂದೆ ಕಟ್ಟಿರುವ

ಅಣೆಕಟ್ಟುಗಳಿಂದ, ನೀರಾವರಿ ಯೋಜನೆಗಳಿಂದ, ಅಲ್ಲಿನ ರೈತರು ಬಹಳಷ್ಟು ಆರ್ಥಿಕವಾಗಿ ಬೆಳೆಯುವುದಕ್ಕೆ ಅವಕಾಶವಾಯಿತು. ಆ ದೃಷ್ಟಿಯಿಂದ ಮಾಡಬೇಕಾಗಿತ್ತೇ ಹೊರತು ಕೇವಲ ರೈತರಿಗೆ ವರ್ಷಕ್ಕೆ 10 ಸಾವಿರ ರೂಪಾಯಿ ಕೊಡುತ್ತೇವೆಂದು ಹೇಳಿ ಏನನ್ನು ಮಾಡುವುದಕ್ಕೆ ಇವರು ಹೊರಟಿದ್ದಾರೆ? ಇವರು ಒಂದು ಕಡೆ ಚುನಾವಣೆಗಳಲ್ಲಿ ಮತದಾರರನ್ನು ಹಣದ ಮೂಲಕ, ಭ್ರಷ್ಟಾಚಾರದ ಮೂಲಕ ಸೆಳೆಯುತ್ತಾರೆ. ಇನ್ನೊಂದು ಕಡೆ ಸರ್ಕಾರದ ಹಣವನ್ನೂ ಕೂಡ ಅದಕ್ಕೇ ಉಪಯೋಗ ಮಾಡುವಂಥ ಪ್ರಯತ್ನ ಮಾಡುತ್ತಿದ್ದಾರೆ. ಇದು ಸರ್ಕಾರದ ದುಂದು ವೆಚ್ಚವಾಗಿದೆ. ಇದನ್ನು ಯಾರೂ ಕೂಡ ಕೇಳಲಿಲ್ಲ. ಆ ಹಣವನ್ನೆಲ್ಲ ನೀವು ಇದಕ್ಕೇ ಹಾಕಿಕೊಳ್ಳಿ. ಕಳೆದ ಸಾರಿ ಜಲಶ್ರೀ ಯೋಜನೆ ಮಾಡುತ್ತಿದ್ದೇವೆ, ಮಳೆನೀರು ಸಂಗ್ರಹಣೆ ಮಾಡುವ ಹೆಚ್ಚು ಕಡಿಮೆ 500 ಕೋಟಿ ರೂಪಾಯಿಗಳ ದೊಡ್ಡ ಯೋಜನೆ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. 500 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಮಳೆ ನೀರು ಸಂಗ್ರಹ ಮಾಡುವ ಸ್ಥಾವರಗಳನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದರು. ಆದರೆ, ಆ 500 ಕೋಟಿ ರೂಪಾಯಿಗಳ ಯೋಜನೆಯಲ್ಲಿ, ಜಲಶ್ರೀ ಯೋಜನೆಯಲ್ಲಿ 2 ಲಕ್ಷ ಲೀಟರ್ ನೀರು ಸಂಗ್ರಹಣ ಮಾಡುವ ಸ್ಥಾವರ ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದರಲ್ಲಿ ಬಿಡುಗಡೆಯಾಗಿರುವುದು ಏನೂ ಇಲ್ಲ. ಅದಕ್ಕೆ ಹಣ ಬಿಡುಗಡೆಯಾಗಿಲ್ಲ. ಬಿಡುಗಡೆ ಮಾಡದೆ ಅದು ಕೇವಲ ಕಳೆದ ಬಜೆಟ್‌ನಲ್ಲಿ ಘೋಷಣೆ ಆಯಿತು. ಕಳೆದ ವರ್ಷ ಅದಕ್ಕೆ ತಾವು ಏಕೆ ಹಣ ಕೊಡಲಿಲ್ಲ? ಅದನ್ನು ಸ್ಥಾಪನೆ ಮಾಡಲಿಕ್ಕೆ ಏಕೆ ಆಗಲಿಲ್ಲ? ಇದು ಮುಖ್ಯವಾದ ಪ್ರಶ್ನೆ. ನೀವು ಅದನ್ನು ಮಾಡುವುದಕ್ಕೆ ಹೋಗುವುದಿಲ್ಲ. ನೀರಾವರಿಗೆ ಹಣ ಕೊಡುವುದಕ್ಕೆ ಹೋಗುವುದಿಲ್ಲ. ಮತ್ತೆ ಹೇಗೆ ನೀವು ನಮ್ಮ ಜನರನ್ನು ಅಭಿವೃದ್ಧಿ ಮಾಡುತ್ತೀರಿ? ಇದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಕೃಷಿಗೆ ಒತ್ತು ಕೊಡುವ ಕೆಲಸವಾಗಿಲ್ಲ. ಕೃಷಿಗೆ ಹೆಚ್ಚು ಅನುದಾನ ಕೊಟ್ಟಿಲ್ಲ. ನೀರಾವರಿಗೆ ಅನುದಾನ ಕಡಿಮೆ ಇದೆ. ಜನರನ್ನು ಮುಟ್ಟುವ ಕೆಲಸಗಳನ್ನು ಮಾಡುವುದಕ್ಕೆ ನಿಮ್ಮ ಕೈಯಲ್ಲಿ ಆಗಿಲ್ಲ. ಈ ರೀತಿಯಾಗಿ ಮಾಡಿದರೆ ಹೇಗೆ? ಸಣ್ಣ ನೀರಾವರಿ ಸಚಿವರು ಸದನದಲ್ಲಿ ಇಲ್ಲ.

ಅಂತರಗಂಗಾ Micro Irrigation Corporation ಮಾಡುತ್ತೇವೆ ಎಂದು ಅದಕ್ಕೆ 100 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಕಳೆದ ಬಜೆಟ್‌ನಲ್ಲಿ announce ಮಾಡಿದರು. ಆದರೆ, ಇಲ್ಲಿಯವರೆಗೆ ಏನು ಮಾಡಿದ್ದಾರೆ? ಅದಕ್ಕೆ ಹಣ ಬಿಡುಗಡೆ ಮಾಡಿದ್ದಾರೆಯೇ ಎಂದರೆ ಏನೂ ಇಲ್ಲ. ಕೇವಲ ಪ್ರಚಾರಕ್ಕೋಸ್ಕರ ಮಾಡತಕ್ಕಂಥದ್ದು ಆಗಿದೆಯೇ ಹೊರತು ನಿಜಕ್ಕೂ ಯಾವುದೇ ರೀತಿ ಸಹಾಯವಾಗುತ್ತಿಲ್ಲ.

ಇನ್ನು, ರೈತರನ್ನು ವಿದೇಶ ಪ್ರವಾಸಕ್ಕೆ ಕರೆದುಕೊಂಡು ಹೋಗುತ್ತೇವೆಂದು ಹೇಳಿದ್ದರು. ಅದೂ ಆಗಲಿಲ್ಲ. ಆಹಾರ ಸಂಸ್ಕರಣ ಘಟಕಗಳನ್ನು ಮಾಡುತ್ತೇವೆ, 10 ಕೋಟಿ ರೂಪಾಯಿಗಳನ್ನು ಕೊಟ್ಟು capital support ಕೊಡುತ್ತೇವೆಂದು ಕಳೆದ ವರ್ಷ ಹೇಳಿದ್ದರು, ಅದೂ ಕೂಡ implement ಆಗಲಿಲ್ಲ. ಯಾವ ಆಧಾರದ ಮೇಲೆ ರೈತರನ್ನು ಅಭಿವೃದ್ಧಿ ಮಾಡುತ್ತಾರೆಂದು ಹೇಳಬೇಕು. ಜೆಟ್‌ನಲ್ಲಿ ಕೇವಲ announce ಮಾಡಿಕೊಂಡು ಹೋಗುತ್ತಿದ್ದಾರೆ. ನೋಡುವುದಕ್ಕೆ ಮಾತ್ರ figures ಬಹಳ ಚೆನ್ನಾಗಿರುತ್ತದೆ. ಇದೊಂದು ರೀತಿ ಕಾಲ್ಪನಿಕ ಲೋಕ, ಕಾಲ್ಪನಿಕ ಸ್ವರ್ಗ ಎಂದು ಹೇಳಬಹುದು. ನೋಡುವುದಕ್ಕೆ, ಕೇಳುವುದಕ್ಕೆ ಬಹಳ ಚೆನ್ನಾಗಿದೆ ಆದರೆ ಹಣ ಬಿಡುಗಡೆಯಾಗುವುದಿಲ್ಲ. ಬಿಡುಗಡೆಯಾಗಿರುವ ಹಣ ಅನುಷ್ಠಾನವಾಗುವುದಿಲ್ಲ ಮತ್ತು ಕೇವಲ ಬಜೆಟರಿ ಫಿಗರ್ಸ್ ಆಗಿ ಉಳಿಯುತ್ತದೆಯೇ ಹೊರತು ಯಾವುದೇ ರೀತಿಯಲ್ಲಿ ಜನರನ್ನು ಮುಟ್ಟುವುದಕ್ಕಾಗುವುದಿಲ್ಲ. ಎಲ್ಲಾ ಹಂತದಲ್ಲಿಯೂ ಕೂಡ ಹಣ ಬಿಡುಗಡೆಯಾಗಿಲ್ಲ. ಈ ಸರ್ಕಾರ ಬಂದ ನಂತರ ಕೃಷಿ, ನಗರಾಭಿವೃದ್ಧಿ, ಶಿಕ್ಷಣ ಈ ರೀತಿ ಸುಮಾರು 7–8 ಕ್ಷೇತ್ರಗಳಿಗೆ ಪ್ರತಿ ವರ್ಷ ಕೂಡ ಇವರು ಸುಮಾರು 20–28% ಉಳಿತಾಯ ಮಾಡುತ್ತಿದ್ದಾರೆ, ಅಂದರೆ ಖರ್ಚು ಮಾಡುತ್ತಿಲ್ಲ. Development ಗೆ use ಮಾಡುವ Capital expenditure ಏನಿದೆ ಅದನ್ನು ಇವರು ಕಳೆದ 5 ವರ್ಷಗಳಿಂದ ಖರ್ಚು ಮಾಡುತ್ತಿಲ್ಲ ಎಂದು ಇವತ್ತು ಹೊರಬಂದಿರುವ ಪುಸ್ತಕದಲ್ಲಿದೆ. 2008–09ರಲ್ಲಿ ಸುಮಾರು 28.67% ಹಣ ಉಳಿತಾಯವಾಗಿದೆ. ಅಂದರೆ, ಸುಮಾರು 30% capital expenditure ಅನ್ನು ಇವರು ಖರ್ಚು ಮಾಡಿಲ್ಲ. ಈ ರೀತಿಯಾದರೆ ಏನು

ಅಭಿವೃದ್ಧಿಯಾಗುತ್ತದೆಂದು ನೀವೇ ಯೋಚನೆ ಮಾಡಿ. ಯಾವುದೇ ಇಲಾಖೆ ತೆಗೆದುಕೊಳ್ಳಿ, ಅದೇ ರೀತಿ ಆಗುತ್ತಿದೆ. ಈಗಾಗಲೇ ಹೇಳಿದ ಹಾಗೆ ಮಹಿಳೆಯರಿಗೆ ಸೀರೆ ಕೊಡುವ ಯೋಜನೆ ಜಾರಿಗೆ ತಂದರು. ಮಹಿಳೆಯರ ಅಭಿವೃದ್ಧಿಗೋಸ್ಕರ ಒಂದು ನಿಗಮವೇ ಇದೆ. ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನೆ ಎಂದು ಮಾಡಿದ್ದು ಅದರ ಮೂಲಕ ಸಾಕಷ್ಟು ಹಣ ಖರ್ಚು ಮಾಡುತ್ತಾರೆ.

ಇವರು ಕಳೆದ ವರ್ಷ ಆ ಒಂದು ಯೋಜನೆಗೆ 1,722 ಕೋಟಿ ಅಲೋಕೇಷನ್ ಮಾಡಿದರು. ಆದರೆ ಕಳೆದ ಡಿಸೆಂಬರ್‌ವರೆಗೆ ಬರೀ 50% ಮಾತ್ರ ಬಿಡುಗಡೆಯಾಗಿ ಖರ್ಚಾಗಿದೆ. ಇವರಿಗೆ ಸೀರೆ ಕೊಡುವುದಕ್ಕೆ 200–400 ಕೋಟಿ ಇದೆ. ಆದರೆ, ಮಹಿಳಾ ಅಭಿವೃದ್ದಿ ಯೋಜನೆಗಳಿಗೆ ನಿಜವಾಗಲೂ ಮಹಿಳೆಯರಿಗೆ ಅನುಕೂಲವಾಗುವ ಕಾರ್ಯಕ್ರಮಗಳೇನಿವೆ, ಸಬ್ಸಿಡಿ ಇರಬಹುದು, ಲೋನ್ಸ್ ಇರಬಹುದು, ಸ್ವಂತ ಕಾಲ ಮೇಲೆ ನಿಲ್ಲುವ ಕಾರ್ಯಕ್ರಮ ಇರಬಹುದು, ಸಣ್ಣ ಬ್ಯುಸಿನೆಸ್ ಮಾಡತಕ್ಕಂಥದ್ದು ಇರಬಹುದು, ಬೇರೆ ಯಾವುದೇ ಇರಬಹುದು. ಅದಕ್ಕೆ ನೀವು ದುಡ್ಡು ಬಿಡುಗಡೆ ಮಾಡುತ್ತಿಲ್ಲವಲ್ಲ. ಸೀರೆ ಕೊಡುವುದಕ್ಕೆ ಈಗಾಗಲೇ 22–30 ಕೋಟಿ ಖರ್ಚು ಮಾಡಿದ್ದಾರೆ, ಆದರೆ, ಇಲ್ಲಿ ದುಡ್ಡು ಕೊಡುವುದಕ್ಕೆ ನೀವು ತಯಾರಿಲ್ಲ. ಇದು ಏನು ತೋರಿಸುತ್ತದೆ ಎಂದರೆ, ನಿಜವಾಗಿಯೂ ಇರುವ ಕಾರ್ಯಕ್ರಮಗಳ ಬಗ್ಗೆ ಗಮನವಿಲ್ಲ, ಯಾವುದು ಪ್ರಚಾರ ಕಡಿಮೆಯಿದ್ದು ಜನಗಳಿಗೆ ಅನುಕೂಲವಾಗುತ್ತದೆ ಅದರ ಬಗ್ಗೆ ಇವರಿಗೆ ಕಾಳಜಿಯಿಲ್ಲ, ಎಲ್ಲಿ ಹೆಚ್ಚು ಪ್ರಚಾರ ಸಿಗುತ್ತದೆ ಅದಕ್ಕೆ ನಿಮ್ಮ ಗಮನ ಹೋಗುತ್ತದೆಯೇ ವಿನಃ ನೈಜವಾಗಿ ಅನುಕೂಲವಾಗುವಂಥದಕ್ಕೆ ನಿಮ್ಮ ಪ್ರಯತ್ನವಿಲ್ಲ. ಸೀರೆ ಕೊಡುವ ಕಾರ್ಯಕ್ರಮದಲ್ಲಿ ಪಾಪ ಮುಖ್ಯಮಂತ್ರಿಗಳು ಇಡೀ ರಾಜ್ಯದ ತುಂಬಾ ಏಕೆ ಪ್ರವಾಸ ಮಾಡಬೇಕು? ಮುಖ್ಯಮಂತ್ರಿಗಳಿಗೆ ಬೇರೆ ಕೆಲಸವಿಲ್ಲವೆ? ಮುಖ್ಯಂತ್ರಿಗಳಾಗಿರುವವರಿಗೆ ದಿವಸಕ್ಕೆ 24 ಗಂಟೆಯಲ್ಲ 28 ಗಂಟೆ ಬೇಕು ಅಷ್ಟು ಒತ್ತಡವಿರುತ್ತದೆ. ಆದರೆ, ಇವರು ಅವರ ಆಂತರಿಕ ಗೊಂದಲಗಳು ಇದ್ದವಲ್ಲ ಅದರಿಂದ ಬಚಾವ್ ಆಗುವುದಕ್ಕೆ ಇಡೀ ರಾಜ್ಯ ಸುತ್ತಾಡುತ್ತಿದ್ದಾರೆ. ಸೀರೆ

ಕೊಡುವ ಯೋಜನೆ. ಈ ರೀತಿ ಆಡಳಿತ ಇದ್ದರೆ ಹೇಗೆ? ನಮ್ಮ ಬಜೆಟರಿ ಗ್ರ್ಯಾಂಟ್ಸ್ ಏಕೆ ಅನುಷ್ಠಾನವಾಗುತ್ತಿಲ್ಲ ಹೇಳಿ? ದುಡ್ಡು ಒಂದು ಕಡೆ ಇದೆಯೋ? ಇಲ್ಲವೋ ರಿಲೀಸ್ ಆಗಿರುವ ಹಣ ಏಕೆ ಖರ್ಚು ಮಾಡುತ್ತಿಲ್ಲ? ಏಕೆಂದರೆ, ನನ್ನ ಪ್ರಕಾರ ಇಲ್ಲಿರತಕ್ಕಂಥ 70% ಮಂತ್ರಿಗಳಿಗೆ ತಮ್ಮ ಇಲಾಖೆಯ ಮೇಲೆ ಆಸಕ್ತಿ ಇಲ್ಲ. ಕೆಲವು ಜನ ಇದ್ದಾರೆ. ಎಲ್ಲರೂ ಎಂದು ನಾನು ಹೇಳುವುದಿಲ್ಲ, ಕೆಲವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಆದರೆ, ಸುಮಾರು ಜನರಿಗೆ, ಅದು ಆರೋಗ್ಯ ಇಲಾಖೆಯಿರಬಹುದು, ಪ್ರವಾಸೋಧ್ಯಮ ಇಲಾಖೆಯಿರಬಹುದು, ಕೃಷಿ ಇಲಾಖೆಗಳಿರಬಹುದು, ಇನ್ನೂ ಅನೇಕ ಇಲಾಖೆಗಳಿವೆ. ಯಾರಾದರೂ ಹೋಗಿ ಇನ್ಸ್‌ಫೆಕ್ಷನ್ ಮಾಡುವುದಾಗಲಿ, ಟೂರ್ ಮಾಡುವುದಾಗಲಿ, ರಿವ್ಯೂ ಮೀಟಿಂಗ್ ಮಾಡುವುದಾಗಲಿ; ಏನಾಗಿದೆ, ಎಲ್ಲಿ ಖರ್ಚಾಗಿದೆ, ಇದೇನಾಗಿದೆ ಎಂದು ಯಾರೂ ಕೂಡ ಮಾಡುತ್ತಿಲ್ಲ. ವಿಧಾನ ಸೌಧಕ್ಕೆ ಬರುವುದಿಲ್ಲ. ಈ ರೀತಿಯಾದರೆ ಅಧಿಕಾರಿಗಳಿಗೆ ಹೇಗೆ ಭಯ ಇರುತ್ತದೆ? ಇಂಪ್ಲಿಮೆಂಟೇಷನ್ ಹೇಗೆ ಆಗುತ್ತದೆ? ಅದರ ಬಗ್ಗೆ ಗಮನ ಕೊಡುತ್ತಿಲ್ಲ. ಮುಖ್ಯಮಂತ್ರಿಗಳ ಹಿಡಿತ ಮಂತ್ರಿಗಳ ಮೇಲೆ ಇಲ್ಲ. ಮುಖ್ಯಮಂತ್ರಿಗಳ ಕುರ್ಚಿ ಅಲ್ಲಾಡುತ್ತಿತ್ತು. ಮುಖ್ಯಮಂತ್ರಿಗಳ ಮಾತು ಯಾರು ಕೇಳುತ್ತಾರೆ? ಆಡಳಿತದಲ್ಲಿ ಈ ಪರಿಸ್ಥಿತಿಯಾಗಿ ಗೊಂದಲಗಳಾಗಿದೆ. ಆಡಳಿತ ವ್ಯವಸ್ಥೆ ರಾಜ್ಯದಲ್ಲಿ ಹದಗೆಟ್ಟಿದೆ. ಅದಕೋಸ್ಕರವೇ ನಿಮ್ಮ ಬಜೆಟರಿ ಅಲೋಕೇಷನ್ ಖರ್ಚಾಗುತ್ತಿಲ್ಲ. ಅನುಷ್ಠಾನವಾಗುತ್ತಿಲ್ಲ. ಬೇಡದಿರುವ ಸ್ಕೀಂಗಳಿಗೆ ಕೈ ಹಾಕುತ್ತಿದ್ದೀರಿ. ಏಕೆಂದರೆ, ನಿಮ್ಮ ನಿಮ್ಮ ಸಮಸ್ಯೆಗಳನ್ನು ನಿಮ್ಮ ನಿಮ್ಮ ಆಂತರಿಕ ವಿಚಾರಗಳನ್ನು ಬಗೆಹರಿಸುವುದಕ್ಕೆ ಇಂಥ ಸ್ಕೀಂಗಳನ್ನು ಹಾಕಿಕೊಂಡು ಹೋಗುತ್ತಿದ್ದೀರಿ. ಆಹಾರ ಇಲಾಖೆಯಲ್ಲಿಯೂ ಕೂಡ ಅದೇ ಗೊಂದಲ. ಮಾನ್ಯ ಶ್ರೀನಿವಾಸ್ ಪ್ರಸಾದ್‌ರವರು ಈಗಾಗಲೇ ರೇಷನ್ ಕಾರ್ಡುಗಳ ಬಗ್ಗೆ ಮಾತನಾಡುತ್ತಿದ್ದರು. ಇಷ್ಟೊಂದು ಸಮಸ್ಯೆ ಏಕೆ ಆಗುತ್ತಿದೆ? ಹಿಂದೆ ಅನೇಕ ಜನ ಆಹಾರ ಇಲಾಖೆಯ ಮಂತ್ರಿಗಳಾಗಿದ್ದರು. ಇತ್ತೀಚೆಗೆ ಮಾನ್ಯ ಸೋಮಣ್ಣನವರು ಕೂಡ ಆಹಾರ ಇಲಾಖೆಯ ಮಂತ್ರಿಗಳಾಗಿದ್ದರು. ಹಿಂದೆ ಪಡಿತರ ಚೀಟಿಗಳಲ್ಲಿ ಬಹಳಷ್ಟು ಅವ್ಯವಹಾರವಿದೆ ಇದನ್ನು ಕಡಿಮೆ ಮಾಡಬೇಕೆಂದು ಅದನ್ನು

ಕಂಪ್ಯೂಟರೀಕರಣ ಮತ್ತು ಬಯೋ ಮೆಟ್ರಿಕ್ ಕಾರ್ಡು ಕೊಡಬೇಕೆಂದು ಪ್ಲಾನ್ ಆಗಿತ್ತು. ಆ ಯೋಜನೆ ಒಳ್ಳೆಯ ರೀತಿಯಲ್ಲಿ ನಡೆಯುತ್ತಿತ್ತು. ಆದರೆ, ಆ ಯೋಜನೆಯನ್ನು ಹಾಳು ಮಾಡಿದ್ದೆ ಈ ಸರ್ಕಾರವೆಂದು ನಾನು ನೇರವಾಗಿ ಆರೋಪಿಸುತ್ತಿದ್ದೇನೆ. ನೀವು ಪಾರ್ಲಿಮೆಂಟ್ ಎಲೆಕ್ಷನ್ ಬಂದಾಗ ಜನರ ಮತಗಳು ಬೇಕೆಂದು, ಹಿಂದೆ ಕಂಪ್ಯೂಟರೀಕರಣ ಮಾಡಿ ಅನೇಕ ಕಡೆ ಈ ಕಾರ್ಡುಗಳ ಸಂಖ್ಯೆ ಕಡಿಮೆಯಾಗಿತ್ತು. ಎಲ್ಲೆಲ್ಲಿ ಡೂಪ್ಲಿಕೇಷನ್ ಆಗಿತ್ತೊ ಅಥವಾ ಫುಡ್ ಇನ್ಸ್‌ಫೆಕ್ಟರ್‌ಗಳು ಮತ್ತು ಅಲ್ಲಿರತಕ್ಕಂಥ ಅವರ ಅಡ್ಜೆಸ್ಟ್‌ಮೆಂಟ್‌ನಲ್ಲಿ ಒಂದೊಂದು ಅಡ್ರೆಸ್‌ಗೆ ನಾಲ್ಕು ನಾಲ್ಕು ಕಾರ್ಡುಗಳನ್ನು ಮಾಡಿಕೊಂಡಿದ್ದರೊ, ಅದೆಲ್ಲವೂ ಕೂಡ ಕಡಿಮೆಯಾಗುತ್ತಾ ಬಂತು. ಆದರೆ, ಈ ಸರ್ಕಾರ ಹಳಿತಪ್ಪಿಸುವ ಕೆಲಸ ಇವರೇ ಮಾಡಿದರು. ಏಕೆಂದರೆ, ಇವರು ಪಾರ್ಲಿಮೆಂಟ್ ಎಲೆಕ್ಷನ್‌ಗೋಸ್ಕರ ಜನರ ಮತ ಬೇಕಲ್ಲ, ವೋಟೇ ಇಂಪಾರ್ಟೆಂಟ್ ಆಗಿತ್ತು, ಸ್ಕೀಂ ಏನಾದರೂ ಆಗಲಿ ಆಮೇಲೆ ನೋಡೋಣ ಎಂದು ಎಲ್ಲರಿಗೂ ಕೂಡ ಟೆಂಪರರಿ ರೇಷನ್ ಕಾರ್ಡ್ ಎಂದು ನೆಮ್ಮದಿ ಕೇಂದ್ರದಲ್ಲಿ ಕಾರ್ಡ್ ಕೊಟ್ಟುಬಿಟ್ಟರು. ಹೀಗಾಗಿ ಆ ಯೋಜನೆ ಪೂರ್ತಿ ಹಾಳಾಗಿ ನೆನಗುದಿಗೆ ಬಿದ್ದಿದೆ, ಮತ್ತೆ ಅದನ್ನು ಹೇಗೆ ಸರಿಮಾಡಬೇಕೆಂದು ಈಗ ಹೊಸದಾಗಿ ಆಲೋಚನೆ ಮಾಡುತ್ತಿದ್ದಾರೆ. ಇದು ಸುಪ್ರೀಂ ಕೋರ್ಟಿನ ಒಬ್ಬರು ಜಡ್ಜ್ ಹೇಳಿದ್ದಾರೆ. ಅವರೊಂದು ಕಮಿಟಿ ಮಾಡಿದ್ದರು. ಆ ಕಮಿಟಿಯ ರಿಪೋರ್ಟ್ ಕರ್ನಾಟಕದ ಪರಿಸ್ಥಿತಿಯ ಬಗ್ಗೆ ಹೇಳಿದೆ. ಜಸ್ಟೀಸ್ ರಾಘವ ಕಮಿಟಿ ಎಂದು ಮಾಡಿದ್ದಾರೆ. ಆ ಕಮಿಟಿಯವರ ರಿಪೋರ್ಟ್ ಪ್ರಕಾರ, "ನೀವು ಟೆಂಪರರಿ ರೇಷನ್ ಕಾರ್ಡು ಕೊಟ್ಟು ಆಹಾರ ವ್ಯವಸ್ಥೆಯನ್ನು ಹಾಳು ಮಾಡಿದ್ದೀರಿ" ಎಂದಿದೆ. ಇದು ಎಲ್ಲರಿಗೂ ಕೂಡ ಗೊತ್ತಿದೆ. ನಾನು ಇದನ್ನು ಅಫಿಷಿಯಲ್ ಆಗಿ ಹೇಳುತ್ತಿದ್ದೇನೆ ಅಷ್ಟೆ ಹೊರತು ಇದೇನು ದೊಡ್ಡ ಹೊಸ ವಿಚಾರವಲ್ಲ, ಇದು ಎಲ್ಲರಿಗೂ ಕೂಡ ಗೊತ್ತಿರುವಂಥದ್ದು. ಯಾವ ಪ್ರಮಾಣದಲ್ಲಿ ಇವರು ಮತಕೋಸ್ಕರ, ರಾಜಕೀಯಕೋಸ್ಕರ ಹೀಗೆ ಮಾಡಿದರೆ ಹೇಗೆ? ನೀವು ಸ್ಕೀಂಗಳನ್ನು ಮಾಡಿ, ಒಳ್ಳೆಯ ಕೆಲಸ ಮಾಡಿ, ಚುನಾವಣೆ ಒಂದು ವರ್ಷವಿದ್ದಾಗ ಪಾಪ್ಯುಲರ್ ಬಜೆಟ್ ಕೊಡಿ, ಯಾರೂ ಬೇಡವೆಂದು ಹೇಳುವುದಿಲ್ಲ, ಎಲ್ಲಾ ಸರ್ಕಾರಗಳು

ಅದನ್ನೇ ಮಾಡುವುದು. ಚುನಾವಣೆ ಇನ್ನೂ 2–3 ವರ್ಷವಿದೆ. ಪ್ರತಿಯೊಂದು ಎಲೆಕ್ಷನ್‌ಗೂ ಕೂಡ ನೀವು ಅದನ್ನೇ ಮಾಡುತ್ತೀರಲ್ಲ? ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲೂ ಅದನ್ನೆ ಮಾಡುತ್ತೀರಿ. ಬೈ ಎಲೆಕ್ಷನ್ ಬಂದಾಗ ಎಲ್ಲಾ ಕಡೆ ಯಾವ್ಯಾವ ಭಾಗದಲ್ಲಿ ಎಲೆಕ್ಷನ್ ಇರುತ್ತದೆ ಅಲ್ಲೆಲ್ಲಾ ಹೋಗುವುದು ನಾವು ಇದನ್ನು ಅಡಾಪ್ಟ್ ಮಾಡುತ್ತೇವೆಂದು ಹೇಳಿ, ಏನೇನು ಬೇಕೋ ಅದಕ್ಕೆ 200–300 ಕೋಟಿ ಸ್ಯಾಂಕ್ಷನ್ ಮಾಡುತ್ತೀರಿ. ಚುನಾವಣೆಯಾದ ಮೇಲೆ ಈಗ ಅವರೆಲ್ಲಾ ಅನಾಥರಾಗಿಬಿಟ್ಟಿದ್ದಾರೆ. ಈಗ ಅವರಿಗೆ ತಂದೆನೂ ಸಿಗುತ್ತಿಲ್ಲ, ತಾಯಿಯೂ ಸಿಗುತ್ತಿಲ್ಲ, ಅವರಿಗೆ ಯಾರೂ ಸಿಗುತ್ತಿಲ್ಲ. ಆ ಪರಿಸ್ಥಿತಿ ಆ ಕ್ಷೇತ್ರಗಳಲ್ಲಿ ಬಂದಿದೆ. ಮತ್ತೆ ನೀವು ಅದನ್ನೆ ಕಂಟಿನ್ಯೂ ಮಾಡುತ್ತಿದ್ದೀರಿ. ನೀವು ಆಪರೇಷನ್ ಕಮಲ ಮುಗಿಸುತ್ತಿಲ್ಲ. ಅದನ್ನು ನೀವು ಹೀಗೆ ಮುಂದುವರಿಸಿಕೊಂಡು ಹೋಗುತ್ತಿದ್ದೀರಿ. ಅದರ ಪರಿಣಾಮ ಏನಾಗುತ್ತದೆಂದು ಮುಂದಿನ ದಿವಸ ನಿಮಗೆ ಗೊತ್ತಾಗುತ್ತದೆ. ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆಯ ಚುನಾವಣೆ ಬಂತು. ಇದರ ಹಿನ್ನೆಲೆಯಲ್ಲಿ ಬೆಂಗಳೂರಿಗೆ ಸಾವಿರಾರು ಕೋಟಿ ರೂಪಾಯಿಗಳನ್ನು ಅನುದಾನ ಕೊಡುತ್ತೇವೆ, ಎಲ್ಲಾ ರೀತಿಯಲ್ಲೂ ಸಹಕಾರ ಕೊಡುತ್ತೇವೆಂದು ಹೇಳಿ ಕಳೆದ ಬಜೆಟ್‌ನಲ್ಲಿ ಯೋಜನೆಯ ಮೇಲೆ ಯೋಜನೆಗಳನ್ನು ಘೋಷಣೆ ಮಾಡಿದಿರಿ. ಇಲ್ಲಿರುವಂಥ ಬೇಕಾದಷ್ಟು ಯೋಜನೆಗಳನ್ನು ನೋಡಿದರೆ ಇದರಲ್ಲಿ ಬಿ.ಡಿ.ಎ., ಯಿಂದ, ಬಿ.ಬಿ.ಎಂ.ಪಿ., ಯಿಂದ ಅಷ್ಟು ಮಾಡುತ್ತೇವೆಂದು ಹೇಳಿರುವುದು ಆಕ್ಷನ್ ಟೇಕನ್ ರಿಪೋರ್ಟ್‌ನಲ್ಲಿದೆ. ಏನೆಂದರೆ, ಯಾವುದರಲ್ಲಿಯೂ ಕೂಡ ನಿಜಾಂಶಗಳಿಲ್ಲ. ಮೆಟ್ರೋ ಯೋಜನೆಗೆ ನೀವು ದುಡ್ಡು ಕೊಡುತ್ತಿದ್ದೀರಿ ಅದು ನೀವು ಕೊಡಲೇಬೇಕು. ಅದಕ್ಕೆ ನೀವು ಮತ್ತು ಕೇಂದ್ರ ಸರ್ಕಾರ ಹಣ ಕೊಡುತ್ತದೆ ಏಕೆಂದರೆ ಅದು ಒಂದು ಪ್ರಾಜೆಕ್ಟ್. ಅದಕ್ಕೆ ಇನ್‌ವೆಸ್ಟ್‌ಮೆಂಟ್ ಮಾಡತಕ್ಕಂಥ ಅವಶ್ಯಕತೆ ಇದ್ದೇ ಇದೆ. ಹೋದ ಬಜೆಟ್‌ನಲ್ಲಿ ನೀವು ಹೇಳಿರುವುದನ್ನು ತಾವು ನೋಡಿ. ಸುಮಾರು ಅರು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ, ಈ ಫೈನಾನ್‌ಷಿಯಲ್ ಇಯರ್‌ನಲ್ಲಿ ಐನೂರು ಕೋಟಿ ರೂಪಾಯಿಗಳನ್ನು ಬಿ.ಡಿ.ಎ., ಮತ್ತು ಬಿ.ಬಿ.ಎಂ.ಪಿ.ಗೆ ಕೊಡುತ್ತೇವೆಂದು

ಹೇಳಿದಿರಿ. 790 ಕೋಟಿ ರೂಪಾಯಿಗಳನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ.ಗೆ ಕೊಡುತ್ತೇವೆಂದು ಹೇಳಿದಿರಿ. ಅಂದರೆ ಇದು ಸರ್ಕಾರದ ದುಡ್ಡು ಅಲ್ಲ. ಈ 790 ಕೋಟಿ ರೂಪಾಯಿ ಅದು ಬ್ಯಾಂಕ್ ಸಾಲ. ಇವರದ್ದೇನೂ ಗ್ರಾಂಟ್ ಇಲ್ಲ, ಮಾನ್ಯ ಸುರೇಶ್ ಕುಮಾರ್‌ರವರು ಇಲ್ಲಿಯೇ ಇದ್ದಾರೆ. ಬಿ.ಡಬ್ಲ್ಯೂ.ಎಸ್. ಎಸ್.ಬಿ.ಯ ಇನ್‌ಚಾರ್ಜ್ ಅವರೇ ಇದ್ದಾರೆ. 790 ಕೋಟಿ ಕೊಡುತ್ತೇವೆಂದು ಇವರೇನು ಹೇಳಿದರು, ಇವರ ರೆವಿನ್ಯೂ ಯಿಂದ ಕೊಡುತ್ತಿಲ್ಲ. ಸಾಲ ಮಾಡಿ ಜಪಾನ್ ಬ್ಯಾಂಕ್‌ನವರು ಏನು ಹಣ ಕೊಡುತ್ತಾರೆ ಅದನ್ನು ಒಂದು ಕಡೆ ಕೊಡುತ್ತಿದ್ದೀರಿ. ಇನ್ನೊಂದು ಬಿ.ಡಿ.ಎ., ಮತ್ತು ಬಿ.ಬಿ.ಎಂ.ಪಿ.ಗೆ ಐನೂರು ಕೋಟಿ ಕೊಡುತ್ತೇವೆಂದು ಹೇಳಿದಿರಲ್ಲಾ ಅದು ಕೂಡ ಇವರ ದುಡ್ಡು ಅಲ್ಲ. ಬಿ.ಬಿ.ಎಂ.ಪಿ.ಯವರಿಗೆ ಸಾಲದ ಮೂಲಕ ತೆಗೆದುಕೊಳ್ಳಿ ಎಂದು ಹೇಳಿದರು ಅವರು ತೆಗೆದುಕೊಂಡಿಲ್ಲ. ಆ ದುಡ್ಡು ಇನ್ನೂ ಬಂದಿಲ್ಲ, ಅವರು ಅದನ್ನು ತೆಗೆದುಕೊಂಡಿಲ್ಲ. ಇನ್ನೂ ಬಿ.ಡಿ.ಎ.ಗೆ ಐನೂರು ಕೋಟಿ ಎಂದು ಹೇಳಿದಿರಿ, ಅವರು ಸ್ವಂತ: ಇನ್‌ಕಂ ಮೇಲೆ ಮಾಡಿಕೊಳ್ಳಬೇಕೆಂದು ಹೇಳಿದಿರಿ. ಸರ್ಕಾರದ ದುಡ್ಡು ಇಲ್ಲ. ಅದು ಕೂಡ ಸರ್ಕಾರದ ಸಂಸ್ಥೆ. ಆದರೂ ಕೂಡ ಕಳೆದ ವರ್ಷ ಅವರು ಘೋಷಣೆ ಮಾಡಿದರು. ಸಾವಿರ ಕೋಟಿ ರೂಪಾಯಿನಲ್ಲಿ ಎಲ್ಲಾ ಕಡೆ ಮಲ್ಟಿ ಸ್ಟೋರ್ ಕಾರ್ ಪಾರ್ಕಿಂಗ್ ಕಟ್ಟುತ್ತೇವೆ, ಟ್ರಾಫಿಕ್ ರೂಟ್ಸ್‌ನ್ನು ಅಭಿವೃದ್ಧಿ ಮಾಡುತ್ತೇವೆಂದು ಹೇಳಿದಿರಿ. ಯಾವುದೂ ಆಗಿಲ್ಲ. ನಾನು ಹೋದ ವರ್ಷದ್ದು ಹೇಳುತ್ತಿದ್ದೇನೆ. ಈ ವರ್ಷದ್ದು ಹೇಳುತ್ತಿಲ್ಲ. ಒಂದೂ ಮಲ್ಟಿ ಸ್ಟೋರ್ ಕಾರ್ ಪಾರ್ಕಿಂಗ್ ಬರಲಿಲ್ಲ, ಯಾವೊಂದು ಟ್ರಾಫಿಕ್ ರೂಟ್ಸ್ ನ್ನು ಇಂಪ್ರೂವ್ ಮಾಡುವುದಕ್ಕೆ ಹೋಗಲಿಲ್ಲ. ದುಡ್ಡು ಕೂಡ ಬಿಡುಗಡೆಯಾಗಲಿಲ್ಲ. ಈ ರೀತಿಯಾಗಿ ಎಲ್ಲವನ್ನೂ ಕೂಡ ತಾವು ನೋಡುವುದಾದರೆ, ಬಿ.ಬಿ.ಎಂ.ಪಿ.,ಯ ಚುನಾವಣೆಯ ಸಂದರ್ಭದಲ್ಲಿ ಘೋಷಣೆ ಮಾಡಿ ಗೆದ್ದು ಕೊಂಡು ಬಂದರು. ಈ ವರ್ಷ ಬೆಂಗಳೂರನ್ನು ಕೈ ಬಿಟ್ಟಿದ್ದಾರೆ. ಇವರೆಲ್ಲಾ ಹೋದ ವರ್ಷ ಇಷ್ಟು ಕೊಡುತ್ತೇವೆಂದು ಹೇಳಿದ್ದರಿಂದ ಈಗ ಬೆಂಗಳೂರಿನಲ್ಲಿ ಏನು ಸಮಸ್ಯೆಯಾಗಿದೆ ಎಂದರೆ, ಬಿ.ಬಿ.ಎಂ.ಪಿ.ಯವರು ಸಿಕ್ಕಾಪಟ್ಟೆ ಖರ್ಚು ಮಾಡಿದ್ದಾರೆ. ಸಿಕ್ಕದವರಿಗೆಲ್ಲಾ ವರ್ಕ್‌ಲೋಡ್ ಕೋಟಿಗಟ್ಟಲೆ ಕೊಟ್ಟು ಅದು ಅನುಷ್ಠಾನವೇ

ಆಗಿಲ್ಲ ಅದು ಬಿಡಿ ಅದು ದೊಡ್ಡ ಕತೆ. ಅದರ ಬಗ್ಗೆ ಇನ್ನೊಂದು ಸಾರಿ ಮುಂದಿನ ವಾರದಲ್ಲಿ ಚರ್ಚೆ ಮಾಡುತ್ತೇವೆ. ಆದರೆ, ಇವತ್ತಿನ ಪರಿಸ್ಥಿತಿ ಬಿ.ಬಿ.ಎಂ.ಪಿ.ಯಲ್ಲಿ ಏನಾಗಿದೆ ಎಂದರೆ, ಈಗ ಬಿ.ಬಿ.ಎಂ.ಪಿ.ಯದು ಪ್ರೆಸೆಂಟ್ ಸಾಲ 2,600 ಕೋಟಿ ರೂಪಾಯಿಗಳ ಸಾಲವಿದೆ. ಬ್ಯಾಂಕ್ ಸಾಲ, ಬೇರೆ ಬೇರೆ ಸಂಸ್ಥೆಗಳಿಂದ ಸಾಲ ತಂದಿರುವುದು ಇಷ್ಟು ಅಮೌಂಟ್ ಇದೆ. ಬಿ.ಬಿ.ಎಂ.ಪಿ.ಯದು ಪೆಂಡಿಂಗ್ ಬಿಲ್ಸ್ ಇರುವುದು 1,700 ಕೋಟಿ ರೂಪಾಯಿ. ಈ ವರ್ಷದ ವರ್ಕ್ ಸುಮಾರು ಎರಡು ಸಾವಿರ ಕೋಟಿ ರೂಪಾಯಿ ಇದೆ. ಮಾನ್ಯ ಸುರೇಶ್ ಕುಮಾರ್ ರವರೆ, ಈ ವರ್ಷದ ವರ್ಕ್ ಸುಮಾರು ಎರಡರಿಂದ ಎರಡೂವರೆ ಸಾವಿರ ಕೋಟಿ ವರ್ಕ್ ಇದೆಯಲ್ಲಾ ಈ ವರ್ಷ ಯಾವ ವರ್ಕ್ ಆಗಿಲ್ಲ..

ಈ ಎಲ್ಲಾ ಕೆಲಸಗಳನ್ನು ಮುಂದಿನ ವರ್ಷಕ್ಕೆ carry forward ಮಾಡುತ್ತಿದ್ದೀರಿ. ಇದರಿಂದ, ಮುಂದಿನ ವರ್ಷಕ್ಕೆ ನಿಮಗೆ ಸುಮಾರು 6 ಸಾವಿರ ಕೋಟಿ ರೂಪಾಯಿಗಳಷ್ಟು ಬರ್ಡ್‌ನ್ ಆಗುತ್ತದೆ. ಈ ವರ್ಷದ ಕೆಲಸವನ್ನು ಸಹ ಮುಂದಿನ ವರ್ಷಕ್ಕೆ ತೆಗೆದುಕೊಂಡು ಹೋಗುತ್ತಿದ್ದೀರಿ. ಈ ವರ್ಷ ಆ ದುಡ್ಡು ಬಿಡುಗಡೆಯಾಗಿಲ್ಲದೆ ಇರುವುದರಿಂದ ಯಾವುದೇ ಕೆಲಸವಾಗಿಲ್ಲ. ಏನೂ ಕೆಲಸ ಆಗುತ್ತಿಲ್ಲ ಮತ್ತೆ ಟೆಂಡರ್ ಕರೆಯುವುದಕ್ಕೆ ಆಗುತ್ತಿಲ್ಲವೆಂದು ಈಗ ಗೆದ್ದು ಬಂದಿರುವ ಕಾರ್ಪೋರೇಟರ್‌ಗಳು ಇವತ್ತಿನದಿವಸ ಅಳುತ್ತಿದ್ದಾರೆ. ಕಳೆದ ವಾರದಲ್ಲಿ ಒಂದು phase ಗೆ ಟೆಂಡರ್ ಕರೆದಿದ್ದಾರೆ. ಆದರೆ, ಇದೂ ಕೂಡ ಮುಂದಿನ ವರ್ಷಕ್ಕೆ ತೆಗೆದುಕೊಳ್ಳತಕ್ಕಂಥದಾಗಿದೆ. ಮತ್ತೆ ಪೆಂಡಿಗ್ಸ್ ಬಿಲ್ಸ್ 1,700 ಕೋಟಿ ರೂಪಾಯಿ ಇದೆ. ಬಿಬಿಎಂಪಿ ಗೆ ತೆರಿಗೆಯಿಂದ ಮತ್ತು ಎಸ್ಎಟಿ ಯಿಂದ ಸುಮಾರು 2.500 ಕೋಟಿ ರೂಪಾಯಿ ಆದಾಯ ಬರುತ್ತದೆ. ಒಟ್ಟು ಸುಮಾರು 3,500 ಕೋಟಿ ರೂಪಾಯಿ ಮೈನಸ್‌ನಲ್ಲಿದ್ದೇವೆ. 350 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಯವರು ಈ ಬಜೆಟ್‌ನಲ್ಲಿ ಹೇಳಿದ್ದಾರೆ. ಈ ಪರಿಸ್ಥಿತಿಯಾದರೆ ಇವರು ಖಂಡಿತವಾಗಿಯೂ ಏನೂ ಕೂಡ ಮಾಡುವುದಕ್ಕೆ ಆಗುವುದಿಲ್ಲ. ಬೆಂಗಳೂರಿನಲ್ಲಿ ಏನು ಅಭಿವೃದ್ಧಿಯನ್ನು ಮಾಡಬೇಕೆಂದು ನೀವು

ಹೇಳಿಕೊಂಡಿದ್ದೀರಿ, ಅದು ಆಗುವುದಿಲ್ಲ. ಕಾರ್ಪೋರೇಷನ್ ಎಲೆಕ್ಷನ್ ಮುಕ್ತಾಯವಾಯಿತು. ಮಾನ್ಯ ಸೋಮಣ್ಣರವರು ಇಲ್ಲಿದ್ದಾರೆ. ಅವರು ಹಿರಿಯ ಸಚಿವರಾಗಿದ್ದಾರೆ. ನೀವೆಲ್ಲ ಕುಳಿತುಕೊಂಡು ಇದರ ಬಗ್ಗೆ ಯೋಚನೆ ಮಾಡಬೇಕು. ಈ ವರ್ಷ ಕನಿಷ್ಟ 1 ಸಾವಿರ ಕೋಟಿ ರೂಪಾಯಿ ಕೊಡದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಮತ್ತೆ ಏನೂ ಕೂಡ ಮಾಡುವುದಕ್ಕೆ ಆಗುವುದಿಲ್ಲ. ಕನಿಷ್ಟ 1 ಸಾವಿರ ಕೋಟಿ ರೂಪಾಯಿಗಳನ್ನು ನೀವು ಬಿಡುಗಡೆ ಮಾಡಿಸಲೇ ಬೇಕು. ಇಲ್ಲದಿದ್ದರೆ ನಿಮ್ಮ ಕಾರ್ಪೋರೇಟರ್‌ಗಳು ಮತ್ತು ಮಾನ್ಯ ಮಹಾಪೌರರು ನಿಮ್ಮ ಬಳಿ ಬಂದು ಧರಣಿ ಮಾಡತಕ್ಕಂಥ ಪರಿಸ್ಥಿತಿ ಬರುತ್ತದೆ. ಆದ್ದರಿಂದ, ದಯವಿಟ್ಟು ಇದರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಿ. ಮಾನ್ಯ ಮುಖ್ಯ ಮಂತ್ರಿಯವರಿಗೆ ನಾನೂ ಸಹ ಮನವಿ ಮಾಡುತ್ತೇನೆ. ಇದರ ಬಗ್ಗೆ ದಯವಿಟ್ಟು ಕೂಡಲೇ ಕ್ರಮ ತೆಗೆದುಕೊಂಡು ಈ ವರ್ಷಕ್ಕೆ ಕನಿಷ್ಠ 1 ಸಾವಿರ ಕೋಟಿ ಬಿಡುಗಡೆ ಮಾಡಿ. ಕೇವಲ ಘೋಷಣೆಗಳನ್ನು ಮಾಡುವುದಕ್ಕೆ ಹೋಗಬೇಡಿ. ಏಕೆಂದರೆ, ಬಿಡಿಎ ವತಿಯಿಂದ 200 ಕೋಟಿ ರೂಪಾಯಿ ವೆಚ್ಚ ಮಾಡಿ 25 ಟ್ಯಾಂಕ್‌ಗಳನ್ನು ದುರಸ್ಥಿ ಮತ್ತು ಡೀಸಿಲ್ಟಿಂಗ್ ಮಾಡುತ್ತೇವೆಂದು ಕಳೆದ ವರ್ಷ ತಾವು ಹೇಳಿದ್ದೀರಿ. ಆದರೆ, ಒಂದೂ ಕೆರೆಯನ್ನು ಸಹ ಮುಟ್ಟಿಲ್ಲ. ಮತ್ತೆ ಒಂದು ರೂಪಾಯಿ ಕೂಡ ಬಿಡುಗಡೆ ಆಗಿಲ್ಲ. ಟ್ರಾಫಿಕ್ ರೂಟ್ಸ್ ಅನ್ನು improve ಮಾಡುವುದಕ್ಕೆ ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದೀರಿ. ಆದರೆ, ಇಲ್ಲಿಯೂ ಕೂಡ ಒಂದು ರೂಪಾಯಿ ಬಿಡುಗಡೆಯಾಗಿಲ್ಲ. ಕೇವಲ ಇದೆಲ್ಲ publicityಗಷ್ಟೆ. ಬಿಡಿಎ ಮತ್ತು ಬಿಬಿಎಂಪಿಯವರಿಗೆ ಕೇಳಿದರೆ, ಸರ್ಕಾರ ದುಡ್ಡು ಕೊಡುತ್ತಿಲ್ಲ ನಾವೇನು ಮಾಡುವುದಕ್ಕೆ ಆಗುತ್ತದೆಂದು ಹೇಳುತ್ತಾರೆ. ಬಿಡಿಎ ರವರ ಪರಿಸ್ಥಿತಿ ಹೇಗಾಗಿದೆ ಎಂದರೆ, ಅವರಿಗೆ ಯಾವುದೇ ಅದಾಯ ಬರುತ್ತಿಲ್ಲ. ಹಿಂದೆ ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಮಾನ್ಯ ಜಿ. ಪರಮೇಶ್ವರ ಸಾಹೇಬರು ಕೂಡ ಅವರ ಸರ್ಕಾರದಲ್ಲಿದ್ದರು. ಆ ಐದು ವರ್ಷದ ಅವಧಿಯಲ್ಲಿ ನಾವು 50,000 ಸೈಟ್‌ಗಳನ್ನು ಹಂಚಿಕೆ ಮಾಡಿದ್ದೇವೆ. ಆದರೆ, ಇವರು ಬಂದ ಮೇಲೆ ಒಂದು ಸೈಟ್ ಸಹ ಕೊಟ್ಟಿಲ್ಲ. ಮತ್ತೆ ಒಂದು

ಲೇಔಟ್ ಅನ್ನು ಸಹ ಮಾಡಿಲ್ಲ. ಏನಿದ್ದರು ಕೂಡ ಜಿ-ಕೆಟಗರಿಯಲ್ಲಿ ಸೈಟ್‌ಗಳನ್ನು ಎಂ.ಎಲ್.ಎ.ಗಳಿಗೆ ಮತ್ತು ಅವರಿಗೆ ಇಷ್ಟಬಂದವರಿಗೆ ಕೊಡುತ್ತಿದ್ದಾರೆ ಹೊರತು ಬೇರೆ ಯಾರಿಗೂ ಕೂಡ ಕೊಟ್ಟಿಲ್ಲ. ಹೊಸ ಲೇಔಟ್ ಮಾಡಿ ಮಧ್ಯಮ ವರ್ಗ ಮತ್ತು economically weaker section ರವರಿಗೆ ಸೈಟ್‌ಗಳನ್ನು ಕೊಡತಕ್ಕಂಥದ್ದು ಇವರ ಕೈಯಲ್ಲಿ ಆಗಿಲ್ಲ. ನಮ್ಮ ಸರ್ಕಾರ 1999ರಲ್ಲಿ ಬಂದಾಗ ಬಿಡಿಎ ಮುಚ್ಚುವಂಥ ಪರಿಸ್ಥಿತಿಗೆ ಬಂದಿತ್ತು. ಹೀಗೆ ಮುಂದುವರಿದರೆ ಅದೇ ಪರಿಸ್ಥಿತಿಯಾಗುತ್ತದೆ. ಅವರ ವರಮಾನ ಇವತ್ತಿನದಿವಸ ಕಡಮೆಯಾಗುತ್ತಿದೆ. ಸೈಟ್‌ಗಳನ್ನು ಹರಾಜು ಮಾಡಿಕೊಂಡು ಇವರು ಸಂಪಾದನೆ ಮಾಡುತ್ತಿದ್ದಾರೆ ಹೊರತು ಬೇರೆ ಯಾವುದೇ ಆದಾಯ ಬಿಡಿಎ ಯಲ್ಲಿ ಇಲ್ಲ. ಮಾನ್ಯ ಅಶೋಕ್‌ರವರ ಗಮನಕ್ಕೆ ತರುವುದೇನೆಂದರೆ, ತಾವೂ ಕೂಡ ಹಿರಿಯ ಸಚಿವರಾಗಿದ್ದೀರಿ. ಇವತ್ತಿನದಿವಸ ಗ್ರಾಮೀಣಾಭಿವೃದ್ಧಿ ಮಾಡುವುದು ಮುಖ್ಯ. ಆದರೆ, ಬೆಂಗಳೂರು ಸರಿಯಾಗಿ ಇಲ್ಲದೆ ಹೋದರೆ, ಬೆಂಗಳೂರು ಅಭಿವೃದ್ಧಿಯಾಗದೆ ಹೋದರೆ ಏನಾಗುತ್ತದೆಂದರೆ, ಬೆಂಗಳೂರಿನಿಂದ ಬರತಕ್ಕಂಥ ವರಮಾನ ಇವತ್ತಿನದಿವಸ ಇಡೀ ಕರ್ನಾಟಕವನ್ನೆ ಕಾಪಾಡುತ್ತಿದೆ. ಆದ್ದರಿಂದ, ಇದನ್ನು ಯಾರೂ ಕೂಡ ಮರೆಯಬಾರದು. ಇಲ್ಲಿ ಬರುವಂಥ sales tax and commercial tax ಹಾಗೂ ಎಲ್ಲಾ ರೀತಿಯ ತೆರಿಗೆಗಳಿಂದ ಅಂದರೆ ಇಲ್ಲಿಂದ ಹಣ ಉತ್ಪತ್ತಿ ಆಗಿ ಎಲ್ಲಾ ಕಡೆ ಹೋಗುತ್ತದೆ. ಮಾನ್ಯ ಅಧ್ಯಕ್ಷರೆ, ತಮ್ಮ ಜಿಲ್ಲೆಯಾದ ಕೊಡಗಿನಿಂದ ಯಾವ ರೀತಿಯಾಗಿ ಕಾವೇರಿ ನದಿಯ ನೀರನ್ನು ಕೊಡುತ್ತೀರೋ ಅದೇ ರೀತಿಯಾಗಿ ಬೆಂಗಳೂರಿನಿಂದ ಆರ್ಥಿಕ ಸಹಾಯವನ್ನು ಇಡೀ ರಾಜ್ಯಕ್ಕೆ ಕೊಡುತ್ತಿದ್ದೇವೆ. ಆದ್ದರಿಂದ, ಬೆಂಗಳೂರನ್ನು ಕಾಪಾಡತಕ್ಕಂಥದ್ದು ಬಹಳ ಮುಖ್ಯವಾಗಿದೆ. ಬೆಂಗಳೂರಿಗೆ ಮಾಡಿದ್ದೇವೆಂದು ತಾವು ಕೇವಲ ಘೋಷಣೆ ಮಾಡಿಕೊಂಡು ಹೋದರೆ ಏನಾಗುತ್ತದೆಂಬುದು ನೆನ್ನೆ ದಿವಸ ಒಂದು article ಬಹಳ ಚೆನ್ನಾಗಿ ಪತ್ರಿಕೆಯಲ್ಲಿ ಬಂದಿತ್ತು. ಅಂದರೆ, ಏನೇನು ಸುಳ್ಳು ಘೋಷಣೆಗಳನ್ನು ನೀಡಲಾಗಿದೆ ಎಂಬುದನ್ನು ಹಾಕಲಾಗಿತ್ತು. ಪತ್ರಿಕೆಯ ಕಟ್ಟಿಂಗ್ಸ್ ಎಲ್ಲಿಯೋ ಇದೆ. ತಾವು ಸೀರಿಯಸ್ ಆಗಿ ತೆಗೆದುಕೊಂಡು ಇದನ್ನು ಮಾಡಬೇಕೆಂದು

ಹೇಳುವುದಕ್ಕೆ ಬಯಸುತ್ತೇನೆ. ಬೆಂಗಳೂರಿನಲ್ಲಿ ನೀರಿನ ಸಮಸ್ಯೆ ಕೂಡ ಇದೆ. Water Supply Boardನ 4th stage ಆಗಬೇಕಾಗಿತ್ತು. ಆದರೆ, 2nd phase ಇನ್ನೂ ಕೂಡ ಆಗಿಲ್ಲ. ಬಹುಶ: ಅದು ಯಾವ ಕಾರಣಕ್ಕಾಗಿ ಡಿಲೇ ಆಯಿತ್ತೆಂಬುದು ಗೊತ್ತಿಲ್ಲ. ಆದರೆ, ಟೆಂಡರ್ ಆಗಿ ಮೊದಲೇ ಮುಗಿಸಬೇಕಾಗಿತ್ತು. ಈಗಲಾದರೂ ಅದನ್ನು ಮುಗಿಸಿ ಎಂದು ಹೇಳುತ್ತೇನೆ. ಪತ್ರಿಕೆಯಲ್ಲಿ ಬಂದಿರುವುದು ಈಗ ಸಿಕ್ಕಿತ್ತು. ಅದರಲ್ಲಿ ಏನು ಬಂದಿದೆ ಎಂದರೆ, C.M., recycle proposals worth Rs. 5,000 crores ಎಂದು ಪತ್ರಿಕೆಯಲ್ಲಿ ಹಾಕಿದ್ದಾರೆ. ಹಳೆಯ ಯೋಜನೆಗಳನ್ನೆ ಮತ್ತೆ ಸೇರಿಸಿ ಈ ಸಾರಿ ಹೇಳಿದ್ದಾರೆ. ಇದರ ಬಗ್ಗೆ ಈಗಾಗಲೇ ಹೇಳಿ ಆಗಿದೆ. ಆದ್ದರಿಂದ, ಇನ್ನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ದಯವಿಟ್ಟು ಅದನ್ನು ಮಾಡಿ ಎಂದು ಹೇಳುತ್ತೇನೆ. ಕೊಡಗಿನ ವಿಚಾರದ ಬಗ್ಗೆ ಹೇಳುವುದಾದರೆ, ಮಾನ್ಯ ಅಧ್ಯಕ್ಷರು ಮತ್ತು ಮಾನ್ಯ ಜಾರ್ಜ್ ಸಾಹೇಬರು ಹಾಗೂ ನಾನೂ ಕೂಡ ಕೊಡಗಿವನಾಗಿದ್ದೇನೆ. ಕೊಡಗಿನ ವಿಚಾರದಲ್ಲಿ ಈ ಸರ್ಕಾರ ಏತಕ್ಕೆ ನಿರ್ಲಕ್ಷ್ಯ ವಹಿಸುತ್ತಿದೆ ಎಂದು ನಾವು ಈಗ ತಾನೆ ಮಾತನಾಡಿಕೊಳ್ಳುತ್ತಿದ್ದೆವು. ಏಕೆಂದರೆ, ಕೊಡಗಿನ ರಸ್ತೆಗಳಿಗೆ 25 ಕೋಟಿ ರೂಪಾಯಿ ಕೊಡುತ್ತೇವೆಂದು ಕಳೆದ ಬಜೆಟ್‌ನಲ್ಲಿ ಹೇಳಿದ್ದರು. ಇದು ಇನ್ನು ಅನುಷ್ಠಾನವಾಗಿಲ್ಲ. ಈಗ 25 ಕೋಟಿ ರೂಪಾಯಿಗೆ ಟೆಂಡರ್ ಕರೆಯುತ್ತಿದ್ದಾರೆ. ಕೊಡಗಿನ ಕಾವೇರಿ ನದಿಯಿಂದ ಇಡೀ ರಾಜ್ಯಕ್ಕೆ ನೀರು ಬರುತ್ತದೆ. ಅಂದರೆ ಹಳೆ ಮೈಸೂರು ಭಾಗಗಳಾದ ಹಾಸನ, ಮೈಸೂರು, ಬೆಂಗಳೂರಿನ ಸುತ್ತಮುತ್ತಲಿಗೆ ನೀರು ಬರುತ್ತದೆ. ಆ ಜಿಲ್ಲೆಯವರು ಬೇರೆ ಏನೂ ಕೇಳುವುದಿಲ್ಲ. ಕೇವಲ ರಸ್ತೆ ಬಗ್ಗೆ ಕೇಳುತ್ತಾರಷ್ಟೆ. ಈಗ ನೀವು ಕೊಡುತ್ತಿರುವ 50 ಕೋಟಿ ರೂಪಾಯಿ ಯಾವ ಮೂಲೆ ಹೇಳಿ? ನಾನು ಹೇಳುವುದೇನೆಂದರೆ, ಕನಿಷ್ಠ 500 ಕೋಟಿ ರೂಪಾಯಿ ಕೊಡಬೇಕಾಗುತ್ತದೆ. ಆದರೆ, ಇಷ್ಟೊಂದು ಕೊಡುವುದಕ್ಕೆ ಆಗುವುದಿಲ್ಲ. ಆದರೆ, 100 ಕೋಟಿ ರೂಪಾಯಿಗಳಾದರೂ ಕೊಡಿ. ಕೊಡಗಿನ ಜಿಲ್ಲೆಗೆ ರಸ್ತೆಗಳು ಬಹಳ ಮುಖ್ಯವಾಗಿದೆ. ಅ ಜಿಲ್ಲೆಯವರು ನಿಮ್ಮ ಹತ್ತಿರ ರಸ್ತೆ ಬಿಟ್ಟು ಬೇರೆ ಏನನ್ನು ಸಹ ಕೇಳುವುದಿಲ್ಲ. ಮಾನ್ಯ ಅಧ್ಯಕ್ಷರು ಈ ಸಂದರ್ಭದಲ್ಲಿ ಸ್ವಲ್ಪ

ಪ್ರಭಾವವನ್ನು ಬೀರಬೇಕಾಗುತ್ತದೆ. ತಾವು ಈ ರೀತಿಯಾಗಿದ್ದರೆ ಕಷ್ಟವಾಗುತ್ತದೆ. ನಿಮ್ಮಗೆ ಗೌರವ ಕೊಡುವುದಕ್ಕೋಸ್ಕರ ಅವರು 100 ಕೋಟಿ ರೂಪಾಯಿ ಕೊಡುತ್ತೇವೆಂದು ಅವರು ಪ್ರಕಟಣೆ ಮಾಡಬೇಕು. ಕೊಡಗಿನ ರಸ್ತೆಗೆ 100 ಕೋಟಿ ರೂಪಾಯಿ ಕೊಡಿ ಮತ್ತು ಒಂದು ಮೆಡಿಕಲ್ ಕಾಲೇಜ್ ಅನ್ನು ಕೊಡಿ ಎಂಬುದು ಕೊಡಗಿನ ಜನರ ಪರವಾಗಿ ನಾನು ಮತ್ತು ಮಾನ್ಯ ಜಾರ್ಜ್ ಸಾಹೇಬರು ಸೇರಿ ಈ ಡಿಮಾಂಡ್ ಅನ್ನು ಮಾಡುತ್ತಿದ್ದೇವೆ. ಏಕೆಂದರೆ, ಮಾನ್ಯ ಜಾರ್ಜ್ ಕೂಡ ಕೊಡಗಿನವರಾಗಿದ್ದಾರೆ.

ಅಧ್ಯಕ್ಷರು: ಕೊಡಗಿಗೆ ಒಂದು ಮೆಡಿಕಲ್ ಕಾಲೇಜು ಕೊಡಿ.

ಶ್ರೀ ಬಸವರಾಜ್ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಒಂದು ಸಂತೋಷದ ವಿಚಾರ ಏನೆಂದರೆ, ಮಾನ್ಯ ದಿನೇಶ್ ಗುಂಡೂರಾವ್‌ರವರು ಬೆಂಗಳೂರಿನಲ್ಲಿಯೇ ಮುಳುಗಿ ಹೋಗಿದ್ದರು. ಈಗ ಕೊಡಗಿನ ನೆನಪು ಮಾಡಿಕೊಂಡಿದ್ದಕ್ಕೆ ನಮಗೆ ಸಂತೋಷವಾಯಿತು.

ಶ್ರೀ ದಿನೇಶ್ ಗುಂಡೂರಾವ್: ಕೊಡಗನ್ನು ನಾನು ಮತ್ತು ಜಾರ್ಜ್ ಸಾಹೇಬರು ಯಾವತ್ತೂ ಕೂಡ ಮರೆಯುವುದಕ್ಕೆ ಸಾಧ್ಯವಿಲ್ಲ.

ಡಾ: ಹೆಚ್.ಸಿ.ಮಹದೇವಪ್ಪ: ಮಾನ್ಯ ಗುಂಡೂರಾವ್ ಸಾಹೇಬರನ್ನು ಮುಖ್ಯ ಮಂತ್ರಿ ಮಾಡಿದಂಥ ಜಿಲ್ಲೆಯಾಗಿದೆ.

ಶ್ರೀ ಕೆ.ಜೆ.ಜಾರ್ಜ್: ರಾಜಕೀಯ ಜೀವನವನ್ನು ಅಲ್ಲಿಂದಲೇ ಪ್ರಾರಂಭ ಮಾಡಿದ್ದೇವೆ. ಆದ್ದರಿಂದ, ಆ ಜಿಲ್ಲೆಯನ್ನು ನಾವು ಮರೆಯುವುದಕ್ಕೆ ಆಗುತ್ತದೆಯೇ? ನಾವು ಕಾವೇರಿ ನೀರನ್ನು ಕುಡಿದಿದ್ದೇವೆ. ಮಾನ್ಯ ಅಧ್ಯಕ್ಷರು ಅಲ್ಲಿನವರೆ ಆಗಿದ್ದಾರೆ. ಆದ್ದರಿಂದ, ಈ ಸಾರಿ 100 ಕೋಟಿ ರೂಪಾಯಿ ರಸ್ತೆಗಾಗಿ ಕೊಡಬೇಕು.

ಅಧ್ಯಕ್ಷರು: 100 ಕೋಟಿ ರೂಪಾಯಿ ಮತ್ತು ಒಂದು ಮೆಡಿಕಲ್ ಕಾಲೇಜ್ ಕೊಡಿ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ನೀರಿನ ಬಗ್ಗೆ ಮಾತ್ರ ಮಾತನಾಡತ್ತಿದ್ದಾರೆ ಹೊರತು ರಸ್ತೆ ಬಗ್ಗೆ ಏನನ್ನು ಹೇಳಿಲ್ಲ.

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಅಧ್ಯಕ್ಷರೆ, ಈಗ ತಾವೇನಾದರು ಹೇಳಿ. ನಿಮ್ಮ ಕಡೆಯಿಂದ ಒಂದು ಸ್ಟೇಟ್‌ಮೆಂಟ್ ಬರಬೇಕು. ತಾವು ಮಾನ್ಯ ಸುರೇಶ್ ಕುಮಾರ್‌ರವರಿಗೆ ಹೇಳಿ. ಅವರು ಮಾನ್ಯ ಮುಖ್ಯ ಮಂತ್ರಿಯವರಿಗೆ ಹೇಳುತ್ತಾರೆ. ಅದು ಖಂಡಿತವಾಗಿ ಅನುಷ್ಠಾನವಾಗುತ್ತದೆ.

ಶ್ರೀ ಬಸವರಾಜ್ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಕೊಡಗಿನ ಬಗ್ಗೆ ನಮಗೆ ಬಹಳಷ್ಟು ಪ್ರೀತಿ ಮತ್ತು ಸಹಾನುಭೂತಿ ಎಲ್ಲವೂ ಸಹ ಇದೆ.

ಶ್ರೀ ದಿನೇಶ್ ಗುಂಡೂರಾವ್: ಈಗ ಪ್ರೀತಿ, ಸಹಾನುಭೂತಿ ನಮಗೆ ಬೇಕಾಗಿಲ್ಲ. ನಿಮಗೆ ನೀರು ಸಿಗುತ್ತಿದೆ. ಇವತ್ತಿನದಿವಸ ಎಲ್ಲವೂ ಕೂಡ ಅಲ್ಲಿಂದ ಬರುತ್ತಿದೆ.

ಡಾ: ಹೆಚ್.ಸಿ.ಮಹದೇವಪ್ಪ: ಸರ್ಕಾರ ಬಹುಶ: ಮಾನ್ಯ ಅಧ್ಯಕ್ಷರ ನಿರ್ದೇಶನಕ್ಕೆ ಕಾಯುತ್ತಿದೆ.

ಅಧ್ಯಕ್ಷರು: ದುಡ್ಡು ಮತ್ತು ಒಂದು ಮೆಡಿಕಲ್ ಕಾಲೇಜು ಕೊಡಿ ಎಂದು ಹೇಳುತ್ತಿದ್ದೇನೆ.

ಶ್ರೀ ದಿನೇಶ್ ಗುಂಡೂರಾವ್: ಕಳೆದ ಸಾರಿ ಕೂಡ ಕೊಡಗಿನ ಜಿಲ್ಲೆಯವಗಿಗೆ ಮಂತ್ರಿ ಮಾಡಲಿಲ್ಲ. ಈ ಸಲ ಕೂಡ ಮಂತ್ರಿ ಮಾಡಿಲ್ಲ.

ಡಾ: ಹೆಚ್.ಸಿ.ಮಹದೇವಪ್ಪ: ಹಾಗಾದರೆ, ಮಾನ್ಯ ಅಧ್ಯಕ್ಷರು ರಾಜೀನಾಮೆ ಕೊಟ್ಟು ಮಂತ್ರಿಯಾಗಿ ಎಂದು ಅವರಿಗೆ ಹೇಳೋಣವೇ?

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಅಪ್ಪಚ್ಚುರಂಜನ್‌ರವರನ್ನು ಮಂತ್ರಿ ಮಾಡಿ. ಅವರಿಗೆ ನಾವೂ ಕೂಡ ಬೆಂಬಲ ಕೊಡುತ್ತೇವೆ. ಏಕೆಂದರೆ, ಆ ಜಿಲ್ಲೆಗೆ ಅದರದೆ ಆದಂಥ ಸಂಸ್ಕೃತಿ, ಹಿನ್ನೆಲೆ, ಇತಿಹಾಸ ಇದೆ. ಪ್ರತ್ಯೇಕ ರಾಜ್ಯವನ್ನು ಕೇಳತಕ್ಕಂಥ ಜಿಲ್ಲೆಯಾಗಿತ್ತು. ಆ ಜಿಲ್ಲೆಗೆ ಈಗ political power ಕಡಿಮೆಯಾಗಿದೆ. ಮೊದಲು ಮೂರು ಎಂಎಲ್ಎ ಇದ್ದಂಥದು ಈಗ ಇಬ್ಬರು ಎಂಎಲ್ಎ ಆಗಿದ್ದಾರೆ. ಆದ್ದರಿಂದ, ಅಲ್ಲಿ ಸ್ವಲ್ಪ ಧ್ವನಿ ಕಡಿಮೆಯಾಗುತ್ತಿದೆ. ಈಗ ನಾವು ಧ್ವನಿಯನ್ನು ಹೆಚ್ಚು ಕೂಡಿಸುತ್ತಿದ್ದೇವೆ.

ಶ್ರೀ ಬಸವರಾಜ್ ಬೊಮ್ಮಾಯಿ: ಮಾನ್ಯ ದಿನೇಶ್ ಗುಂಡೂರಾವ್‌ರವರೆ ತಾವು ಹೇಳುವುದು ಸರಿಯಾಗಿದೆ. ಮಾನ್ಯ ಎಸ್.ಎಂ.ಕೃಷ್ಣ ಸರ್ಕಾರ ಇದ್ದಾಗ

ಅದರಲ್ಲಿಯೂ ವಿಶೇಷವಾಗಿ ಮಾನ್ಯ ಧರ್ಮಸಿಂಗ್‌ರವರ ಸರ್ಕಾರ ಇದ್ದಾಗ ಮಾನ್ಯ ದಿನೇಶ್ ಗುಂಡೂರಾವ್‌ರವರು ಆಗುತ್ತಾರೆಂಬ ಇದೇ ರೀತಿಯ ಭಾವನೆಯನ್ನು ಆ ಕಡೆ ನಾವು ಇದ್ದಾಗ ವ್ಯಕ್ತಪಡಿಸಿದ್ದೆವು. ಈ ರೀತಿಯಾಗಿಯೇ ಆಗ ಬೆಂಗಳೂರಿಗೆ ಶಕ್ತಿಯನ್ನು ಕುಂದಿಸಿತು. ನಿಮಗೆ ಸ್ವಲ್ಪ ನೆನಪು ಮಾಡಿಕೊಟ್ಟಷ್ಟೆ.

ಶ್ರೀ ದಿನೇಶ್ ಗುಂಡೂರಾವ್: ಮುಂದಿನ ಚುನಾವಣೆ ಹೊತ್ತಿಗೆ ಆಗುತ್ತೇನೆ ಬಿಡಿ.

ಶ್ರೀ ಬಸವರಾಜ್ ಬೊಮ್ಮಾಯಿ: ಮೂರು ಸಾರಿ ತಮಗೆ ಜನರು ಹಾರಿಸಿ ಕಳುಹಿಸಿದ್ದಾರೆ. ಧರ್ಮಸಿಂಗ್ ಮತ್ತು ಮಾನ್ಯ ಗುಂಡೂರಾವ್‌ರವರ ಸಂಬಂಧ ನೆನಪು ಮಾಡಿಕೊಂಡು ತಾವು ಆಗುತ್ತೀರೆಂದು ನಮಗೆ ಆಶಾಭಾವನೆ ಇತ್ತು.

ಶ್ರೀ ಕೆ.ಜೆ.ಜಾರ್ಜ್: ತಾವು ಈಗ ಆಗಿದ್ದೀರಿ ಅಷ್ಟೇ ಸಾಕು.

ಅಧ್ಯಕ್ಷರು: ಆಯಿತು ಬೇಗ ಮುಗಿಸಿ.

ಶ್ರೀ ಬಸವರಾಜ ಬೊಮ್ಮಾಯಿ: ನಾನು ಆಗಿರುವುದಕ್ಕೆ ಸಂತೋಷವಾಗಿದೆ ಅದು ನನಗೆ ಗೊತ್ತು.

ಅಧ್ಯಕ್ಷರು: ಅವರು ಮುಗಿಸಲಿ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಜಾರ್ಜ್‌ರವರೆ ತಾವು ನನಗೆ ಒಳ್ಳೆಯ ಸ್ನೇಹಿತರಾಗಿ ಸಂತೋಷ ಪಡುತ್ತೀರೆಂದು ನನಗೆ ಗೊತ್ತಿದೆ. ನಮ್ಮ ನಿಮ್ಮ ಸ್ನೇಹ ಬೇರೆ ತರಹ ಇದೆ ಅದು ಬೇರೆ ವಿಚಾರ.

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಬಸವರಾಜ್ ಬೊಮ್ಮಾಯಿರವರೆ ನಮ್ಮ ಪರವಾಗಿ ಒಳ್ಳೆಯ ಮಾತುಗಳನ್ನು ಹೇಳಿದ್ದೀರಿ. ತಮಗೆ ಧನ್ಯವಾದಗಳು. ಏನಾಗುತ್ತದೆಂಬುದನ್ನು ನೋಡೋಣ. ಕೊಡಗು ಜಿಲ್ಲೆ ಬಗ್ಗೆ ಕೊನೆಯಾದಗಿ ಹೇಳುವುದೇನೆಂದರೆ, 100 ಕೋಟಿ ರೂಪಾಯಿ ಮತ್ತು ಒಂದು ಮೆಡಿಕಲ್ ಕಾಲೇಜು ಕೊಡತಕ್ಕಂಥದ್ದು ಹಾಗೂ ಒಬ್ಬರಿಗೆ ಮಂತ್ರಿ ಸ್ಥಾನ ಕೊಡತಕ್ಕಂಥ ಅವಶ್ಯಕತೆ ಇರುತ್ತದೆ. ಆದ್ದರಿಂದ, ಈ ಸರ್ಕಾರ ದಯವಿಟ್ಟು ಇವುಗಳನ್ನು ಮಾಡಬೇಕೆಂದು ಎಲ್ಲರ ಪರವಾಗಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಸರ್ಕಾರ ಇದ್ದರೆ, ಸರ್ಕಾರ ಉಳಿದರೆ ಕೊಡಿ, ಸರ್ಕಾರ ಇಲ್ಲದೆ ಹೋದರೆ ನಾವೇನು ಮಾಡುವುದಕ್ಕಾಗುವುದಿಲ್ಲ. ಇನ್ನು ಬೇರೆ ಬೇರೆ ಯೋಜನೆಗಳು, ಮಾನ್ಯ ಶಿಕ್ಷಣ ಇಲಾಖೆಯ ಸಚಿವರು ಈಗ ಸದನದಲ್ಲಿ ಇಲ್ಲ. ಶಿಕ್ಷಣ ಇಲಾಖೆ ಅತಿ ಮಹತ್ವವಾಗಿರತಕ್ಕಂಥ ಇಲಾಖೆ. ಆದರೆ ಇವತ್ತು ಈ ಇಲಾಖೆಯಲ್ಲಿ ನಾವು ನಮ್ಮ ಮಕ್ಕಳಿಗೆ ಒಳ್ಳೆಯ ಭವಿಷ್ಯವನ್ನು ಕೊಡತಕ್ಕಂಥದ್ದಕ್ಕೆ ಎಲ್ಲರ ಒಂದು ಕಾಳಜಿ ಮತ್ತು ಪ್ರಯತ್ನ ಇದೆ. ಆದರೆ ಇನ್ನು ಅನೇಕ ಸೌಕರ್ಯಗಳನ್ನು ಕೊಡುವುದರಲ್ಲಿ ಸರ್ಕಾರ ಒಂದು ಕಡೆ ವಿಫಲವಾಗುತ್ತಿದೆ. ಇವತ್ತು ಕೇಂದ್ರ ಸರ್ಕಾರ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ 40% ಕ್ಕಿಂತ ಹೆಚ್ಚು ಅನುದಾನವನ್ನು ಕೊಟ್ಟಿದೆ. ಅದಕ್ಕೆ ಇನ್ನು ಹೆಚ್ಚಿನ ಗ್ರಾಂಟ್ಸ್ ಬರುತ್ತದೆ. ಅದನ್ನು ಅಭಿವೃದ್ಧಿ ಮಾಡುವುದಕ್ಕೆ ಮತ್ತು improve ಮಾಡಿಕೊಳ್ಳುವುದಕ್ಕೆ, ಆ ದೃಷ್ಟಿಯಲ್ಲಿ ನೀವು ಇರತಕ್ಕಂಥ ಹಣವನ್ನೇ ಖರ್ಚು ಮಾಡದೆ ಹೋದರೆ ಹೇಗೆ ಸಾಧ್ಯ. ಕಳೆದ ವರ್ಷದಲ್ಲಿ ಹೇಳಿದಿರಿ ಎಲ್ಲಾ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕೊಡತಕ್ಕಂಥದ್ದಕ್ಕೆ 100 ಕೋಟಿ ರೂ.ಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದಿರಿ. ಇದುವರೆಗೂ ಆ ಪ್ರಾಜೆಕ್ಟ್‌ನ್ನು ಪ್ರಾರಂಭ ಮಾಡಲೇ ಇಲ್ಲ. ಆ 100 ಕೋಟಿ ರೂ.ಗಳಲ್ಲಿ ಒಂದು ರೂ.ಗಳು ಆಚೆಗೆ ಬರಲಿಲ್ಲ. ಮತ್ತೆ ಈ PUC ಕಾಲೇಜುಗಳಿಗೆ ಬಜೆಟ್‌ನಿಂದ 80 ಕೋಟಿ ರೂ.ಗಳನ್ನು ಕೊಡುತ್ತೇವೆಂದು ಹೇಳಿದಿರಿ ಅದಕ್ಕೆ ಒಂದು ರೂಪಾಯಿಯನ್ನು ಬಿಡುಗಡೆ ಮಾಡಲಿಲ್ಲ ಕೇವಲ 75 ಕೋಟಿ ರೂ.ಗಳು ಕೇಂದ್ರ ಸರ್ಕಾರದ RIDF ನಿಂದ ನೀವು ಹಣ ಖರ್ಚು ಮಾಡಿದಿರಿ. ಆದರೆ ನಿಮ್ಮ ಬಜೆಟ್‌ನಿಂದ ಒಂದು ರೂ.ಗಳನ್ನು ಕೊಡಲಿಲ್ಲ. ಇವತ್ತಿಗೂ ಕೂಡ ಅನೇಕ ಶಾಲೆಗಳಲ್ಲಿ ಕುಡಿಯುವುದಕ್ಕೆ ನೀರು ಇಲ್ಲ, ಶೌಚಾಲಯಗಳು, ಮೂಲಭೂತ ಸೌಕರ್ಯಗಳು ಇಲ್ಲ. ಅದನ್ನು ನೀವು ಗಮನದಲ್ಲಿಟ್ಟುಕೊಂಡು ಮಾಡಬೇಕಾಗುತ್ತದೆ. ನೀವು ಸೈಕಲ್ ಕೊಡುತ್ತಿದ್ದೀರಿ ಓಕೆ. ಅದನ್ನು ನಾವು ಪೂರ್ತಿ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಈ ವರ್ಷ ಇದುವರೆಗೆ ಸೈಕಲ್ ಕೊಟ್ಟಿರುವುದಿಲ್ಲ. ನಿನ್ನೆ ಏನೋ ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿದ್ದೀರಿ. ನಿಮ್ಮ ಸೈಕಲ್ ಇದುವರೆಗೆ ವಿದ್ಯಾರ್ಥಿಗಳಿಗೆ ಮುಟ್ಟಿಲ್ಲ. ಆದರೆ ಸೈಕಲ್ ಕೊಡುವುದಕ್ಕಿಂತ ಹೆಚ್ಚಾಗಿ ಆ

ಶಾಲೆಗಳಿಗೆ ಕುಡಿಯುವ ನೀರು ಕೊಡುವುದು ಎಷ್ಟು ಮುಖ್ಯವಿದೆ ನೀವೇ ಹೇಳಿ. ಶಾಲೆಗಳಿಗೆ ಶೌಚಾಲಯಗಳನ್ನು ಕೊಡುವುದು ಎಷ್ಟು ಮುಖ್ಯ ಇದೆ ನೀವೇ ಹೇಳಿ. ಅದು ಮುಖ್ಯವೋ ಸೈಕಲ್ ಮುಖ್ಯವೋ? ಇಂತಹ ಒಂದು ಕಾರ್ಯಕ್ರಮವನ್ನು ನೀವು ಏಕೆ ಹಾಕಿಕೊಳ್ಳುತ್ತಿಲ್ಲವೆಂದು ನಾನು ಕೇಳುತ್ತಿರುವುದು, ಈಗಲಾದರೂ ನೀವು ಅನೌನ್ಸ್ ಮಾಡಿ. ಇಡೀ ನಮ್ಮ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಎಲ್ಲಾ ಶಾಲೆಗಳಲ್ಲಿ ನಾವು ಕಡ್ಡಾಯವಾಗಿ ಮುಂದಿನ ಎರಡು ವರ್ಷದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಶೌಚಾಲಯವನ್ನು ನಿರ್ಮಾಣ ಮಾಡುತ್ತೇವೆ ಎನ್ನುವಂಥ ಒಂದು ಕಾರ್ಯಕ್ರಮವನ್ನು ರೂಪಿಸಿ. ಇಡೀ ಅಸೆಂಬ್ಲಿ ನಿಮಗೆ ಬೆಂಬಲ ಕೊಟ್ಟು ಸಪೋರ್ಟ್ ಮಾಡುತ್ತದೆ. ಇವತ್ತು ಕೋರ್ಟ್ ಆರ್ಡರ್ ಕೂಡ ಇದೆ. ಜಸ್ಟೀಸ್ ಕೇಹಾರ್‌ವರು ಹೇಳಿದ್ದಾರೆ, ಆ ಒಂದು ಕಾರ್ಯಕ್ರಮವನ್ನು ಮಾಡಿ ಎಂದು ಹೇಳಿದ್ದಾರೆ. ನೀವು ಏಕೆ ಮಾಡುತ್ತಿಲ್ಲವೆಂದು ಅವರು ಕೂಡ ಕೇಳಿದ್ದಾರೆ. ನಾವು ಕೇವಲ ಪ್ರಚಾರಕ್ಕೋಸ್ಕರ ಮಾಡುವುದಲ್ಲ, ನಾನು ಮೊದಲೇ ಹೇಳಿದೆ. ಮಾನ್ಯ ಆರೋಗ್ಯ ಸಚಿವರಿಗೆ ಯಾವ ಸ್ಕೀಂ ಬಗ್ಗೆ ಯೋಚನೆ ಇಲ್ಲ. ಅವರಿಗೆ ಒಂದೇ ಒಂದು ಯೋಚನೆ ಇರುವುದು, ಆ ಒಂದು Van ಬಗ್ಗೆ ಮಾತ್ರ. ಅದರ ಬಗ್ಗೆ ಮಾತ್ರ ಅವರಿಗೆ ಕಾಳಜಿ. ಅದಕ್ಕೆ ಕೇಂದ್ರ ಸರ್ಕಾರ ಮತ್ತು ಎಲ್ಲರ ದುಡ್ಡು ಇದೆ. ಅವರು ಯಾವ ಒಂದು ಆಸ್ಪತ್ರೆಗೂ ಹೋಗುವುದಿಲ್ಲ ಒಂದು ಆಸ್ಪತ್ರೆಯ inspection ಮಾಡುವುದಿಲ್ಲ. ಅವರಿಗೆ ಬರೀ ಆ Van ಬಗ್ಗೆ ಮಾತ್ರ, ಆರೋಗ್ಯಶ್ರೀ ಯೋಜನೆ ಬಗ್ಗೆ ಮಾತ್ರ ಕಾಳಜಿ. ಅವರು ಅಸೆಂಬ್ಲಿಗೂ ಬರುವುದಿಲ್ಲ. ಇವತ್ತು ಇಡೀ ಬಜೆಟ್ ಸೆಷನ್ ನಡೆಯುತ್ತಿದೆ ಮಾನ್ಯ ಆರೋಗ್ಯ ಸಚಿವರು ಬಂದು ಒಂದು ದಿವಸ ಕುಳಿತುಕೊಂಡು ಇಲ್ಲಿ ಏನು ಚರ್ಚೆಯಾಗುತ್ತಿದೆ ಏನು ಉತ್ತರ ಕೊಡಬೇಕು ಏನು ಮಾಡಬೇಕು ಎನ್ನುವ ಒಂದು ಸೌಜನ್ಯ ಕೂಡ ಇಲ್ಲ. ಬಹುಶ: ಅವರ ಆರೋಗ್ಯ ಕೆಟ್ಟಿದೆಯೋ ಏನೋ ನಮಗೆ ಗೊತ್ತಿಲ್ಲ. ಅದನ್ನು ವಿಚಾರಿಸಬೇಕು.

ಶ್ರೀ ಎಂ.ಎಸ್.ಸೋಮಲಿಂಗಪ್ಪ: ಮಾನ್ಯ ಅಧ್ಯಕ್ಷರೆ, ನಿನ್ನೆವರೆಗೆ ಬಂದಿದ್ದರು ಆದರೆ ಇವತ್ತು ಬಂದಿಲ್ಲ.

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಅಧ್ಯಕ್ಷರೆ, ಅವರು ಬಂದು ಭಾಷಣವನ್ನು ಆಲಿಸಿದ್ದು ನಾನು ನೋಡಿಯೆ ಇಲ್ಲ. ಮಾನ್ಯ ಅಧ್ಯಕ್ಷರೆ, ಈ ಟೂರಿಸಂ ಇಲಾಖೆ ಯ ಬಗ್ಗೆ ಕಳೆದ ಬಜೆಟ್‌ನಲ್ಲಿ ನೋಡಿ. ಅದು ಯಾವ ಮಟ್ಟದಲ್ಲಿ ಇದೆ ನೋಡಿ. 50 ಕೋಟಿ ರೂ.ಗಳನ್ನು ಖರ್ಚು ಮಾಡಿ ನಾವು ಥೀಮ್ ಪಾರ್ಕ್ ಹಂಪಿಯಲ್ಲಿ ಮಾಡುತ್ತೇವೆಂದು ಒಂದು ದೊಡ್ಡ ಘೋಷಣೆಯನ್ನು ಮಾಡಿದರು. ಬರೀ 50 ಲಕ್ಷ ರೂ.ಗಳನ್ನು ರಿಲೀಸ್ ಮಾಡಿದ್ದಾರೆ. 50 ಕೋಟಿ ರೂ.ಗಳಲ್ಲಿ 50 ಲಕ್ಷ ರೂ.ಗಳು ಎಲ್ಲಿಗೆ, ಕೇವಲ 1% ಆಯಿತು. ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಬಗ್ಗೆ ಮಾನ್ಯ ಸಂಪಂಗಿಯವರ ಒಂದು ಕಾಲಿಂಗ್ ಅಟೆನ್ಷನ್ ಇರಬಹುದು. ಎಲ್ಲಾ ಕಡೆ ಸ್ಟೇಡಿಯಂಗಳನ್ನು ಕಟ್ಟಬೇಕು. ಕಳೆದ ವರ್ಷ 98 ಕೋಟಿ ರೂ.ಗಳಲ್ಲಿ ಇಲ್ಲಿಯವರೆಗೆ ಮಂಜೂರಾಗಿರುವುದು 25 ಕೋಟಿ ರೂ.ಗಳು ಮಾತ್ರ. ಅಂದರೆ ಇನ್ನು 75% ಹಣ ಅವರು ಬಿಡುಗಡೆಯೆ ಮಾಡಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಮೊನ್ನೆ ಒಂದು statement ನ್ನು ಕೊಟ್ಟರು. ಹೊಸ ಕ್ರಿಕೆಟ್ ಸ್ಟೇಡಿಯಂನ್ನು ಕಟ್ಟುತ್ತೇವೆಂದು ಹೇಳಿದರು. ಈಗ ನಮಗೆ ಕ್ರಿಕೆಟ್ ಸ್ಟೇಡಿಯಂ ಬೇಕಾಗಿಲ್ಲ. ಈಗ ಎಲ್ಲಾ ಜಿಲ್ಲೆಗಳಲ್ಲಿ ಇರತಕ್ಕಂಥ ಸ್ಟೇಡಿಯಂಗಳನ್ನು ಮೊದಲು ಅಭಿವೃದ್ಧಿ ಮಾಡಿ. ಅದಕ್ಕೆ ದುಡ್ಡು ಕೊಡಿ. ಮೈಸೂರು,ಹುಬ್ಬಳ್ಳಿ, ಗುಲ್ಬರ್ಗಾದಲ್ಲಿ ಮಾಡಿ, ಬೆಂಗಳೂರಿಗೆ ಏಕೆ ಮಾಡುತ್ತೀರಿ. ಬೆಂಗಳೂರಿನಲ್ಲಿ ಈಗಾಗಲೇ ಒಳ್ಳೊಳ್ಳೆಯ ಕಟ್ಟಡಗಳು ಇವೆ. ಸುಮಾರು ಸ್ಟೇಡಿಯಂಗಳು ಇವೆ, ಅವು ಉಪಯೋಗವಾಗುತ್ತಿಲ್ಲ. ಆದ್ದರಿಂದ ಈ ಘೋಷಣೆಗಳು ಬೇಡ. ಎಲ್ಲವೂ ಕೂಡ ಒಂದು ಹೆಡ್‌ಲೈನ್ ನ್ಯೂಸ್ ಆಗಬೇಕು. ಏನು ಮಾಡಬೇಕು ಅದನ್ನು ನೋಡಿ, Youth Service Minister ಏನು ಮಾಡುತ್ತಿದ್ದಾರೆ. ನಿಜವಾಗಲೂ ನನಗೆ ಯಾರು Youth Service Minister ಎಂದು ಗೊತ್ತಾಗುತ್ತಿಲ್ಲ. ಮಾನ್ಯ ರಾಮದಾಸ್‌ರವರ ಬಗ್ಗೆ ನಮಗೆ ಅಭಿಮಾನ ಇದೆ. ಅವರು ಎಲ್ಲಾ ಕಡೆ ಹೋಗುತ್ತಿದ್ದಾರೆ. Inspection ಮತ್ತು raid ಮಾಡುತ್ತಿದ್ದಾರೆ. ಮಂತ್ರಿಗಳು ಅಂದರೆ ಹಾಗೆ ಇರಬೇಕು.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ಮಾನ್ಯ ರಾಮದಾಸ್‌ರವರು ಆಸ್ಪತ್ರೆ ನೋಡಿ ಕಣ್ಣೀರು ಹಾಕುತ್ತಿದ್ದಾರೆ.

ಶ್ರೀ ದಿನೇಶ್ ಗುಂಡೂರಾವ್: ಆಕ್ಷನ್ ಆಗಬೇಕು. ನಮ್ಮ ಕ್ಷೇತ್ರದಲ್ಲಿ ಬಹಳಷ್ಟು ನೇಕಾರರು ಇದ್ದಾರೆ. ಅವರದ್ದು ಒಂದು ಬೇಡಿಕೆ ಇದೆ. ನೇಕಾರರಿಗೆ ಈ ಪವರ್ ಲೂಮ್ಸ್‌ನಲ್ಲಿ ಬಹಳ ಸಮಸ್ಯೆಗಳು ಆಗುತ್ತಿವೆ, ಎಲ್ಲರಿಗೂ ಗೊತ್ತಿದೆ. ಕಳೆದ ಬಜೆಟ್‌ನಲ್ಲಿ 5 ಕೋಟಿ ರೂ.ಗಳನ್ನು ಕೊಡುತ್ತೇವೆಂದು ಹೇಳಿ, pneumatics looms ಇದುವರೆಗೆ ಒಂದು ಕೋಟಿ ರೂ.ಗಳನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ. ಇನ್ನುಳಿದ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು. ಅವರು 3% ನಲ್ಲಿ ಸಾಲವನ್ನು ತೆಗೆದುಕೊಳ್ಳತಕ್ಕಂಥ ಒಂದು ಕಾರ್ಯಕ್ರಮ ಇದೆ. ಆದರೆ ನಿಜವಾಗಲೂ ಕೂಡ ಯಾರಿಗೂ ಆ ಲೋನ್ ಮಂಜೂರಾಗುತ್ತಿಲ್ಲ. Power loom sector ನಲ್ಲಿರತಕ್ಕಂಥವರಿಗೆ 3% ಬಡ್ಡಿ ದರದಲ್ಲಿ ಅವರಿಗೆ ಲೋನ್ ಸಿಗುತ್ತಿಲ್ಲ. ಅದನ್ನು ಬಹಳ ಗಂಭೀರವಾಗಿ ತೆಗೆದುಕೊಂಡು ಮಾಡಬೇಕು. ಈಗಾಗಲೇ ಅವರು ಅನೇಕ ಬೇಡಿಕೆಗಳನ್ನು ಇಟ್ಟಿದ್ದಾರೆ. ಇದನ್ನು ಸಹ ಮಾಡಬೇಕೆಂದು ಹೇಳುತ್ತೇನೆ. ಈ ಸರ್ಕಾರ ಮುಜರಾಯಿ ಇಲಾಖೆಯ ಬಗ್ಗೆ ಬಹಳ ಉತ್ಸಾಹವಿತ್ತು. ಮಠಗಳಿಗೆ ಮತ್ತು ಸ್ವಾಮೀಜಿಗಳಿಗೆ ದುಡ್ಡು ಕೊಡುತ್ತೇವೆಂದು ಹೇಳಿದ್ದರು. ಆದರೆ ಅದರಲ್ಲಿಯೂ ಕೂಡ ಇವತ್ತಿನ ದಿವಸ ಮೋಸವಾಗುತ್ತಿದೆ. ಮುಜರಾಯಿ ಇಲಾಖೆಯಲ್ಲಿಯೂ ಕೂಡ ಇವತ್ತಿನ ದಿವಸ ಅವರಿಗೆ ಸಿಗಬೇಕಾಗಿರತಕ್ಕಂಥ ಅಮೌಂಟ್ ಬಿಡುಗಡೆ ಮಾಡುತ್ತಿಲ್ಲ. ಏನೆಲ್ಲಾ ಹೇಳಿದರು, ಅದರ ಬಗ್ಗೆ ಒಂದು ಪೇಪರ್‌ನಲ್ಲಿ ಬರೆದುಕೊಂಡಿದ್ದೆ ಅದು ಸಿಗುತ್ತಿಲ್ಲ. ಅದರಲ್ಲಿ ಸುಮಾರು ಕಡೆ ಹಣ ಬಿಡುಗಡೆಯಾಗಿಲ್ಲ. ಈ ಮಠ ಮಾನ್ಯರನ್ನು ಖುಷಿ ಪಡಿಸತಕ್ಕಂಥ ಕಾರ್ಯಕ್ರಮ ಮಾಡುತ್ತಿದ್ದಾರೆ, ಆದರೆ ಈ ಇಲಾಖೆಯಲ್ಲಿಯೂ ಕೂಡ ಅವರಿಂದ ಮಾಡುವುದಕ್ಕಾಗಿಲ್ಲ. ಆ ಸ್ಟೇಟ್‌ಮೆಂಟ್ ಇದೆ ಸಿಗುತ್ತಿಲ್ಲ. ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಆ ಸ್ಟೇಟ್‌ಮೆಂಟ್‌ನ್ನು ನಂತರ ಹುಡುಕಿ ಹೇಳುತ್ತೇನೆ. ಸಾರ್ವಜನಿಕ ಉದ್ಯಮಗಳ ಸಮಿತಿಯಿಂದ ಒಂದು ವರದಿ ಬಂದಿದೆ, ಈ ಪಾನೀಯ

ನಿಗಮದಲ್ಲಿ ಸುಮಾರು 974 ಕೋಟಿ ರೂ.ಗಳಷ್ಟು ಆದಾಯ ಪಾನೀಯ ನಿಗಮದಿಂದ ವಂಚಿತರಾಗಿದ್ದಾರೆ. ಅವರು ಏನು ಈ ಲಾಭಾಂಶದಿಂದ 5% ಚಾರ್ಜ್ ಮಾಡಬೇಕಾಗಿತ್ತು ಅದನ್ನು 2%ಗೆ ಇಳಿಸಿದರು. ಇದರಿಂದ ನಿಗಮಕ್ಕೆ ಸಾಕಷ್ಟು ನಷ್ಟವಾಗಿದೆ. ಮಾನ್ಯ ರೇಣುಕಾಚಾರ್ಯರವರು ಈಗ ಸದನದಲ್ಲಿ ಇಲ್ಲ. ಇದರ ಬಗ್ಗೆ ಅವರು ಗಮನ ತೆಗೆದುಕೊಳ್ಳಬೇಕು. ಇದು ಕಮಿಟಿಯ ಒಂದು ರಿಪೋರ್ಟ್ ಆಗಿರುವುದರಿಂದ ಅದನ್ನು ಸೀರಿಯಸ್ಸಾಗಿ ತೆಗೆದುಕೊಳ್ಳಬೇಕು. 974 ಕೋಟಿ ರೂ.ಗಳು ಅದು ಕಡಿಮೆ ಹಣ ಏನು ಅಲ್ಲ.

974 ಕೋಟಿ ರೂಪಾಯಿಗಳು ಅದು ಕಡಿಮೆ ಅಮೌಂಟ್ ಅಲ್ಲ ಅದಕ್ಕಾಗಿ ಇದನ್ನು ತಾವು ಸ್ವಲ್ಪ ಸೀರಿಯಸ್ಸಾಗಿ ತೆಗೆದುಕೊಳ್ಳಬೇಕು. ಹೋದ ವರ್ಷ ಮುಜರಾಯಿ ಇಲಾಖೆಯ 160 ಲಕ್ಷ ರೂಪಾಯಿಗಳ ನಿಮ್ಮ Outlay ಇತ್ತು. ಬಹುಶಃ ಒಂದು ವಾರದ ಹಿಂದೆ 53 ಲಕ್ಷ ರೂಪಾಯಿಗಳು ಮಾತ್ರ ರಿಲೀಸ್ ಆಗಿದೆ. ಮಾನ್ಯ ಸೋಮಣ್ಣನವರು ಮುಜರಾಯಿ ಇಲಾಖೆಯ ಮಂತ್ರಿಗಳಾಗಿದ್ದಾಗ ಸ್ಕೀಮ್ ಅನ್ನು ಅನೌನ್ಸ್ ಮಾಡಿದರು. ಒಂದು ಕ್ಷೇತ್ರಕ್ಕೆ ನಾವು 3–3 ದೇವಸ್ಥಾನಗಳನ್ನು ತೆಗೆದುಕೊಂಡು 15 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಅಭಿವೃದ್ಧಿ ಮಾಡುತ್ತೇವೆಂದು ಹೇಳಿದರು. ಆದರೆ ಅವರ ಕಾರ್ಯಕ್ರಮಗಳು ಕೂಡ ಆಗಲಿಲ್ಲ. ಅವರು ಕೂಡ ಅದರಲ್ಲಿ ಮುಂದುವರಿಯಲಿಲ್ಲ. ಆ ಮುಜರಾಯಿ ಇಲಾಖೆಗೆ ಯಾರೇ ಹೋದರೂ ಕೂಡ ಅಲ್ಲಿರುವುದಿಲ್ಲ. ಈಗ ಪಾಪ ಡಾ: ವಿ.ಎಸ್. ಆಚಾರ್ಯರವರಿಗೆ ಕೊಟ್ಟಿದ್ದಾರೆ. ಈ ಇಲಾಖೆಯಲ್ಲಿ 160 ಲಕ್ಷ ರೂಪಾಯಿಗಳನ್ನು ಹೋದ ವರ್ಷದ outlay ಇತ್ತು. ಇದರಲ್ಲಿ 53 ಲಕ್ಷ ರೂಪಾಯಿಗಳು ಮಾತ್ರ ರಿಲೀಸ್ ಆಗಿದೆ. ಯಾವ ದೇವಸ್ಥಾನಗಳನ್ನೂ ಅಭಿವೃದ್ಧಿ ಮಾಡುವುದಕ್ಕೆ ಫಂಡ್ ಸಿಗುತ್ತಿಲ್ಲ. ದಯವಿಟ್ಟು ನೀವು ಇದನ್ನು ಪೂರ್ತಿ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳೇ, ತಾವು ಇಲ್ಲಿಗೆ ಬಂದಿದ್ದು ಒಳ್ಳೆಯದಾಯಿತು, ನಾನು ಅನೇಕ ಬೇಡಿಕೆಗಳನ್ನು ಇಟ್ಟಿದ್ದೆ, ಬೆಂಗಳೂರಿನ ವಿಚಾರ, ಕೊಡಗಿನ ವಿಚಾರ, ಇನ್ನೊಂದು ಸಾರಿ ಕೊಡಗಿನ ವಿಚಾರವನ್ನು ಹೇಳುತ್ತೇನೆ. ಬೆಂಗಳೂರು ನಗರಕ್ಕೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಈ ವರ್ಷ ಕೇಳಿದ್ದೇವೆ. ಕೊಡಗು ಜಿಲ್ಲೆಗೆ 50 ಕೋಟಿ

ರೂಪಾಯಿಗಳನ್ನು ಕೊಡುತ್ತಿದ್ದೀರಿ ಅದು ಏನೇನೂ ಸಾಕಾಗುವುದಿಲ್ಲ. ಕೊಡಗು ಜಿಲ್ಲೆ ಬೇರೆ ಏನನ್ನೂ ಕೇಳುವುದಿಲ್ಲ. ಕೇವಲ ರಸ್ತೆಯ ಅಭಿವೃದ್ಧಿಯನ್ನು ಮಾತ್ರ ಕೇಳುತ್ತಾರೆ. ನೀವು ಕನಿಷ್ಠ 150 ಕೋಟಿ ರೂಪಾಯಿಗಳನ್ನು ಕೊಡಬೇಕು. ಕೊಡಗು ಜಿಲ್ಲೆಗೆ ಒಂದು ಮೆಡಿಕಲ್ ಕಾಲೇಜನ್ನು ಕೊಡಬೇಕೆಂದು ನನ್ನ ಒತ್ತಾಯವಿದೆ. ಈ ಬಗ್ಗೆ ಮುಂದೆ ಏನು ಮಾಡುತ್ತಾರೆ ನೋಡೋಣ. ಇದಕ್ಕೆ ಮಾನ್ಯ ಸ್ಪೀಕರ್‌ರವರ ಪೂರ್ತಿ ಬೆಂಬಲವಿದೆ. ಇನ್ನು ಬೇಕಾದಷ್ಟು ವಿಚಾರಗಳು ಇವೆ. ಆದರೆ ಈಗ ನನ್ನ ಭಾಷಣವನ್ನು ಸದ್ಯಕ್ಕೆ ಮೊಟಕುಗೊಳಿಸಿ ಈ ಒಂದು ಬಜೆಟ್ ನಿಜವಾಗಿಯೂ ಕೂಡ ಒಂದು ರೀತಿಯಾಗಿ ಯಾರಿಗೂ ಕೂಡ ಅನುಕೂಲವಾಗುವಂತಹ ಬಜೆಟ್ ಆಗಿಲ್ಲ. ಇದು ದಾರಿತಪ್ಪಿಸುವಂತಹ ಬಜೆಟ್ ಆಗಿದೆ. ದಿಕ್ಕನ್ನು ತಪ್ಪಿಸುವಂತಹ ಬಜೆಟ್ ಆಗಿದೆ, ಮುಂದಿನ ಬಜೆಟ್‌ನಲ್ಲಿ ಕನಿಷ್ಟ 75–80% ಅನುಷ್ಟಾನ ಆಗಬೇಕು. ಆ ರೀತಿಯಾದಂತಹ ಕಾರ್ಯಕ್ರಮವನ್ನು ನೀವು ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳೆ, ಇದು 80% ಅನುಷ್ಠಾನವಾಗಬೇಕು. ನೀವು ಏನೇನು ಯೋಜನೆಗಳನ್ನು ಹಾಕಿಕೊಂಡಿದ್ದೀರಿ, ಅದು ಕಾರ್ಯಗತವಾಗಬೇಕು. ಇವತ್ತು ಅವೆಲ್ಲವೂ ಘೋಷಣೆಯಾಗಿಯೇ ಉಳಿಯಬಾರದೆಂದು ಈ ಸಂದರ್ಭದಲ್ಲಿ ಮನವಿಯನ್ನು ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ ನಮಸ್ಕಾರ.

ಅಧ್ಯಕ್ಷರು: ಮಾನ್ಯ ಜೆ.ಡಿ. ನಾಯಕ್‌ರವರೆ ತಾವು 10 ನಿಮಿಷದಲ್ಲಿ ಮಾತನಾಡಿ ಮುಗಿಸಿ.

ಶ್ರೀ ಜೆ.ಡಿ. ನಾಯಕ್ (ಭಟ್ಕಳ): ಮಾನ್ಯ ಸಭಾಧ್ಯಕ್ಷರೆ, ಬಜೆಟ್‌ನ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ತಾವು ಹೇಳಿದ ಹಾಗೆ ನಾನು ವಿಶೇಷವಾಗಿ ಕೆಲವೊಂದು ವಿಷಯದ ಬಗ್ಗೆ ನನ್ನ ಸಲಹೆಯನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಉತ್ತರ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆ ಹಾಗೂ ಕರಾವಳಿ ಜಿಲ್ಲೆಗಳ ಬಗ್ಗೆ ನಮ್ಮ ಸ್ನೇಹಿತರಾದ ಶ್ರೀ ಗೋಪಾಲ ಭಂಡಾರಿಯವರು ಬಹಳ ಸವಿಸ್ತಾರವಾಗಿ ಮಾತನಾಡಿದರು. ಮುಖ್ಯವಾಗಿ ಈ ಜಿಲ್ಲೆಗಳ ಬಗ್ಗೆ ಹೇಳಬೇಕೆಂದರೆ, ವಿಶೇಷವಾಗಿ ನಮ್ಮ ಉತ್ತರ ಕನ್ನಡ ಜಿಲ್ಲೆ ಇದು ಅರಣ್ಯ ಪ್ರದೇಶಗಳನ್ನೊಳಗೊಂಡ ಜಿಲ್ಲೆಯಾಗಿದೆ. ನಮ್ಮ

ಜಿಲ್ಲೆಯಲ್ಲಿ 70% ಕಾಡು ಇದೆ, 30% ಕೃಷಿ ಭೂಮಿ ಇದೆ. ಈಗ ಮುಖ್ಯವಾಗಿ ಈ ಬಜೆಟ್‌ನಲ್ಲಿ ಏನೇನು ಹೇಳಿದ್ದೀರಿ. ಆ ಯಾವುದೇ ಯೋಜನೆಗಳು ಕೂಡ ನಮ್ಮ ಜಿಲ್ಲೆಗೆ ಅನ್ವಯವಾಗುವಂತಹ ವ್ಯವಸ್ಥೆಯಾಗಿಲ್ಲ. ಇದನ್ನು ನಾನು ಏತಕ್ಕಾಗಿ ಹೇಳುತ್ತೇನೆಂದರೆ, ನಮ್ಮ ಜಿಲ್ಲೆಯಲ್ಲಿರತಕ್ಕಂತಹ ಸುಧಾರಣೆ ಮತ್ತು ಇಳುವರಿ ಮಾಡುವಂತಹ ಜಮೀನುಗಳ ಪ್ರಮಾಣ ಬಹಳ ಕಡಿಮೆ ಇರುತ್ತದೆ. ಅಲ್ಲಿ ಹಿಡುವಳಿಯ ಪ್ರಮಾಣವನ್ನು ಲೆಕ್ಕ ಹಾಕಿದರೆ 10 ರಿಂದ 40 ಗುಂಟೆ 1–2 ಎಕರೆ ಮತ್ತು 5–10 ಹಿಡುವಳಿಯ ಪ್ರಮಾಣವನ್ನು ಬಹಳ ಕಡಿಮೆ ಇದೆ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ. ನಾವು ಬೇಸಾಯ ಮಾಡುವಂತಹ ಪರಿಸ್ಥಿತಿ ಮಳೆಯ ಆಧಾರಿತ ಬೇಸಾಯವಾಗಿರುತ್ತದೆ. ಇಲ್ಲಿ ಯಾವುದೇ ಒಂದು ಬಲವಾದ ನೀರಾವರಿಯ ವ್ಯವಸ್ಥೆ ಇಲ್ಲ. ಯಾವುದೇ ದೊಡ್ಡ ಪ್ರಮಾಣದ ಅಣೆಕಟ್ಟನ್ನು ಕಟ್ಟುವಂತಹ ವ್ಯವಸ್ಥೆ ಮತ್ತು ನೀರಾವರಿ ಮಾಡುವಂತಹ ವ್ಯವಸ್ಥೆ ಇಲ್ಲ. ಅದು ಏನಿದ್ದರೂ ನಾವು ಮಳೆಯ ನೀರನ್ನು ಆಧರಿಸಿ ಬೇಸಾಯವನ್ನು ಮಾಡುವಂತಹ ವ್ಯವಸ್ಥೆ ಇದೆ. ಇಲ್ಲಿ ನೀರಾವರಿಯ ಸುಧಾರಣೆಯಾಗ ಬೇಕೆಂದರೆ, ಸಣ್ಣ ನೀರಾವರಿ ಇಲಾಖೆಯ ಮೂಲಕ ಅನುಕೂಲವಾಗಬೇಕಾಗಿದೆ. ಇದರಲ್ಲಿ ಮುಖ್ಯವಾಗಿ Lift Irrigationsಗಳು. ನಮ್ಮ ಭಾಗದಲ್ಲಿ Lift Irrigationsಗಳು ಇವೆ, ಶರಾವತಿ ಇರಬಹುದು, ಕಾಳಿ ಇರಬಹುದು, ಇಲ್ಲಿ ಸಾಕಷ್ಟು ನದಿಗಳು ಹರಿಯುತ್ತಿವೆ. ಅಲ್ಲಿ ಎಷ್ಟೇ ನದಿಗಳು ಹರಿದರೂ ಕೂಡ ಅಲ್ಲಿ ಹರಿಯುವಂತಹ ನೀರು ಜಮೀನಿಗೆ ಹೋಗದೆ ನೇರವಾಗಿ ಸಮುದ್ರಕ್ಕೆ ಹೋಗುವಂತಹ ವ್ಯವಸ್ಥೆ ಜಾಸ್ತಿ ಇದೆ. ಯಾವುದೇ ಅಣೆಕಟ್ಟನ್ನು ಕಟ್ಟಬೇಕಾದರೆ ಅಲ್ಲಿ ಸಾಕಷ್ಟು ಮುಳುಗಡೆಯಾಗುವಂತಹ ವ್ಯವಸ್ಥೆ ಇದೆ. ಅದು ಮುಳುಗಡೆಯಾದರೆ ಇದ್ದಂತಹ ಜಮೀನುಗಳು ಸಹ ಸುಧಾರಣೆಯಾಗುವಂತಹ ವ್ಯವಸ್ಥೆ ಇಲ್ಲ. ಅದಕ್ಕಾಗಿ ನಾನು ಸಣ್ಣ ನೀರಾವರಿ ಮಂತ್ರಿಗಳಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ನಮ್ಮ ಭಾಗದಲ್ಲಿ ಸಾಕಷ್ಟು Lift Irrigationsನ್ನು ಮಾಡಿದರೆ ಕರಾವಳಿ ಜಿಲ್ಲೆಗಳಾದ ಉತ್ತರ ಕನ್ನಡ ಜಿಲ್ಲೆ ಇರಬಹುದು, ಉಡುಪಿ ಜಿಲ್ಲೆ ಇರಬಹುದು, ಮಂಗಳೂರು ಜಿಲ್ಲೆ ಇರಬಹುದು ಸಾಕಷ್ಟು Lift irrigationsಗೆ ಅವಕಾಶವನ್ನು ಮಾಡಿಕೊಟ್ಟರೆ ಹೆಚ್ಚು ಬೆಳೆಯನ್ನು ಬೆಳೆಯುವುದಕ್ಕೆ

ಅನುಕೂಲವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ವಿನಮ್ರವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಬೆಲೆ ಸಾಲದ ಬಗ್ಗೆ ನನ್ನದು ಒಂದು ವಿನಂತಿ ಇದೆ. ಸಣ್ಣಸಣ್ಣ ರೈತರ ಹಿಡುವಳಿ ಕಡಿಮೆ ಇರುವುದರಿಂದ ಎಲ್ಲರಿಗೂ ಬೆಳೆ ಸಾಲ ಸಿಗುವುದಕ್ಕೆ ವ್ಯವಸ್ಥೆ ಇಲ್ಲ ಬಹಳ ಕಡಿಮೆ ಇದೆ. 10 ರಿಂದ 30 ಗುಂಟೆ ಜಮೀನಿನ ಹಿಡುವಳಿದಾರರಿಗೆ ಸಹಕಾರ ಸಂಘಗಳಲ್ಲಿ ಸಾಲ ಕೊಡುವಂತಹ ವ್ಯವಸ್ಥೆ ಇದೆ. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಯನ್ನು ಮಾಡುತ್ತೇನೆ. ಈ ಬೆಳೆ ಸಾಲ ಎಲ್ಲಾ ರೈತರಿಗೂ ಸಿಗಲಾರದ ಪರಿಸ್ಥಿತಿ ಇರುವುದರಿಂದ ಸಮಗ್ರ.. ಕೃಷಿ ಕ್ಷೇತ್ರಕ್ಕೆ ವಿಸ್ತರಣೆಯಾಗುವಂತಹ ವ್ಯವಸ್ಥೆಯನ್ನು ಮಾಡಬೇಕು. ದೀರ್ಘಾವಧಿ ಕೃಷಿ ಸಾಲಕ್ಕೂ ಕೂಡ 1% ಬಡ್ಡಿಯನ್ನು ವಿಸ್ತರಣೆ ಮಾಡುವಂತಹ ವ್ಯವಸ್ಥೆಯಾಗಬೇಕು. ಇಲ್ಲಿ ಹೇಳಿರುವುದು ಕೇವಲ ಸಹಕಾರ ಸಂಘಗಳಿಗೆ ಮಾತ್ರ ಇದರ ಹೊರತಾಗಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳಿಗೂ ಕೃಷಿ ಸಾಲ ವಿಸ್ತರಣೆ ಮಾಡಿದರೆ ಎಲ್ಲಾ ರೈತರುಗಳಿಗೆ ಅನುಕೂಲವಾಗುತ್ತದೆ. ಇದರಿಂದ ಹೆಚ್ಚು ಪ್ರಯೋಜನವಾಗುತ್ತದೆ. ಇದನ್ನು ಕೂಡ ಮಾನ್ಯ ಮುಖ್ಯಮಂತ್ರಿಗಳು ಗಮನಕ್ಕೆ ತೆಗೆದುಕೊಳ್ಳಬೇಕು ಹಾಗೂ ಕೃಷಿ ಸಾಲ ಎಲ್ಲ ರೈತರಿಗೂ ವಿಸ್ತರಣೆ ಮಾಡಬೇಕೆನ್ನುವಂತಹ ಮಾತನ್ನು ಹೇಳುತ್ತೇನೆ. ಸೊಸೈಟಿಯಿಂದ ಎಲ್ಲಾ ರೈತರಿಗೂ ಅನುಕೂಲವಾಗುವುದಿಲ್ಲ. ಎಲ್ಲರಿಗೂ ಸಾಲ ಸಿಗುವಂತಹ ವ್ಯವಸ್ಥೆಯಾಗುವುದಿಲ್ಲ. ವಿಶೇಷವಾಗಿ ಕರಾವಳಿ ಜಿಲ್ಲೆಗಳಲ್ಲಿ ಸಮುದ್ರದ ನೀರು ರೈತರ ಜಮೀನುಗಳಿಗೆ ನುಗ್ಗಿ ಬರುವುದು ಜಾಸ್ತಿ ಇದೆ. ಸಮುದ್ರದ ನೀರು ರೈತರ ಜಮೀನುಗಳಿಗೆ ನುಗ್ಗಿ ರೈತರ ಹಾಳಾಗುತ್ತಿದೆ. ಬೆಳೆ ಮಾಡುವುದಕ್ಕೆ ಅನುಕೂಲವಾಗುತ್ತಿಲ್ಲ. ಅದಕ್ಕೆ ಸಾಧ್ಯವಾದರೆ ಅಲ್ಲಿ ತಡೆಗೋಡೆಯನ್ನು ನಿರ್ಮಾಣ ಮಾಡುವಂತಹ ವ್ಯವಸ್ಥೆಯಾಗಬೇಕು. ಸಮುದ್ರದ ಉಪ್ಪು ನೀರು ಈ ಕೃಷಿ ಜಮೀನುಗಳಿಗೆ ನುಗ್ಗುತ್ತಿದೆ ಅದನ್ನು ತಡೆಯಬೇಕಾದರೆ ಈ ತಡೆ ಗೋಡೆಗಳು ನಿರ್ಮಾಣ ಮಾಡಬೇಕು. ಸಮುದ್ರದ ಉಪ್ಪು ನೀರು, ಸಿಹಿ ನೀರಿನ ಜಾಗದಲ್ಲಿ ಬರದೆ ಇರುವ ಹಾಗೆ ತಡೆಗೋಡೆಯನ್ನು ನಿರ್ಮಾಣ ಮಾಡಿದರೆ ಚೆಕ್ ಡ್ಯಾಂ ನಿರ್ಮಾಣ ಮಾಡಿದರೆ ಸಮುದ್ರದ ಉಪ್ಪು ನೀರು ರೈತರ ಜಮೀನುಗಳಿಗೆ ನುಗ್ಗುವುದನ್ನು ತಡೆಗಟ್ಟುವಂತಹ ವ್ಯವಸ್ಥೆಯಾಗುತ್ತದೆ

ಎಂದು ನನಗನಿಸುತ್ತದೆ. ಹಾಗಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಮ್ರವಾಗಿ ವಿನಂತಿಯನ್ನು ಮಾಡುತ್ತೇನೆ. ಈ ಕರಾವಳಿ ಜಿಲ್ಲೆಗಳಲ್ಲಿ ಈ ಸಮುದ್ರದ ನೀರು ಈ ಕೃಷಿ ಜಮೀನಿಗೆ ನುಗ್ಗುವಂತಹ ವ್ಯವಸ್ಥೆ ಇದೆ ಅದನ್ನು ಶಾಶ್ವತವಾಗಿ ತಡೆಯುವಂತಹ ಕೆಲಸವನ್ನು ಮಾಡಬೇಕೆಂದು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಕೆರೆಗಳು ಮತ್ತು ನದಿಗಳು ಇವತ್ತು ಶಿಲ್ಟ್‌ನಿಂದ ತುಂಬಿ ಏನೇ ನೀರು ಬಂದರೂ ಕೂಡ ಅದು ಮಳೆಗಾಲದಲ್ಲಿ ಎಷ್ಟೇ ನೀರು ಬಂದರೂ ಕೂಡ ನೇರವಾಗಿ ಸಮುದ್ರ ಸೇರುವಂತಹ ವ್ಯವಸ್ಥೆಯಾಗಿದೆ. ಆದುದರಿಂದ ಆ ಶಿಲ್ಟ್‌ನ್ನು / ಕೆಸರನ್ನು ತೆಗೆದರೆ ಅನುಕೂಲವಾಗುತ್ತದೆ. ನದಿಗಳಲ್ಲಿರುವಂತಹ ಕೆಸರನ್ನು ತೆಗೆದಯುವಂತಹ ವ್ಯವಸ್ಥೆ ಮಾಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ನಮ್ಮ ಕರಾವಳಿಯಲ್ಲಿ ಜಾಸ್ತಿ ಬೆಳೆಯುವಂತಹದ್ದು ಭತ್ತ, ತೆಂಗು ಅಡಿಕೆ ಅದನ್ನು ಬಿಟ್ಟರೆ ಬೇರೆ ಬೆಳೆಯುವಂತಹ ವ್ಯವಸ್ಥೆ ಇಲ್ಲ. ಇದರ ಜೊತೆಗೆ ಮೀನುಗಾರಿಕೆಯನ್ನು ಜಾಸ್ತಿ ಮಾಡುತ್ತಾರೆ. ಮೀನುಗಾರಿಕೆಯ ಬಗ್ಗೆ ಬಹಳ ವಿವರವಾಗಿ ಹೇಳಬೇಕೆಂದರೆ, ನಮ್ಮ ಉಡುಪಿ ಮತ್ತು ಮಂಗಳೂರು ಜಿಲ್ಲೆಗಳನ್ನು ಹೊರತುಪಡಿಸಿ ಉತ್ತರ ಕನ್ನಡ ಜಿಲ್ಲೆ ಯಾವುದೋ ಮೀನುಗಾರಿಕೆ ಬಂದರು ಡ್ರಜ್ಜಿಂಗ್ ಆಗಲಿ, break water system ಇಲ್ಲ. ಇವತ್ತು ಮೀನುಗಾರರು ಬಹಳ ಕಷ್ಟದಲ್ಲಿದ್ದಾರೆ. ಈ ಬಗ್ಗೆ ಬಜೆಟ್‌ನಲ್ಲಿ ಸಾಕಷ್ಟು ಹೇಳಿದ್ದೀರಿ. ಕರಾವಳಿಯಲ್ಲಿರುವಂತಹ ಸಾಕಷ್ಟು ಬಂದರುಗಳನ್ನು ಡ್ರಜ್ಜಿಂಗ್ ಮಾಡುತ್ತೇವೆ, break water system ಅನ್ನು ಅಳವಡಿಸಿಸುವಂತಹ ವ್ಯವಸ್ಥೆಯನ್ನು ಮಾಡುತ್ತೇವೆನ್ನುವಂತಹ ಮಾತನ್ನು ಹೇಳಿದ್ದೀರಿ. ಉದಾಃ ನನ್ನ ಕ್ಷೇತ್ರವನ್ನೇ ತೆಗೆದುಕೊಂಡರೆ, ಭಟ್ಕಳ್ ಇರಬಹುದು, ತೆಂಗಿನಹುಂಡಿ ಇರಬಹುದು, ಕಾಸರಗೋಡು ಇರಬಹುದು, ತದಡಿ ಇರಬಹುದು, ಮಂಗಳೂರಿನಲ್ಲಿರುವಂತಹ ಬಂದರು ಇರಬಹುದು, ವಿಶೇಷವಾಗಿ ಡ್ರಜ್ಜಿಂಗ್ ಮಾಡುವಂತಹದ್ದು break water system ಬಹಳ ಅವಶ್ಯಕತೆ ಇದೆ, ನಾನು ಒಂದು ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಡ್ರಜ್ಜಿಂಗ್ ಮಾಡುವಂತಹ ವ್ಯವಸ್ಥೆ ಬೇರೆ ಬೇರೆ ಕಂಪನಿಗಳಿಗೆ ಕೊಡುತ್ತಾರೆ. ಯಾರು ಕೂಡ ಸಕಾಲದಲ್ಲಿ ಡ್ರಜ್ಜಿಂಗ್ ಮಾಡುತ್ತಿಲ್ಲ. ಇಲ್ಲಿ ನನ್ನ ಒಂದು ಸಲಹೆ ಇದೆ

ಸಾಧ್ಯವಾದರೆ ಮೀನುಗಾರಿಕೆ ಇಲಾಖೆಯವರೆ ಡ್ರಜ್ಜಿಂಗ್ ಮೆಷಿನ್ ಅನ್ನು ಖರೀದಿ ಮಾಡಿದರೆ ಸಕಾಲದಲ್ಲಿ ಮಾಡುವುದಕ್ಕೆ ವ್ಯವಸ್ಥೆಯಾಗುತ್ತದೆ. ಹಿಂದೆ ಮಾಜಿ ಮುಖ್ಯಮಂತ್ರಿಗಳಾಗಿದ್ದ ಎಸ್.ಎಂ. ಕೃಷ್ಣರವರು ಇದನ್ನು ಮಾಡಿದ್ದರು. ಆದರೆ ಅದನ್ನು ಕ್ರಮೇಣ ಖರೀದಿ ಮಾಡುವುದಕ್ಕೆ ಆಗಿಲ್ಲ. ನಾನು ತಮ್ಮಲ್ಲಿ ವಿನಮ್ರವಾಗಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಮೀನುಗಾರಿಕೆ ಇಲಾಖೆ ಡ್ರಜ್ಜಿಂಗ್ ಮೆಷಿನ್ ಅನ್ನು ಖರೀದಿ ಮಾಡಿದರೆ ಸಾಕಷ್ಟು ಮೀನುಗಾರಿಕೆ ಬಂದರುಗಳು ಡ್ರಜ್ಜಿಂಗ್, break water system ಮಾಡುವುದಕ್ಕೆ ಅನುಕೂಲವಾಗುತ್ತದೆ. ಸರ್ಕಾರದಿಂದ ಅದನ್ನು ಖರೀದಿ ಮಾಡುವುದಕ್ಕೆ ಆ ಮೆಷಿನ್ ಅನ್ನು ಖರೀದಿ ಮಾಡುವಂತಹ ವ್ಯವಸ್ಥೆ ಮಾಡಬೇಕೆಂಬ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಕರಾವಳಿಯಲ್ಲಿ ಬಹಳ ಸಮಸ್ಯೆ ಇರುವುದು ಸಮುದ್ರದ ಕೊರತೆಗಳು, ಇದರಿಂದ ಸಾಕಷ್ಟು ಸಾರ್ವಜನಿಕರ ಆಸ್ತಿಪಾಸ್ತಿಗಳು ಹಾನಿಯಾಗುತ್ತವೆ. ಮಂಗಳೂರಿನ ಉಳ್ಳಾಲದಿಂದ ಕಾಸರಗೋಡಿನ ದೇವಭಾಗದವರೆಗೆ ಸುಮಾರು 250 ರಿಂದ 300 ಕಿ.ಮೀ. ಈ ಕರಾವಳಿ ಪ್ರದೇಶ 3 ಜಿಲ್ಲೆಗಳಲ್ಲಿ ಇದೆ. ಮಳೆಗಾಲದಲ್ಲಿ ಸಮುದ್ರದ ಕೊರತೆ ಜಾಸ್ತಿಯಾಗುತ್ತದೆ, ಸಮುದ್ರದ ಅಲೆಗಳು ಜಾಸ್ತಿಯಾಗುತ್ತವೆ. ಈ ಸಮುದ್ರದ ಕೊರತೆಯನ್ನು ತಡೆಯಲು ತಡೆಗೋಡೆಯನ್ನು ನಿರ್ಮಾಣ ಮಾಡುವಂತಹ ವ್ಯವಸ್ಥೆಯಾಗಬೇಕಾಗಿದೆ. ಹಿಂದೆ ಬಹಳಷ್ಟು ಸರ್ಕಾರಗಳು ತಡೆಗೋಡೆಯನ್ನು ನಿರ್ಮಾಣ ಮಾಡಿದ್ದಾರೆ. ಅಲ್ಲಿರುವ ತಡೆಗೋಡೆಗಳು ಹಾಳಾಗಿ ಹೋಗುವಂತಹ ವ್ಯವಸ್ಥೆಯಾಗಿದೆ. ಈಗ ಹೊಸ ರೀತಿಯಲ್ಲಿ trench ಮಾದರಿಯಲ್ಲಿ ಮಾಡುತ್ತಿರುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆ. ಅದನ್ನು ಅತೀ ಶೀಘ್ರವಾಗಿ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು Revenue Department ನಲ್ಲಿ ನಮ್ಮ ಭಾಗದ ಭೂದಾಖಲೆಗಳು ಹಾಳಾಗುತ್ತಿವೆ. ಈ ಬಗ್ಗೆ ಕಂದಾಯ ಮಂತ್ರಿಗಳ ಗಮನಕ್ಕೆ ಬೆಳಿಗ್ಗೆ ತಂದಿದ್ದೇನೆ. ಆದಷ್ಟು ಶೀಘ್ರದಲ್ಲಿ ಅವನ್ನು scanning ಮಾಡಬೇಕೆಂದು ಮಂತ್ರಿಗಳು ಹೇಳಿದ್ದಾರೆ. ನಮ್ಮಲ್ಲಿ ಎಲ್ಲಿಯೂ ಕೂಡ Certified Copyಗೆ ಅರ್ಜಿ ಕೊಟ್ಟರೆ ರೆವೆನ್ಯೂ ಮ್ಯಾಪ್‌ಗಳು ಸಿಗುತ್ತಿಲ್ಲ. ಆದಷ್ಟು ಶೀಘ್ರವಾಗಿ

scanning ಮಾಡಿದರೆ ಉತ್ತಮವಾದ ಮ್ಯಾಪ್‌ಗಳು ಸಿಗುತ್ತವೆ ಮತ್ತೊಂದು ನಮ್ಮ ಕರಾವಳಿ ಭಾಗದ ದೊಡ್ಡ ಸಮಸ್ಯೆಯೇನೆಂದರೆ 5 ಗಂಟೆಯೊಳಗೆ ಜಮೀನನ್ನು ಯಾವುದೇ sub-registrar officeನಲ್ಲಿ ನೋಂದಣಿ ಮಾಡತಕ್ಕಂಥ ವ್ಯವಸ್ಥೆ ಇಲ್ಲ. ನಾನು ಹಿಂದಿನ ಬಾರಿ ಅಧಿವೇಶನದಲ್ಲಿ ಪ್ರಶ್ನೆಯನ್ನು ಮಾಡಿದ್ದೆನು. 5 ಗುಂಟೆಯೊಳಗೆ ಇರುವ ಜಮೀನು ರಿಜಿಸ್ಟರ್ ಮಾಡಿದರೆ ಸಬ್ ರಿಜಿಸ್ಟ್ರಾರ್‌ರವರು declaration, affidavit ಕೇಳುತ್ತಾರೆ. ಕೃಷಿ ಉದ್ದೇಶಕ್ಕೆ ಖರೀದಿ ಮಾಡುತ್ತೇವೆಂದು ಹೇಳತಕ್ಕಂಥ ವ್ಯವಸ್ಥೆ ಆಗುತ್ತಿದೆ, ಅದಕ್ಕಾಗಿ 5 ಗುಂಟೆಯೊಳಗೆ ಇರುವ ಜಮೀನನ್ನು ಖರೀದಿ ಮಾಡುವ ಬಗ್ಗೆ ಒಂದು ವಿಶೇಷವಾದ ನಿರ್ದೇಶನವನ್ನು ಸಬ್ ರಿಜಿಸ್ಟ್ರಾರ್‌ಗಳಿಗೆ ಕೊಡತಕ್ಕಂತ ವ್ಯವಸ್ಥೆ ಕೂಡ ಮಾಡಬೇಕಾಗುತ್ತದೆ. ಮತ್ತೊಂದು ಶಿಕ್ಷಣ ಇಲಾಖೆಯ ಬಗ್ಗೆ ನಿನ್ನೆ ನಮ್ಮ ಸ್ನೇಹಿತರೊಬ್ಬರು ಹೇಳಿದರು, ಮುಖ್ಯವಾಗಿ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಜೂನಿಯರ್ ಕಾಲೇಜು, ಅಥವಾ ಡಿಗ್ರಿ ಕಾಲೇಜುಗಳಲ್ಲಿ ದೊಡ್ಡ ಸಮಸ್ಯೆ ಎಂದರೆ ಈ FDC, SDC, Attenders ಅವಶ್ಯಕತೆ ಬಹಳ ಇದೆ. ನಮ್ಮಲ್ಲಿ ಹೈಸ್ಕೂಲು ಮಾಸ್ಟರ್ಸ್ ಹೋಗಿ ಬೆಲ್ ಮಾಡುವುದು, ಕಸ ಗುಡಿಸುವುದು, ಟೇಬಲ್ ಒರೆಸುವಂಥ ಪರಿಸ್ಥಿತಿ ಇದೆ, ಅದಕ್ಕಾಗಿ ಎಲ್ಲಾ ಸರ್ಕಾರಿ ಅನುದಾನಿತ ಪ್ರೌಢಶಾಲೆಗಳಲ್ಲಿ, ಸರ್ಕಾರಿ ಪ್ರೌಢಶಾಲೆಗಳಲ್ಲಿ FDC, SDC, Attenders ನೇಮಕ ಮಾಡುವಂಥದ್ದು ತುಂಬಾ ಅವಶ್ಯಕತೆ ಇದೆ. ಅದಕ್ಕಾಗಿ ಆದಷ್ಟು ಶೀಘ್ರವಾಗಿ ಅದಕ್ಕೆ ಚಾಲನೆ ಕೊಟ್ಟು ನೇಮಕಾತಿ ಮಾಡಬೇಕೆಂದು ಹೇಳುತ್ತಿದ್ದೇನೆ. ಮತ್ತೊಂದು ಕಾನೂನು ಸಚಿವರು ನೋಟರಿಗಳನ್ನು ನೇಮಕ ಮಾಡುತ್ತಿದ್ದೀರಿ, ನಾನು ಒಬ್ಬ ವಕೀಲನಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಒಮ್ಮೆ ನೀವು ನೋಟರಿಗಳನ್ನು ನೇಮಕ ಮಾಡಿದರೆ ಆ ವ್ಯಕ್ತಿ ಸಾಯುವವರೆಗೆ ಅವರೊಬ್ಬರೇ ನೋಟರಿಯಂತೆ renewal ಮಾಡುವಂಥ ವ್ಯವಸ್ಥೆ ಆಗುತ್ತದೆ. ಇದನ್ನು ಸಾಕಷ್ಟು ಜನ ವಕೀಲರು ವಕಾಲತ್ತು ಮಾಡುತ್ತಿದ್ದಾರೆ. ನೀವು ನೋಟರಿಗಳನ್ನು ನೇಮಕ ಮಾಡಿದರೆ ಒಬ್ಬ ವ್ಯಕ್ತಿಯನ್ನು ಎರಡು ಬಾರಿ ಮಾತ್ರ renewal ಮಾಡುವಂತಾಗಬೇಕು. ನೀವು life long ಅವರನನು renewal ಮಾಡುತ್ತಾ ಹೋದರೆ ಎಲ್ಲರಿಗೂ ಅವಕಾಶ ಸಿಗುವುದಿಲ್ಲ. ಅದಕ್ಕಾಗಿ ಕಾನೂನು

ಇಲಾಖೆಯವರು ಈ ಬಗ್ಗೆ ಒಬ್ಬರನ್ನು ಒಮ್ಮೆ ನೋಟರಿ ಮಾಡಿದರೆ ಒಮ್ಮೆ renewal ಮಾಡಬೇಕು. ಎರಡನೇ ಬಾರಿಗೆ ಬೇರೆಯವರಿಗೆ ಮಾಡುವ ಅವಕಾಶವನ್ನು ಕೊಡಬೇಕು. ದಸ್ತಾವೇಜುಗಳನ್ನು ಅವರು attestation ಮಾಡಿದರೆ ಅದನ್ನು ಅವರು identification ಮಾಡಬೇಕಾಗುತ್ತದೆ. ಆ ದಸ್ತಾವೇಜುಗಳಿಗೆ ಕಡ್ಡಾಯವಾಗಿ ವಕೀಲರಿಂದ identification ಮಾಡುವಂಥ ವ್ಯಸ್ಥೆ ಮಾಡಬೇಕು. ಅದನ್ನು ಮಾಡುತ್ತಿಲ್ಲ. Stamp vendorಗಳು attest ಮಾಡುವಂಥ ವ್ಯವಸ್ಥೆ ಬಹಳ ಕಡೆ ಇದೆ. Compulsory ವಕೀಲರು ಮಾಡಿದರೆ ಅನುಕೂಲವಾಗುತ್ತದೆ. ಅದಕ್ಕೊಂದು ಬೆಲೆ ಬರುವಂಥ ವ್ಯವಸ್ಥೆ ಆಗುತ್ತದೆ. ಆದ್ದರಿಂದ ನಾನು ಮುಖ್ಯವಾಗಿ ಹೇಳುತ್ತಿದ್ದೇನೆ. ಆ ರೀತಿ ವ್ಯವಸ್ಥೆ ಆದರೆ ಅನುಕೂಲವಾಗುತ್ತದೆನ್ನುವ ಮಾತನ್ನು ಹೇಳುತ್ತೇನೆ. ನಮ್ಮ ಸ್ನೇಹಿತರು ಹೇಳಿದಂತೆ ಆರಾಧನೆ ಯೋಜನೆಯಲ್ಲಿ ಕಳೆದ ಎಡರು ವರ್ಷಗಳಿಂದ ಒಂದು ಪೈಸೆ ಹಣ ಬಿಡುಗಡೆಯಾಗುತ್ತಿಲ್ಲ. 10–20,000 ರೂಪಾಯಿಗಳು ಬರುತ್ತಿತ್ತು. ಹಿಂದೆಲ್ಲಾ 2, 3 ಲಕ್ಷ ರೂಪಾಯಿಗಳು ಇತ್ತು, ಈ ಯೋಜನೆಯಲ್ಲಿ ಹಣ ಜಾಸ್ತಿ ಬಿಡುಗಡೆ ಮಾಡಿದರೆ ಗ್ರಾಮೀಣ ಭಾಗದಲ್ಲಿರುವ ದೇವಸ್ಥಾನಗಳನ್ನು ದುರಸ್ತಿ ಮಾಡಲಿಕ್ಕೆ ಬಹಳ ಅನುಕೂಲವಾಗುತ್ತದೆ. ನಾನು ಹೆಚ್ಚಿಗೆ ಮಾತನಾಡಲಿಕ್ಕೆ ಹೋಗುವುದಿಲ್ಲ. ನಾನೇನು ಸಲಹೆಗಳನ್ನು ಕೊಟ್ಟಿದ್ದೇನೆ. ಅದನ್ನು ಸರ್ಕಾರ ಪೂರೈಸಿದರೆ ಕರಾವಳಿ ಪ್ರದೇಶದ ಜನಗಳಿಗೆ ಬಹಳ ಅನುಕೂಲವಾಗುತ್ತದೆಂದು ಹೇಳಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಕಿಮ್ಮನೆ ರತ್ನಾಕರ್ ನೀವು ಹತ್ತು ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು.

ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೆ, ಸಮಯ ಕಡಿಮೆ ಇರುವುದರಿಂದ ಇರುವ ಸಮಯದಲ್ಲಿ ಮಾತನಾಡಲು ಪ್ರಯತ್ನ ಮಾಡುತ್ತೇನೆ. ಪ್ರಥಮವಾಗಿ ನನ್ನ ಅನಿಸಿಕೆ 1952ನೇ ಇಸವಿಯಿಂದ ಇಲ್ಲಿಯವರೆಗೆ ಬಜೆಟ್ ನೋಡಿದಾಗ, 1952ನೇ ಇಸವಿಯ ಬಜೆಟ್ ಕೇವಲ 23.00 ಕೋಟಿ ರೂಪಾಯಿಗಳು. ಅಲ್ಲಿಂದ ಇಲ್ಲಿಯವರೆಗೆ ನಡೆದುಕೊಂಡು ಬಂದಿರತಕ್ಕಂಥ ದಾರಿಯನ್ನು ನೋಡಿದಾಗ ಮಾನ್ಯ ಸಭಾಧ್ಯಕ್ಷರಲ್ಲಿ, ಮಾನ್ಯ

ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವಂಥದ್ದು ಈ ಆಯವ್ಯಯದ ಚರ್ಚೆಯ ವಿಧಾನ ಏನಿದೆ ಅದನ್ನು ಸ್ವಲ್ಪ ಬದಲಾವಣೆ ಮಾಡಬೇಕೆಂಬುದು ನನ್ನ ಅಪೇಕ್ಷೆ. ಇಲಾಖಾವಾರು ಚರ್ಚೆಯಾದರೆ ಮಾತ್ರ ಅದರಲ್ಲಿ ನ್ಯಾಯ ಸಿಗುತ್ತದೆ. ಇಲ್ಲವಾದಲ್ಲಿ ಖಂಡಿತವಾಗಿ ಇದು ಒಂದು ರೀತಿಯ ಚೌಚೌಬಾತ್‌ನ ವ್ಯವಹಾರ ಆಗುತ್ತದೆಯೆ ಹೊರತು ನಾವ್ಯಾರೂ ಪರಿಪೂರ್ಣವಾಗಿ ಮಾತನಾಡುವುದಕ್ಕಾಗುವುದಿಲ್ಲ. ಪ್ರಮುಖ ಇಲಾಖೆಗಳೇನಿವೆ, ಆ ಎಲ್ಲಾ ಇಲಾಖೆಗಳ ಮೇಲೆ ವಿಸ್ತಾರವಾದ ಚರ್ಚೆ ಆದರೆ ಈ ಲೋಕೋಪಯೋಗಿ ಇಲಾಖೆಯಲ್ಲಿ ಎಷ್ಟು ಹಣ ಬಂದಿದೆ? ಎಷ್ಟು ಖರ್ಚಾಗಬೇಕು? ನಾವೆಲ್ಲರೂ ಅದನ್ನು ಮಾತನಾಡಲಿಕ್ಕೆ ಆಗುವುದಿಲ್ಲ, ಆದರೆ ಈಗೇನಾಗುತ್ತಿದೆ, ಇಲಾಖಾವಾರು ಚರ್ಚೆ ನಡೆಯದೆ ಇರುವುದರಿಂದ ವಾಸ್ತವದಲ್ಲಿ ಈ ಬಜೆಟ್ ಅನ್ನು ಹಿಡಿದುಕೊಂಡು ನೋಡಿದರೆ, ಯಾರಾದರೂ ಕೇಳಿದರೆ ನಾನೊಬ್ಬ ಶಾಸಕನಿದ್ದೇನೆ, ಇದನ್ನು ನೋಡಿದರೆ ECG ನೋಡಿದಂತಾಗುತ್ತದೆ. ಕರ್ನಾಟಕ ರಾಜ್ಯದ ಒಟ್ಟು ಆದಾಯ ಎಷ್ಟು? ಎಂದು ಕೇಳಿದರೆ ನಾನು ಹೇಳಲಿಕ್ಕಾಗುವುದಿಲ್ಲ. ನಾನು Finance Departmentಗೆ ಹೋಗಿ ಕೇಳಬೇಕು. We should understand it. ಒಬ್ಬ common manಗೂ ಕೂಡ ನಮ್ಮ ಬಜೆಟ್ ಅರ್ಥವಾಗುವಂತಿರಬೇಕು. ಗಾಂಧೀಜಿಯವರು ಕೂಡ Round table conferenceಗೆ ಹೋದಾಗ Englandನಲ್ಲಿ ಒಂದು ಮಾತು ಹೇಳಿದ್ದಾರೆ ಅವರಿಗೆ. ನೀವು ಒಂದು ಅರ್ಥ ವ್ಯವಸ್ಥೆಯನ್ನು ಮಾಡಬೇಕಾದರೆ ಒಬ್ಬ ಸಾಮಾನ್ಯ ಪ್ರಜೆಗೂ ಕೂಡ ಅರ್ಥವಾಗುವಂತಿರಬೇಕು. ಈ ಬಜೆಟ್ ಬಗ್ಗೆ ಹೊರಗಡೆ ಹೋಗಿ ಒಬ್ಬ ಮನುಷ್ಯನನ್ನು ಕೇಳಿ. ಆಡಿಟರ್ ಒಬ್ಬರನ್ನು ಹೊರತುಪಡಿಸಿದರೆ ಬೇರ್‍ಯಾರಿಗೆ ಕರ್ನಾಟಕ ರಾಜ್ಯದ ಒಟ್ಟು ಆದಾಯ ಎಷ್ಟೆಂದು ಕೇಳಿದರೆ ಹೇಳಲಿಕ್ಕಾಗುವುದಿಲ್ಲ. ಇದನ್ನು ನೋಡಿ ಹೇಳಲಿಕ್ಕಾಗುತ್ತದೆಯೇ ಎಂದರೆ ಖಂಡಿತ ಇವೆರಡು ಪುಸ್ತಕಗಳನ್ನು ನೋಡಿ ಹೇಳಲಿಕ್ಕಾಗುವುದಿಲ್ಲ. ಏಕೆಂದರೆ ನಾನು ಇದನ್ನು identify ಮಾಡಬೇಕೆಂದು ಎರಡು ವರ್ಷಗಳಿಂದ ಆರ್ಥಿಕ ಇಲಾಖೆಗೆ ಓಡಾಡುತ್ತಿದ್ದೇನೆ. We cannot understand this.ಈಗ ನಮಗೆ ಬರತಕ್ಕಂಥ ಸಪ್ಲಿಮೆಂಟ್‌ನ್ನೆಲ್ಲಾ ಒಂದು gistನಲ್ಲಿ ಕರ್ನಾಟಕ ರಾಜ್ಯಕ್ಕೆ

ಎಷ್ಟು ಆದಾಯವಿದೆ ಎಂದರೆ ಒಟ್ಟು 49 ಸಾವಿರ ಕೋಟಿ ರೂಪಾಯಿಗಳಷ್ಟು ಆದಾಯವಿದೆ. ಈಗ ಬರತಕ್ಕಂಥ ಆದಾಯ ಪೂರ್ಣವಾಗಿ Non-Planಗೆ ಹೋಗುತ್ತಿದೆ. ಅದು ಜನರಿಗೆ ಅರ್ಥವಾಗುವುದಿಲ್ಲ. ನಮ್ಮ ಕರ್ನಾಟಕ ರಾಜ್ಯದ ಒಟ್ಟು ಆದಾಯವೆಷ್ಟು? ಅಥವಾ ನಮಗೆ ಬರತಕ್ಕಂಥ ಹಣವೆಷ್ಟು? ಕೇಂದ್ರ ಸರ್ಕಾರದಿಂದ 12,000 ರೂಪಾಯಿಗಳು ಬರುತ್ತದೆ, ವಾಪಸ್ಸು ಕೊಡದಿರುವುದು. ಇದು ನಮಗೆ ಅರ್ಥವಾಗುವಂಥ ಪರಿಸ್ಥಿತಿಯಲ್ಲಿಲ್ಲ. ನಾನು ಹೇಳುವುದು 1952ನೇ ಇಸವಿಯಿಂದ ಬಜೆಟ್ ಅನ್ನು ನೋಡಿದ್ದೇನೆ. ನಾನು ಲೈಬ್ರರಿಗೆ ಹೋಗಿ ನೋಡಿದೆ. Actually budgetನಲ್ಲಿ ಈ ರೀತಿ ಇದೆ, ಬುಕ್‌ಲೆಟ್ ಬರುತ್ತಿತ್ತು. ಆಗ ಬಜೆಟ್‌ನ ಪ್ರಮಾಣ ಕಡಿಮೆ ಇತ್ತು. First budget 3, 4, 5 ಪುಟಗಳಿವೆ, ಆದರೆ ಆಗ 23.00 ಕೋಟಿ ರೂಪಾಯಿಗಳಿತ್ತು, ಈಗ 80,000 ಕೋಟಿ ರೂಪಾಯಿಗಳಿವೆ, ಅಂದು ಜನಸಂಖ್ಯೆ 1.50-2.00 ಕೋಟಿ ಇದ್ದರು, 30 ವರ್ಷದ ಹಿಂದೆ ಮೂರು ಕೋಟಿ, ಇವತ್ತು ಆರು ಕೋಟಿ ಜನಗಳಿದ್ದಾರೆ. ಸಮಸ್ಯೆಗಳು ಜಾಸ್ತಿ ಇವೆ. ಆದಾಯ ಜಾಸ್ತಿ ಇದೆ. ಬಜೆಟ್‌ನಲ್ಲಿರುವ ಮೊತ್ತ ಜಾಸ್ತಿ ಇದೆ. ಕಳೆದ ವರ್ಷದ ಬಜೆಟ್‌ನಲ್ಲಿ ಏನು ಹಣ ಇದೆ, ಏನು ಆದಾಯ ಬಂದಿದೆ, ವಾಸ್ತವದಲ್ಲಿ ನಮ್ಮ ಆದಾಯ ಎಷ್ಟಿದೆ? ಅಷ್ಟು ಮಾತ್ರ ನಮ್ಮ ನಿರ್ವಹಣೆ ವೆಚ್ಚ ಇದೆ. Non-planning budget ಏನಿದೆ ಅದಕ್ಕೆ ಸರಿಸಮಾನವಾಗಿ ಇರತಕ್ಕಂಥದ್ದು ನಮ್ಮ ಎಲ್ಲಾ Tax revenue, Revenue ಎಲ್ಲಾ ಸೇರಿಸಿದರೆ 49,000 ಕೋಟಿ ರೂಪಾಯಿಗಳು, ನಮಗೆ ಖರ್ಚು ಹೋಗುತ್ತಾ it is a matter of adjustment, Administrative ವೆಚ್ಚವನ್ನು ಕಳೆದು ಈ ರಾಜ್ಯದ ಅಭಿವೃದ್ಧಿಗೆ ಸಿಗುವ ಹಣ 5-6,000 ಕೋಟಿ ರೂಪಾಯಿಗಳು. ಮತ್ತೆ ಮುಂದಿನ ಆದಾಯದ ಮೇಲೆ ನಮ್ಮ ಅಭಿವೃದ್ಧಿ ವ್ಯವಹಾರ. ಮುಂದೆ ಬರತಕ್ಕಂಥ ಟ್ಯಾಕ್ಸ್ ಆಧಾರದ ಮೇಲೆ tax, revenues ಏನು ಬರುತ್ತದೆ ಇದು ಒಂದು ಭಾಗ. ಇಲ್ಲಿ ನನ್ನ ಒತ್ತಾಯ ಏನೆಂದರೆ ಈಗ ಏನು budget ಅನ್ನು declare ಮಾಡುತ್ತೇವೆ, ಏಪ್ರಿಲ್ 1 ರಿಂದ ಅದರ ಕೆಲಸ ಆರಂಭವಾಗುವಂತೆ ಮಾಡಬೇಕು. ವಾಸ್ತವದಲ್ಲಿ ಏನಾಗುತ್ತದೆಂದರೆ PWD Engineer Officeಗೆ ಹೋಗಿ verify ಮಾಡಿದೆ.

ಏನೆಂದರೆ 3,000 ಕೋಟಿ ರೂಪಾಯಿಗಳು PWDಗೆ ಬಂದರೆ ಖರ್ಚಾಗುವುದು 600–700 ಕೋಟಿ ರೂಪಾಯಿಗಳು. ಉಳಿದದ್ದೆಲ್ಲಾ ಹಿಂದಿನ ವರ್ಷಕ್ಕೆ ಜಮೆ. ಹಿಂದಿನ ವರ್ಷದ spillover worksಗೆ ಜಮೆ ಕೊಡತಕ್ಕಂಥದ್ದಷ್ಟೇ ಹೊರತು ಈ ವರ್ಷದ ಅಭಿವೃದ್ಧಿಯ ವೆಚ್ಚ ಎಷ್ಟು? ಅದು ನಮಗೆ ಬೇಕು. ಒಟ್ಟು ಎಷ್ಟಾಗುತ್ತದೆ? ಇದು ಇಲ್ಲದಿದ್ದರೆ ಖಂಡಿತ ಉಪಯೋಗಕ್ಕೆ ಬರುವುದಿಲ್ಲ. ಒಂದು ವಿಷಯ ನಿಮಗೆ ಹೇಳುತ್ತೇನೆ. ನಮ್ಮ ಲೋಕೋಪಯೋಗಿ ಇಲಾಖೆಯಲ್ಲಿ ನನ್ನ ಕ್ಷೇತ್ರದ ಬಗ್ಗೆ ಅವಲೋಕನೆ ಮಾಡಿದರೆ 3500 ಕಿ.ಮೀ. ರಸ್ತೆ ಇದೆ, it is the geographically biggest assembly segment in Karnataka. Thirthahally Geographically it is biggest area in Karnataka. 3500 ಕಿ.ಮೀ. ರಸ್ತೆಗಳಿವೆ. ಮೊನ್ನೆ ಮಾನ್ಯ ಮಂತ್ರಿಗಳು ನಮ್ಮ ಕ್ಷೇತ್ರಕ್ಕೆ 20 ಕಿ.ಮೀ. ರಸ್ತೆಗಳನ್ನು ಕೊಡುತ್ತೇವೆಂದು declare ಮಾಡಿದರು. ನಾನು ಲೆಕ್ಕ ಹಾಕಿದೆ, ನಮ್ಮ ತೀರ್ಥಹಳ್ಳಿಯ ತಾಲ್ಲೂಕಿನ ಎಲ್ಲಾ ವಿಧಾನಸಭಾ ಕ್ಷೇತ್ರದ ರಸ್ತೆಗಳಾಗಬೇಕಾದರೆ ಇನ್ನೂ 250 ವರ್ಷಗಳು ಬೇಕು. ಹಾಗಾದರೆ ಹೇಗೆ? We should have a plan. 189 ಕ್ಷೇತ್ರಗಳು Rural segment ಇವೆಯೆಂದರೆ 500 ಕಿ.ಮೀ. ರಸ್ತೆಯವರಿಗೂ 20 ಕಿ.ಮೀ. ಆದರೆ 3500 ಕಿ.ಮೀ. ಇರುವವರೆಗೂ ಅಷ್ಟೆ ರಸ್ತೆ ಆದರೆ ಯಾವುದನ್ನು populationಗೆ advice ಮಾಡಬೇಕು. Food grains, ಸೀಮೆ ಎಣ್ಣೆಗೆ population should be taken into account. But as far as roads are concerned it is not like that. That procedure should not be adopted. ಇನ್ನು 189 ಕ್ಷೇತ್ರಗಳ rural segment ಏನಿದೆ, ರಸ್ತೆಗಳು ಜಾಸ್ತಿ ಇವೆ, ಸೇತುವೆಗಳು ಜಾಸ್ತಿ ಇವೆ, ಅದೇ amount ಅನ್ನು ಎಲ್ಲರಿಗೂ ಕೊಡುವುದಾದರೆ ಎಲ್ಲೋ ಒಂದು ಕಡೆ management ಏನಿದೆ, ಅದನ್ನು equal ಆಗಿ ನಿಭಾಹಿಸಬೇಕು ಎಂಬುದನ್ನು ನನ್ನ ಒತ್ತಾಯ ಸ್ವಾಮಿ. ನನ್ನ ಅನಿಸಿಕೆ popular budgets ಏನಿದೆ? ಅದು ಒಬ್ಬ ರಾಷ್ಟ್ರ ರಾಜಕಾರಣಿಗೂ, ರಾಷ್ಟ್ರ ನಾಯಕನಿಗೂ, ಒಬ್ಬ ರಾಜಕಾರಣಿಗೂ ಇರುವ ವ್ಯತ್ಯಾಸವೇನೆಂದರೆ ರಾಷ್ಟ್ರ ನಾಯಕ ಮುಂದಿನ generation ಬಗ್ಗೆ ಯೋಚನೆ ಮಾಡುತ್ತಾನೆ.

ಆದರೆ ಒಬ್ಬ ರಾಜಕಾರಣಿ next election ಬಗ್ಗೆ ಯೋಚನೆ ಮಾಡುತ್ತಾನೆ. ನಾವು ಇದನ್ನೆಲ್ಲಾ ನೋಡಿದಾಗ ವಾಸ್ತವದಲ್ಲಿ ಸೀರೆ ಹಂಚುವ ವಿಚಾರದಲ್ಲಿ ನಾನು ವಿರೋಧವಿದ್ದೇನೆ. ಈ ದೇಶದಲ್ಲಿ ಹೆಚ್ಚು ಕಡಿಮೆ 30–40 ಕೋಟಿ ಮಹಿಳೆಯರಿರಬಹುದು. ಯಾವ ಮಹಿಳೆಯೂ ಕೂಡ ನನಗೆ ಸೀರೆ ಬೇಕು ಎಂದು ಯಾವ ಸರ್ಕಾರದ ಅಧಿಕಾರಿಗೂ ಅರ್ಜಿಯನ್ನು ಕೊಟ್ಟಿಲ್ಲ. ಕೊಡುವುದು ಇಲ್ಲ, ಏಕೆಂದರೆ ಅವಳೇ ದುಡಿಯುತ್ತಾಳೆ, ತಂದೆ, ಗಂಡ ಸೀರೆಯನ್ನು ಕೊಡಿಸುತ್ತಾನೆ. ಸೋದರರು ಕೊಡಿಸುತ್ತಾರೆ, ಹಾಗಾಗಿ ಆಕೆ ಸೀರೆ ಬೇಕು ಎಂದು ಕೇಳುವುದಿಲ್ಲ. ಆದರೆ ನಮಗೆ ಕುಡಿಯುವ ನೀರಿನ ಅಗತ್ಯ ಇದೆ. See ಆ popular budgets ಎಲ್ಲಾ cancel ಮಾಡಿಬಿಡಬೇಕು. ನಾವು ದೇವಸ್ಥಾನ ಕಟ್ಟುವುದು, ಉತ್ಸವ ಮಾಡುವುದು, ಇದನ್ನೆಲ್ಲಾ 10 ವರ್ಷಗಳ ಕಾಲ ಮುಂದಕ್ಕೆ ಹಾಕೋಣ. Basic needs ಏನು ನಮಗೆ ಬೇಕಾಗಿರುವುದೇನು ರಸ್ತೆಗಳು ಇಲ್ಲ. Electricity ಇಲ್ಲ, ಕುಡಿಯುವ ನೀರಿಲ್ಲ. ನನ್ನ ತಾಲ್ಲೂಕು ಪಂಚಾಯಿತಿ ಕಛೇರಿಯಲ್ಲಿ ನಮಗೆ ಬಾವಿಗಳು ಬೇಕು ಎಂದು 400 ಜನ ಅರ್ಜಿಗಳನ್ನು ಕೊಟ್ಟಿದ್ದಾರೆ.

ನನ್ನ ಕಚೇರಿಗೆ ತಾಲ್ಲೂಕು ಪಂಚಾಯಿತಿಯಿಂದ 400 ಜನ ಅರ್ಜಿ ಕೊಟ್ಟಿದ್ದಾರೆ. ನಮಗೆ ಬಾವಿ ಬೇಕು ಎಂದು ಅರ್ಜಿ ಕೊಟ್ಟಿದ್ದಾರೆ. ಒಂದು ಬಾವಿ ವ್ಯವಸ್ಥೆಗೆ ಕನಿಷ್ಠ ಒಂದು ಲಕ್ಷ ರೂ. ಬೀಳುತ್ತದೆ. ಕಳೆದ ಸಾರಿ 10 ಲಕ್ಷ ಕೊಟ್ಟರು. 8 ಬಾವಿ ವ್ಯವಸ್ಥೆಯಾಯಿತು. 392 ಜನ ನನ್ನನ್ನು ಬೈಯ್ದುಕೊಂಡು ಹೋದರು. ಕುಡಿಯುವ ನೀರಿನ ಸಮಸ್ಯೆಯಿಲ್ಲವೇ? ಈ ಉತ್ಸವಗಳಿಗೆಲ್ಲಾ ಏಕೆ ಅಷ್ಟು ಆಸಕ್ತಿವಹಿಸಬೇಕು? I don't understand. Actually ನಾನು ಅದನ್ನು ವಿರೋಧ ಮಾಡುತ್ತೇನೆ. ನನಗೆ ಅದೆಲ್ಲವೂ ಬೇಕು. Basic necessity ಆದ ಮೇಲೆ ನಮಗೆಲ್ಲರಿಗೂ ಕರೆಂಟ್ ಸಿಗುತ್ತದೆಯೇ? ಇವತ್ತು ನಮ್ಮ ಕ್ಷೇತ್ರದಲ್ಲಿ ಆರು ಪ್ರಾಜೆಕ್ಟ್ಸ್ ಇದೆ. ರಾಜ್ಯಕ್ಕೆ ಲಿಂಗನಮಕ್ಕಿ ಡ್ಯಾಮ್‌ನಿಂದ ಕರೆಂಟ್ ಬರುತ್ತಿದೆ, ವರಾಹಿಯಿಂದ ಕರೆಂಟ್ ಬರುತ್ತಿದೆ. ಆದರೆ, ನಮ್ಮ ಕ್ಷೇತ್ರದಲ್ಲಿ ನಾಲ್ಕು ಸಾವಿರ ಮನೆಗಳಿಗೆ ಕರೆಂಟ್ ಇಲ್ಲ. ರಾಜೀವ್ ಗಾಂಧಿ ವಿದ್ಯುತ್ ಯೋಜನೆ ಅನುಷ್ಠಾನಕ್ಕೆ ಬಂದ ಮೇಲೂ ಕೂಡ, ನಾನು ನಿನ್ನೆ ಮಾಹಿತಿಯನ್ನು ಸಂಗ್ರಹಿಸಿದ್ದೇನೆ, ರಾಜೀವ್ ಗಾಂಧಿ ವಿದ್ಯುತ್ ಯೋಜನೆ ಅನುಷ್ಠಾನ ಆಗಿದ್ದರೂ ಕೂಡ 2000

ಮನೆಗಳಿಗೆ ಕರೆಂಟ್ ಇಲ್ಲ. ನಾವು ಏನು ಉತ್ತರ ಹೇಳಬೇಕಾಗುತ್ತದೆ? ಪ್ರತಿನಿತ್ಯ ನಮಗೆ ಫೋನ್ ಮಾಡುತ್ತಾರೆ. ಆಗ ಯಾವುದಕ್ಕೆ ಆದ್ಯತೆ ಕೊಡಬೇಕಾಗುತ್ತದೆ? ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಸಭೆಯಲ್ಲಿ ಆಶ್ವಾಸನೆ ಕೊಟ್ಟು ನಮ್ಮ ಸಮಸ್ಯೆ ಬಗೆಹರಿಸಿದರು. ಆದರೆ, ಅಂತಹದ್ದು ಎಷ್ಟಿದೆ ಎಂದರೆ ನಮ್ಮ ಅರಿವುಸುಳ್ಳಿ ಎನ್ನುವ ಗ್ರಾಮ ಪಂಚಾಯಿತಿ headquarter ಗೆ, ಆ ಸದಸ್ಯ ಆ ಗ್ರಾಮ ಪಂಚಾಯಿತಿ head quarter ಗೆ ಹೋಗಬೇಕೆಂದರೆ 14 ಕಿ.ಮೀ. ಓಡಾಡಬೇಕು. He has to cross over 14 k.m. ಮಳೆಗಾಲದಲ್ಲಿ ಅವರು ಆರು ತಿಂಗಳುಗಳ ಕಾಲ ಪೇಟೆಗೆ ಬರುವ ಆಗಿಲ್ಲ. ಆ ಗ್ರಾಮ ಪಂಚಾಯಿತಿಯ ಸದಸ್ಯ ಕೇಂದ್ರಕ್ಕೆ ಹೋಗುವುದಕ್ಕೆ ಆಗುವುದಿಲ್ಲ, ಅಲ್ಲಿ ಒಂದು ಹಳ್ಳ ಉಂಟು. ಅದಕ್ಕೆ 25 ಲಕ್ಷ ರೂ. ಹಣ ಖರ್ಚಾಗುತ್ತದೆ. ನಾನು ಆ ಹಣ ಕೊಟ್ಟಿದ್ದೇನೆ, ಮಂಜೂರು ಮಾಡಿದರು. PWD minister ಕೂಡ ಅದನ್ನು ಮಾಡಿ ಎಂದು ನನಗೆ ಲೆಟರ್ ಕೊಟ್ಟರು, ಈಗ ಮಾಡಬೇಡಿ ಎಂದು ಹೇಳಿದ್ದಾರೆ. ಅದನು ಮಂಜೂರು ಮಾಡಲಿಲ್ಲ. ಬೇರೆ ಯಾವುದೋ ರಸ್ತೆಗೆ ಹಾಕಿದರು. Totally ನಮ್ಮಲ್ಲಿ ಸುಮಾರು 200 ಕೋಟಿ ರೂಪಾಯಿಗಳ ಸೇತುವೆ ಆಗತಕ್ಕಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ತಮ್ಮ ಗಮನಕ್ಕೆ ಏಕೆ ತಂದೆ ಎಂದರೆ, ಗ್ರಾಮಪಂಚಾಯಿತಿ ವಾಸ್ತವದಲ್ಲಿ ನಾನು ಹೇಳುವುದಾದರೆ, ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಹಣ ಕೊಡದೇ ಹೋದರೆ, ಅವುಗಳನ್ನು ರದ್ದು ಮಾಡುವುದು ಒಳ್ಳೆಯದು. ನಮ್ಮಲ್ಲಿ ಅರೆಹಳ್ಳಿ ಎಂದು ಒಂದು ತಾಲ್ಲೂಕು ಪಂಚಾಯಿತಿ ಕ್ಷೇತ್ರ ಇದೆ. ಅದರಲ್ಲಿ ಆರು ಗ್ರಾಮಪಂಚಾಯಿತಿಗಳು ಬರುತ್ತವೆ. ಒಂದು ತಾಲ್ಲೂಕು ಪಂಚಾಯಿತಿ ಕ್ಷೇತ್ರಕ್ಕೆ ಆರು ಗ್ರಾಮ ಪಂಚಾಯಿತಿಗಳು ಬರುತ್ತವೆ. ಕಳೆದ ವರ್ಷ ತಾಲ್ಲೂಕು ಪಂಚಾಯಿತಿ ಸದಸ್ಯನಿಗೆ ಸಿಕ್ಕಿದ ಅನುದಾನ ಎಷ್ಟೆಂದರೆ ಒಂದು ಲಕ್ಷದ 20 ಸಾವಿರ ರೂ.ಗಳು. ಅಂದರೆ, ಒಂದು ಗ್ರಾಮ ಪಂಚಾಯಿತಿಗೆ 20 ಸಾವಿರ ರೂ. ಖರ್ಚು ಮಾಡಬೇಕು. election ಗೆ ಏಕೆ ನಿಲ್ಲಬೇಕು, ಆ ವ್ಯವಸ್ಥೆ ಏಕೆ? ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿಗಳಿಗೆ ಹಣ ಜಾಸ್ತಿ ಕೊಟ್ಟರೆ ಶಾಸಕರು ನಾವೆಲ್ಲರೂ ತಲೆ ಎತ್ತಿಕೊಂಡು ಓಡಾಡಬಹುದು. ಒಂದು ಕಿ.ಮೀ. ರಸ್ತೆ, ಸಣ್ಣ-ಪುಟ್ಟ ಮೋರಿಗಳು, ಅದೆಲ್ಲವನ್ನೂ ಅವರು ಮಾಡಿಸಿಕೊಂಡು ಹೋಗುತ್ತಾರೆ. ನಮ್ಮ ಹತ್ತಿರ ಬಂದು, ಗ್ರಾಮ ಪಂಚಾಯಿತಿಗಳು ವಾಸ್ತವದಲ್ಲಿ,

ಈಗ ಮೊನ್ನೆ ಒಂದು ಗ್ರಾಮಪಂಚಾಯಿತಿಗೆ ಒಂದು ಲಕ್ಷದ 10 ಸಾವಿರ ರೂ. ಬಂದಿದೆ. ಅದಕ್ಕೆ 18 ಜನ ಗ್ರಾಮಪಂಚಾಯಿತಿ ಸದಸ್ಯರಿದ್ದಾರೆ. ಅವರ ಕ್ಷೇತ್ರಗಳಿಗೆ ಒಬ್ಬರಿಗೆ ಎಂಟು ಸಾವಿರ ರೂ. ಬರುವುದಿಲ್ಲ. ನಮ್ಮ ಗಾಜನೂರಿನಲ್ಲಿ ಆ ಒಂದು ಗ್ರಾಮ ಪಂಚಾಯಿತಿಯಲ್ಲಿ 22 ಜನ ಇದ್ದಾರೆ. ಒಬ್ಬ ಗ್ರಾಮ ಪಂಚಾಯಿತಿ ಸದಸ್ಯನಿಗೆ 8 ಸಾವಿರ ರೂ. ಬರುವುದಿಲ್ಲ. ಹಾಗಾದರೆ ಅಭಿವೃದ್ಧಿ ಹೇಗೆ ಮಾಡುವುದು? ಬರೀ ಗ್ರಾಮಪಂಚಾಯಿತಿ ಇರುವುದು ಅನ್ನುವುದಾದರೆ ಅದಕ್ಕೆ ಅರ್ಧ ಹಣ ಕೆ.ಇ.ಬಿ. ಬಿಲ್‌ಗೆ ಹೋಗಿಬಿಡುತ್ತದೆ. ಗ್ರಾಮ ಪಂಚಯಿತಿಗಳಿಗೆ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಯಿತಿಗಳಿಗೆ ಹಣ ಜಾಸ್ತಿ ಕೊಡದೇ ಇದ್ದರೆ ಕುಡಿಯುವ ನೀರಿನ ಸಮಸ್ಯೆಗಳ ಬಗ್ಗೆ ಎಲ್ಲರೂ ಬಂದು ಶಾಸಕರನ್ನು ಕೇಳುತ್ತಾರೆ. ನಾವು ಹೇಗೆ ತಂದು ಕೊಡುವುದು? ನಾವು ಅವರಿಗೆ ತಂದು ಕೊಡುವುದಕ್ಕೆ ಆಗುವುದಿಲ್ಲ. ನಮಗೆ ನಮ್ಮದೇ ತಲೆ ನೋವು ಹನ್ನೆರಡು ಇದೆ. ಎಲ್ಲೋ ಒಂದು ಕಡೆ ಈ ವ್ಯವಸ್ಥೆಯನ್ನು ಸರಿ ಮಾಡಬೇಕಾದಂತಹ ಅಗತ್ಯವಿದೆ. Actually rural development ಗೆ ಹಣ ಜಾಸ್ತಿ ಕೊಡಬೇಕು ಎನ್ನುವುದು ನನ್ನ ಒತ್ತಾಯವಿದೆ. ಅವೆಲ್ಲವನ್ನೂ ಸಧೃಡಗೊಳಿಸುವುದು ಎಂದರೆ ಹೇಗೆ? members ಜಾಸ್ತಿ ಮಾಡುವುದಲ್ಲ. ಅವರಿಗೆ ಆರ್ಥಿಕವಾಗಿ ಆ ಕ್ಷೇತ್ರದ ಅಭಿವೃದ್ಧಿಗೆ ಹಣ ಬಿಡುಗಡೆ ಮಾಡದೇ ಇದ್ದರೆ ಅದರ ವ್ಯವಸ್ಥೆಯಿಂದ ಉಪಯೋಗವಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಇದರೊಳಗೆ PWD ಕೂಡ ಅಷ್ಟೇ. ನಾನು ಹೇಳುವುದು ಏನೆಂದರೆ ಹೆಚ್ಚಿನ ರಸ್ತೆಯ ಅಗತ್ಯವಿದೆ. ನಮ್ಮ ಮಲೆನಾಡಿನಲ್ಲಿ 6 ರಿಂದ 7 ಡ್ಯಾಮ್ ಬರುತ್ತದೆ. ಹೇಗೆ ಎಂದರೆ, ಒಬ್ಬೊಬ್ಬರು ಅಂದರೆ ಬೇಲೂರಿನಲ್ಲಿರತಕ್ಕಂತಹ ಒಬ್ಬ ಗ್ರಾಮ ಪಂಚಾಯಿತಿ ಅಧ್ಯಕ್ಷರು ಅಂಗಳಾಕೋಡಿಗೆ ಹೋಗಬೇಕು, ಅವರು ಕಳೆದ ಸಾರಿ ಅಧ್ಯಕ್ಷರಾಗಿದ್ದರು, ಅವರು 27 ಕಿ.ಮೀ. ಹೋಗಬೇಕು, ಅಲ್ಲಿಗೆ ಸೇತುವೆ ಇಲ್ಲ, ಆ ಸೇತುವೆಗೆ ಒಂದು ಕೋಟಿ ರೂ. ಬೇಕು. Actually it is a created problem of our submersion area. It is not the natural problem. It is a created problem. Submersion ಆಗಿದ್ದಕ್ಕೆ ಅವರು ಅಲ್ಲಿಗೆ ಹೋಗುತ್ತಿದ್ದರು. back water ಬಂದು ನಿಂತಿದೆ. back water ನಿಂತಿರುವುದರಿಂದ ಅವನು 27 ಕಿ.ಮೀ. ಕ್ರಾಸ್ ಮಾಡಿ ಹೋಗಬೇಕು. ಅದನ್ನು atleast KPC ನವರಾದರೂ ಮಾಡಬೇಕು. ಇದು ನನ್ನ ಒತ್ತಾಯ.

ನಾಳೆ ಅದು regularಆಗಿ PWD ಮಾಡದೇ ಹೋದರೆ ಎಲ್ಲೆಲ್ಲಿ ಇಂತಹ ಸಮಸ್ಯೆಯಿದೆ, submersion ನಿಂದ problem create ಆಗಿರುವಂತಹದ್ದು, ನಾಗರೀಕ ಸಂಪರ್ಕವನ್ನು ಕಡಿದುಕೊಳ್ಳುವಂತಹದ್ದು ಯಾವುದು ಇದೆ, ಮಾಗಲು ಎಂದು ಒಂದು ಊರಿದೆ, ಆ ಮಾಗಲು ಊರಿಗೆ ಈ ರಸ್ತೆ ಮಾಡುವುದಕ್ಕೆ ಎರಡು ಕೋಟಿ ರೂ. ಬೇಕು, ಈ ಶತಮಾನದಲ್ಲಿ ಆ ರಸ್ತೆ ಮಾಡಿಕೊಡುವುದಕ್ಕೆ ಆಗುವುದಿಲ್ಲ. ಇಲ್ಲದೇ ಹೋದರೆ ಅವರ ಜಮೀನನ್ನೇ ಕೊಂಡುಕೊಳ್ಳಿ. 10 family ಇದೆ. ಮಳೆಗಾಲದಲ್ಲಿ ಅಲ್ಲಿ ಒಬ್ಬರು ಅಜ್ಜಿಯನ್ನು ಕಂಬಳಿಯಲ್ಲಿ ಎತ್ತಿಕೊಂಡು ಹೊರಗಡೆಗೆ ಬರುತ್ತಾರೆ. ನಮಗೆ ಅಲ್ಲಿ ರಸ್ತೆ ಮಾಡಿಸುವುದಕ್ಕೆ ಆಗುವುದಿಲ್ಲ, ಸೇತುವೆ ಮಾಡಿಸುವುದಕ್ಕೆ ಆಗುವುದಿಲ್ಲ. ಇಲ್ಲವೇ ಅವರಿಗೆ ಪರಿಹಾರ ಕೊಟ್ಟು ಭೂಮಿ ತೆಗೆದುಕೊಳ್ಳಬೇಕು, ನೀವು ಹೊರಗೆ ಬನ್ನಿ ಎಂದು ಹೇಳಬೇಕು, ಇಲ್ಲದೇ ಹೋದರೆ ರಸ್ತೆಯನ್ನಾದರೂ ಮಾಡಬೇಕು. ಇಲ್ಲದೇ ಇದ್ದರೆ ಕಷ್ಟ. ನಮಗೆ ಸ್ವಾತಂತ್ರ್ಯ ಬಂದು 62 ವರ್ಷ ಆಗಿ ಹೋಯಿತು. ಇದು ಯಾವ ರೀತಿ ಸಮಸ್ಯೆ ಎಂದರೆ, ಮಾನ್ಯ ಬಸವರಾಜ್ ಬೊಮ್ಮಾಯಿಯವರಿಗೆ ಒಂದು ಸಲ ಹೇಳಿದೆ. ನಮ್ಮ ಶಿವಮೊಗ್ಗ ತಾಲ್ಲೂಕಿನಲ್ಲಿ ಬಿಳಮನೆ ಎನ್ನುವ ಒಂದು village ಇದೆ. ತುಂಗಾ ಡ್ಯಾಮ್‌ನ ಆಚೆ ಇದೆ. ಮಾನ್ಯ ಮುಖ್ಯಮಂತ್ರಿಗಳು ಬಿಳಗಿನವನ್ನು ನೋಡಿದ್ದಾರೆ, ಮತ್ತೂರಿನ ಪಕ್ಕ ಬರುತ್ತದೆ. ಅದು 52ನೇ ಇಸವಿಯಲ್ಲಿ ಮುಳುಗಿ ಹೋಗಿರುವ ಊರು ಅದು. 52ರಲ್ಲಿ ಬೇಚಾರ್ ಗ್ರಾಮ ಎಂದು ಆಗಿದೆ. ದೇವರ ದಯೆಯಿಂದ ಇಲ್ಲಿಯವರೆಗೆ ಅವರಿಗೆ ಪರಿಹಾರ ಸಿಗಲಿಲ್ಲ. ಅದು ಲ್ಯಾಂಡ್ ಲಾರ್ಡ್ ಕೈನಲ್ಲಿತ್ತು. Land Reforms Act ಇರಲಿಲ್ಲ. ಲ್ಯಾಂಡ್‌ಲಾರ್ಡ್‌ಗೆ ಪರಿಹಾರ ಕೊಟ್ಟರು. tenants ಅಲ್ಲಿಯೇ ಕುಳಿತುಕೊಂಡರು. ಆಗ ಡ್ಯಾಮ್ ಚಿಕ್ಕದು ಇತ್ತು. ಈಗ ಡ್ಯಾಮ್ ದೊಡ್ಡದಾಗಿದೆ, upper ತುಂಗಾ ಆಯಿತು. ಈಗ ನೀರು ಮನೆಯವರೆಗೆ ಬಂದಿದೆ. ಕರೆಂಟ್ ಇಲ್ಲ, ರಸ್ತೆ ಇಲ್ಲ, ಮನೆ ಇಲ್ಲ, ಜಮೀನಿಲ್ಲ. see where we have to settle? ಕೊನೆಗೆ ನಾನು hunger strike ಮಾಡುತ್ತೇನೆ ಎಂದು ಹೇಳಿದ ಮೇಲೆ ಮಾನ್ಯ ಬಸವರಾಜ್ ಬೊಮ್ಮಾಯಿಯವರು ಅವರ ಇಲಾಖೆಗೆ ಹೇಳಿ 19 ಸಾವಿರ ರೂ. ಕೊಟ್ಟರು ಸಂಪೂರ್ಣ ದಲಿತರು ಅವರು. ಅವರದು 19 ಕುಟುಂಬ ಇದೆ, 27 ಮಂದಿ ಇದ್ದಾರೆ, ಅವರಲ್ಲಿ ಒಬ್ಬರು ಪಿ.ಯು.ಸಿ. ಓದಿದ್ದಾರೆ. ಅವರ ಹತ್ತಿರ ಏನಿಲ್ಲ,

ಯಾವುದೂ ಇಲ್ಲ. ಮಾನ್ಯ ಸಣ್ಣ ನೀರಾವರಿ ಸಚಿವರು ಮಾತನಾಡುವಾಗ ನನಗೆ ನೋವಾಗುತ್ತಿತ್ತು, ಎಲ್ಲಾ ಕೊಟ್ಟಿದ್ದೇವೆ ಎಂದು ಹೇಳಿದರು. ನಾನು ಅವನಿಗೆ 10 ಲೆಟರ್ ಕೊಟ್ಟೆ, ಆದರೂ ಅವನಿಗೆ ಒಂದು ಬಾವಿಯ ವ್ಯವಸ್ಥೆ ಮಾಡಿಕೊಡಲಿಲ್ಲ, ಅವರು ದಲಿತರು. ಅವನು ಎಷ್ಟು ಸಲ ಓಡಾಡಿದ್ದಾನೆ ಎಂದರೆ, ನಾನು Managing director ರವರಿಗೆ ಈ ಕುರಿತು ಫೋನ್ ಮಾಡಿ ಕೂಡ ಹೇಳಿದೆ, ಲೆಟರ್ ಕೊಟ್ಟೆ. See they are dealing with the finance. They are demanding the money. ನಾನು 10 ಲೆಟರ್ ಬರೆದು ಕಳುಹಿಸಿದ್ದೇನೆ, ಪಾಪ ಅವನು ದಲಿತ, ಪಾಪ ಅವನು ಕಷ್ಟಪಟ್ಟು 5 ಕಿ.ಮೀ. ದೂರ ಹೋಗಿ ಓದಿದ್ದಾನೆ. ಮನೆಯಲ್ಲಿ ಏನೂ ಇಲ್ಲ, ಕೂಲಿ ಮಾಡುವವರು ಅವರು. ಅವರಿಗೆ ಒಂದು ಬಾವಿ sanction ಮಾಡುವುದಕ್ಕೆ ಲೆಟರ್ ಕೊಟ್ಟರೆ they are not granting it. They are demanding the money. Is it the administration? ಯಾರೂ ಮಾತನಾಡುವುದು ಬೇಡ. ನಾನು ಈಗ ಹೇಳಿಬಿಡುತ್ತೇನೆ. ನಮಗೆ ಮಾತನಾಡಲು ಸಮಯಾವಕಾಶ ಕೊಡುವುದು ಕೇವಲ 5 ನಿಮಿಷ. ಆಮೇಲೆ ಅವಕಾಶ ಸಿಗುವುದಿಲ್ಲ.

(ಗೊಂದಲ)

ಶ್ರೀ ಗೋವಿಂದ ಕಾರಜೋಳ: ಮಾನ್ಯ ಅಧ್ಯಕ್ಷರೆ, ಬಾವಿ scheme ನಮ್ಮ ಹತ್ತಿರ ಇಲ್ಲ. ಬಾವಿ ತೋಡಿಸುವುದು ಆಗುವುದಿಲ್ಲ. ಬೇರೆ ಸ್ಕೀಂ ನಮ್ಮ ಹತ್ತಿರ ಇರುವುದನ್ನು ಕೇಳಲಿ.

(ಗೊಂದಲ)

ಅಧ್ಯಕ್ಷರು: ರತ್ನಾಕರ್‌ರವರೆ, ಇನ್ನು ಮಾತನಾಡುವುದಕ್ಕೆ 5 ನಿಮಿಷ ಸಮಯಾವಕಾಶ ಅಷ್ಟೆ.

ಶ್ರೀ ಕಿಮ್ಮನೆ ರತ್ನಾಕರ್: ನಾನು ಸುಮ್ಮನೆ just ನಿಮ್ಮ ಗಮನಕ್ಕೆ ತಂದೆ ಅಷ್ಟೆ. ಈ ರೀತಿ ಸರ್ಕಾರದ ಉದ್ದೇಶ ಒಳ್ಳೆಯದು ಇದ್ದರೂ ಕೂಡ ಅದು ಕಾರ್ಯಗತವಾಗದಿದ್ದರೆ ಜನರ ಮನಸ್ಸಿಗೆ ಏನು ಬರುತ್ತದೆ? ನಾನು ಸುಮ್ಮನೆ ಹೇಳಿದೆ. Drinking water problem ಕೂಡ ಅಷ್ಟೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ನಮ್ಮ rural MLA's ಏನು ಇದ್ದಾರೆ, 180 segments ನಲ್ಲಿ ಏನು ಇದ್ದಾರೆ, ಖಂಡಿತ ನೀವು ಪ್ರದೇಶಾಭಿವೃದ್ಧಿಯನ್ನು ಜಾಸ್ತಿ ಮಾಡಿ. ನಮಗೆ ಕೊಡತಕ್ಕಂತಹ ಒಂದು

ಕೋಟಿ ರೂ. ಖಂಡಿತ ಸಾಕಾಗುವುದಿಲ್ಲ. ನಾವು ಮಾನ-ಮರ್ಯಾದೆ ಉಳಿಸಿಕೊಳ್ಳುವಂತಹ ಪರಿಸ್ಥಿತಿ ಇಲ್ಲ. Atleast ಇವರು ಯಾರಾದರೂ ರಸ್ತೆಗೆ ಹಣ grant ಮಾಡದೇ ಇದ್ದರೆ, ನಮ್ಮ ಹಣವನ್ನಾದರೂ ಒಂದೆರಡು ಲಕ್ಷಗಳನ್ನು ಅವರಿಗೆ ಕೊಡಬಹುದು. ನಮಗೆ 61 ಗ್ರಾಮ ಪಂಚಾಯಿತಿ ಬರುತ್ತದೆ, ಒಂದು ಗ್ರಾಮ ಪಂಚಾಯಿತಿಗೆ ಒಂದು ಲಕ್ಷದ 20 ಸಾವಿರ ರೂ. ಕೊಟ್ಟರೆ ನನ್ನದು cross ಆಗುತ್ತದೆ, ಇದರೊಳಗೆ ನಾನು ಏನು manage ಮಾಡುವುದಕ್ಕೆ ಆಗುತ್ತದೆ? ಈ ಕಡೆ ರೋಡ್ ಬರುವುದಿಲ್ಲ, ಈ ಕಡೆ drinking water ಬರುವುದಿಲ್ಲ, ಯಾವ ಗ್ರಾಮ ಪಂಚಾಯಿತಿಗೆ ಹೋದರೂ ಸಹ ಒಂದು ಲಕ್ಷ ಕೊಡಿ ಸರ್ ನಾವು ಪೈಪ್ ಹಾಕಿಕೊಳ್ಳುತ್ತೇವೆ ಎಂದು ಕೇಳುತ್ತಾರೆ, ನಮಗೆ PVC pipe ಕೊಡಿಸುವುದಕ್ಕೆ ಆಗುವುದಿಲ್ಲ. ನಾನು ಹಾರೋಗುಳಿಗೆ ಹೋದೆ. ಅಲ್ಲಿಗೆ ಹೋದರೆ ನಮಗೆ ಎರಡು ಲಕ್ಷ ಕೊಡಿ ಸಾರ್, ನಾವು PVC pipe ಹಾಕಿಕೊಳ್ಳುತ್ತೇವೆ ಎಂದರು, ನೀರು ಅಲ್ಲಿಯವರೆಗೆ ಬರುತ್ತದೆ ಎಂದು ಹೇಳುತ್ತಾರೆ. we cannot give it. ಎಲ್ಲೋ ಒಂದು ಕಡೆ rural segment ಶಾಸಕರನ್ನು ಗಮನದಲ್ಲಿಟ್ಟುಕೊಂಡು, irrespective of the political party, ಇದನ್ನು ಸುಮ್ಮನೆ ನಿಮ್ಮ ಗಮನಕ್ಕೆ ತರುವುದು. ಇನ್ನೊಂದು ಏನು ಎಂದರೆ ಮುಳುಗಡೆ ಸಮಸ್ಯೆ ಇದೆ. ನಾನು ಹಲವಾರು ಬಾರಿ ಲೇಖನ ಬರೆದಿದ್ದೇನೆ. ಎಂ.ಡಿ. ಆಫೀಸ್‌ಗೆ ಹತ್ತಾರು ಸಲ ಫೋನ್ ಮಾಡಿದ್ದೇನೆ. ಏನಾಗಿದೆ ಎಂದರೆ, 500-600 ಜನರಿಗೆ ಉದ್ಯೋಗ ಕೊಡುತ್ತಾರೆ ಎಂದು ಹೇಳಿ ಕೊಡಲಿಲ್ಲ. ನಾನು ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ಅನೇಕ ಸಾರಿ ಬೇಡಿಕೆ ಮಾಡಿಕೊಂಡೆ. ಅವರಿಗೆ ಉದ್ಯೋಗ ಕೊಡುವುದಕ್ಕೆ ಆಗುವುದಿಲ್ಲ, age ಆಗಿದೆ, atleast ವರಾಹಿ ಮುಳುಗಡೆ ಸಮಸ್ಯೆಗೆ ಒಳಗಾದವರಿಗೆ ಪರಿಹಾರವನ್ನಾದರೂ ಕೊಟ್ಟು ಸಮಸ್ಯೆ ಬಗೆಹರಿಸಿ ಎಂದು ಕೇಳಿದೆ, ಅವರದು ಇನ್ನೂ ಬಗೆಹರಿದಿಲ್ಲ. Actually Upper Tunga ದಲ್ಲಿ ಇವತ್ತಿಗೂ ಸಹ ಪರಿಹಾರ ಸಿಕ್ಕಿಲ್ಲ. ಒಂದು ಸಾರಿ ಮಾನ್ಯ ಮುಖ್ಯಮಂತ್ರಿಗಳು ಆರ್ಡರ್ ಮಾಡಿ ಏಳು ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದರು. 50% problem solve ಆಯಿತು. ಆದರೆ, ಇನ್ನೂ ಕೂಡ ಬಾಕಿ ಇದೆ. ಅದನ್ನು ನಾನು ಮೊನ್ನೆ

ಡಿ.ಸಿ.ಯವರನ್ನು ಕರೆಸಿ ಮಾತನಾಡಿದ್ದೇನೆ. ಮೊನ್ನೆ ನಾನು ಅವರ ಗಮನಕ್ಕೆ ತರುವಂತಹ ಪ್ರಯತ್ನ ಮಾಡಿದ್ದೇನೆ. ಅಪ್ಪರ್ ತುಂಗಾ ಮುಳುಗಡೆಗೆ ಸಂಬಂಧಿಸಿದಂತೆ ಏನಾದರೂ ಮಾಡಬೇಕು. ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ಮನೆಗಳಿಗೆ ಸಂಬಂಧಿಸಿದಂತೆ ಈಗಾಗಲೇ ಮಾತನಾಡುವ ಸಂದರ್ಭದಲ್ಲಿ ಅವರು ಹೇಳಿದರು. Actually ಈ ಸರ್ಕಾರ ಬಂದಾಗ, ಬರುವುದಕ್ಕಿಂತ ಮುಂಚಿತವಾಗಿ ಕೂಡ 15 ಲಕ್ಷದ ಮನೆಯನ್ನು ನಮ್ಮ ಅವಧಿಯಲ್ಲಿ ಮಾಡುತ್ತೇವೆ ಎಂದು ಹೇಳಿದ್ದರು. Actually ಇಲ್ಲಿಯವರೆಗೆ ಆಶ್ರಯಮನೆ ಸಮಿತಿ ರಚನೆಯಾಗಲಿಲ್ಲ. ಆಶ್ರಯ ಮನೆ ಕೊಡಲಿಲ್ಲ.

ಈಗ ಕೊಟ್ಟಿರುವಂತಹ ಬಸವ ಇಂದಿರಾ ಯೋಜನೆಯಲ್ಲಿ ಕಾನೂನನ್ನು ನೋಡಿದರೆ ಯಾರಿಗೂ ಮನೆ ಸಿಗುವ ಪರಿಸ್ಥಿತಿ ಇಲ್ಲ. ಮೂರು ವರ್ಷಗಳಿಂದ ನಾವು ಮನೆಗಳನ್ನೇ ಕೊಡದ ರೀತಿ ಆಗಿದೆ. ಬಡವರಿಗೆ ಸೈಟ್ ಹಂಚುವುದಕ್ಕೆ ಆಗಿಲ್ಲ, ಮನೆ ಕೊಡುವುದಕ್ಕೆ ಆಗಿಲ್ಲ. ನಾವು ಯಾವ ರೀತಿ ಅವರ ಬೇಡಿಕೆಗಳನ್ನು ಈಡೇರಿಸುವುದು? ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನಹರಿಸುವುದು.

ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತಿದ್ದೇನೆ. ಮಾನ್ಯ ಕಾಗೇರಿಯವರು ಇಲ್ಲಿ ಇಲ್ಲ. ಅವರಿಗೆ ನಾನು ಮಲೆನಾಡು ಭಾಗದ ಬವಣೆಯನ್ನು ಹೇಳುತ್ತೇನೆ. ನಮ್ಮಲ್ಲಿ ಈಗ 50 ಪ್ರೈಮರಿ ಸ್ಕೂಲ್ close ಆಗಿದೆ. 5 ಜನ ಮೇಷ್ಟ್ರು, 10 ಜನ ವಿದ್ಯಾರ್ಥಿಗಳು, ಆಮೇಲೆ building waste. ಇಲ್ಲಿ ಏನಾಗಿದೆ ಎಂದರೆ, ತೀರಾ remote places ನಲ್ಲಿ ಬಯಲುಸೀಮೆಯ ಹಾಗೆ ಜನಸಂಖ್ಯೆ ಜಾಸ್ತಿ ಇಲ್ಲ. ಸ್ಕೂಲ್ 5–6 ಕಿ.ಮೀ ಆಗುತ್ತದೆ ಎಂದರೆ, ಪುಟ್ಟ ಪುಟ್ಟ ಗ್ರಾಮಗಳಿಗೆ ಒಂದು ಸ್ಕೂಲ್ ಕೊಟ್ಟಿದ್ದಾರೆ. ಈಗ ಏನಾಗಿದೆ ಎಂದರೆ, ಸ್ಕೂಲ್ ಇದೆ, ಕಟ್ಟಡ ಇದೆ, ಮಕ್ಕಳು ಇಲ್ಲ. ಅವೆಲ್ಲಾ close ಆಗುತ್ತಿವೆ. ಬರತಕ್ಕಂಥ ಮಕ್ಕಳಿಗೆ ಸ್ಕೂಲ್‌ಗೆ ಹೋಗುವುದಕ್ಕೆ ಆಗುವುದಿಲ್ಲ. ಎಲ್ಲೋ ಒಂದು ಕಡೆ ನಮ್ಮ areaದಲ್ಲಿ better ಎಂದು ಹೇಳಿದರೆ, ಗ್ರಾಮ ಪಂಚಾಯಿತಿ headquarters ಗೆ ಮಾಡಿ. ನೀವು ಬೇಕಾದರೆ ಟೆಂಡರ್ ಕರೆದು ವಾಹನಗಳನ್ನು ಅದೇ ಮಕ್ಕಳು ಬೇರೆ private van ಗಳಲ್ಲಿ ಹೋಗುತ್ತಾರೆ.

ವರ್ಷದಲ್ಲಿ ಎಂಟೇ ತಿಂಗಳು ಇರುವುದು. ನಮ್ಮ ಸಾರಿಗೆ ಖರ್ಚು ಉಳಿಯುತ್ತದೆ. ನಮ್ಮಲ್ಲಿ ಸುಮಾರು 10–15 ಲಕ್ಷ ರೂಪಾಯಿಯ building ಇದೆ, ಶೌಚಾಲಯ ಇದೆ, ಕರೆಂಟ್ ಇದೆ ಎಲ್ಲಾ ಇದೆ, students ಇಲ್ಲ, 50 ಜನ close ಆಗಿದ್ದಾರೆ. ಇದಕ್ಕೆಲ್ಲಾ ಬೇರೆ ವ್ಯವಸ್ಥೆ ಮಾಡಬೇಕು. ಅವರನ್ನು ಗ್ರಾಮಪಂಚಾಯಿತಿ headquarters ಗೇ ತರುವಂತೆ ಮಾಡುವುದು. Yearly tender ಹಾಕಿದರೆ, ವಾಹನದ ಮೂಲಕವೇ ಮಕ್ಕಳು ಬರುತ್ತಾರೆ ಹೋಗಿ ಕರೆದುಕೊಂಡು ಬರಬಹುದು. ನಾನು workout ಮಾಡಿದೆ. ಅದು ಖಂಡಿತ ಸರ್ಕಾರಕ್ಕೆ ಲಾಭವಾಗುತ್ತದೆ. ಹೆಚ್ಚು ಕಡಿಮೆ employment problem ಏನಿದೆ ಅದು ಕೂಡ ಕಡಿಮೆಯಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಅದನ್ನು change ಮಾಡಬೇಕು.

ಬಹಳ ಮುಖ್ಯವಾಗಿ ನೀರಾವರಿ ಬಜೆಟ್‌ನ ಬಗ್ಗೆ ಹೇಳಬೇಕೆಂದರೆ, ನಾನೇನೂ ನೀರಾವರಿ ತಜ್ಞ ಅಲ್ಲ. ಆದರೆ ನನ್ನ ಅಭಿಪ್ರಾಯದಲ್ಲಿ ನಾನು ಹೇಳುತ್ತೇನೆ. ಅನೇಕ ವರ್ಷಗಳ ಬಜೆಟ್ ನೋಡಿದಾಗ, ಈಗ ಇರತಕ್ಕಂಥ ಬಜೆಟ್‌ನಲ್ಲಿ ನೀರಾವರಿಗೆ ಅತ್ಯಂತ ಕಡಿಮೆ ಹಣ ಕೊಟ್ಟಿರುವುದು ಗಮನಿಸಬೇಕಾಗುತ್ತದೆ. ಸುಮ್ಮನೆ ನಾನು ಓದಿ ಹೇಳುತ್ತೇನೆ. 2001–02 ರಲ್ಲಿ, ಅದಕ್ಕೆ ಹಿಂದಿನ ವರ್ಷಗಳದ್ದೂ ಮಾಹಿತಿ ಇದೆ. ಸಮಯದ ಅಭಾವದಿಂದ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ 2001–02ನೇ ಇಸವಿಯಲ್ಲಿ ಮಾನ್ಯ ಎಸ್.ಎಂ.ಕೃಷ್ಣರವರು ಮಂಡಿಸಿರುವ ಬಜೆಟ್‌ನಲ್ಲಿ 39.5% ಹಣವನ್ನು ನೀರಾವರಿಗೆ ಮೀಸಲಿಡಲಾಗಿದೆ. Highest amount in the history of Karnataka 39% irrigation ಗೆ allot ಮಾಡಿದ್ದಾರೆ. ಆನಂತರ ಮಾನ್ಯ ಸಿದ್ದರಾಮಯ್ಯನವರು submit ಮಾಡಿದ ಬಜೆಟ್‌ನಲ್ಲಿ 29% ಹಣವನ್ನು ನೀರಾವರಿಗೆ ಮೀಸಲಿಡಲಾಗಿದೆ. ಬಿ.ಜೆ.ಪಿ ಸರ್ಕಾರ ಇದ್ದಾಗ 24% ಕೊಟ್ಟಿದೆ. ಅದಕ್ಕೆಲ್ಲಾ compare ಮಾಡಿದಾಗ, ಇದು 18%. ಕಳೆದ ಮೂರು ವರ್ಷದಲ್ಲಿ, 2008–09ರಲ್ಲಿ 13.7%, 2009–10ರಲ್ಲಿ 14%, 2010–11ರಲ್ಲಿ 14%, 2011–12ರಲ್ಲಿ 18%. ಈಗ ಇರತಕ್ಕಂಥ 18% ಇದು ಹಿಂದಿನ ವರ್ಷಗಳದ್ದೆಲ್ಲಾ compare ಮಾಡಿದಾಗ ಅತ್ಯಂತ ಕಡಿಮೆ. ಆದರೆ ನಾನು ಒಂದು ವಿಷಯ

ಹೇಳುವುದೇನೆಂದರೆ, 10–15 ವರ್ಷಗಳ ಹಿಂದೆ 13% ಗೂ ಇವತ್ತಿನ 18% ಗೂ ಇರತಕ್ಕಂಥ labour cost, sand cost ಅಥವಾ ಸಿಮೆಂಟಿನ cost, ಎಲ್ಲಾ ಗಣನೆಗೆ ತೆಗೆದುಕೊಂಡಾಗ ಇದು ತೀರಾ ಹೆಚ್ಚೇನಲ್ಲ. ಬಹುಶ: ಹಿಂದೆ ಮಾನ್ಯ ವೀರಪ್ಪಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಬಜೆಟ್ ಮಂಡನೆ ಮಾಡಿದಾಗ, energy ಗೆ ಏನು allocation ಮಾಡಿದ್ದಾರೆ that is the highest. ಅಂದರೆ ಹಿಂದಿನವರು neglect ಮಾಡಿದ್ದಾರೆ ಎನ್ನುವ ಭಾವನೆ ಇರಬಾರದು. ಏಕೆಂದರೆ ಹಿಂದೆ ಇದ್ದ 3,000 ಕೋಟಿ ರೂಪಾಯಿಗೂ, ಈಗ ಇರುವ 3,000 ಕೋಟಿ ರೂಪಾಯಿಗೂ ಬಹಳ ವ್ಯತ್ಯಾಸವಿದೆ.

ಉಪಾಧ್ಯಕ್ಷರು: ಆಯಿತು conclude ಮಾಡಿ.

ಶ್ರೀ ಕಿಮ್ಮನೆ ರತ್ನಾಕರ್: ಇನ್ನೊಂದು ವಿಷಯ. ನನ್ನ ವಿನಂತಿ ಏನೆಂದರೆ, ಮೂರು ವರ್ಷಗಳ ಹಿಂದೆ ನಿರುದ್ಯೋಗ ಭತ್ಯೆ ಕೊಡುತ್ತೇವೆಂದು ಹೇಳಿದ್ದಿರಿ. ಆದರೆ ಅದು ಆಗಲಿಲ್ಲ. ಅದನ್ನು ಅನುಷ್ಠಾನಕ್ಕೆ ತರಬೇಕು ಎನ್ನುವ ಒತ್ತಾಯವನ್ನು ಮಾಡುತ್ತೇನೆ. ಹಾಗೇಯೇ ಮಲೆನಾಡು ಅಭಿವೃದ್ಧಿ ಮಂಡಳಿಗೆ (MADB) ಜಾಸ್ತಿ ಹಣ ಕೊಡಬೇಕು. Atleast ಸೇತುವೆಗಳ ನಿರ್ಮಾಣ ಮಾಡುವುದಕ್ಕಾದರೂ ಆಗುತ್ತದೆ. ಪದ್ಮನಾಭಭಟ್ಟರು ಮಂಡಳಿಯ ಅಧ್ಯಕ್ಷರು ಒಳ್ಳೆಯವರು ಇದ್ದಾರೆ. He is very fine Gentleman. ನಾನು ಅವರನ್ನು ಶಾಸನಸಭೆಯಲ್ಲಿ appreciate ಮಾಡುತ್ತೇನೆ, ಪ್ರಾಮಾಣಿಕರು. ತುಂಬಾ ಒಳ್ಳೆಯ ಜನ. MADB ಗೆ ಹಣವೇ ಇಲ್ಲ. ಮಂಡಳಿಗೆ ಹಣವನ್ನು ಒದಗಿಸಿದರೆ At least, ನಮ್ಮ ಮಲೆನಾಡು ಪ್ರದೇಶದಲ್ಲಿ 60–63 ಶಾಸಕರು ಬರುತ್ತೇವೆ. ಮಲೆನಾಡಿನಲ್ಲಿ ಮಳೆಗಾಲದಲ್ಲಿ ದಾಟಾಡುವ ಸಮಸ್ಯೆಗಳನ್ನು slove ಮಾಡುವುದಕ್ಕೆ ಆಗುತ್ತದೆ. ಆದ್ದರಿಂದ ಹೆಚ್ಚಿನ ಹಣವನ್ನು MADB ಗೆ ಒದಗಿಸಬೇಕೆಂದು ಹೇಳುತ್ತೇನೆ. ನಮ್ಮಲ್ಲಿ ಒಂದು ಸಮಸ್ಯೆ ಏನೆಂದರೆ, ಮಾನ್ಯ ರೇಣುಕಾಚಾರ್ಯರವರ ಅಬಕಾರಿ ಇಲಾಖೆಯ ಸಮಸ್ಯೆಯನ್ನು ಹೇಳುತ್ತೇನೆ. ನನಗನ್ನಿಸುವುದೇನೆಂದರೆ, 4–5 ವರ್ಷಗಳ ಹಿಂದೆ ಸ್ತ್ರೀಶಕ್ತಿ ಸಂಘಗಳು ಷರಾಬನ್ನು ಬಂದ್ ಮಾಡಬೇಕೆಂದು support ಮಾಡಿದವರಲ್ಲಿ ನಾನೂ ಒಬ್ಬ ಇದ್ದೆ. ಷರಾಬಿನಿಂದ ಸಮಾಜ ಹಾಳಾಗುತ್ತದೆ ಎಂದು ಅದನ್ನು ಬಂದ್

ಮಾಡಬೇಕೆನ್ನುವ ಪ್ರತಿಭಟನೆಯಲ್ಲಿ ಅವರ ಜೊತೆಯಲ್ಲಿ ಸೇರಿಕೊಂಡು ನಾನೂ ಭಾಗವಹಿಸಿದ್ದೆ. ಈಗ ನನಗೆ ಏನನ್ನಿಸುತ್ತದೆ ಅಂದರೆ, ಇವತ್ತಿನ ಪರಿಸ್ಥಿತಿ ನೋಡಿದರೆ ಹಳ್ಳಿಗಳಲ್ಲಿ 10 ಮನೆಯಲ್ಲಿ 8 ಮನೆಯಲ್ಲಿ ಈ ಬಾಟಲಲ್ಲಿ sale ಮಾಡುತ್ತಿದ್ದಾರೆ. ನಾನು ತೀರ್ಥಹಳ್ಳಿ ಒಂದನ್ನು ಆಧಾರವಾಗಿ ಇಟ್ಟುಕೊಂಡರೆ, ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಹಿಂದೆ ಬರುವುದಕ್ಕಿಂತ ಒಂದು ವರ್ಷದ ಮೊದಲು ಷರಾಬು 1,40,000 ರೂಪಾಯಿಗೆ ಹರಾಜಾಗುತ್ತಿತ್ತು. ಇವತ್ತು ಒಂದು ವರ್ಷಕ್ಕೆ 18 ಕೋಟಿ ರೂಪಾಯಿ ಆದಾಯವಿದೆ. ಖಂಡಿತ ದೇಶ ಉದ್ಧಾರವಾಗುವುದಿಲ್ಲ. ನನ್ನ ಪಾರ್ಟಿ ಏನು ಹೇಳುತ್ತದೆಯೋ ಗೊತ್ತಿಲ್ಲ. ಪಾರ್ಟಿ ಹೇಳಿದ್ದಕ್ಕೆ ನಾನು ಒಪ್ಪಿಗೆ ಕೊಡುತ್ತೇನೆ. But, I am for prohibition. 10 ವರ್ಷ ಈ ರಾಜ್ಯಕ್ಕೆ ಅದರ ಅಗತ್ಯವಿದೆ ಎಂದು ನನಗನ್ನಿಸುತ್ತದೆ. ಇದರೊಳಗೆ ಶ್ರೀಮಂತರ ಹಣ ಹೋಗುತ್ತಿಲ್ಲ. 18 ಕೋಟಿ ರೂಪಾಯಿ ಆದಾಯ ಏನು ಬರುತ್ತಿದೆ, ಅದರಲ್ಲಿ ಎಲ್ಲಾ ಬಡವರ ಹಣವೇ ಹೋಗುತ್ತಿರುವುದು ಅತ್ಯಂತ ನೋವಿನ ಸಂಗತಿ. ಅದರಲ್ಲಿ ಸುಮಾರು 50 ಲಕ್ಷ ಹಣ ಶ್ರೀಮಂತರ ಹಣ ಹೋಗುತ್ತಿರಬಹುದು. ತೀರ್ಥಹಳ್ಳಿ ಒಂದು ತಾಲ್ಲೂಕಿನಿಂದ ಈ ರಾಜ್ಯಕ್ಕೆ 18 ಕೋಟಿ ರೂಪಾಯಿ ಆದಾಯ ಬರುತ್ತಿದೆ ಎಂದರೆ, ಖಂಡಿತ ಅದು ಬಡವರ ಹಣವೇ ಹೊರತು, ಶ್ರೀಮಂತರ ಹಣವಲ್ಲ. ಅದರಿಂದ ಆರೋಗ್ಯವೂ ಹಾಳಾಗುತ್ತಿದೆ ಮತ್ತು ಕುಟುಂಬವೂ ಹಾಳಾಗುತ್ತಿದೆ. ನಾನು ಒಂದು ವಿನಂತಿ ಮಾಡುವುದೇನೆಂದರೆ, ನಮ್ಮಲ್ಲಿ ಅಧಿಕಾರಿಗಳಿಗೆ, ನೀವು ಇಂತಿಷ್ಟು ಸೇಲ್ ಮಾಡಲೇಬೇಕೆಂದು circular ಕಳುಹಿಸಿದ್ದಾರೆ. ಟಾರ್ಗೆಟ್ ಹೇಳಿದ್ದಾರೆ. ಸ್ವಾಮಿ ಹಾಲು ಖರ್ಚು ಮಾಡಿ ಎಂದು circular ಕಳುಹಿಸಿ ಅಥವಾ improvement ಮಾಡಿ, ಮೋರಿ ಮಾಡಿ ಎಂದು ಹೇಳಿ. ಷರಾಬನ್ನು ಒತ್ತಾಯ ಮಾಡಿ ನೀವು ಕುಡಿಸಿ ಎಂದು ಹೇಳುವುದು ಯಾವ ನ್ಯಾಯ? It is a Government Circular. ನೀವು ಇಂತಿಷ್ಟು ಷರಾಬನ್ನು ಖರ್ಚು ಮಾಡಲೇಬೇಕು ಅಂದರೆ ಕುಡಿಯಬೇಕು ಇಲ್ಲವಾದರೆ ಹೊಳೆಗೆ ಹಾಕಬೇಕು. What is this? ನೀವು ಅವರನ್ನು ಸೇಲ್ ಮಾಡಬೇಡಿ ಎಂದು ಹೇಳುವವರೂ ನೀವೇ, ಕೆ.ಡಿ.ಪಿ ಸಭೆಯಲ್ಲಿ ಕೇಳಿದರೆ ನೀನು ಇಷ್ಟು ಆದಾಯ ತೀರ್ಥಹಳ್ಳಿ ತಾಲ್ಲೂಕಿನಿಂದ ಕೊಡಬೇಕೆಂದು

ಹೇಳುತ್ತಾರೆ ಇಲ್ಲದೇ ಹೋದರೆ ನಮ್ಮನ್ನು suspend ಮಾಡುತ್ತಾರೆಂದು ಅಳುತ್ತಾ ಹೇಳುತ್ತಾರೆ. ಸಾರ್, ನಾನು ಸೇಲ್ ಮಾಡದಿದ್ದರೆ ನನ್ನನ್ನು suspend ಮಾಡುತ್ತಾರೆ ಎಂದು ಹೇಳುತ್ತಾರೆ. What is the intention of the Government? Is it only the amount? ನಾವು ಉದ್ಧಾರವಾಗುವುದಕ್ಕೆ ಹಣವೇ ಗುರಿಯೇ? ಗೋಪಾಲ ಗೌಡರು ಒಂದು ಮಾತನ್ನು ಹೇಳಿದರು, ಹಣ ಮನುಷ್ಯನ ಬದುಕಿಗೆ ಸಾಧನವೇ ಹೊರತು, ಅದೇ ಗುರಿ ಆಗಬಾರದು'. ನಮ್ಮ ಬದುಕಿಗೆ ಒಂದು ಗುರಿ ಬೇಕು ಹಣ ಅಷ್ಟೆ. It is a weapon to live on earth. It should not be a goal for a man. ಹಣವನ್ನೇ ಮಾಡುವುದು ನಮ್ಮ ಬದುಕಿನ ಗುರಿ ಎಂದು ಆದರೆ, ಎಲ್ಲೋ ಒಂದು ಕಡೆ ಅದು ಸರಿಯಾಗುವುದಿಲ್ಲ ಎನ್ನುವುದು ನನ್ನ ಭಾವನೆ. ಖಂಡಿತವಾಗಿಯೂ ಆ ರೀತಿ directions ಇದೆ. ನೀವು ಅದನ್ನು ಸೇಲ್ ಮಾಡಿ ಎಂದು ಒತ್ತಾಯ ಮಾಡಿದರೆ ನೀವು ಕುಡಿಯಿರಿ ಜಾಸ್ತಿ ಎಂದು ಹೇಳಿದ ಹಾಗೆ ಆಯಿತು. ಹಾಗಾದರೆ ನಮಗೆ ಆದಾಯ ಬೇಕು, ನಿಮಗೆ 8,000 ಕೋಟಿ ಬರುತ್ತದೆ ಎನ್ನುವ ಕಾರಣಕ್ಕಾಗಿ ರಾಜ್ಯದ ಜನರಿಗೆಲ್ಲಾ ಕುಡಿಸುವುದೇ ಗ್ಯಾರಂಟಿ ಎಂದು ಆದರೆ ಎಲ್ಲೋ ಒಂದು ಕಡೆ ನನಗೆ ಅರ್ಥವಾಗುತ್ತಿಲ್ಲ. ಎಲ್ಲೋ ಒಂದು ಕಡೆ ಇದರ ಬಗ್ಗೆ ಯೋಚನೆ ಮಾಡಬೇಕು. ಎಲ್ಲೋ ಒಂದು ಕಡೆ ಬದಲಾವಣೆಗೆ ನಾವು ಯೋಚನೆ ಮಾಡಬೇಕು. ಖಂಡಿತ ಸರ್ಕಾರಕ್ಕೆ ಆದಾಯ ಇಲ್ಲದೇ ನಡೆಸುವುದಕ್ಕಾಗುವುದಿಲ್ಲ. ನಾವು ಮೋರಿ ಕೇಳುತ್ತೇವೆ, ಬಾವಿ ಕೇಳುತ್ತೇವೆ, ಮಾನ್ಯ ಮುಖ್ಯಮಂತ್ರಿಗಳಿಗೆ ಅದು ಆಗಬೇಕು, ಇದು ಆಗಬೇಕು ಎಂದು ನಾನು ದಿವಸವೂ ಅರ್ಜಿ ಕೊಡುತ್ತೇನೆ. ನಿಮ್ಮ ಹತ್ತಿರ ಹಣ ಇಲ್ಲ. ಆದರೆ ಈ ಆದಾಯವನ್ನು ಸ್ವಲ್ಪ curtail ಮಾಡಿ ಬೇರೆ ಕಡೆ ಆದಾಯ ತರುವಂತಹ ಪ್ರಯತ್ನ ಮಾಡಬೇಕು. ಇದಕ್ಕೆ encouragement not from the Government. ಏಕೆಂದರೆ, ಇದರ ವಿರುದ್ಧ ಹೋರಾಟ ಮಾಡಿರುವುದರಲ್ಲಿ ನಿಮಗೂ benefit ಸಿಕ್ಕಿದೆ.

ಉಪಾಧ್ಯಕ್ಷರು: ಆಯಿತು ಇನ್ನು ಮುಗಿಸಿ. ನಾನು ಬೇರೆಯವರ ಹೆಸರನ್ನು ಹೇಳುತ್ತೇನೆ.

ಶ್ರೀ ಕಿಮ್ಮನೆ ರತ್ನಾಕರ್: ಒಂದೇ ಒಂದು ಪಾಯಿಂಟ್ ಹೇಳಿ close ಮಾಡುತ್ತೇನೆ. ಅಡಿಕೆ ಬೆಳೆಗಾರರ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಪರವಾಗಿದ್ದಾರೆ ಅದರ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಅಡಿಕೆ ಬೆಳೆಗಾರರ ಬಗ್ಗೆ, ಖಂಡಿತ ನೀವು ಅದಕ್ಕೆ ಸೇರಿದವರು. ಅಡಿಕೆ ಬೆಳೆಗಾರರ ಹಿತಕ್ಕೆ ಖಂಡಿತ ಅವರೂ ಬರುತ್ತಾರೆ ನೀವೂ ಬರಬೇಕು. ಸುಮಾರು 28 ಜಿಲ್ಲೆಗಳಲ್ಲಿ ಅಡಿಕೆ ಬೆಳೆಗಾರರ ಹಿತಕ್ಕೆ ಬರಬೇಕು. Agriculture ಗೆ ಸಂಬಂಧಪಟ್ಟ ಹಾಗೆ ಒಂದು ವಿಷಯ, ಈಗಾಗಲೇ ಮಾನ್ಯ ಶಿವಲಿಂಗೇಗೌಡರು ಮಾತನಾಡಿದಾಗ ಹೇಳಿದರು. ಏನಾಗಿದೆ ಎಂದರೆ, ನೀವು ಕೊಡುವ ಸಬ್ಸಿಡಿ ಇದೆಯಲ್ಲಾ, ಅದು contractorಗೆ ಹೋಗುತ್ತಿದೆ ಹೊರತು ರೈತರಿಗೆ ಹೋಗುತ್ತಿಲ್ಲ. That should be curtailed. ಸಬ್ಸಿಡಿ ಕಳೆದು ಸೊಸೈಟಿಯಲ್ಲಿ ಟಾರ್ಪೆಲ್ 58 ರೂಪಾಯಿಗೆ ಸಿಗುತ್ತದೆ. Open market ನಲ್ಲಿ 50 ರೂಪಾಯಿಗೆ ಸಿಗುತ್ತದೆ. ನಮಗೆ open market ನಲ್ಲಿ easy ಆದರೆ, ಎಲ್ಲೋ ಒಂದು ಕಡೆ it should be curtailed. ಬೆಂಗಳೂರಿನಲ್ಲಿರುವವರು ಟೆಂಡರು ಮಾಡುವವರು ಇರುವ rate ಗಿಂತ ಜಾಸ್ತಿ ಹಾಕಿ, ನನಗೆ 4,000 ರೂಪಾಯಿಗೆ ಸಿಗುವಂತಹ machine ಅನ್ನು ಇವರು 15,000 ರೂಪಾಯಿ ಸರ್ಕಾರದ ಲೆಕ್ಕಕ್ಕೆ ಕೊಟ್ಟರೆ, ಸಬ್ಸಿಡಿ ಪೂರ್ತಿ ಅವನಿಗೇ ಹೋಗುತ್ತದೆ ಅಷ್ಟೆ. ಸಬ್ಸಿಡಿ ಅವನಿಗೆ ಹೋಗುತ್ತದೆಯೇ ಹೊರತು, ರೈತರಿಗೆ ಸಿಗುವುದಿಲ್ಲ. ಎಲ್ಲೋ ಒಂದು ಕಡೆ ಅದಕ್ಕೆ break ಹಾಕುವಂತಹ ಪ್ರಯತ್ನ ಮಾಡಬೇಕು ಎನ್ನುವ ಮಾತನ್ನು ಹೇಳುತ್ತಾ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿರುವ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡೆರಿಕ್ ಎಂ.ಬಿ. ಫುಲ್ಲಿನ್‌ಫಾ (ನಾಮ ನಿರ್ದೇಶಿತ ಸದಸ್ಯರು): Respected Deputy Speaker, On behalf of the Anglo Indian Communty which I represent in the Legislative Assembly and on behalf of...

(ಗೊಂದಲ)

ಶ್ರೀ ಎನ್. ಸಂಪಂಗಿ: ವಿಶ್ವ ಕನ್ನಡ ಸಮ್ಮೇಳನಕ್ಕೆ ನಾವು ಬೆಳಗಾಂಗೆ ಹೋಗಬೇಕೋ ಬೇಡವೋ? ಕನ್ನಡ ಮಾತನಾಡಿಸಿ.

ಶ್ರೀ ನೆ.ಲ. ನರೇಂದ್ರ ಬಾಬು: ವಿಶ್ವ ಕನ್ನಡ ಸಮ್ಮೇಳನ ಮಾಡುತ್ತಿದ್ದೇವೆ ನೀವು ಬೆಂಗಳೂರಿನಲ್ಲೇ ಹುಟ್ಟಿದ್ದೀರಿ, ಬೆಳೆದಿದ್ದೀರಿ ಕನ್ನಡ ಮಾತನಾಡುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಎನ್. ಸಂಪಂಗಿ: ಕನ್ನಡ ಮಾತನಾಡುವುದಕ್ಕೆ ಬರದೇ ಹೋದರೆ ಬರೆದು ಕೊಡಿ.

(ಗೊಂದಲ)

ಉಪಾಧ್ಯಕ್ಷರು: ಡೆರಿಕ್ ನೀವು ಕನ್ನಡ ಮಾತನಾಡುತ್ತೀರಿ. ಕನ್ನಡದಲ್ಲಿ ಪ್ರಯತ್ನ ಮಾಡಿ.

ಶ್ರೀ ಎನ್. ಸಂಪಂಗಿ: ನಾವು ಬಿಡುವುದಿಲ್ಲ.

ಶ್ರೀ ನೆ.ಲ. ನರೇಂದ್ರ ಬಾಬು: ನಿಮಗೆ ಗೊತ್ತಿಲ್ಲ ಎಂದರೆ ನಾವು ಹೇಳಿ ಕೊಡುತ್ತೇವೆ.

ಶ್ರೀ ಡೆರಿಕ್ ಎಂ.ಬಿ. ಫುಲ್ಲಿನ್‌ಫಾ: Sir, give me a chance please. ಸನ್ಮಾನ್ಯ ಅಧ್ಯಕ್ಷರೇ, I wish to congratulate, appreciate and thank our Chief Minister for presenting yet an another wonderful budget of Karnataka.

ಶ್ರೀ ಎನ್. ಸಂಪಂಗಿ: ಕನ್ನಡ ಬರುವುದಿಲ್ಲ ಎಂದರೆ ಏಕೆ ಇರಬೇಕು? ವಿಶ್ವ ಕನ್ನಡ ಸಮ್ಮೇಳನಕ್ಕೆ ನಾವೀಗ ಬೆಳಗಾಂಗೆ ಹೋಗಬೇಕು.

(ಗೊಂದಲ)

ಶ್ರೀ ನೆ.ಲ. ನರೇಂದ್ರ ಬಾಬು: ಕಾವೇರಿ ನೀರು ಕುಡಿಯುತ್ತೀರಾ...

ಶ್ರೀ ಡೆರಿಕ್ ಎಂ.ಬಿ. ಫುಲ್ಲಿನ್‌ಫಾ: Particularly for the allocation of Rs. 50 crores for the Christian Community.

ಶ್ರೀ ಎನ್. ಸಂಪಂಗಿ: ಕನ್ನಡ ಚೆನ್ನಾಗಿ ಬರುತ್ತದೆ. ಅವರಿಗೆ ಮರದಿಂದ ಮರಕ್ಕೆ ಹಾರುವುದಕ್ಕೂ ಚೆನ್ನಾಗಿ ಗೊತ್ತಿದೆ. ದಯವಿಟ್ಟು ಕನ್ನಡದಲ್ಲಿ ಮಾತನಾಡಿ.

ವಿಶ್ವ ಕನ್ನಡ ಸಮ್ಮೇಳನ ಕೇವಲ ಮೂರೇ ದಿವಸ ಇದೆ. ಇವೊತ್ತು ದಯವಿಟ್ಟು ಕನ್ನಡದಲ್ಲಿ ಮಾತನಾಡಿ. ಎಷ್ಟು ಬರುತ್ತೋ ಅಷ್ಟು ಮಾತನಾಡಿ.

ಉಪಾಧ್ಯಕ್ಷರು: ಕನ್ನಡದಲ್ಲಿ ಪ್ರಯತ್ನ ಮಾಡಿ. ಇಂಗ್ಲೀಷ್ ಬರಲಿ, ಕನ್ನಡದಲ್ಲೇ ಪ್ರಯತ್ನ ಮಾಡಿ.

ಶ್ರೀ ನೆ.ಲ. ನರೇಂದ್ರ ಬಾಬು: ಇನ್ನೊಬ್ಬರ ಹತ್ತಿರ translate ಮಾಡಿಸಿ.

ಉಪಾಧ್ಯಕ್ಷರ: ಕನ್ನಡದಲ್ಲಿಯೇ ಆರಂಭ ಮಾಡಿ.

ಶ್ರೀ ನೆ.ಲ. ನರೇಂದ್ರ ಬಾಬು: ಪಕ್ಕದಲ್ಲೇ ಮಾನ್ಯ ಆಶೋಕ್‌ರವರು ಇದ್ದಾರೆ ಅವರಿಗೆ translation ಮಾಡುವುದಕ್ಕೆ ಹೇಳಿ. ಕನ್ನಡದಲ್ಲಿ ಮಾತನಾಡಿ.

(ಗೊಂದಲ)

ಶ್ರೀ ಎನ್. ಸಂಪಂಗಿ: ಮಂತ್ರಿಗಳು translate ಮಾಡಲಿ.

ಶ್ರೀ ನೆ.ಲ. ನರೇಂದ್ರ ಬಾಬು: ಅವರೇನು ಮಾತನಾಡುತ್ತಾರೆ? ಅದನ್ನು translate ಮಾಡಬೇಕಾಗುತ್ತದೆ, ದಯವಿಟ್ಟು ಕನ್ನಡದಲ್ಲಿ ಮಾತನಾಡಿ.

ಉಪಾಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ, ಅವರು ಮಾತನಾಡುತ್ತಾರೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: 50 ಕೋಟಿ ಕೊಟ್ಟಿದ್ದಾರೆ, ಧನ್ಯವಾದ ಮುಖ್ಯಮಂತ್ರಿಗಳಿಗೆ.

(ಗೊಂದಲ)

ಉಪಾಧ್ಯಕ್ಷರು: ಡೆರಿಕ್ ನೀವು ನಮ್ಮ ಹತ್ತಿರ ಪರಸ್ಪರ ಕನ್ನಡದಲ್ಲಿ ಮಾತನಾಡುವಾಗ ಒಳ್ಳೆಯ ಕನ್ನಡ ಮಾತನಾಡುತ್ತೀರಿ. ನಮಗೆ ವಿಶ್ವಾಸ ಇದೆ, ಪ್ರಯತ್ನ ಮಾಡಿ.

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ಸಂಪಂಗಿಯವರೇ, ದಯವಿಟ್ಟು ಕುಳಿತುಕೊಳ್ಳಿ.

Sri Derrich M.B. Fullinfaw: Kindly bear with me for 2 minutes please. Sir, I wish to congratulate, appreciate and thank our Chief Minister for allocating Rs. 50 crores for the development of the Christian Community in Karnataka. This is a very significant and historical

development. For the first time in Karnataka, for the first time in the country an amount of Rs. 50 crore has been sanctioned for the welfare of the Christian community.

(ಈ ಹಂತದಲ್ಲಿ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

Sri Derrich M.B. Fullinfaw: I, on behalf of the Christian community I welcome this gesture of the Chief Minister and I strongly feel that our Central Government should follow the footsteps of our Chief Minister of Karnataka and allocate a separate fund for the welfare of the Christian community in our country.

ಶ್ರೀ ಎನ್. ಸಂಪಂಗಿ: ಮಾನ್ಯ ಅಧ್ಯಕ್ಷರೆ, ಅವರಿಗೆ ಕನ್ನಡ ಬರುತ್ತದೆ...

ಅಧ್ಯಕ್ಷರು: ಅವರು ಮಾತನಾಡಲಿ, ಅವರು ಮಾತನಾಡುವುದಕ್ಕೆ ನೀವು ಏಕೆ ಅಡ್ಡಿ ಮಾಡುತ್ತೀರಿ. ತಾವು please ಕುಳಿತುಕೊಳ್ಳಿ.

Sri Derrich M.B. Fullinfaw: 80 to 90% of the Christian Community belongs to the lower and middle income group and have been hardly benefited from the Karnataka Minority Development Corporation since its inception.

(ಗೊಂದಲ)

ಅಧ್ಯಕ್ಷರು: ಇಲ್ಲಿ ಒತ್ತಡ ಮಾಡುವುದಕ್ಕೆ ಆಗುವುದಿಲ್ಲ. No no we cannot force. ಕನ್ನಡದ ಮೇಲೆ ಎಲ್ಲರಿಗೂ ಅಭಿಮಾನ ಇದೆ.

ಶ್ರೀ ಎನ್. ಸಂಪಂಗಿ: ವಿಶ್ವ ಕನ್ನಡ ಸಮ್ಮೇಳನಕ್ಕೆ ಬರುವುದು ಬೇಡವೇ?

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳೆ ಆಹ್ವಾನ ಮಾಡಿದ್ದಾರೆ, ಅದರಿಂದ ಹೋಗಬೇಕು.

Sri Derrick M.B. Fullinfaw: With the allocation of Rs. 50 crore exclusively for the Christian community, the Chief Minister has ensured social justice for the Christian community. Besides the gesture of the Chief Minister has

sent out a very strong, good and positive and message to the Christian community in Karnataka.

ಶ್ರೀ ಎನ್. ಸಂಪಂಗಿ: ಅಧ್ಯಕ್ಷರೆ ....

(ಗೊಂದಲ)

ಅಧ್ಯಕ್ಷರು: ಅವರು ತಮ್ಮ ಅಭಿಪ್ರಾಯ ಹೇಳಲಿ.

ಶ್ರೀ ಡೆರಿಕ್ ಎಂ.ಬಿ. ಫುಲ್ಲಿನ್‌ಫಾ: We have been ignored by all the Governments in thepast.

ಶ್ರೀ ಎನ್. ಸಂಪಂಗಿ: ಅಧ್ಯಕ್ಷರೆ, ಅವರು ಕನ್ನಡದಲ್ಲಿ ಮಾತನಾಡಲು ಹೇಳಿ. ಅವರಿಗೆ ಕನ್ನಡ ಬರುತ್ತದೆ.

(ಗೊಂದಲ)

ಅಧ್ಯಕ್ಷರು: ನೀವು ಹಾಗೆ ಹೇಳಲಿಕ್ಕೆ ಬರುವುದಿಲ್ಲ. ಮುಗಿಸಿ. He has got every right to say.

Sri Derrick M.B. Fullinfaw: We don't want crocodile tears.

(ಗೊಂದಲ)

ಅಧ್ಯಕ್ಷರು: ಅವರ ಅಭಿಪ್ರಾಯ ಹೇಳಲಿ. ನೀವು ಮಾತನಾಡುವಾಗ ನಿಮ್ಮ ಅಭಿಪ್ರಾಯ ಹೇಳಿ.

(ಗೊಂದಲ)

ಶ್ರೀ ಡೆರಿಕ್ ಎಂ.ಬಿ. ಫುಲ್ಲಿನಾಫಾ: [x x x x x x x x x x x x]

ಶ್ರೀ ಕೆ.ಜಿ. ಜಾರ್ಜ್: [x x x x x x x x x x x x]

(ಗೊಂದಲ)

ಅಧ್ಯಕ್ಷರು: ಇದು ದಾಖಲೆಗೆ ಹೋಗಬಾರದು. No. that should not go to the records.

Sri Derrick M.B. Fullinfaw: When the Churches were attacked where were you Mr. George? I was the first man to condemn those attacks. Where were you Mr. George?

(XXX ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ)

(ಗೊಂಬಲ)

ಅಧ್ಯಕ್ಷರು: ನೀವು ಏನು ಮಾತನಾಡುತ್ತೀರೋ ಮಾತನಾಡಿ. ಅದು ಏನೂ ದಾಖಲೆಗೆ ಹೋಗುವುದಿಲ್ಲ ನೀವು ಮಾತನಾಡುವುದು ಯಾವುದು ದಾಖಲೆಗೆ ಹೋಗುವುದಿಲ್ಲ. ಅದು ಏನು ಮಾತನಾಡುತ್ತೀರೋ ಮಾತನಾಡಿ.

ಅಧ್ಯಕ್ಷರು: ಯಾವುದನ್ನೂ ದಾಖಲೆಗೆ ತೆಗೆದುಕೊಳ್ಳಬೇಡಿ. ಯಾವುದೂ ದಾಖಲೆಗೆ ತೆಗೆದುಕೊಳ್ಳಬೇಡಿ. ಜಾರ್ಜ್ ಅವರೇ ನೀವು ಕುಳಿತುಕೊಳ್ಳಿ, ನೀವು ಕುಳಿತುಕೊಳ್ಳದೇ ಇದ್ದರೇ, ನಾನು ಚರ್ಚೆಯನ್ನು ಮುಕ್ತಾಯ ಮಾಡುತ್ತೇನೆ.

XXX ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ದಾಖಲಿಸಿರುವುದಿಲ್ಲ

ಶ್ರೀ ಡೆರಿಕ್ ಎಂ.ಬಿ. ಫುಲ್ಲಿನ್‌ಫಾ: We don't want crocodile tears Mr. George. You are a ex–Minister, what have you done for the welfare of the Christian community, Come out with the facts.

ಅಧ್ಯಕ್ಷರು: ನಾನು ಚರ್ಚೆಯನ್ನು ಮುಕ್ತಾಯ ಮಾಡುತ್ತೇನೆ. ಚಾರ್ಜ್ ಅವರೇ, ನೀವು ಕುಳಿತುಕೊಳ್ಳದೇ ಹೋದರೆ ನಾನು ಚರ್ಚೆಯನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಕೆ.ಜೆ. ಜಾರ್ಜ್: ಕ್ರಿಶ್ಚಿಯನ್ ಕಮ್ಯುನಿಟಿ ಬಗ್ಗೆ ಮಾತನಾಡಲು ಇವರಿಗೆ ಹಕ್ಕಿಲ್ಲ. ಇವರು ಬೇರೆ ವಿಚಾರ ಮಾತನಾಡಲಿ.

(ಗೊಂದಲ)

ಅಧ್ಯಕ್ಷರು: ಅವರ ಹಕ್ಕನ್ನು ಅವರು ಹೇಳಲಿ. Please

(ಗೊಂದಲ)

ಶ್ರೀ ಡೆರಿಕ್ ಎಂ.ಬಿ. ಫುಲ್ಲಿನ್‌ಫಾ: Sir, I have got every right to speak, I am a Christian. You also speak. I am not stopping you.

ಶ್ರಿ ನೆಹರು ಓಲೇಕಾರ್: ಮಾನ್ಯ ಅಧ್ಯಕ್ಷರೆ ಅವರು ಯಾವ ಭಾಷೆಯಲ್ಲಾದರೂ ಮಾತನಾಡುವ ಹಕ್ಕಿದೆ....

(ಗೊಂದಲ)

ಅಧ್ಯಕ್ಷರು: ನೆಹರು ಓಲೇಕಾರ್ ಕುಳಿತುಕೊಳ್ಳಿ. ಡೆರಿಕ್ ಅವರೇ ಬೇಗ ಮುಗಿಸಿ.

(XXX ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ)

(ಗೊಂದಲ)

ಶ್ರೀ ಡೆರಿಕ್ ಎಂ.ಬಿ. ಫುಲ್ಲಿನ್‌ಫಾ: I am strongly appealing to the Chief Minister that proper and effective measures and self employment training schemes should be introduced.

ಶ್ರೀ ನೆ.ಲ. ನರೇಂದ್ರ ಬಾಬು: ವಿಶ್ವ ಕನ್ನಡ ಸಮ್ಮೇಳನ ಇದ್ದೂ ಅವಮಾನ ಮಾಡುತ್ತಿದ್ದೀರಿ ಶಾಸಕರೇ.

(ಗೊಂದಲ)

Sri Derrick M.B. Fullinfaw: I take this opportunity and appeal to our hon'ble Chief Minister to provide a multipurpose community hall for the Anglo Indian community and the Anglo Indian Community is the only community which does not own a community hall in Bangalore City. Without this the community is put into severe hardship for conducting functions, marriages and other functions. So my appeal to the Chief Minister is to provide land and a sum of Rs.1.00 crore, so that we can build a community hall and it will be a multipurpose community hall, where the children of the Anglo Indian Community will be provided self employment training and other courses in order to improve their welfare.

ಅಧ್ಯಕ್ಷರು: ಆಯಿತಾ, ಮುಗಿಸಿ, ಮಗಿಸಿ.

Sri Derrick M.B. Fullinfaw: With regard to the attack on the churches, I want to tell one thing to all our Hon'ble Members here; when the churches were attack, I was the only Christian leader to immediately condemn those attacks. I even described as a black service.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ಈ ರೀತಿ ಮಾತನಾಡುವುದು ಸರಿ ಇಲ್ಲ ಅಧ್ಯಕ್ಷರೇ, ಅವರು ಮಾತನಾಡಿರಬಹುದು.

ಶ್ರೀ ಆರ್. ರೋಶನ್ ಬೇಗ್: ನಾವೆಲ್ಲಾ ಮನೆಯಲ್ಲಿ ಮಲಗಿದ್ದೇವಾ? ಸೋಮಶೇಖರ್ ವರದಿಯ ಮೇಲೆ ಮಾತನಾಡಬೇಡಿ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ. Please conclude.

(ಗೊಂದಲ)

Sri K.J. George: He joined with BJP people, standing with the people who have attacked the Chruches.

ಶ್ರೀ ದಿನೇಶ್ ಗುಂಡೂರಾವ್: ಅವರು ಈ ರೀತಿ ಮಾತನಾಡುವುದು ಸರಿಯಲ್ಲ.

(ಗೊಂದಲ)

Sri Derrick M.B. Fullinfaw: Mr. Mahendra Kumar. Todary he is sitting with the JDS. He is in the JDS. He is not in the BJP.

ಶ್ರೀ ಸುರೇಶ್ ಗೌಡ: ಮಾನ್ಯ ಅಧ್ಯಕ್ಷರೆ....

(ಗೊಂದಲ)

ಅಧ್ಯಕ್ಷರು: ಸುರೇಶ್ ಗೌಡರೇ ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

Mr. Speaker: Mr. Derrick look at this side, don't look that side, look at me and finish.

Sri Derrick M.B. Fullinfaw: That man has apologized and he has accepted the responsibility. Today he has gone to the JDS party. It's shame. Where is the justice? Where is the pseudo secularism? Where is the secularism? The Congress party is loosing vote bank of minorities. You have betrayed the minorities in the State and the Country. They have no moral right to speak. I

know how to look after minorities. We know better. Learn from our Chief Minister.

ಶ್ರೀ ಆರ್. ರೋಷನ್ ಬೇಗ್: You learn from your Chief Minister. ಯಾರಿಗೆ ಹೇಳುತ್ತಿದ್ದೀರಿ. ಬಜೆಟ್ ಮೇಲೆ ಮಾತನಾಡಿ.

(ಗೊಂದಲ)

ಅಧ್ಯಕ್ಷರು: ತಾವು ಮುಗಿಸಿ.

ಶ್ರೀ ಎನ್. ಸಂಪಂಗಿ: ಅವರಿಗೆ ಕನ್ನಡ ಮಾತನಾಡಲು ಕಲಿಸಿ.

ಅಧ್ಯಕ್ಷರು: ಅವರು ಮುಗಿಸಲಿ, ಮುಗಿಸಿ. Please conclude.

Sri Derrick M.B. Fullinfaw: Mr. George, I don't want crocodile tears. I want to appeal to our Hon'ble Chief Minister to withdraw the cases which have been registered against the Christians during this unfortunate period.

(ಗೊಂದಲ)

Sri Derrick M.B. Fullinfaw: The Home Minister has fully agreed and he said as early as possible the cases will be withdrawn against the Christian community.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ಬಜೆಟ್ ಮೇಲೆ ಚರ್ಚೆ ಮಾಡಲಿ. ಜಸ್ಟೀಸ್ ಸೋಮಶೇಖರ್ report ಮೇಲೆ ಚರ್ಚೆ ಮಾಡುತ್ತಿಲ್ಲ ಇಲ್ಲಿ. ವಿಷಯಾಂತರ ಯಾರು ಮಾಡುತ್ತಿರುವುದು. ನಾವು ಮಾಡುತ್ತಿಲ್ಲ. ಬಜೆಟ್ ಬಗ್ಗೆ ಮಾತನಾಡಿ.

(ಗೊಂದಲ)

Sri Derrick M.B. Fullinfaw: Hon'ble Chief Minister has presented the beautiful Budget, looking after every section of the people of our State. And once again I congratulate him and I wish him to present even better Budget in the coming year. I also made a request for a Community hall, I hope the Chief Minister will consider my

request favourably, and I thank you respected Speaker for giving me an opportunity. Thank you Sir,

Sri R. Roshan Baig: ಬಜೆಟ್ ಮೇಲೆ ಮಾತನಾಡಿ. you learn from Chief Minister.

ಅಧ್ಯಕ್ಷರು: ಶ್ರೀ ವೆಂಕಟರಾವ್ ನಾಡಗೌಡರನ್ನು ಕರೆದಿದ್ದೇನೆ. 10 ನಿಮಿಷದಲ್ಲಿ ಮುಗಿಸಬೇಕು. ನಿಮ್ಮ ಪಕ್ಷದಿಂದ 7 ಗಂಟೆ ತೆಗೆದುಕೊಂಡಿದ್ದೀರಿ.

ಶ್ರೀ ವೆಂಕಟರಾವ್ ನಾಡಗೌಡ: ನೀವು ಮಾತನಾಡಿ ಎಂದರೆ ಮಾತನಾಡುತ್ತೇನೆ, ಬೇಡ ಎಂದರೆ ಬಿಟ್ಟು ಬಿಡುತ್ತೇನೆ. ನನಗೆ ಅರ್ಧ ಗಂಟೆ ಕಾಲಾವಕಾಶ ಕೊಡಬೇಕು.

ಅಧ್ಯಕ್ಷರು: ಅರ್ಧ ಗಂಟೆ ಆಗುವುದಿಲ್ಲ. 10 ನಿಮಿಷದಲ್ಲಿ ಮುಗಿಸಬೇಕು ಅಷ್ಟೆ.

ಶ್ರೀ ವೆಂಕಟರಾವ್ ನಾಡಗೌಡ: 10 ನಿಮಿಷ ಎಂದರೆ ಅಧ್ಯಕ್ಷರು ಎನ್ನುವುದರಲ್ಲಿ ಹೋಗಿ ಬಿಡುತ್ತದೆ. ಒಂದು half an hour ಆದರೂ ಕೊಡಬೇಕು.

ಅಧ್ಯಕ್ಷರು: ಆಗುವುದಿಲ್ಲ. 10 ನಿಮಿಷದಲ್ಲಿ ಮುಗಿಸಬೇಕು.

ಶ್ರೀ ವೆಂಕಟರಾವ್ ನಾಡಗೌಡ: ಕೊಡಬೇಕು ಸಾರ್, ಹಾಗೆಂದರೆ ಹೇಗೆ? ನಾನು ವಿಪ್ ಆಗಿದ್ದೇನೆ ಒಂದು 15–20 ನಿಮಿಷ ಆದರೂ ಕೊಡಿ. ಅಷ್ಟು ಕೊಡಲಿಲ್ಲ ಎಂದರೆ ಹೇಗೆ?

ಅಧ್ಯಕ್ಷರು: ವಿರೋಧ ಪಕ್ಷದ ನಾಯಕರದು ಸೇರಿಸಿ ಈ ಕಡೆಯಿಂದ 7 ಗಂಟೆ ತೆಗೆದುಕೊಂಡಿದ್ದೀರಿ.

ಡಾ: ಶರಣ್ ಪ್ರಕಾಶ್ ರುದ್ರಪ್ಪ ಪಾಟೀಲ್: .... When is the reply?

Mr. Speaker: Tomorrow.

ಡಾ: ಶರಣ್ ಪ್ರಕಾಶ್ ರುದ್ರಪ್ಪ ಪಾಟೀಲ್: How can it be tommorrow? 18ನೇ ತಾರೀಖಿನವರೆಗೆ ಇದೆ.

Mr. Speaker: That is the decision of the ...

ಡಾ: ಶರಣ್ ಪ್ರಕಾಶ್ ರುದ್ರಪ್ಪ ಪಾಟೀಲ್: 18ನೇ ತಾರೀಖಿನವರೆಗೂ ಚರ್ಚೆ ಇದೆ. 18ನೇ ತಾರೀಖಿನವರೆಗೂ time ಇದೆ. ನೀವು ಆರಾಮಾವಾಗಿ reply ಮಾಡಿ. We are here to co-operate. ನಾಳೆ reply ಎಂದರೆ ಹೇಗೆ?

ಅಧ್ಯಕ್ಷರು: ನೀವು ಮಾತನಾಡಿ., ಡಾಕ್ಟರ್‌ರವರೇ ತಾವು ಕುಳಿತುಕೊಳ್ಳಿ.

ಡಾ: ಶರಣ್ ಪ್ರಕಾಶ್ ರುದ್ರಪ್ಪ ಪಾಟೀಲ್: ಈ ತಿಂಗಳ ಕೊನೆಯವರೆಗೆ vote on account ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ನಿಮಗೆ ಕಾನೂನು ಗೊತ್ತಿದೆ.

ಅಧ್ಯಕ್ಷರು: BACಯಲ್ಲಿ ತೀರ್ಮಾನ ಆಗಿದೆ ಮತ್ತು ಏಕೆ ಚರ್ಚೆ ಮಾಡುತ್ತೀರಿ.

ಡಾ: ಶರಣ್ ಪ್ರಕಾಶ್ ರುದ್ರಪ್ಪ ಪಾಟೀಲ್: BACಯಲ್ಲಿ ತೀರ್ಮಾನ ಆಗಿದೆ, we cannot be victim to the BAC decision.

ಅಧ್ಯಕ್ಷರು: ಈ ರೀತಿ ಮಾಡುತ್ತಿದ್ದರೆ ಚರ್ಚೆಯನ್ನು ಮುಕ್ತಾಯ ಮಾಡುತ್ತೇನೆ.

ಡಾ: ಶರಣ್ ಪ್ರಕಾಶ್ ರುದ್ರಪ್ಪ ಪಾಟೀಲ್: We cannot bea victim to the BAC decision.

(ಗೊಂದಲ)

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು): ... ಗಂಟೆಗಟ್ಟಲೆ, 4 ಗಂಟೆ 5 ಗಂಟೆ ಮಾತನಾಡಿದರೆ ಹೇಗೆ House conduct ಮಾಡಬೇಕು.

(ಗೊಂದಲ)

ಡಾ: ಶರಣ್ ಪ್ರಕಾಶ್ ರುದ್ರಪ್ಪ ಪಾಟೀಲ್: ದಿನವೂ ಹಳ್ಳಿಯಲ್ಲಿ ಜನರ ಜೊತೆ fieldನಲ್ಲಿ ಕೆಲಸ ಮಾಡುವವರು ನಾವು, ನಮ್ಮ opinion ಕೇಳಿ. We are the actual people who know what is happening in the villages.

ಅಧ್ಯಕ್ಷರು: ನಿಮಗೆ ಅವಕಾಶ ಕೊಟ್ಟಾಗ ಮಾತನಾಡಿ. ನಾನು ನಾಡಗೌಡರನ್ನು ಕರೆದಿದ್ದೇನೆ.

ಶ್ರೀ ವೆಂಕಟರಾವ್ ನಾಡಗೌಡ: ಅಧ್ಯಕ್ಷರೇ, ಇವೊತ್ತು ಈ ಬಜೆಟ್ ಬಗ್ಗೆ ಇಡೀ ದೇಶದ ಜನ ಕರ್ನಾಟಕವನ್ನು ನೋಡುತ್ತಿದ್ದಾರೆ. ಮೊಟ್ಟಮೊದಲ ಬಾರಿಗೆ...

ಶ್ರೀ ಬಿ.ಎನ್. ಬಚ್ಚೇಗೌಡ: ಸನ್ಮಾನ್ಯ ಅಧ್ಯಕ್ಷರೇ...

ಶ್ರೀ ವೆಂಕಟರಾವ್ ನಾಡಗೌಡ: ನಮಗೆ ಬರುವುದು 5 ನಿಮಿಷ ಅದರಲ್ಲಿ ನೀವೇ ಮಾತನಾಡಿದರೆ ನಾವು...

ಶ್ರೀ ಬಿ.ಎನ್. ಬಚ್ಚೇಗೌಡ: ನಾನು ಮಾತನಾಡುವುದಿಲ್ಲ. ಮಾನ್ಯ ದಿನೇಶ್ ಗುಂಡು ರಾವ್ ಅವರು, ಮಾನ್ಯ ಶ್ರೀರಾಮುಲು ಅವರೇ, ತಮ್ಮನ್ನು ಮತ್ತು ಮಾನ್ಯ ಜನಾರ್ಧನ ರೆಡ್ಡಿ ಅವರನ್ನು ಸದನಕ್ಕೆ ಬಂದೇ ಇಲ್ಲ ಎಂದು ಹೇಳಿದ್ದರು.

ಅಧ್ಯಕ್ಷರು: ಅದನ್ನು ಏಕೆ raise ಮಾಡುತ್ತಿದ್ದೀರಿ?

ಶ್ರೀ ಬಿ.ಎನ್. ಬಚ್ಚೇಗೌಡ: ಅವರು ಸದನಕ್ಕೆ ಬಂದಿದ್ದಾರೆ ಎಂದು ಹೇಳುತ್ತಿದ್ದೇನೆ. Houseಗೆ ಬಂದೇ ಇಲ್ಲ ಎಂದು ಹೇಳಿದ್ದರು. Houseಗೆ ಬರುತ್ತಿದ್ದಾರೆ, ಭಾಗವಹಿಸುತ್ತಿದ್ದಾರೆ ಎನ್ನುವುದನ್ನು ನಾನು ಹೇಳಿದೆ ಅಷ್ಟೆ.

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಬಚ್ಚೇಗೌಡರೇ, ನೀವು ಅವರ ಪರವಾಗಿ ವಕಾಲತ್ತು ಏಕೆ ವಹಿಸುತ್ತಿದ್ದೀರಾ? ಒಳ್ಳೆಯದು ದಿವಸ ಬರಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ: ಅವರು ಬರುತ್ತಿಲ್ಲವೆಂದು ತಾವು ಹೇಳಿದ್ದೀರಿ. ಅವರು continuous ಆಗಿ ಬರುತ್ತಿದ್ದಾರೆ ಎಂಬುದನ್ನು ಜ್ಞಾಪಿಸಿದೆ ಅಷ್ಟೆ.

ಶ್ರೀ ದಿನೇಶ್ ಗುಂಡೂರಾವ್: ಪ್ರತಿ ದಿನ ಬರಬೇಕು ಅದೇ ನಮ್ಮ ಬಯಕೆ. ಅವರು ಈ ಸದನದ ಸದಸ್ಯರು.

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ನಮ್ಮ ಬಳ್ಳಾರಿ ಜಿಲ್ಲೆಯ ಕೂಡ್ಲಗಿ ತಾಲ್ಲೂಕಿನಲ್ಲಿ ಸುಮಾರು 150 ಗುಡಿಸಲು ಸುಟ್ಟು ಹೋಗಿದೆ. ಬೆಳಿಗ್ಗೆ ಅಲ್ಲಿ attend ಆಗಿ ಮತ್ತೇ ಪುನಃ ಇಲ್ಲಿ ಬರುತ್ತಿದ್ದೇನೆ. ಬೇರೆ ಏನು ಇಲ್ಲ.

ಶ್ರೀ ವೆಂಟರಾವ್ ನಾಡಗೌಡ (ಸಿಂಧನೂರು): ಅಧ್ಯಕ್ಷರೇ, ಇವುತ್ತೋ ಮೊದಲ ಬಾರಿಗೆ ಇತಿಹಾಸದಲ್ಲಿ ಒಂದು ನೂತನ ಪ್ರಯತ್ನ ಇಲ್ಲಿ ನಡೆದಿದೆ. ಈ

ದೇಶದಲ್ಲಿ ಶೇಕಡ 70ರಷ್ಟು ರೈತರಿದ್ದಾರೆ. ರೈತರ ಪರವಾಗಿ ಪ್ರತ್ಯೇಕ ಬಜೆಟ್ ಅನ್ನು ಮಾಡಬೇಕು ಎನ್ನುವಂತಹ ಕೂಗು, ಪ್ರತ್ಯೇಕವಾದ ಬಜೆಟ್ ಅನ್ನು ಮಂಡನೆ ಮಾಡಬೇಕು ಎಂಬ ಒತ್ತಾಯವನ್ನು ಈ ದೇಶದಲ್ಲಿ ಹಲವು ರೈತ ನಾಯಕರ ಜೊತೆ ನಾನು ಸಹ ಕೇಂದ್ರ ಸರ್ಕಾರಕ್ಕೆ ಹೋಗಿ ಹೇಳಿದ್ದೇನೆ. ಆದರೆ ಕಾನೂನಿನಡಿಯಲ್ಲಿ ಅದಕ್ಕೆ ಅವಕಾಶ ಇಲ್ಲ, ಅದನ್ನು ಮಾಡುವುದಕ್ಕೆ ಆಗುವುದಿಲ್ಲ ಎನ್ನತಕ್ಕಂತಹ ಮಾತನ್ನು ಕೇಂದ್ರದ ಕೃಷಿ ಸಚಿವರಾದ ಶ್ರೀ ಶರದ್ ಪವಾರ್‌ರವರು ಹೇಳಿದ್ದರು. ಆದರೆ ಇಲ್ಲಿ ಒಂದು ಪ್ರಯತ್ನವನ್ನು ಮಾನ್ಯ ಮುಖ್ಯ ಮಂತ್ರಿಗಳು ಮಾಡಿ, ಇದು ಪ್ರತ್ಯೇಕ ಕೃಷಿ ಬಜೆಟ್ ಅಲ್ಲದೇ ಇದ್ದರೂ ಸಹ ಭಾಗ–1 ಎನ್ನುವ ರೂಪದಲ್ಲಿ ಕೃಷಿ ಮತ್ತು ಅದಕ್ಕೆ ಸಂಬಂಧಪಟ್ಟ ಎಲ್ಲ ಇಲಾಖೆಗಳನ್ನು ಸೇರಿಸಿ ಕೃಷಿಗೆ ಒತ್ತು ಕೊಡುವ ದೃಷ್ಟಿಯಲ್ಲಿ ಒಂದು ಪ್ರಯತ್ನವನ್ನು ಮಾಡಿದ್ದಾರೆ ಅದನ್ನು ನಾನು ಅಭಿನಂದಿಸುತ್ತೇನೆ. ಆದರೆ ನನ್ನ ದೃಷ್ಟಿಯಲ್ಲಿ ಈ ದೇಶದ ರೈತನಿಗೆ ಮೂರನ್ನು ಸರ್ಕಾರ ಕೊಟ್ಟರೆ ಬೇರೇನನ್ನು ರೈತರು ಬಯಸುವುದಿಲ್ಲ.

Assured Water, Quality Current and a Remunerative price ಈ ಮೂರನ್ನು ನೀವು ರೈತರಿಗೆ ಕೊಟ್ಟರೆ ಸಾಕು. ಈ ದೇಶದ ರೈತ ಯಾವ ಸರ್ಕಾರಕ್ಕೂ ಇನ್ನೇನನ್ನೂ ಕೇಳುವುದಿಲ್ಲ. ಇಡೀ ಜಗತ್ತಿಗೆ ಅನ್ನ ಹಾಕುವ ಶಕ್ತಿ ಆತನಿಗೆ ಇದೆ. ಆದರೆ ಈ ಮೂರನ್ನು ಕೊಡುವ ದೃಷ್ಟಿಯಲ್ಲಿ ಇದರಲ್ಲಿ ಎಷ್ಟು ಚಿಂತನೆಯಾಗಿದೆ ಎಂಬುದರ ಬಗ್ಗೆ ಇವತ್ತು ಈ ಸದನದಲ್ಲಿ ಚರ್ಚೆ ಆಗಬೇಕು ಎಂದು ನಾನು ಬಯಸುತ್ತೇನೆ. ಈ ದೇಶದಲ್ಲಿ ಒಂದು ವೇಳೆ price ಮೇಲೆ ಹೋದರೆ, ರೈತ ಬೆಳೆದ ಬೆಳೆ ಬೆಲೆ ಮೇಲೆ ಹೋದರೆ ಅದನ್ನು ಕೆಳಗಡೆ ತರುವುದಕ್ಕೆ ನಮ್ಮಲ್ಲಿ ವ್ಯವಸ್ಥೆಯಿದೆ. Market intervention ಮಾಡುವುದರ ಮೂಲಕ ಬೆಲೆಗಳನ್ನು ಕೆಳಗಡೆ ತರುವುದಕ್ಕೆ ವ್ಯವಸ್ಥೆಯನ್ನು ರೂಪಿಸಿದ್ದೇವೆ. ಒಂದು ವೇಳೆ ರೈತ ಬೆಳೆದ ಬೆಳೆಯ ಬೆಲೆ ಕುಸಿತ ಕಂಡಾಗ, ಅದನ್ನು ಮೇಲಕ್ಕೆ ತರುವುದಕ್ಕೆ ಇವತ್ತಿನವರೆಗೂ ಯಾವುದೇ ಒಂದು ವ್ಯವಸ್ಥೆ ನಮ್ಮಲ್ಲಿಲ್ಲ. 60–65 ವರ್ಷಗಳು ಕಳೆದಿದ್ದರೂ ಕೂಡ ಅಂತಹ ಯಾವುದೇ ಒಂದು ವ್ಯವಸ್ಥೆಯನ್ನು ನಾವು ಇವತ್ತು ಇನ್ನೂ ಮಾಡುವುದಕ್ಕಾಗಿಲ್ಲ. ಹಾಗಾಗಿ ಇವತ್ತು ರೈತ ಸಂಕಷ್ಟಕ್ಕೆ

ಒಳಗಾಗುತ್ತಿದ್ದಾನೆ. ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಮಂಡಿಸುವಾಗ, Agriculture is a state subject ಎಂಬ ಮಾತನ್ನು ಹೇಳಿದ್ದಾರೆ. ಇದು State subject ಆಗಿದ್ದರೂ ಕೂಡ ಬಹಳಷ್ಟು ವಿಷಯಗಳು, Fertilizers, Seed policy, Import and Export Policy, ಆಮೇಲೆ ನಿಮ್ಮ Rate fixation, MSP, Minimum Support Price ಎಂದೇನು ನಾವು ಹೇಳುತ್ತೇವೆಯೋ, ಇವುಗಳನ್ನು ಮಾಡುವುದಕ್ಕೆ ರಾಜ್ಯ ಸರ್ಕಾರಗಳಿಗೆ ಅಧಿಕಾರವಿಲ್ಲ. ಕೇಂದ್ರ ಸರ್ಕಾರಗಳೇ ಇವುಗಳನ್ನು ಮಾಡುತ್ತಾರೆ. ಈ import and export policyಗಳೂ ಕೂಡ ತದ್ವಿರುದ್ಧವಾದಾಗ, ರೈತ ಬೆಳೆದ ಬೆಳೆಯ ಬೆಲೆಗಳ ಮೇಲೆ ದುಷ್ಪರಿಣಾಮವಾಗುವುದನ್ನು ನಾವು ಗಮನಿಸಿದ್ದೇವೆ. ಹಾಗಾಗಿ ಇದು State subject ಆಗಿದ್ದರೂ ಕೂಡ, ಇದನ್ನು Concurrent List ನಲ್ಲಿ ಹಾಕುವುದಕ್ಕೆ ಪ್ರಯತ್ನ ಮಾಡಬೇಕು. ಇವತ್ತು Health and Education ರಾಜ್ಯ ಮತ್ತು ಕೇಂದ್ರ ಸರ್ಕಾರಗಳೆರಡಕ್ಕೂ ಕೂಡ ಅನ್ವಯಿಸುತ್ತಿರುವುದರಿಂದ ಹೆಚ್ಚು ಹಣ ಹರಿದು ಬರುತ್ತಿದೆ. ಆ sectorಗಳಲ್ಲಿ ಹೆಚ್ಚು ಹಣ ಹರಿದು ಬರುತ್ತಿದೆ. ಅದೂ ಕೂಡ ಆ ರೀತಿ ಆಗಬೇಕು ಎನ್ನುವುದರ ಬಗ್ಗೆ ಚಿಂತನೆ ಮಾಡಬೇಕು. ಈಗ MSP ಬಗ್ಗೆ ನಾವೇನಾದರೂ ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳ ಹತ್ತಿರ ಹೋದರೆ, ಇದನ್ನು fix ಮಾಡುವುದು ಕೇಂದ್ರ ಸರ್ಕಾರ, Fertilizer policy ಬಗ್ಗೆ ಮಾತನಾಡುವುದಕ್ಕೆ ಹೋದರೆ, ಅದು ಕೇಂದ್ರ ಸರ್ಕಾರಕ್ಕೆ ಬರುತ್ತದೆ, Import and Export policy ಬಗ್ಗೆ ಮಾತನಾಡುವುದಕ್ಕೆ ಹೋದರೆ, ಅದು ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದೆ ಎಂದು ಬೊಟ್ಟು ಮಾಡಿ ತೋರಿಸಲೇಬೇಕಾದ ಅನಿವಾರ್ಯತೆ ಇದೆ. ಹಾಗಾಗಿ ಇವತ್ತು ಇಂತಹ ಅನಿವಾರ್ಯತೆ ಇದ್ದಾಗ, ಈ ಬಜೆಟ್ಟಿನಲ್ಲಿ ತಾವು remunerative price ಬಗ್ಗೆ ಹೆಚ್ಚು ಒತ್ತು ಕೊಡಬೇಕಾಗಿತ್ತು. MSP is not a remunerative price. ಅದು ಗೊತ್ತಿಲ್ಲವೆಂದಲ್ಲ, ಅದು ಎಲ್ಲರಿಗೂ ಗೊತ್ತಿದೆ. Minimum Support Price ಅನ್ನು ಮಾಡುವುದಕ್ಕೆ ಕೇಂದ್ರ ಸರ್ಕಾರದಲ್ಲಿ ಏನು CACP ಇದೆ, ಅದರ ಅಧ್ಯಕ್ಷರನ್ನು ನಾನು ಹೋಗಿ ಭೇಟಿಯಾಗಿದ್ದೆ. ಹಿಂದೆ ಇದ್ದಂತಹ ಅಧ್ಯಕ್ಷರನ್ನು ನಾನು ಭೇಟಿಯಾದಾಗ,

ಅವರು ಹೇಳಿದರು. ಸರ್ಕಾರ ನಮಗೆ remunerative price fix ಮಾಡುವುದಕ್ಕೆ ಹೇಳಿದರೆ, we will try to do it. ನಮಗೆ minimum support price ಅನ್ನು fix ಮಾಡಲಿಕ್ಕೆ ಹೇಳಿದ್ದರು, ಅದನ್ನು ಮಾತ್ರವೇ ನಾವು ಮಾಡಿದ್ದೇವೆ ಎಂದರು. ಇದರ ಬಗ್ಗೆ ಬಹಳಷ್ಟು ಚರ್ಚೆಯಾಗಿದೆ. ಡಾ : ಬಿಸಿಲಯ್ಯನವರ ನೇತೃತ್ವದ ಸಮಿತಿ ಇಲ್ಲಿ ನೇಮಕವಾಗಿ, remunerative price ಹೇಗೆ fix ಮಾಡಬೇಕು ಎನ್ನುವುದರ ಬಗ್ಗೆ ಕೂಡ ಇಲ್ಲಿ ಚರ್ಚೆಯಾಗಿದೆ. ಚರ್ಚೆಯಾದಾಗ ನಾವು ಹೇಳಿದ್ದೇವೆ. ನಾವು ಅವರಿಗೆ ಕೇಳಿದೆವು. MSPಗೆ what are the measures? ನೀವು ಹೇಗೆ ಅದರ conclusion ಗೆ ಬರುತ್ತೀರಿ ಎಂದು ಕೇಳಿದೆವು. ಇವತ್ತು ಈ remunerative price ಬಗ್ಗೆ ತಾವು ಯೋಚನೆ ಮಾಡಬೇಕು. ಕೇಂದ್ರ ಸರ್ಕಾರದ 'ಡಿ' ವರ್ಗದ ನೌಕರದಾರನಿಗೆ ಏನು ನೀವು ನೌಕರಿ ಕೊಡುತ್ತೀರೋ, ಅದನ್ನೂ ಕೂಡ ನೀವು ಇಲ್ಲಿ base ಆಗಿ ಇಟ್ಟುಕೊಂಡಿಲ್ಲ. ಒಬ್ಬ ರೈತ ಕುಟುಂಬದವನಿಗೆ ಅಷ್ಟೂ ಕೂಡ ದೊರೆಯುತ್ತಿಲ್ಲ. ಅದನ್ನು ಈ remunerative price or MSP fix ಮಾಡುವಾಗ ನೀವು consider ಮಾಡುವುದಿಲ್ಲ. ಒಬ್ಬ ರೈತ 'land owner' ಹೌದು, ಅವನು 'Manager' ಹೌದು, ಅವನು 'ಕೃಷಿಕ' ಕೂಡ ಹೌದು. ಅವನು ಕೂಲಿಯನ್ನೂ ಕೂಡ ಮಾಡುತ್ತಾನೆ. He works as a Manager, he works as a labour also. ಒಂದು ತಿಂಗಳಿನಲ್ಲಿ ಆತ ಎಷ್ಟು ದಿನ Manager postನಲ್ಲಿ ಕೆಲಸ ಮಾಡುತ್ತಾನೆ ಎಂದು ನೋಡಬೇಕು. Manager ಎಂದರೆ ಆತ ಹಣಕಾಸಿನ ವ್ಯವಸ್ಥೆ ಮಾಡಿಕೊಳ್ಳುವುದು ಇರಬಹುದು, Labour ಅನ್ನು arrange ಮಾಡುವುದು ಇರಬಹುದು, Seeds arrange ಮಾಡುವುದು ಇರಬಹುದು, Fertilizers arrange ಮಾಡುವುದು ಇರಬಹುದು, ಇದು Manager ಕೆಲಸ. ಆತ ಹೊಲದಲ್ಲಿ ಹೋಗಿ ಏನೊಂದು ಕೆಲಸ ಮಾಡುತ್ತಾನೋ, ಅದು labour ಕೆಲಸ. ಅದರ ಬಗ್ಗೆ ಚರ್ಚೆ ಮಾಡಿ, ಒಂದು remunerative price ಗೆ ಬರಬೇಕಾಗುತ್ತದೆ. ಅಲ್ಲಿ 'ಡಿ' classನ ನೌಕರನಿಗೆ ಸಿಡಿಯುವ ಸಂಬಳ ಕೂಡ ಇವತ್ತು ನಮಗೆ ಸಿಡಿಯುವುದಿಲ್ಲ. ಹಾಗಾಗಿ ನಮಗೆ remunerative price

ಕೊಡದೇ ಇದ್ದರೆ, ನಾವು ಹೇಗೆ ಬದುಕುವುದಕ್ಕಾಗುತ್ತದೆ? ನೀವು ಏನು ಬೇಕಾದರೂ ಹೆಚ್ಚು ಮಾಡಿಕೊಳ್ಳಿ. ನೀವು ಈ ಕಡೆಗೆ, ಈಗ ಹತ್ತು ವರ್ಷದ ಹಿಂದೆ ಏನು ಬೆಲೆ ಇತ್ತು, ಇವತ್ತು ಅದಕ್ಕೆ ನಾವು ಉಪಯೋಗಿಸತಕ್ಕ fertilizer ಬೆಲೆ ಎಷ್ಟು ಏರಿದೆ? labour cost ಎಷ್ಟು ಜಾಸ್ತಿಯಾಗಿದೆ? Pesticides cost ಎಷ್ಟು ಜಾಸ್ತಿಯಾಗಿದೆ? ಅಷ್ಟು ನನ್ನ ಬೆಲೆ ಏರಬೇಕು. ನೀವು ಎಷ್ಟು ಬೇಕಾದರೂ ಇಲ್ಲಿ ಏರಿಸಿ. ಆ ಕಡೆ ನಾನು ಬೆಳೆದ ಬೆಳೆಗೆ ಬೆಲೆ ಅಷ್ಟು ಏರಿದಾಗ ಮಾತ್ರ ನಮಗೆ remunerative price ಸಿಗಲಿಕ್ಕೆ ಸಾಧ್ಯವಾಗುತ್ತದೆ. ಆ ದೃಷ್ಟಿಕೋನದಲ್ಲಿ ಆಲೋಚನೆ ಮಾಡಬೇಕಾಗುತ್ತದೆ. ಇವತ್ತು ದೇಶದಲ್ಲಿ ಏನಾಗುತ್ತಿದೆ ಎಂದರೆ, ನಮಗೆ ಅಂದರೆ ರೈತನಿಗೆ ಏನು ತಿಳಿಯುತ್ತದೋ, ಅದನ್ನು ನಮ್ಮ ಪಾಡಿಗೆ ನಾವು ಬೆಳೆಯುತ್ತಿದ್ದೇವೆ. Industryಯವರಿಗೆ ಏನು ತಿಳಿಯುತ್ತದೋ, ಅವರ ಪಾಡಿಗೆ ಅವರು Industry ನಡೆಸುತ್ತಿದ್ದಾರೆ. ನಮ್ಮ research ನವರು ಅವರಿಗೆ ಏನು research ತಿಳಿಯುತ್ತದೋ, ಆ research ಅನ್ನು ಮಾಡುತ್ತಿದ್ದಾರೆ. Need based research ಆಗುತ್ತಿಲ್ಲ. Need based research ಆಗದಿರುವುದರಿಂದ, ಆ research ಇವತ್ತು ಅಲ್ಲಿಯೇ ಉಳಿದಿದೆ. It has not transferred to the land. ಇವತ್ತು ಆ technology land ಗೆ transfer ಆಗುತ್ತಿಲ್ಲ. ಹಾಗಾಗಿ ಇದರ ಬಗ್ಗೆ ತಾವು ಆಲೋಚನೆಯನ್ನು ಮಾಡಬೇಕಾಗುತ್ತದೆ. ಇವತ್ತು ನಮಗೆ ಏನು ಬೇಕು ಎನ್ನುವುದರ ಬಗ್ಗೆ ಎಲ್ಲೂ ಕೂಡ ಚರ್ಚೆಯಾಗಿಲ್ಲ. ಆಗಲೇ ಮಾತನಾಡುವಾಗ ನನ್ನ ಮಿತ್ರರು ಹೇಳಿದರು. We should come out with an index. ಈ ರೈತ ಏನನ್ನು ಬೆಳೆಯಬೇಕೆಂದು ಯಾವ ಸರ್ಕಾರವೂ ನಮಗೆ ಹೇಳುತ್ತಿಲ್ಲ. ಏಕೆ ಹೇಳುತ್ತಿಲ್ಲ? ಎಂದರೆ ಅವರು ಹೇಳಿದ್ದನ್ನು ನಾವು ಬೆಳೆಯುವುದಿಲ್ಲ. ಏಕೆ ಬೆಳೆಯುವುದಿಲ್ಲ ಎನ್ನುವುದಕ್ಕೆ ಇಲ್ಲಿ cropping pattern ಇಲ್ಲ. Remunerative price ಇದ್ದಾಗ. Cropping pattern ಯಾವಾಗ ಬರುತ್ತದೆ. ರಾಗಿ ಬೆಳೆಯುವವನಿಗೆ ರಾಗಿಗೆ 500 ರೂ.ಗಳು ಸಿಗುತ್ತದೆ, ಕಬ್ಬು ಬೆಳೆಯುವ ರೈತನಿಗೆ 5000 ರೂ.ಗಳು ಸಿಗುತ್ತದೆ ಎಂದರೆ, ಯಾರೂ ಕೂಡ ರಾಗಿ ಬೆಳೆಯಿರು ಬೆಳೆ ಎಂದರೆ ಬೆಳೆಯುವುದಿಲ್ಲ. ಏನು ಬೆಳೆದರೂ ಕೂಡ

ನಿನಗೆ ಅಷ್ಟೇ ಬೆಲೆ ಸಿಗುತ್ತದೆ, ಅಷ್ಟೇ ಲಾಭದಾಯಕವಾಗಿ ನಿನಗೆ ಲಾಭ ಸಿಗುತ್ತದೆ ಎನ್ನುವ ಒಂದು remunerative price fix ಆದಾಗ ಒಂದು cropping pattern ಅನ್ನು fix ಮಾಡಲಿಕ್ಕೆ ಸಾಧ್ಯವಾಗುತ್ತದೆ. ಆ cropping pattern fix ಮಾಡಿದಾಗ ನೀವು ಏನು ಬೆಳೆಯಿರಿ ಎನ್ನುತ್ತೀರೋ, ಅದನ್ನು ಬೆಳೆಯಲು ಸಾಧ್ಯವಾಗುತ್ತದೆ. ಈ ವರ್ಷ ಈ ಬೆಳೆಯನ್ನು 5% ಜಾಸ್ತಿ ಮಾಡಿ, Oil seeds ಅನ್ನು 10% ಜಾಸ್ತಿ ಮಾಡಿ, ಗೋಧಿಯನ್ನು ಕಡಿಮೆ ಮಾಡಿ, Rice ಅನ್ನು ಜಾಸ್ತಿ ಮಾಡಿ ಎಂದು ನೀವೊಂದು index ಅನ್ನು ಕೊಟ್ಟರೆ, ಆ index ಅನ್ನು ಆ ರೈತ follow ಮಾಡುತ್ತಾನೆ. ಎಲ್ಲಿಯವರೆಗೆ remunerative price ಬರುವುದಿಲ್ಲವೋ, cropping pattern ಸಹ ಬರುವುದಿಲ್ಲ. Cropping pattern ಬರಲಿಲ್ಲವೆಂದರೆ ನೀವು seed ಏನು ಅವಶ್ಯಕತೆ ಇದೆ, ಆ seed ಅನ್ನು ನಾವ್ಯಾರೂ ಉತ್ಪಾದನೆ ಮಾಡುವುದಕ್ಕಾಗುವುದಿಲ್ಲ. ಮುಂದಿನ ವರ್ಷ ರೈತ ಏನನ್ನು ಜಾಸ್ತಿ ಮಾಡುತ್ತಾನೋ ಎಂದು ನಮಗೆ ಗೊತ್ತಿಲ್ಲ. ಇವತ್ತು ಯಾವುದಾದರೊಂದು crop ನ ಬೆಲೆ ಜಾಸ್ತಿಯಾದರೆ, ಮುಂದಿನ ವರ್ಷ ಎಲ್ಲಾ ರೈತರೂ ಸಹ ಅದನ್ನೇ ಬೆಳೆಯುತ್ತಾರೆ. Seeds shortage ಆಗುತ್ತದೆ. ಎಷ್ಟು ಪ್ರಮಾಣದಲ್ಲಿ seeds ಅನ್ನು ನಾವು ಉತ್ಪಾದನೆ ಮಾಡಬೇಕು ಎನ್ನುವುದೂ ಕೂಡ ಗೊತ್ತಾಗುವುದಿಲ್ಲ. ಹಾಗಾಗಿ ಒಂದು index ಅನ್ನು ತಂದು, ನೀವು cropping pattern ಅನ್ನು fix ಮಾಡಿ, ಅದಕ್ಕೆ ನೀವು remunerative price ಅನ್ನು fix ಮಾಡಿದಾಗ ಮಾತ್ರ ಈ ಒಂದು circle ಅನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ, ತೊಂದರೆಯಾಗುತ್ತದೆ. Seeds shortage ಆಗುತ್ತದೆ, ರೈತರಿಗೆ seed ಕೊಡಬೇಕು. ಎಲ್ಲಿಂದ ಕೊಡುತ್ತೀರಿ? ಒಂದು ತಿಂಗಳಿನಲ್ಲಿ ಅಥವಾ ಎರಡು ತಿಂಗಳಿನಲ್ಲಿ seeds ಉತ್ಪಾದನೆ ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ತಮ್ಮದೇ ಅದ plan ಮಾಡಬೇಕು. ಈ ವರ್ಷ ಜಾಸ್ತಿ demand ಬಂದಿದೆ ಎಂದು ಯಾವುದಾದರೂ seeds production ಮಾಡಿ ಇಟ್ಟರೆ, ಮುಂದಿನ ಸಾರಿ ಅದಕ್ಕೆ demand ಬರದಿದ್ದರೆ, ಆ seed ಹಾಳಾಗಿ ಹೋಗುತ್ತದೆ. ಆ ಬೀಜ ಉತ್ಪಾದನೆ ಮಾಡಿರುವ ಕಂಪೆನಿಗಳು ಅಥವಾ ಸಂಸ್ಥೆಗಳು ಹಾಳಾಗಿ ಹೋಗುತ್ತವೆ. ಇದರ ಬಗ್ಗೆ ನೀವು

ಆಲೋಚನೆಯನ್ನು ಮಾಡಬೇಕು. ಈಗ ಕೃಷಿ ಬಗ್ಗೆ ಈಗಾಗಲೇ ಬಹಳಷ್ಟು ಜನ ಮಾತನಾಡಿ, Value addition ಬಗ್ಗೆ ಒತ್ತು ಕೊಡಬೇಕು ಎಂದರು. Value addition ಗೆ ಒತ್ತು ಕೊಡುವಾಗ ನೀವು ಸ್ಥಳೀಯವಾಗಿರುವ industryಗಳಿಗೆ ಅವಕಾಶಗಳನ್ನು ಮಾಡಿಕೊಡಬೇಕು. ಅಲ್ಲಿ ಏನು ಬೆಳೆಯುತ್ತಾರೋ, ಅದಕ್ಕೆ ಬೇಕಾದ agro based industryಗಳು ಅಲ್ಲಿಗೆ ಬಂದಾಗ ಮಾತ್ರ value addition ಅನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ನೀವು ಎಲ್ಲೋ ಬೆಂಗಳೂರಿನಲ್ಲಿ factory ಹಾಕಿ, ಎಲ್ಲೋ ಇನ್ನೊಂದು ಕಡೆ ನಾವು ಬೆಳೆಯುತ್ತಿದ್ದೇವೆ ಎಂದರೆ, ಅಲ್ಲಿಂದ ಇಲ್ಲಿಗೆ transportation ಮಾಡಿ, ನೀವು process ಮಾಡುವುದರಲ್ಲಿ meaning ಇರುವುದಿಲ್ಲ. ನೀವು ಅಲ್ಲೇ nearby available ಇದ್ದರೆ, ನೀವು food processing factoryಗಳಿಗೆ ಅವಕಾಶಗಳನ್ನು ಮಾಡಿ ಕೊಟ್ಟರೆ, ನೀವು value addition ಮಾಡಿದಾಗ, ಇನ್ನೂ ಹೆಚ್ಚು ರೈತನಿಗೆ ಲಾಭದಾಯಕವಾದ ಬೆಲೆಗಳನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ. ನೀವು ಈ ವಿಷಯಗಳ ಮೇಲೆ ಇಲ್ಲಿ ಒತ್ತು ಕೊಟ್ಟಿಲ್ಲ ಎನ್ನುವುದು ನಮ್ಮ ಅಭಿಪ್ರಾಯವಾಗಿದೆ. ಇಲ್ಲಿ remunerative price ಬಗ್ಗೆ ಈ Agriculture Budget ಎಂದು ನಾವೇನು ಹೇಳುತ್ತಿದ್ದೆವೋ, ಇದರಲ್ಲಿ ಎಲ್ಲೂ ಕೂಡ ಒತ್ತು ಕೊಟ್ಟು ಮಾತನಾಡಿಲ್ಲ. ಆಮೇಲೆ, Insurance ಬಗ್ಗೆ ಹೇಳುವುದಾದರೆ, Insurance ಅನ್ನು ಈಗ ತಾಲ್ಲೂಕು ಮಟ್ಟದಿಂದ ನಾವು ಹೋಬಳಿ ಮಟ್ಟಕ್ಕೆ ತಂದಿದ್ದೇವೆ. ಕೊನೆಯ ಪಕ್ಷ ಈಗ ಅಲ್ಲಿ, ನಾವು ಕೇಳಿದೆವು, ಏಕಪ್ಪ, ಒಬ್ಬನ ಬೆಳೆ ಹಾನಿಯಾಯಿತು ಎಂದರೆ ಅವನಿಗೆ ಕೊಡುವುದಿಲ್ಲ ಎಂದರೆ, ಅಲ್ಲಿ crop survey ಎಂದು ಮಾಡುತ್ತಾರೆ. Crop survey ಮಾಡಿ ಎಷ್ಟು percent loss ಆಗಿದೆಯೋ, ಅಷ್ಟು percent ಮಾತ್ರ ಬೆಳೆ ಪರಿಹಾರ ಕೊಡುತ್ತಾರೆ. Individual insurance ಮಾಡುವುದಕ್ಕೆ ಸಾಧ್ಯವಿದೆಯೇ? ಎಂದು ನೋಡಿದರೆ, cost of insurance ಜಾಸ್ತಿಯಾಗುತ್ತದೆ. ಅದನ್ನು ಮಾಡಲಿಕ್ಕೆ ಬರುವುದಿಲ್ಲ. Cost of insurance ಸರ್ಕಾರ ಕೊಟ್ಟರೆ ಅನುಕೂಲವಾಗುತ್ತದೆ. ನೀವು ಅದೂ ಇದೂ ಕೊಡುವುದರ ಬದಲು, at least ರೈತ ಬೆಳೆಯುವ ಬೆಳೆಗೆ insurance cost ಅನ್ನಾದರೂ

ಸರ್ಕಾರ ಕಟ್ಟುವುದಕ್ಕೆ ಮುಂದೆ ಬಂದರೆ ರೈತರಿಗೆ ಅನುಕೂಲವಾಗುತ್ತದೆ. ಇವತ್ತು ನನಗನಿಸುತ್ತದೆ, ನಾವೇನು ಯೋಚನೆ ಮಾಡುತ್ತಿದ್ದೇವೆ, ಅದು ಸರಿಯಿಲ್ಲ. ರೈತ ಸ್ವಾವಲಂಬಿಯಾಗಿ ಬದುಕುವ ಯೋಜನೆಗಳನ್ನು ನಾವು ಇಲ್ಲಿ ರೂಪುಗೊಳಿಸುತ್ತಿಲ್ಲ. ಅವನು ಸ್ವಾವಲಂಬನೆಯಿಂದ ಬದುಕತಕ್ಕಂಥ ಯೋಜನೆಗಳನ್ನು ನಾವು ರೂಪಿಸುತ್ತಿಲ್ಲ. ನಮ್ಮ cheap popularity ಗೆ ಬೇಕಾಗಿರತಕ್ಕಂಥ ಯೋಜನೆಗಳನ್ನು ನಾವು ರೂಪಿಸುವುದಕ್ಕೆ ಹೋಗಿ, ಇವತ್ತು ಈ ಮಟ್ಟಕ್ಕೆ ತಂದಿದ್ದೇವೆ. Every Bank is flooded with the money, ನಮಗೆ ಎಲ್ಲರೂ ಯಾರು ಬೇಕೋ ಅವರು ಫೋನ್ ಮಾಡುತ್ತಾರೆ. ಸಾರ್, ನಮ್ಮದೊಂದು ಯೋಜನೆ ಇದೆ, ನಿಮಗೆ ಸಾಲ ಬೇಕೆ? ಎಂದು MLAಗಳಿಗೆ ಫೋನ್ ಮಾಡುತ್ತಾರೆ. ಆದರೆ ನಾನೊಬ್ಬ ರೈತ ಎಂದರೆ, ಯಾವ ಬ್ಯಾಂಕ್ ಕೂಡ ಸಾಲ ಕೊಡುವುದಕ್ಕೆ ಮುಂದೆ ಬರುವುದಿಲ್ಲ, ಏಕೆ? ರೈತನಿಗೆ re–paying capacity ಇಲ್ಲ. ಅದಕ್ಕಾಗಿ ಇವತ್ತು ಬ್ಯಾಂಕ್‌ಗಳು ಸಾಲ ಕೊಡುವುದಕ್ಕೆ ಮುಂದೆ ಬರುತ್ತಿಲ್ಲ. ಅವನ re–paying capacity ಯನ್ನು ನಾವು build ಮಾಡತಕ್ಕಂಥ ಯೋಜನೆಗಳನ್ನು ನಾವು ರೂಪಿಸಬೇಕಾಗಿದೆ. ಆ ಕೆಲಸ ಇವತ್ತು ಆಗಬೇಕಾಗಿದೆ. ಇದರಲ್ಲಿ ನಾವು ಅದನ್ನು expect ಮಾಡುತ್ತೇವೆ.

ಈ ಬಜೆಟ್‌ನಲ್ಲಿ ಅದಕ್ಕೆ ಅವಕಾಶಗಳನ್ನು ಕಲ್ಪಿಸಿಕೊಡಬೇಕು, ರೈತ ತನ್ನ ಕಾಲ ಮೇಲೆ ತಾನು ಸ್ವಾವಲಂಬನೆಯಿಂದ ಬದುಕುವುದಕ್ಕೆ ಸಾಧ್ಯವಿರುವ ಯೋಜನೆಗಳನ್ನು ನಾವು ಮಾಡಬೇಕು, ಅದಕ್ಕೆ ಒತ್ತು ಕೊಡಬೇಕಾದ ಅವಶ್ಯಕತೆ ಇದೆ ಎಂದು ನಾನು ಭಾವಿಸುತ್ತೇನೆ. ಇಲ್ಲದೆ ಇದ್ದರೆ, 1% ಬಡ್ಡಿ ದರದಲ್ಲಿ ಸಹಕಾರಿ ಸಂಸ್ಥೆಗಳಿಂದ ರೈತನಿಗೆ ಸಾಲ ಕೊಡುತ್ತೇವೆಂದು ನೀವು ಹೇಳಿದಿರಿ, ನಾನು ಒಬ್ಬ ಸಹಕಾರಿಯಾಗಿ 15 ವರ್ಷ ಕೆಲಸ ಮಾಡಿದ್ದೇನೆ, ಎಷ್ಟು ಪರ್ಸೆಂಟಿಗೆ ನಾವು ಸಾಲವನ್ನು ಕೊಡುತ್ತೇವೆ ಸ್ವಾಮಿ? I tmay be about 10 to 15%. ನಮ್ಮ ಕ್ರೆಡಿಟ್ ಉಪಯೋಗ ಮಾಡುವ ರೈತರು 10–15%, ಇನ್ನು 85% ರೈತರು ನಮ್ಮ ಕ್ರೆಡಿಟ್ ವ್ಯವಸ್ಥೆಯಿಂದ ಹೊರಗಿದ್ದಾರೆ, ಅವರನ್ನು ಇದುವರೆವಿಗೂ ಒಳಗೆ ತರುವುದಕ್ಕೆ ಆಗಲೇ ಇಲ್ಲ. ಅದರ ಬಗ್ಗೆ ನಾವು ಒತ್ತು

ಕೊಡಬೇಕಲ್ಲ? ಇನ್ನು 85% ರೈತರಿಗೆ ಕ್ರೆಡಿಟ್ ಕೊಡುವುದಕ್ಕೆ ಹೇಗೆ ಸಾಧ್ಯ, ಎಲ್ಲಿಂದ ಕೊಡುತ್ತೇವೆ? ಹೋದ ವರ್ಷ 1%ಗೆ ಆಗಿ ಹೋಗಿದೆ, ನೀವು Co-operative Societyಯಿಂದ 3% ಪ್ರಕಟಿಸಿದಿರಿ, ಕೇಂದ್ರ ಸರ್ಕಾರ, ಯಾವ ರೈತ prompt payment ನಿಗದಿತ ಸಮಯದೊಳಗೆ ಮಾಡುತ್ತಾನೆ, ಅಂಥವನಿಗೆ 2% reimburse ಮಾಡಿದ್ದಾರೆ, ಅದು 1% ಆಯಿತು. ಇವತ್ತು ಅದನ್ನು 1%ಗೆ ಇಳಿಸಿದಿರಿ, ಕೇಂದ್ರ ಸರ್ಕಾರ 2% reimburse ಮಾಡಿದರೆ, ಅವನ ಅಕೌಂಟಿಗೆ ಹೋದರೆ ನೀವು ಅವನ ಅಕೌಂಟಿನಲ್ಲೇ ಬಿಡುತ್ತಿರೋ ಅಥವಾ ನಿಮ್ಮ ಅಕೌಂಟಿಗೆ ತೆಗೆದುಕೊಳ್ಳುತ್ತಿರೋ ಹಾಗೇನಾದರು ಬಿಟ್ಟರೆ ಅವನಿಗೆ 1% bonus ಹೆಚ್ಚಿಗೆ ಬರುತ್ತದೆ. 0% ಬಡ್ಡಿಯಲ್ಲ, ಅವನ ಅಕೌಂಟ್‌ನಲ್ಲಿ 1% ಕೇಂದ್ರ ಸರ್ಕಾರ ಕೊಟ್ಟದ್ದು ಉಳಿಯಬೇಕಾಗುತ್ತದೆ. 1% ನೀವು ಕೊಟ್ಟರೆ, 2% reimburse ಆದರೆ, 1% ನೀವು ಮುರಿದುಕೊಂಡರೂ ಇನ್ನು 1% ಅವನ ಅಕೌಂಟ್‌ಗೆ ಹೆಚ್ಚಿಗೆ ಜಮಾ ಆಗಬೇಕು. ಅಂದರೆ, Co-operative societyಯಲ್ಲಿ ಇವತ್ತು ಯಾರಾದರೂ ರೈತ ಸಾಲ ತೆಗೆದುಕೊಂಡರೆ ಅವನಿಗೆ ವಾಪಸ್ಸು 1% ಕೊಡುತ್ತೇವೆಂದ ಹಾಗೆ ಆಗುತ್ತದೆ. ಅದನ್ನು ತಾವು clarify ಮಾಡಬೇಕು. ನೇರವಾಗಿ ಅವನ ಅಕೌಂಟಿಗೆ ಜಮಾ ಆಗುತ್ತದೆಯೋ ಅಥವಾ ನಿಮ್ಮ ಸೊಸೈಟಿಗೆ ಜಮಾ ಆಗುತ್ತದೆಯೋ ನೀವು ಅಲ್ಲೇ 2% ಇಟ್ಟುಕೊಳ್ಳುತ್ತಿರೋ ಕೇಂದ್ರ ಸರ್ಕಾರದಿಂದ ಬಂದಿರುವುದನ್ನು ಬಿಡುತ್ತೀರೋ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಬೇಕೆಂದು ನಾನು ವಿನಂತಿ ಮಾಡುತ್ತೇನೆ. ಅದರ ಜೊತೆಗೆ ನಾನು ಆಗಲೇ ಹೇಳಿದಂತೆ ಇಂಡೆಕ್ಸ್ ತರುವುದಕ್ಕೆ ಸಾಧ್ಯವಿದ್ದರೆ, ದಯವಿಟ್ಟು, ಈ ದೇಶಕ್ಕೆ ಏನು ಅವಶ್ಯಕತೆ ಇದೆ, ಅದಕ್ಕೊಂದು ಇಂಡೆಕ್ಸ್ ತರುವುದಕ್ಕೆ ಸಾಧ್ಯವಿದ್ದರೆ, ಅದರ ಬಗ್ಗೆ ಚಿಂತನೆ ಮಾಡಿ. ಇಲ್ಲಿ ಇಷ್ಟು ಬೆಳೆಯನ್ನು ಬೆಳೆಯಿರಿ, ಇಷ್ಟು ಹೆಚ್ಚು ಮಾಡಿ, ಇಷ್ಟು ಕಡಿಮೆ ಮಾಡಿ ಎಂದು ಹೇಳಿದರೆ, ಅದಕ್ಕೆ ಅನುಗುಣವಾಗಿ ನಾವು ಗುಣಮಟ್ಟದ ಬೀಜಗಳನ್ನು ಮಾಡಿಕೊಳ್ಳುವುದಕ್ಕೆ ವ್ಯವಸ್ಥೆಯಾಗುತ್ತದೆನ್ನುವ ಮಾತನ್ನು ಹೇಳುತ್ತೇನೆ. ಅದೇ ರೀತಿ ಇವತ್ತು ನೀರಾವರಿ ಬಗ್ಗೆ ಹೇಳುವುದಾದರೆ, ನಾನು ಆಗಲೇ ಹೇಳಿದೆ assured water ಎಂದು ಹೇಳಿದೆ, ಆ ರೈತನ ಭೂಮಿಗೆ ಹನಿ ನೀರು ಕೊಟ್ಟರೆ

ಮಾತ್ರ ಅವನು ಬೆಳೆ ಬೆಳೆಯಬಲ್ಲೇ ಎನ್ನುವ ವಿಶ್ವಾಸವಿರುತ್ತದೆ. ನೀರಿದ್ದರೆ ಮಾತ್ರ ನಾವು ಬೆಳೆ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಅದರ ಜೊತೆಗೆ ತಾವು ಜೈವಿಕ ಇಂಧನದ ಬಗ್ಗೆ ಮಾತನಾಡಿದಿರಿ, ಅದು Jetropa ಇರಬಹುದು, ಬೇರೆಬೇರೆ ಹೊಂಗೆ ಗಿಡಗಳಿರಬಹುದು, ಇವುಗಳಿಂದ ನಾವು ಏನು ಜೈವಿಕ ಇಂಧನಕ್ಕೆ ಮಾರ್ಪಾಡು ಮಾಡುತ್ತೇವೆ, ಇದುವರೆವಿಗೂ ಕೂಡ ಎಷ್ಟು ಲಾಭವಾಗುತ್ತದೆಂದು ಖಚಿತವಾಗಿ ಯಾವ ಕಂಪನಿಯವರು ಹೇಳುತ್ತಿಲ್ಲ. ಬೇರೆ ಎಲ್ಲೆಲ್ಲಿಂದಲೋ ಬರುತ್ತಾರೆ they are exploiting the farmers. ನಾನು KOFನ ಅಧ್ಯಕ್ಷನಾದಾಗ, ಈ ಬಗ್ಗೆ ಕೃಷಿ ಸಚಿವರೊಂದಿಗೆ ನಮ್ಮ ಫ್ಯಾಕ್ಟರಿಯನ್ನು ಇದಕ್ಕೆ ಕನ್ವರ್ಟ್ ಮಾಡುವುದಕ್ಕೆ ಸಾದ್ಯವಿದೆಯೇ ಎಂದು ಬಹಳಷ್ಟು ಚರ್ಚೆ ಮಾಡಿದ್ದೇವೆ. ನಾವು ಹೋಗಿ ನಮ್ಮ ಸೊಸೈಟಿಗಳ ಮೂಲಕ ಹೋಗಿ ರೈತರಿಗೆ ಈ ಬೀಜಗಳನ್ನು ಬೆಳೆಯುವುದಕ್ಕೆ ಕೊಡಬೇಕೆಂದು ಸಹ ಬಹಳಷ್ಟು ಕಂಪನಿಗಳನ್ನು ಕರೆದು ನಮ್ಮ ಅಧಿಕಾರಿಗಳೊಡನೆ ಚರ್ಚೆ ಮಾಡಿ ನೋಡಿದರೆ, ಎಷ್ಟು ಲಾಭ ಬರುತ್ತದೆ, ಎಷ್ಟು yield ಬರುತ್ತದೆ, ಈ ಗಿಡ 1 ಕೆಜಿ ಕೊಡುತ್ತದೆಯೋ 10 ಕೆಜಿ ಕೊಡುತ್ತದೆಯೋ 5 ಕೆಜಿ ಕೊಡುತ್ತದೆಯೋ ಎನ್ನುವುದರ ಬಗ್ಗೆ ಇನ್ನೂ ಸಂಶೋಧನೆ ಹಂತದಲ್ಲಿದೆ, ಅದು ಮುಗಿದ ಮೇಲೆ ಹೇಳುವುದಕ್ಕೆ ಸಾಧ್ಯವೆನ್ನುವ ಮಾತನ್ನಾಡಿದರೆ ವಿನಃ ಇಷ್ಟೇ ಖಚಿತವಾಗಿ ಬರುತ್ತದೆಂದು ಯಾವ ಕಂಪನಿಯವರು ಇದುವರೆವಿಗೂ ನಮ್ಮ ಮುಂದೆ ಹೇಳಿಲ್ಲ. ಈಗ 1 ವರ್ಷದಲ್ಲಿ ಡೆವಲಪ್ ಆಗಿದ್ದರೆ, ಅದು ಖಚಿತವಾಗಿ ಎಷ್ಟು ಇಳುವರಿಯನ್ನು ಕೊಡುತ್ತದೆ, ಅದನ್ನು ಮಾಡುವುದರಿಂದ ರೈತನಿಗೆ ಖಚಿತವಾಗಿ ಎಷ್ಟು ಲಾಭ ಬರುತ್ತದೆನ್ನುವ ಮಾಹಿತಿಯನ್ನು ಕೊಟ್ಟರೆ ನಾವು ಎಣ್ಣೆ ಬೀಜ ಬೆಳೆಗಾರರ ಸಂಘಗಳನ್ನು ಇದಕ್ಕೆ encourage ಮಾಡಿ ಅಲ್ಲಿ ಬೆಳೆದು ನಮ್ಮ ಪ್ಲಾಂಟ್‌ಗಳನ್ನು ಕನ್ವರ್ಟ್ ಮಾಡುವುದಕ್ಕೆ ಪ್ರಯತ್ನ ಮಾಡಬಹುದೆನ್ನುವ ಮಾತನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇನ್ನು ನೀರಾವರಿ ಬಗ್ಗೆ ಹೇಳುವುದಾದರೆ, ತುಂಗಭದ್ರ ನಾಲೆಗಳ ಆಧುನೀಕರಣಕ್ಕೆ ಕಳೆದ ವರ್ಷದಿಂದ ಸುಮಾರು 200-300 ಕೋಟಿ ರೂಪಾಯಿಗಳನ್ನು ಮಾನ್ಯ ಮುಖ್ಯಮಂತ್ರಿಗಳು ಮತ್ತು ನೀರಾವರಿ ಸಚಿವರು ಕೊಟ್ಟು ಉತ್ತಮ ಕೆಲಸಗಳನ್ನು

ಮಾಡಿದ್ದಾರೆ. ನಾವು ನಮ್ಮ ರೈತರ ಪರವಾಗಿ ಮಾನ್ಯ ಮುಖ್ಯಮಂತ್ರಿ ಮತ್ತು ನೀರಾವರಿ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಎಲ್ಲೂ ಮಾಡದಿರುವ ಹೊಸ ಮಾಡೆಲ್‌ಗಳನ್ನು ಮಾಡಿ ಇವತ್ತು ಕಾಲುವೆಗಳ ಆಧುನೀಕರಣದ ಕೆಲಸ ಪ್ರಾರಂಭವಾಗುತ್ತಿದೆ. ಈ ವರ್ಷ ಕೂಡ ಸುಮಾರು 300–400 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗುತ್ತಿದೆ, ಒಂದು ಸಾವಿರ ಕೋಟಿ ಹೆಚ್ಚು ಖಚು ಮಾಡಿದರೆ, ಬಹುತೇಕ ಎಡದಂಡೆ ನಾಲೆಯ ಸಂಪೂರ್ಣ ದುರಸ್ತಿಯಾಗುವುದಕ್ಕೆ ಸಾಧ್ಯವಿದೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ನೀರಾವರಿ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಅದನ್ನು ಕೊಟ್ಟಾಗ ಟೇಲ್ಯಾಂಡ್ ನೀರಾವರಿ ಸಮಸ್ಯೆ ಕಳೆದ 1 ವರ್ಷದಿಂದ 40% ಕಡಿಮೆಯಾಗಿದೆ. ಈಗ ಅದನ್ನು ಪೂರ್ಣ ಮುಗಿಸಿ ಕೊಟ್ಟರೆ, ಬಹುತೇಕ ರಾಯಚೂರಿನವರೆಗೆ ಟೇಲ್ಯಾಂಡ್ ರೈತರ ಸಮಸ್ಯೆ ಏನಿದೆ ಅದನ್ನು ಪರಿಹರಿಸುವುದಕ್ಕೆ ಸಾಧ್ಯವಾಗುತ್ತದೆ, ಅದಕ್ಕೆ ಹೆಚ್ಚು ಒತ್ತು ಕೊಡಬೇಕೆನ್ನುವ ಮನವಿಯನ್ನು ಕೂಡ ಮಾಡುತ್ತೇನೆ. ಈಗಾಗಲೇ ಕೆಲವರು ಮಾತನಾಡುವಾಗ ಹೇಳಿದರು, ಹಿಂದಿನ ಸರ್ಕಾರಗಳು ನೀರಾವರಿಗೆ 40% ಹಣವನ್ನು ಕೊಟ್ಟಿದ್ದರೆ, ಇವತ್ತು ನೀವು ಕೊಟ್ಟಿರುವುದು ಕೇವಲ 18%. ಬಚಾವತ್ ಅವಾರ್ಡ್ ಬೇರೆ ಬಂದಿದೆ, ಅದರ ಲಾಭವನ್ನು ಪಡೆಯಬೇಕಾದ ಅನಿವಾರ್ಯ ಕಾಲಘಟ್ಟದಲ್ಲಿದ್ದೇವೆ. ಹಾಗಾಗಿ ಈಗೇನು ನೀರಾವರಿಗೆ ಹಣವನ್ನು ಕೊಡಲಾಗಿದೆ, ಅದು ಯಾವುದಕ್ಕೂ ಸಾಧ್ಯವಾಗುವುದಿಲ್ಲ. ಕನಿಷ್ಟ ಪಕ್ಷ ಇದನ್ನು 40%ಗೆ ಏರಿಸದೆ ಹೋದರೆ, ಬಚಾವತ್ ಅವಾರ್ಡ್‌ನಲ್ಲಿ ನಾವೇನು ಲಾಭ ಪಡೆಯಬೇಕಾಗಿದೆ, ಅದನ್ನೆಲ್ಲಾ ಮಾಡಿಕೊಳ್ಳಬೇಕಾದರೆ ಈ ಹಣಕಾಸಿನ ವ್ಯವಸ್ಥೆ ಯಾವುದಕ್ಕೂ ಸಾಕಾಗುವುದಿಲ್ಲ, ಮಾನ್ಯ ಮುಖ್ಯಂಂತ್ರಿಗಳು ಹೆಚ್ಚು ಹಣ ಕೊಡುವುದರ ಮೂಲಕ ಏನು ನೀರಾವರಿಯಲ್ಲಿ ಅವಕಾಶ ಸಿಕ್ಕಿದೆ, ಆ ಎಲ್ಲಾ ಅವಕಾಶಗಳನ್ನು ಬಳಸಿಕೊಳ್ಳುವುದಕ್ಕೆ ಹಣವನ್ನು ಕೊಡಬೇಕಾಗತ್ತದೆ. ಹಿಂದೆ ಒಟ್ಟು ಬಜೆಟ್‌ನಲ್ಲಿ 40% ಕೊಟ್ಟಿದ್ದರೆ, ಈಗ it has gone down to 18%. ಹೀಗಾಗಿ ಅದನ್ನು ಹೆಚ್ಚು ಮಾಡುವುದಕ್ಕೆ ಒತ್ತು ಕೊಡಬೇಕೆಂದು ಹೇಳುತ್ತೇನೆ. ಇನ್ನು ಕೃಷಿ ಯಂತ್ರೋಪಕರಣಗಳಿಗೆ ನೂರು ಕೋಟಿ ರೂಪಾಯಿಗಳನ್ನು ಮಾನ್ಯ ಮುಖ್ಯ

ಮಂತ್ರಿಗಳು ಬಜೆಟ್‌ನಲ್ಲಿ ತೋರಿಸಿದ್ದಾರೆ. ಆದರೆ ಕಳೆದ ವರ್ಷ ಟ್ರ್ಯಾಕ್ಟರ್‌ಗಳಿಗೆ ಕೊಡಲಿಲ್ಲ, ಈ ವರ್ಷ ಕೊಡುತ್ತೇವೆಂದು ಇದರಲ್ಲಿ ಪ್ರಕಟಿಸಿದ್ದೀರಿ. ಅಲ್ಲಿ ಕೊಡುವಾಗ ಏನು ಮಾಡುತ್ತಾರೆಂದರೆ, ಹೆಚ್‌ಪಿಗಳನ್ನು ಫಿಕ್ಸ್ ಮಾಡುತ್ತಾರೆ. Only small HP tranctorಗಳಿಗೆ ಮಾತ್ರ ಕೊಡುತ್ತೇವೆ, ದೊಡ್ಡ ದೊಡ್ಡ ಡ್ರ್ಯಾಕ್ಟರ್‌ಗಳಿಗೆ ಕೊಡುವುದಿಲ್ಲವೆನ್ನುವುದನ್ನು ಹಾಕಬಾರದು. ಹಿಂದಿನ ಸಾರಿ ಎಲ್ಲಾ ಟ್ರ್ಯಾಕ್ಟರ್‌ಗಳಿಗೆ ಕೊಟ್ಟಿದ್ದರು, ಅದೇ ರೀತಿ ಈಗಲೂ ಕೊಟ್ಟರೆ ಅನುಕೂಲವಾಗುತ್ತದೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಬಯಸುತ್ತೇನೆ. ಅದೇ ರೀತಿ ಸಾವಯುವ ಕೃಷಿ ಮಿಷನ್ ಬಗ್ಗೆ ಮಾತನಾಡಿದ್ದೀರಿ, ಸಾವಯುವ ಕೃಷಿಗೆ ಬಹಳ ಒತ್ತು ಕೊಡುವುದು ಅನಿವಾರ್ಯವಾಗಿದೆ. ಇವತ್ತು ಹೆಚ್ಚು fertilizers ಹಾಕುವುದರ ಮೂಲಕ ನಮ್ಮ ಭೂಮಿಯ ಗುಣಮಟ್ಟವನ್ನು ಹಾಳು ಮಾಡುತ್ತಿದ್ದೇವೆ, ಅದನ್ನು ಪರಿವರ್ತನೆ ಮಾಡಬೇಕೆನ್ನುವುದಕ್ಕೆ ಹೆಚ್ಚು ಒತ್ತು ಕೊಡುತ್ತಿದ್ದೀರಿ. ಸಾವಯುವ ಕೃಷಿ ಮಿಷನ್‌ಗೆ ಪ್ರತ್ಯೇಕವಾಗಿ ಒಬ್ಬ ಅಧ್ಯಕ್ಷರನ್ನು ನೇಮಿಸಿ, ಅವರು ಅಲ್ಲಿ ಕೆಲಸ ಮಾಡುತ್ತಿದ್ದಾರೆ, ಆದರೆ ಅವರ್‍ಯಾರು ಕೂಡ ಯಾವ ಸ್ಥಳೀಯ ಶಾಸಕರನ್ನು, ಯಾವ ಅಧ್ಯಕ್ಷರನ್ನು, ಯಾವ ಪ್ರತಿನಿಧಿಗಳನ್ನು, ಅಧಿಕಾರಿಗಳನ್ನು ಸಹ ಸಂಪರ್ಕ ಮಾಡುವುದಿಲ್ಲ. They are running a parallel government. ಈ ಹಣವನ್ನು ಯಾರು ತೆಗೆದುಕೊಳ್ಳುತ್ತಾರೆ, ಎಲ್ಲಿ ಖರ್ಚು ಮಾಡುತ್ತಿದ್ದಾರೆ, ಏನು ಮಾಡುತ್ತಿದ್ದಾರೆನ್ನುವುದು ಯಾವ ಪ್ರತಿನಿಧಿಗಳ ಗಮನಕ್ಕೆ ಬರುತ್ತಿಲ್ಲ. ಅವರು ತಮ್ಮದೇ ಆದ ವ್ಯವಸ್ಥೆಯನ್ನು ಮಾಡಿಕೊಂಡು ಹೊರಟಿ ಬಿಟ್ಟಿದ್ದಾರೆ. ಆ ಅಧ್ಯಕ್ಷರನ್ನು ಕೇಳಿದರೆ, ಅಲ್ಲಿ ಆಗಲೇ 1500, 2000, 2500 ಕೊಟ್ಟು ಎಂಪ್ಲಾಯ್‌ಮೆಂಟ್ ಮಾಡಿಕೊಂಡು ಬಿಟ್ಟಿದ್ದಾರೆ. ಅದು ಯಾವುದೋ party employees ಅನ್ನು create ಮಾಡಿಕೊಂಡಂತಾಗ ಬಾರದು. ಈಗ ಈ ಸಾವಯವ ಕೃಷಿಗೆ 200 ಕೋಟಿ ರೂಪಾಯಿಗಳನ್ನು ಮಾಡುತ್ತೇವೆಂದು ಹೇಳಿದ್ದೀರಿ, ಅದಕ್ಕೆ ಒಂದು ವ್ಯವಸ್ಥಿತವಾದ ಲೆಕ್ಕ ಇಡಬೇಕು, ಯಾರು ಖರ್ಚು ಮಾಡುತ್ತಿದ್ದಾರೆ, ಎಲ್ಲಿ ಖರ್ಚು ಮಾಡುತ್ತಿದ್ದಾರೆ, ಅದು ಸದುಪಯೋಗವಾಗುತ್ತಿದೆಯೋ ದುರುಪಯೋಗವಾಗುತ್ತಿದೆಯೋ ಎನ್ನುವುದಕ್ಕೆ ತಾವು ಒತ್ತು ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಆ 200 ಕೋಟಿ

ತೆಗೆದುಕೊಂಡು ಹೋಗಿ ಯಾರು ಬೇಕಾದರೂ ಖರ್ಚು ಮಾಡಬಹುದು. ಯಾರೋ ತೆಗೆದುಕೊಂಡು ಹೋಗಿದರು ಎನ್ನುವಂತಾಗುತ್ತದೆ. ನನಗೆ ಗೊತ್ತಿರುವಂತೆ ಯಾವ ಶಾಸಕರಿಗೂ ಅದು ಗೊತ್ತಿಲ್ಲ, ಅಧಿಕಾರಿಗಳನ್ನು ಕೂಡ ಸಂಪರ್ಕ ಮಾಡುವುದಿಲ್ಲ. ಸಹಾಯಕ ನಿರ್ದೇಶಕರನ್ನು ಕೇಳಿದರೂ ಗೊತ್ತಿಲ್ಲ, ಅವರೇನು ಬಿಲ್ ತರುತ್ತಾರೋ ಅದನ್ನು ಸಹಿ ಮಾಡಿಕೊಡುವುದಷ್ಟೇ ಸಹಾಯಕ ನಿರ್ದೇಶಕರು ಎಂದು ಇಟ್ಟು ಬಿಟ್ಟಿದ್ದಾರೆ. ದಯವಿಟ್ಟು ಇದನ್ನು ಏನಾದರು ಮಾನಿಟರ್ ಮಾಡುವುದಕ್ಕೆ ನೀವು ವ್ಯವಸ್ಥೆ ಮಾಡಬೇಕು, ಏನು ಮಾಡಿದರೂ ಸ್ಥಳೀಯ ಶಾಸಕರ ಗಮನದಲ್ಲಿಡುವ ವ್ಯವಸ್ಥೆಯನ್ನು ಮಾಡಬೇಕು, ಅದು ಯಾವ ಪಕ್ಷದವರಾಗಿದರು ಆಗಿರಬಹುದು, ಅವರಿಗೂ ಗೊತ್ತಿಲ್ಲವೆಂದು ನಾನು ಭಾವಿಸುತ್ತೇನೆ. ಇವತ್ತು ವಿದ್ಯುತ್ ಬಗ್ಗೆ ಹೇಳುವುದಾದರೆ, ನಿರಂತರ ಜ್ಯೋತಿ ತರುತ್ತೇವೆನ್ನುವುದನ್ನು ಹೇಳಿದ್ದಾರೆ.

ನಿರಂತರ ಜ್ಯೋತಿ ತಂದಿರುವುದರಿಂದ ಕೃಷಿಗೆ ಲಾಭವಾಗುವುದಿಲ್ಲ. ನಿರಂತರ ಜ್ಯೋತಿಯಿಂದ ಮನೆಗಳಿಗೆ 24 ಗಂಟೆ ವಿದ್ಯುತ್ ಬರುತ್ತದೆ. 12 ತಾಸು ಕತ್ತಲು 12 ತಾಸು ಬೆಳಕಿನಲ್ಲಿ ಈ ರಾಜ್ಯವನ್ನು ಇಡುತ್ತೀರಿ. 12 ತಾಸಿನಲ್ಲಿ 6 ತಾಸು three phase current 6 ತಾಸು single phase current ಕೊಡುತ್ತೀರಿ. ಆ ರೈತ 6 ತಾಸು single phaseನ್ನು ಕನ್‌ವರ್ಟ್‌ರ್‌ಗಳನ್ನು ಹಾಕಿಕೊಂಡು 12 ತಾಸು ಓಡಿಸಿ ಏನೋ ಉಪಯೋಗ ಮಾಡಿಕೊಳ್ಳುತ್ತಾನೆ. ನೀವು ನಿರಂತರ ಜ್ಯೋತಿ ತಂದು ಪಂಪುಸೆಟ್‌ಗೆ ಸೆಪರೇಟ್ ಲೈನನ್ನು ಮಾಡಿ 6 ತಾಸು ಮಾತ್ರ ವಿದ್ಯುತ್‌ನ್ನು ಕೊಡುತ್ತೀರಿ. 6 ತಾಸಿನಲ್ಲಿ ಅವನಿಗೆ single phase current ಸಿಗುವುದೇ ಇಲ್ಲ. ಪಂಪುಸೆಟ್‌ಗಳು 6 ತಾಸಿನಲ್ಲಿ ಯಾವ ಹೊಲಗಳಿಗೆ ನೀರನ್ನು ಉಪಯೋಗಿಸಲು ಆಗುವುದಿಲ್ಲ. 6 ತಾಸಿನಲ್ಲಿ 60 ಸಲ ಕರೆಂಟ್ ಹೋಗುತ್ತದೆ. ಇದರಿಂದ ಕೃಷಿಗೆ ಏನು ಲಾಭವಾಗುವುದಿಲ್ಲ. ನಿರಂತರ ಜ್ಯೋತಿಯಿಂದ ಕೃಷಿಗೆ ಹಾನಿಯಾಗುತ್ತದೆ. 6 ತಾಸು ಕರೆಂಟ್ ಕೊಟ್ಟರೆ ಯಾರು ಕೂಡ ಪಂಪ್‌ಸೆಂಟ್‌ಗಳ ಮೂಲಕ ಬೆಳೆಗಳನ್ನು ಬೆಳೆಯಲು ಸಾಧ್ಯವಾಗುವುದಿಲ್ಲ ಎಂಬುದು ನನ್ನ ಅನಿಸಿಕೆ. ಅದನ್ನು ಸರಿಪಡಿಸಬೇಕೆಂದು ಒತ್ತಾಯ ಮಾಡುತ್ತೇನೆ. ಜಲಕ್ರಾಂತಿ ಮಾಡುವ ಬಜೆಟ್ ಇದಾಗಿದೆ, ಈ ಹಿನ್ನೆಲೆಯಲ್ಲಿ 2011–2020ನ್ನು

ನೀರಾವರಿ ದಶಕವೆಂದು ನಮ್ಮ ಸರ್ಕಾರ ಘೋಷಿಸಿದೆ ಎಂದು ಹೇಳಿದ್ದೀರಿ. ನೀವು ನೀರಾವರಿಗೆ ಬಜೆಟ್‌ನಲ್ಲಿ 18% ಕೊಟ್ಟು ನೀರಾವರಿ ದಶಕವೆಂದು ಹೇಳುವುದಕ್ಕೆ ಹೋದರೆ ಬಹಳ ಕನಸಿನ,ದೂರದ ಮಾತಾಗುತ್ತದೆ. ನೀರಾವರಿ ದಶಕವೆಂದು ಹೇಳಬೇಕಾದರೆ ಕನಿಷ್ಠ 40–45 ಪರ್ಸೆಂಟ್ ಗ್ರಾಂಟ್‌ನ್ನು ನೀರಾವರಿಗೆ ಕೊಟ್ಟರೆ ಮಾತ್ರ ಮಾಡಲು ಆಗುತ್ತದೆ. ಇಲ್ಲದಿದ್ದರೆ ಇದು ಕೂಡ ಸುಳ್ಳು ಭರವಸೆಯಾಗುತ್ತದೆ. ಇದರಲ್ಲಿ ಆವರ್ತ ನಿಧಿಗೆ 100 ಕೋಟಿ ಕೊಡುತ್ತೇವೆಂದು ಹೇಳಿದ್ದೀರಿ. 100 ಕೋಟಿಯನ್ನು ಬೆಲೆ ಬಿದ್ದಾಗ ಖರೀದಿ ಮಾಡಲು ಕೊಡುವುದಾಗಿ ಹೇಳಿದ್ದೀರಿ.

ಶ್ರೀ ಅಮರೇಗೌಡ ಬಯ್ಯಾಪುರ್: ಅಧ್ಯಕ್ಷರೆ, ನಮ್ಮ ಭಾಷಣದ ಬಗ್ಗೆ ಯಾರಿಗೂ ಚಿಂತನೆ ಇಲ್ಲ. ಎಲ್ಲರು ಮಂತ್ರಿಗಳು ಮಾತನಾಡಿಕೊಂಡಿದ್ದಾರೆ, ಅಧಿಕಾರಿಗಳು ಇಲ್ಲ. ಆದ್ದರಿಂದ ಇದನ್ನು ಮುಕ್ತಾಯ ಮಾಡಿ ನಾಳೆ ಮುಂದುವರೆಸಿದರೆ ಸೂಕ್ತ. ಅವರು ಬಹಳ ಉಪಯುಕ್ತವಾದ ಸಲಹೆಗಳನ್ನು ಕೊಡುತ್ತಿದ್ದಾರೆ. ಆದರೆ ಸೀರಿಯಸ್‌ನೆಸ್ ಯಾರಿಗೂ ಇಲ್ಲ. ಆದ್ದರಿಂದ ಇದನ್ನು ದಯಮಿಟ್ಟು ಮುಂದೂಡುವುದು ಒಳ್ಳೆಯದು.

ಅಧ್ಯಕ್ಷರು: ಅಧಿಕಾರಿಗಳು ಇದ್ದಾರೆ. ತಾವು ಮಾತನಾಡಿ.

ಶ್ರೀ ವೆಂಕಟರಾವ್ ನಾಡಗೌಡ: ಮಾನ್ಯ ಸಚಿವರು ಗಮನಿಸಬೇಕು. ಇಲ್ಲದಿದ್ದರೆ ಸುಮ್ಮನೆ ಚಟಕ್ಕೆ ಮಾತನಾಡಿದಂತಾಗುತ್ತದೆ.

ಅಧ್ಯಕ್ಷರು: ಮಂತ್ರಿಗಳೆಲ್ಲಾ ತಮ್ಮತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಿ ಸರಿಯಾಗುತ್ತದೆ.

ಶ್ರೀ ವೆಂಕಟರಾವ್ ನಾಡಗೌಡ: ಕೃಷಿ ಆವರ್ತ ನಿಧಿಗೆ ಈ ವರ್ಷ ಸಾವಿರ ಕೋಟಿ ಕೊಡುತ್ತೇವೆಂದು ಹೇಳಿದ್ದೀರಿ. ಹೋದ ವರ್ಷ 500 ಕೋಟಿಯೆಂದು ಹೇಳಿದ್ದಿರಿ. ಆದರೆ ಬಿಡುಗಡೆಯಾಗಿದ್ದು 5 ರೂಪಾಯಿಯೂ ಇಲ್ಲ. ಈಗ ಮತ್ತೆ ಸಾವಿರ ಕೋಟಿಯೆಂದು ಹೇಳುತ್ತೀರಿ. ಎಲ್ಲಿ ಬಿಡುಗಡೆ ಮಾಡುತ್ತೀರಿ. ನನಗೆ ಇನ್ನೊಂದು ವಿಚಾರ ಅರ್ಥವಾಗುತ್ತಿಲ್ಲ. ಎಂಎಸ್‌ಪಿ ಯಿಂದ purchase ಮಾಡುವುದಕ್ಕೆ ಸರ್ಕಾರದಿಂದ ಏನು ತೊಂದರೆ ಇದೆ? Minimum support price fix ಮಾಡಿರುವುದು ಕೇಂದ್ರ ಸರ್ಕಾರ. ನೀವು

ಎಂಎಸ್‌ಪಿ ಯಲ್ಲಿ ಖರ್ಚು ಮಾಡಿದರೆ ಆ ದುಡ್ಡನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆ. ಇವರು timely purchase ಮಾಡುವುದಿಲ್ಲ. ಯಾವಾಗ ಬೇಕೋ ಆಗ purchase ಮಾಡುವುದಿಲ್ಲ. ಎಲ್ಲಾ ರೈತರು ಮಾರಾಟ ಮಾಡಿಕೊಂಡ ಮೇಲೆ ಎಂಎಸ್‌ಪಿ ಮಾಡುತ್ತೀರಿ. ಅದು ಟ್ರೇಡರ್‌ಗೆ ಲಾಭವಾಗುತ್ತದೆ. ಈ ಬಜೆಟ್‌ನಲ್ಲಿ ಅದನ್ನಾದರು ಘೋಷಣೆ ಮಾಡಿ, ಎಲ್ಲಿ ಬೆಲೆ ಬೀಳುತ್ತದೆ ಅಲ್ಲಿ ಮೊದಲು ಎಂಎಸ್‌ಪಿ ಯನ್ನು ಪ್ರಾರಂಭ ಮಾಡುತ್ತೇವೆಂದು ಹೇಳಬೇಕೆಂದು ವಿನಂತಿ ಮಾಡುತ್ತೇನೆ. ಎಂಎಸ್‌ಪಿ ಆದಮೇಲೆ ನಾವು ಹಿಡಿದುಕೊಂಡು strike ಮಾಡಿ ಗಲಾಟೆ ಮಾಡಿ ತಮಗೆ ಅರ್ಜಿ ಕೊಟ್ಟು ಮಾಡಿದ ಮೇಲೆ 15 ದಿನ ಇಲ್ಲಾ ಒಂದು ತಿಂಗಳ ಮೇಲೆ announce ಮಾಡುತ್ತೀರಿ. ಅಲ್ಲಿ ಏನೂ ಖರೀದಿ ಮಾಡುವುದಿಲ್ಲ. ಆಗ ಆ ಮೆಟೀರಿಯಲ್ ಎಲ್ಲಾ ಹೋಗಿರುತ್ತದೆ. ಅದರಿಂದ ರೈತರಿಗೆ ಒಂದು ರೂಪಾಯಿ ಲಾಭವಾಗುವುದಿಲ್ಲ. ನೀವು ಮೊದಲು ಪ್ರಾರಂಭ ಮಾಡಲು ಏನು ತೊಂದರೆ? ಎಂಎಸ್‌ಪಿ ಗೆ ನಿಮ್ಮ ದುಡ್ಡು ಏನೂ ಇಲ್ಲ. ಅದಕ್ಕೆ ಕೇಂದ್ರ ಸರ್ಕಾರ ದುಡ್ಡು ಕೊಡುತ್ತದೆ. ನಾನು Oil seed ಅಧ್ಯಕ್ಷನಾಗಿದ್ದಾಗ I am a nodal agency for NAFED. Oil seed ಗೆ ನಾವು ಯಾವ ಸರ್ಕಾರವನ್ನು ಕೇಳುವುದಿಲ್ಲ, NAFED ರವರಿಗೆ ಒಂದು ಪತ್ರವನ್ನು ಬರೆದರೆ ನಾವೇ ಖರೀದಿ ಮಾಡಿ NAFED ನಿಂದ ದುಡ್ಡು ತೆಗೆದುಕೊಂಡು ಕೊಟ್ಟಿದ್ದೇವೆ. ಆದರೆ, ಬೇರೆಯದ್ದರಲ್ಲಿ ಇದನ್ನು ಏಕೆ ಮಾಡಲು ಆಗುತ್ತಿಲ್ಲ ಎಂಬುದು ನನಗೆ ಗೊತ್ತಾಗುತ್ತಿಲ್ಲ. ಇವತ್ತು ನೀವು ಕೃಷಿ ಬಜೆಟ್ ಮಂಡನೆ ಮಾಡಿದಾಗ ಇವುಗಳಿಗೆ ಒತ್ತು ಕೊಡದಿದ್ದರೆ ರೈತರಿಗೆ ಏನು ಸಹಾಯ ಮಾಡಿದಂತಾಗುತ್ತದೆ? 10 ಲಕ್ಷ ಕುಟುಂಬಗಳಿಗೆ 5 ರಿಂದ 10 ಸಾವಿರ ರೂಪಾಯಿ land development ಸಲುವಾಗಿ ಕೊಡುವುದಾಗಿ ಹೇಳಿದ್ದೀರಿ. ಅದನ್ನು ಎನ್‌ಆರ್‌ಇಜಿ ಯಲ್ಲಿ ಈಗಾಗಲೇ ಮಾಡುತ್ತಿದ್ದಾರೆ. ಎನ್‌ಆರ್‌ಇಜಿ ಯಲ್ಲಿ ಭೂ ಅಭಿವೃದ್ಧಿಯನ್ನು ಮಾಡಿಕೊಳ್ಳಲು ಈಗಾಗಲೇ ಅವಕಾಶವಿದೆ. ಕಾರಜೋಳರವರು ಇಲ್ಲಿ ಕುಳಿತಿದ್ದಾರೆ, ಅವರು ಎನ್‌ಆರ್‌ಇಜಿ ಯನ್ನು ಉಪಯೋಗ ಮಾಡಿ ಅವರ ಕ್ಷೇತ್ರದಲ್ಲಿ ಎಷ್ಟು ಮಾಡಿದ್ದಾರೊ ಗೊತ್ತಿಲ್ಲ. ಅದರಲ್ಲಿ ಅವರು ಬಹಳಷ್ಟು

ಮಾಡಿಸಿಬಿಟ್ಟಿದ್ದಾರೆ. ಅದರಲ್ಲೇ ಇದಕ್ಕೆ ಅವಕಾಶ ಇರುವಾಗ ಇದರಲ್ಲಿ ಮತ್ತೆ 10 ಸಾವಿರ ಕೊಟ್ಟು ಅವರ ಭೂಮಿಯನ್ನು ಅಭಿವೃದ್ಧಿ ಪಡಿಸುತ್ತೇವೆಂದು ಹೇಳುತ್ತಿದ್ದೀರಿ. ಅದರ ಬದಲು ಆ ಹಣವನ್ನು ಕೃಷಿ ವಿಮೆಗಾದರೂ ಖರ್ಚು ಮಾಡಿ. ಆ insurance policy ಕಟ್ಟಿಸಿದರೆ ರೈತನಿಗೆ ಬೆಳೆ ನಾಶವಾದಾಗ ಪರಿಹಾರವಾದರೂ ಸಿಗುತ್ತದೆ. ಆದ್ದರಿಂದ ಇದರ ಬಗ್ಗೆ ತಾವು ಯೋಚನೆ ಮಾಡಬೇಕು. ಈಗ ಇಷ್ಟು ದುಡ್ಡು ಕೊಡುತ್ತೀರಿ, ಅದನ್ನು ಆಯ್ಕೆ ಮಾಡುವುದು ಹೇಗೆ? ಕೊಡುವುದು ಹೇಗೆ? ಈ ರೀತಿಯ ಯೋಜನೆಗಳನ್ನು ಮಾಡುವುದರ ಮೂಲಕ ನಾವು ಎಲ್ಲಿಗೆ ಬಂದು ಮುಟ್ಟುತ್ತಿದ್ದೇವೆಂದರೆ ಎಲ್ಲಾ free ಕೊಡುತ್ತೇವೆಂದು ಯಾರೂ ಕೆಲಸ ಮಾಡುವುದೇ ಬೇಕಾಗಿಲ್ಲ. Free Education, free health, free food, everything free. ಕೆಲಸ ಮಾಡುವವರು ಯಾರು? ಈ ಯೋಜನೆಗಳ ಮೂಲಕ ನಾವು ಜನರನ್ನು ಆಲಸಿಗಳಾಗಿ ಮಾಡುತ್ತಿದ್ದೇವೆಯೇ ವಿನಃ ಅವರನ್ನು ಸ್ವಾವಲಂಬಿಯಾಗಿ ಇಡುವುದಕ್ಕೆ ಸಾಧ್ಯವಿಲ್ಲ. ಅಂಥ ಯೋಜನೆಗಳನ್ನು ನಾವು ರೂಪಿಸಲು ಹೋದರೆ, ಓಟು ಹಾಕುತ್ತಾರೆಂದು ತಲೆಯಲ್ಲಿಟ್ಟುಕೊಂಡು ಇಂಥ ಯೋಜನೆಗಳನ್ನು ಮಾಡಿದರೆ ಇವೆಲ್ಲೂ successful ಆಗುವುದಿಲ್ಲ, ಇದರಿಂದ ಯಾರು ಉದ್ಧಾರವೂ ಆಗುವುದಿಲ್ಲ. ಈಗಾಗಲೇ ಇದೇ ರೀತಿ ಒಂದು ಯೋಜನೆಯನ್ನು ಮಾಡಿದ್ದೀರಿ ಮತ್ತೆ ಅದೇ ರೀತಿ ಇನ್ನೊಂದನ್ನು ಮಾಡುವುದು. ಅದಕ್ಕೆ ಹೆಸರು ಬದಲಾವಣೆ ಮಾಡುವುದು, ಇನ್ನೊಂದು ಹೆಸರಿನಲ್ಲಿ ಅದೇ ಬರುವುದು. ಈ ರೀತಿ ಮಾಡುವುದರಿಂದ ಏನು ಆಗುತ್ತದೆ ಎಂಬುದು ನನಗೆ ಅರ್ಥವಾಗುವುದಿಲ್ಲ. ಆದ್ದರಿಂದ ದಯವಿಟ್ಟು ಇವುಗಳನ್ನು ಮಾಡುವಾಗ ಅವರಿಗೆ ಸ್ವಾವಲಂಬಿಗಳಾಗಿ ಬದುಕಲು ಏನು ಯೋಜನೆಗಳು ಬೇಕೋ ಅವುಗಳನ್ನು ಮಾಡಿ. ಅಂಥ ಯೋಜನೆಗಳು ಬರಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಸಿ.ಟಿ. ರವಿ: ಸ್ವಾವಲಂಬಿಗಳಾಗುವುದಕ್ಕೆ ಯೋಜನೆಗಳೇನು?

ಶ್ರೀ ವೆಂಕಟರಾವ್ ನಾಡಗೌಡ: Assured water, quality current and remunerative price ಎಂದು ನಾನು ಹೇಳಿದೆನಲ್ಲಾ? ಈ ಮೂರು ಕೊಟ್ಟುಬಿಡಿ ಸಾಕು. ನಿಮ್ಮನ್ನು ಯಾರು ಏನೂ ಕೇಳುವುದಿಲ್ಲ.

ಶ್ರೀ ಸಿ.ಟಿ. ರವಿ: ಬಿಜೆಪಿ ಸರ್ಕಾರ 1947ನೇ ಇಸವಿಯಿಂದಲೂ ಯಡಿಯೂರಪ್ಪನವರು ಮುಖ್ಯಮಂತ್ರಿ, 64 ವರ್ಷದಿಂದಲೂ ನಮ್ಮದೇ ಸರ್ಕಾರವೆಂದು ಅವರು ಅಂದುಕೊಂಡಿದ್ದಾರೆ.

ಶ್ರೀ ಅಮರೇಗೌಡ ಬಯ್ಯಾಪುರ್: 64 ವರ್ಷದಲ್ಲಿ ಆಗದಿರುವುದನ್ನು ಮೂರೇ ವರ್ಷದಲ್ಲಿ ಮಾಡಿದ್ದೀರಲ್ಲಾ!

ಶ್ರೀ ವೆಂಕಟರಾವ್ ನಾಡಗೌಡ: ಎಲ್ಲಾ ಸರ್ಕಾರಗಳು ಅದನ್ನೇ ಮಾಡಿದ್ದು ಎಂದು ನಾನು ಹೇಳಿದ್ದು. ನೀವು ಬಂದಮೇಲೆ ಇದಾಗಿದ್ದು ಎಂದು ಹೇಳುತ್ತಿಲ್ಲ.

ಶ್ರೀ ಸಿ.ಟಿ. ರವಿ: ಅಂದರೆ ವೈಫಲ್ಯವನ್ನು ಅವರು ಒಪ್ಪಿಕೊಂಡಿದ್ದಾರೆ. 64 ವರ್ಷದಲ್ಲಿ ಅವರೇನು ಬೇಸಿಕ್ ನೀಡ್ಸ್ ಹೇಳಿದ್ದಾರೆ ಅದನ್ನು ಕೊಡಲು ಆಗಲಿಲ್ಲ ಎಂಬುದನ್ನು ಒಪ್ಪಿಕೊಂಡಿದ್ದಾರೆ.

ಶ್ರೀ ವೆಂಕಟರಾವ್ ನಾಡಗೌಡ: ಅದನ್ನು ನೀವೂ ಒಪ್ಪಿಕೊಳ್ಳ ಬೇಕಾಗುತ್ತದೆ. 64 ವರ್ಷ ಆಡಳಿತ ಮಾಡಿರುವ ಎಲ್ಲಾ ಸರ್ಕಾರಗಳು ರೈತ ದೇಶದ ಬೆನ್ನೆಲುಬು ಎಂದು ಯಾರೂ ರೈತರ ಬೆನ್ನನ್ನು ಗಟ್ಟಿ ಮಾಡಿಲ್ಲ. ನೀವೂ ಈ ಬಜೆಟ್‌ನಲ್ಲಿ ಅದನ್ನು ಗಟ್ಟಿ ಮಾಡುವ ಪ್ರಶ್ನೆಯನ್ನೂ ಹೇಳಿಲ್ಲ. ಈ ಬಜೆಟ್‌ನಿಂದ ಅದನ್ನು ಗಟ್ಟಿ ಮಾಡುವ ಪ್ರಶ್ನೆಯೇ ಇಲ್ಲ. ನೀವು 500, 1000, 5000 ಕೊಟ್ಟರಿ ಎಂದರೆ ರೈತ ಉದ್ಧಾರ ಆಗುವುದಿಲ್ಲ. ರೈತ ಉದ್ಧಾರ ಆಗುವುದಿದ್ದರೆ 25 ಸಾವಿರ ಕೊಟ್ಟೂ ಉದ್ಧಾರ ಮಾಡಿಲ್ಲ. ಇದರಿಂದಲು ಉದ್ಧಾರ ಆಗುವುದಿಲ್ಲ. ಆದ್ದರಿಂದ ನಾನು ಹೇಳುತ್ತಿರುವುದು ಈ 60 ವರ್ಷ ರೈತನ ಬೆನ್ನು ಮುರಿದಿದ್ದಾರೆಯೇ ವಿನಃ ಬೆನ್ನು ಗಟ್ಟಿ ಮಾಡಿಲ್ಲ ಎಂಬುದನ್ನು ಎಲ್ಲಾ ಸರ್ಕಾರಗಳಿಗೂ ಹೇಳುತ್ತಿದ್ದೇನೆ. ಈಗಲಾದರೂ ಚಿಂತನೆ ಮಾಡಬೇಕಲ್ಲವೆ? ಪರದೇಶದವರು ಬಂದು ಚಿಂತನೆ ಮಾಡಬೇಕೆ? ಅದರ ಬಗ್ಗೆ ಚಿಂತನೆ ಆಗಲಿ ಎಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಗೋವಿಂದ ಕಾರಜೋಳ: ಮಾನ್ಯ ಸಭಾಧ್ಯಕ್ಷರೆ, ಒಂಟೆಯ ಮದುವೆಗೆ ಕತ್ತೆ ಹೋಗಿತ್ತಂತೆ. ಕತ್ತೆ ಹಾಡು ಹೇಳಿತಂತೆ. ಅದಕ್ಕೆ ಒಂಟೆ ಏನು ನಿನ್ನ ಸ್ವರ! ಏನು ನಿನ್ನ ಹಾಡು! ಕೇಳಿ ನನಗೆ ಬಹಳ ಆನಂದವಾಯಿತು ಎಂದು ಹೇಳಿತಂತೆ. ಅದಕ್ಕೆ ತಿರುಗು ಕತ್ತೆ ಏನು ನಿನ್ನ ಸೌಂದರ್ಯ! ಏನು ನಿನ್ನ ನಡಿಗೆ! ಇದನ್ನು ನೋಡಿ ನಾನು ಮೆಚ್ಚಿದ್ದೇನೆಂದು ಹೇಳಿತಂತೆ! ಆ ರೀತಿ ಆಗಿದೆ ನಮ್ಮ ದೋಸ್ತಿಗಳಿಬ್ಬರದ್ದು. ಜೆಡಿಎಸ್‌ನ ವೆಂಕಟರಾವ್ ನಾಡಗೌಡರು ಏನೋ ಹೇಳುತ್ತಿದ್ದಾರೆ ಅದಕ್ಕೆ ಕಾಂಗ್ರೆಸ್‌ನ ಅಮರೇಗೌಡರು ಅವರಿಗೆ ಸಪೋರ್ಟ್ ಮಾಡುತ್ತಿದ್ದಾರೆ. ಒಬ್ಬರಿಗೊಬ್ಬರು ಈ ರೀತಿ ಮಾಡುತ್ತಿದ್ದಾರೆ.

ಶ್ರೀ ವೆಂಕಟರಾವ್ ನಾಡಗೌಡ: ಇದರಲ್ಲಿ ಕಾರಜೋಳರವರು ಯಾರು ಒಂಟೆ, ಯಾರು ಕತ್ತೆ ಎಂಬ ಮಾತನ್ನು ಹೇಳಲಿಲ್ಲ. ಅವರು ಈ ಕಡೆ ಆ ಕಡೆ ಎರಡೂ ಕಡೆ ಇದ್ದವರೇ. ಆದ್ದರಿಂದ ಅವರು ಎರಡಕ್ಕೂ ಬರುತ್ತಾರೆ. ಆದ್ದರಿಂದ ಅವರು ಒಂಟೆಯನ್ನೂ ನೋಡಿದ್ದಾರೆ ಕತ್ತೆಯನ್ನೂ ನೋಡಿದ್ದಾರೆ. ನಾನು ಈಗ ಬಂದಿರುವವನು, ನನಗೇನು ಇದರ ಬಗ್ಗೆ ಅರ್ಥವಾಗುವುದಿಲ್ಲ. ಕಾರಜೋಳರವರು ಒಂಟೆ ಮತ್ತು ಕತ್ತೆ ಎರಡರ ಪಾತ್ರವನ್ನೂ ಮಾಡಿದ್ದಾರೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ತಾವು ಎರಡೂ ಕಡೆ ಇದ್ದಿರಿ. ಕತ್ತೆ ಕೆಲಸವನ್ನು ಯಾವಾಗ ಮಾಡಿದ್ದೀರಿ? ಒಂಟೆಯ ಕೆಲಸವನ್ನು ಯಾವಾಗ ಮಾಡಿದ್ದೀರಿ?

ಒಬ್ಬರು ಮಾನ್ಯ ಸದಸ್ಯರು: ಇದರಲ್ಲಿ ಒಂಟೆ ಯಾರು? ಕತ್ತೆ ಯಾರು?

ಶ್ರೀ ಗೋವಿಂದ ಕಾರಜೋಳ: ಅದನ್ನು ಸೈಜ್ ಮೇಲೆ ತಿಳಿದುಕೊಳ್ಳಬೇಕಾಗುತ್ತದೆ! ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ವೆಂಕಟರಾವ್ ನಾಡಗೌಡ: ನನ್ನ ವಿನಂತಿ ಇಷ್ಟೇ, ಈ ದೇಶದಲ್ಲಿ ಕೃಷಿ ಬಗ್ಗೆ ಚರ್ಚೆ ಮಾಡುವ ಕಾಲ ಬಂದಿದೆ. ಮೊದಲು ಯಾರೂ ಕೂಡ ಕೃಷಿ ಬಜೆಟ್‌ಗೆ, ಬಜೆಟ್ ಮೇಲಿನ ಚರ್ಚೆಗೆ ರೈತರನ್ನು ಕರೆಯುತ್ತಿರಲಿಲ್ಲ. ಈ ರಾಜ್ಯದಿಂದ ನಾನು 6 ವರ್ಷದಿಂದ ಕೇಂದ್ರ ಸರ್ಕಾರದ pre–budget discussionಗೆ ಹೋಗುತ್ತಿದ್ದೆ. ವಾಜಪೇಯಿಯವರು ಇದ್ದ ಕಾಲದಲ್ಲಿ ಅದನ್ನು ಮೊದಲ ಬಾರಿಗೆ ಪ್ರಾರಂಭ ಮಾಡಿದ್ದು. ನಾನು ಮೊದಲ ಸಲ pre–budget

discussionಗೆ ಒಳಗೆ ಹೋಗಿದ್ದೆ. Discussion ಮುಗಿಸಿಕೊಂಡು ಹೊರಕ್ಕೆ ಬಂದ ಕೂಡಲೆ ನೂರಾರು ಜನ press reporters ನಿಂತಿದ್ದರು. ಅವರುಗಳು ನಮ್ಮನ್ನು ಕೇಳಲು ಬಂದಿದ್ದಾರೆಂದು ನಾನು ತಿಳಿದುಕೊಂಡು ಒಂದೇ ಸಮನೆ ಅಲ್ಲಿಗೆ ಹೋದೆವು. ಆದರೆ ಅವರು ಬಂದಿರುವುದು, ನಮ್ಮದು ಆದಮೇಲೆ industries ನವರದ್ದು ಇತ್ತು. ನಾವು ಬಂದು ನಿಂತು ಕೊಂಡಾಗ ನಮ್ಮನ್ನು ಮಾತನಾಡಿಸದೆಯೆ industries ನವರದ್ದು ಬಂದಿದೆಯೆಂದು industries ರವರನ್ನು ಮಾತನಾಡಿಸಲು ಒಳಕ್ಕೆ ಹೋದರು. ಆ ಕಾಲವನ್ನೂ ನೋಡಿದ್ದೇವೆ. ಈ ಕಾಲವನ್ನು ನೋಡುತ್ತಿದ್ದೇವೆ.

ಆ ಇಂಡಸ್ಟ್ರೀಸ್‌ನವರನ್ನು ಮಾತನಾಡಿಸುತ್ತಿದ್ದರು. ಆ ಕಾಲವನ್ನೂ ನಾನು ನೋಡಿದ್ದೇನೆ, ಈ ಕಾಲವನ್ನೂ ನೋಡುತ್ತಿದ್ದೇನೆ. ಇಲ್ಲಿಯೂ ಕೂಡ ಪ್ರತಿ ವರ್ಷ ರೈತರನ್ನು ಮೂಲೆ ಮೂಲೆಗಳಿಂದ ಕರೆದು ಪ್ರಿ-ಬಜೆಟ್ ಡಿಸ್‌ಕಶನ್‌ನಲ್ಲಿ ಏನು ಬೇಕು ಎನ್ನುವುದರ ಬಗ್ಗೆ ಚಿಂತನೆ ಮಾಡುವುದಕ್ಕಾದರೂ ಈಗ ಪ್ರಾರಂಭ ಮಾಡಿದ್ದಾರೆ. ಇವತ್ತು ಕಣ್ತೆರೆದಿದ್ದಾರೆ. ಎಲ್ಲ ರಾಜ್ಯಗಳಲ್ಲಿ ಇದು ಅನಿವಾರ್ಯ. ಈ ಸೆಕ್ಟರ್ ಉಳಿಯದೇ ಇದ್ದರೆ ಈ ದೇಶಕ್ಕೆ ಮುಂದೆ ಉಳಿಗಾಲವಿಲ್ಲ ಎನ್ನತಕ್ಕಂಥ ವಿಷಯ ಎಲ್ಲ ನಾಯಕರ ಗಮನಕ್ಕೆ ಬಂದಿರುವುದರಿಂದ ಈ ರೀತಿಯ ಚರ್ಚೆಗಳಾದರೂ ಈಗ ಪ್ರಾರಂಭವಾಗಿವೆ. ಇಲ್ಲದೇ ಇದ್ದರೆ ಈ ಸದನದಲ್ಲಿ ಚರ್ಚೆಗಳು ಯಾವಾಗ ಆಗುತ್ತವೆಂದರೆ ರೈತರ ಮೇಲೆ ಗೋಲಿಬಾರ್ ಆದಾಗ, ಯಾರಾದರೂ ರೈತರು ಸತ್ತರೆ, ಆಗ ಎರಡು ದಿನ ರೈತರ ಬಗ್ಗೆ ಚರ್ಚೆಯಾಗುತ್ತದೆ. ಇಲ್ಲದೇ ಹೋದರೆ ಚರ್ಚೆಯೇ ರೈತರ ಬಗ್ಗೆ ಆಗುವುದಿಲ್ಲ. ಸಂಸತ್‌ನಲ್ಲಿಯೂ ಅಷ್ಟೆ. ಇಲ್ಲಿಯೂ ಅಷ್ಟೆ. ಈ ರೀತಿಯ ಚರ್ಚೆಗಳಾದರೂ ಈಗ ಪ್ರಾರಂಭವಾಗಿದೆಯಲ್ಲ. ಮುಂದೆ ಮಾಡಬೇಕಾದ್ದು ಅನಿವಾರ್ಯ, ಅದು ಆಗಲೇಬೇಕಾಗುತ್ತದೆ. ಆ ರೀತಿ ರೈತರ ಬಗ್ಗೆ ಇವತ್ತು ಚರ್ಚೆಗಳಾದರೂ ಆಗುತ್ತಿವೆಯಲ್ಲವೆಂದು ನಾನು ಸಂತೋಷ ಪಡುತ್ತೇನೆ. ಈ ತರಹದ ಚರ್ಚೆಗಳಾಗಬೇಕು. ಮುಂದೆ ಏನಾಗಬೇಕಿದೆ ಎಂಬ ಬಗ್ಗೆ ಚರ್ಚೆ ಮಾಡಬೇಕು. ಈ ಸದನದಲ್ಲಿ ನಾವು ಕುಳಿತು ಯೋಜನೆಗಳನ್ನು ಮಾಡಬೇಕಾಗಿದೆಯೇ ವಿನಃ ದುಡ್ಡು ಹಂಚುವುದಲ್ಲ. ಈ ಸದನ

ಯೋಜನೆಗಳನ್ನು ಮಾಡುವುದಕ್ಕೆ ಸೇರುತ್ತದೆ ಎಂದು ನಾನು ಭಾವಿಸುತ್ತೇನೆ. ಇದ್ದ ದುಡ್ಡನ್ನು ಯಾರು ಬೇಕಾದರೂ ಹಂಚುವುದಕ್ಕೇ ಈ ಸದನ ಇದೆಯೆಂದು ನಾನು ಸಣ್ಣವನಾಗಿ ತಿಳಿದುಕೊಂಡಿಲ್ಲ. ಅದು ಆ ರೀತಿಯೇ ಆಗಿದ್ದರೆ ಅದರ ಬಗ್ಗೆ ದೊಡ್ಡವರು ಹೇಳಬೇಕು. ನನಗೆ ಗೊತ್ತಿಲ್ಲ. ಆ ತರಹದ ಭಾವನೆಗಳು ಬೇಡ. ಇದು ಇರುವುದು ನಾವು ಸ್ವಾವಲಂಬಿಗಳಾಗಿ ಅವರು ತಮ್ಮ ಕಾಲ ಮೇಲೆ ನಿಲ್ಲುವುದಕ್ಕೆ ಯೋಜನೆಗಳನ್ನು ರೂಪಿಸುವುದೇ ವಿನ: ನೀವು ಎಲ್ಲೋ ಕುಳಿತುಕೊಂಡು ಐದುನೂರು ಕೊಟ್ಟೆವು, ಒಂದು ಸಾವಿರ ಕೊಟ್ಟೆವು ಎಂದರೆ ಅದು ಸರಿಯಲ್ಲ. ಈಗ ಹಿಂದಿನ ಸರ್ಕಾರ ಇಪ್ಪತ್ತೈದು ಸಾವಿರ ರೂ.ಗಳ ಸಾಲ ಮನ್ನಾ ಮಾಡಿದರು. ಉದ್ಧಾರವಾದ್ವೆ? ಇವರು ಒಂದೈದು ಸಾವಿರ ರೂ.ಗಳನ್ನು ಕೊಟ್ಟುಬಿಟ್ರೆ ಉದ್ಧಾರವಾಗ್ತಿವಾ? ಆಗುವುದಿಲ್ಲ. ರೈತ ಬೆಳೆದ ಬೆಲೆಗೆ ಬೆಲೆ ಕಟ್ಟುವ ಶಕ್ತಿ ಆ ರೈತನಿಗೆ ಎಲ್ಲಿಯವರೆವಿಗೆ ಬರುವುದಿಲ್ಲವೋ ಅಲ್ಲಿಯವರೆವಿಗೂ ಆ ರೈತ ಉದ್ಧಾರವಾಗುವುದಿಲ್ಲ. ಅವನು ಬೆಳೆದ ಬೆಳೆಗೆ ಬೆಲೆ ಕಟ್ಟುವ ಶಕ್ತಿ ಅವನಿಗಿದ್ದರೆ ಮಾತ್ರ ಅವನು ಉದ್ಧಾರವಾಗುತ್ತಾನೆ. ಅಂಥ ಯೋಜನೆಗಳು ಈ ಸದನದಲ್ಲಿ ರೂಪಗೊಳ್ಳಲಿ ಎನ್ನತಕ್ಕಂಥ ವಿನಂತಿಯನ್ನು ಮಾಡಿ ನನಗೆ ಎರಡು ಮಾತುಗಳನ್ನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಡಾ: ಎಂ.ಸಿ. ಸುಧಾಕರ್(ಚಿಂತಾಮಣಿ): ಮಾನ್ಯ ಅಧ್ಯಕ್ಷರೆ, 2011–12 ನೇ ಸಾಲಿನ ಆಯವ್ಯಯದ ಮೇಲೆ ಚರ್ಚೆ ಮಾಡುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಈಗ ಈ ಸರ್ಕಾರದವರು ಈ ವರ್ಷ ಪ್ರತ್ಯೇಕವಾಗಿ ಕೃಷಿ ವಿಚಾರದ ಮೇಲೆಯೇ ಪ್ರತ್ಯೇಕ ಬಜೆಟ್ ಭಾಗ – 1 ಎಂದು ಮತ್ತು ಸಾಮಾನ್ಯ ಬಜೆಟ್ ಎಂದು ಎರಡು ಬಜೆಟ್‌ಗಳನ್ನು ಮಂಡನೆ ಮಾಡಿದ್ದಾರೆ. ಬಹುಶ: ಇದರ ಬಗ್ಗೆ ಎಲ್ಲರೂ ಮಾತನಾಡಿದರು. ಇದೊಂದು ರೀತಿ ರಾಜಕೀಯ ಉದ್ದೇಶ ಇಟ್ಟುಕೊಂಡು ಮಂಡನೆ ಮಾಡಿರತಕ್ಕಂಥ ಬಜೆಟ್ ಎಂದು ಹೇಳಿದರು. ಈಗ ನಾನು ಹೆಚ್ಚಾಗಿ ರಾಜಕಾರಣವನ್ನು ಮಾತನಾಡದೆ ವಾಸ್ತವಿಕವಾಗಿ ಏನು ಇವತ್ತು ಬಜೆಟ್ ಮಂಡನೆ ಮಾಡಿದ್ದಾರೆ ಮತ್ತು ವಾಸ್ತವಿಕವಾಗಿ ಕೃಷಿ ಬಗ್ಗೆ ಸ್ಥಳೀಯವಾಗಿ

ಯಾವ ರೀತಿಯ ಸಮಸ್ಯೆಗಳನ್ನು ಕೃಷಿ ವ್ಯವಸ್ಥೆಯಲ್ಲಿ ರೈತರು ಎದುರಿಸುತ್ತಿದ್ದಾರೆ ಎನ್ನುವ ಬಗ್ಗೆ ಚರ್ಚೆಯನ್ನು ಮಾಡುವುದು ಉತ್ತಮ ಎನ್ನತಕ್ಕಂಥ ಭಾವನೆಯಿಂದ ನಾನು ಕೃಷಿ ಬಗ್ಗೆ ಮಾತನಾಡುತ್ತೇನೆ. ಈಗ ಕೃಷಿ ವಿಚಾರದಲ್ಲಿ ಕೆಲವು ಉತ್ತಮವಾದಂಥ ಘೋಷಣೆಗಳನ್ನು ಮುಖ್ಯಮಂತ್ರಿಗಳು ಮಾಡಿದ್ದಾರೆ. ಈಗ 1% ಬಡ್ಡಿ ದರದಲ್ಲಿ ರೈತರಿಗೆ ಸಾಲ ಕೊಡತಕ್ಕಂಥದ್ದು ಉತ್ತಮ ಬೆಳವಣಿಗೆ. ಆದರೆ ಈಗ ಹಲವಾರು ಸಹಕಾರಿ ಬ್ಯಾಂಕುಗಳ ಮುಖಾಂತರ 50 ಸಾವಿರದವರೆವಿಗೂ ಸಾಲ ಪಡೆಯತಕ್ಕಂಥದ್ದು ಅದಕ್ಕಿಂತಲೂ ಹೆಚ್ಚುವರಿ ಸಾಲವಾದರೆ 3% ಬಡ್ಡಿ ದರದಲ್ಲಿ ಸಾಲ ಪಡೆಯತಕ್ಕಂಥದ್ದು ಎನ್ನುವ ಘೋಷಣೆ ಇದೆ. ಉದಾಹರಣೆಗೆ ಈಗ ನಮ್ಮ ಹಳೆ ಕೋಲಾರದ ವಿಚಾರವಾಗಿ ಹೇಳುವುದಾದರೆ ಅಲ್ಲಿ ಡಿ.ಸಿ.ಸಿ. ಬ್ಯಾಂಕ್ ಮುಚ್ಚಿಹೋಗಿ ಬಹಳ ವರ್ಷಗಳೇ ಆಯಿತು. ಇಲ್ಲಿ ಸಹಕಾರಿ ಕ್ಷೇತ್ರದಲ್ಲಿರುವ ಹಲವಾರು ನಮ್ಮ ಸ್ನೇಹಿತರುಗಳು ಇದ್ದಾರೆ. ನನಗೆ ಇವತ್ತಿಗೂ ಈ ಸಹಕಾರಿ ಕ್ಷೇತ್ರ ಏನು ಎಂದು ಅರ್ಥ ಮಾಡಿಕೊಳ್ಳುವುದೇ ಬಹಳ ಕಷ್ಟವಾಗಿದೆ. ಅದು ಸಹಕಾರವೋ ಅಥವಾ ಸಹಕಾರವೋ ಎಂದು ನನಗೆ ಅರ್ಥವಾಗುತ್ತಿಲ್ಲ. ಅಲ್ಲಿ ಪಕ್ಷಾನೂ ಇಲ್ಲ, ಯಾವುದೂ ಬೇದಭಾವವೇ ಇಲ್ಲ, ಎಲ್ಲರೂ ಒಂದಾಗಿಬಿಡುತ್ತಾರೆ. ಯಾವ ಸಮಯ ಸಂದರ್ಭದಲ್ಲಿ ಒಂದಾಗುತ್ತಾರೋ ಗೊತ್ತಾಗುವುದೇ ಇಲ್ಲ. ಚುನಾವಣೆ ಎಂದು ಅಲ್ಲಿ ನಡೆಯುತ್ತದೆ. ಅದು ಚುನಾವಣೆಯೋ ಅಥವಾ ಅಡ್ಜೆಸ್ಟ್‌ಮೆಂಟೋ ಗೊತ್ತಾಗುವುದೇ ಇಲ್ಲ. ಈ ರೀತಿಯ ಒಂದು ವ್ಯವಸ್ಥೆಯಲ್ಲಿ ಈ ಸಹಕಾರ ನಡೆಯುತ್ತಿದೆ. ಆದರೆ ಮೂಲವಾಗಿ ಅದರ ಉದ್ದೇಶ, ಧ್ಯೇಯ ಸಹಕಾರಿ ಕ್ಷೇತ್ರದಲ್ಲಿ ಬಹಳ ಉತ್ತಮವಾಗಿದೆ. ಆದರೆ ಎಲ್ಲೋ ಒಂದು ಕಡೆ ಇವತ್ತು ವೈದ್ಯನಾಥನ್ ಕಮಿಟಿ ವರದಿ ಬಂದಿದೆ, ಮತ್ತೊಂದು ಬಂದಿದೆ, ಹೀಗೆ ಬಹಳಷ್ಟು ಸುಧಾರಣೆ ಮಾಡತಕ್ಕಂಥ ಪ್ರಯತ್ನಗಳು ಸಾಗುತ್ತಿದೆಯೇ ವಿನ: ಎಲ್ಲೋ ಒಂದು ಕಡೆ ಅದರಲ್ಲಿ ದುರುಪಯೋಗ ಮಾಡಿಕೊಳ್ಳತಕ್ಕಂಥದ್ದಕ್ಕೆ ಹೆಚ್ಚು ಅವಕಾಶಗಳನ್ನು ಎಲ್ಲೋ ಒಂದು ಹಿಡನ್ ಅಜೆಂಡಾ ಮಾಡಿಕೊಂಡು ಕೆಲವು ವ್ಯವಸ್ಥೆಗಳನ್ನು ಅಲ್ಲಿ ಸೇರಿಸಿಕೊಂಡು ಇವತ್ತು ಸಹಕಾರಿ ಕ್ಷೇತ್ರವನ್ನು ನಡೆಸುತ್ತಾ ಇರತಕ್ಕಂಥದ್ದರಲ್ಲಿ ಬಹುಶ: ಬಹಳಷ್ಟು ಜನ ರೈತರಿಗೆ ಇದರಿಂದ ಉಪಯೋಗ

ಆಗತಕ್ಕಂಥದ್ದು ಅಷ್ಟು ಕಾಣುತ್ತಿಲ್ಲವೆನ್ನತಕ್ಕಂಥದ್ದು ನನ್ನ ವೈಯಕ್ತಿಕ ಭಾವನೆ. ಇವತ್ತು ರಾಷ್ಟ್ರೀಕೃತ ಬ್ಯಾಂಕುಗಳ ಮುಖಾಂತರ ಸಾಲ ಕೊಡತಕ್ಕಂಥದ್ದರಲ್ಲಿ ಕೇಂದ್ರ ಸರ್ಕಾರ 3% ಬಡ್ಡಿಯನ್ನು ಇಟ್ಟಿರತಕ್ಕಂಥ ವಿಷಯವನ್ನು ನಾವೆಲ್ಲರೂ ಸ್ವಾಗತ ಮಾಡಬೇಕಾಗುತ್ತದೆ. ಬಹುಶ: ತಾವೂ ಕೂಡ ಅದನ್ನು ಒಪ್ಪಬೇಕಾಗುತ್ತದೆ. ಏಕೆಂದರೆ ರಾಜ್ಯ ಸರ್ಕಾರದ ಮೇಲೆ ಹೆಚ್ಚು ಹೊರೆ ಬೀಳುವುದಿಲ್ಲ. ಏಕೆಂದರೆ ಕೇಂದ್ರ ಸರ್ಕಾರವೇ ಈಗ 3% ಬಡ್ಡಿ ದರವನ್ನು ಇಟ್ಟಿರುವುದರಿಂದ ರಾಜ್ಯ ಸರ್ಕಾರದ ಮೇಲೆ ಹೆಚ್ಚು ಹೊರೆ ಇರುವುದಿಲ್ಲ. ಇದು ರೈತರಿಗೆ ಸರಿಯಾದ ರೀತಿಯಲ್ಲಿ ತಲುಪಬೇಕಾಗಿರುವುದು ಬಹಳ ಮುಖ್ಯ. ಇನ್ನು ಕೃಷಿ ಪಂಪ್‌ಸೆಟ್‌ಗಳ ಬಗ್ಗೆ ಹೇಳಬೇಕೆಂದರೆ, ನಮ್ಮ ಭಾಗದಲ್ಲಿ ಅಂತರ್ಜಲದ ಮಟ್ಟ ಎಷ್ಟು ಕುಸಿದಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಸುಮಾರು ಸಾವಿರ, ಸಾವಿರದ ನೂರು ಅಡಿಯವರೆವಿಗೂ ಹೋದರೆ ನಮಗೆ ನೀರು ಸಿಗುತ್ತಿಲ್ಲ. ಇವತ್ತು ಹತ್ತು ಹೆಚ್.ಪಿ. ವರೆವಿಗೂ ಉಚಿತವಾಗಿ ವಿದ್ಯುತ್ ಕೊಡುತ್ತೇವೆ ಎನ್ನುವುದು ಒಂದು ಕಡೆ ಇದೆ. ಇವತ್ತು ಗ್ರಾಮಗಳಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಏನು ಡಿಫರೆಂಟ್ ಝೋನ್ಸ್ ಮಾಡಿದ್ದಾರೆ ಅದರಲ್ಲಿ ಗ್ರೇ ಝೋನ್ ಮತ್ತು ಬ್ಲಾಕ್ ಝೋನ್ ಏರಿಯಾ ಎಂದು ಮಾಡಿದ್ದಾರೆ. ಹೀಗೆ ಎಲ್ಲಿ ಅಂತರ್ಜಲ ಬಹಳ ಕುಸಿದಿದೆ ಅಂತಹ ಭಾಗದಲ್ಲಿ ವಿದ್ಯುತ್ ಕೊಡುವುದಕ್ಕೆ ಸಾಧ್ಯವಿಲ್ಲ ಮತ್ತು ಅಲ್ಲಿ ಹೆಚ್ಚುವರಿ ಬೋರ್‌ವೆಲ್ ಹಾಕುವುದಕ್ಕೆ ಸಾಧ್ಯವಿಲ್ಲವೆನ್ನುವ ಅವರದೇ ಆದಂಥ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಂತರ್ಜಲ ಕುಸಿಯದಿರುವ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳಬೇಕು ಮತ್ತು preventive measures ಏನು ತೆಗೆದುಕೊಳ್ಳಬೇಕು ಎಂಬ ಬಗ್ಗೆ ಬಹಳ ಹಿಂದಿನ ವರ್ಷಗಳಿಂದಲೂ ಏನು ಮಾಡಿಲ್ಲ. ಇವತ್ತು ಇಂಥ ಒಂದು ಸಂದರ್ಭದಲ್ಲಿ ಬಯಲು ಸೀಮೆ ಭಾಗದಲ್ಲಿ, ಅದರಲ್ಲೂ ಮುಖ್ಯವಾಗಿ ನಮ್ಮ ಭಾಗದಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆಯತಕ್ಕಂಥದ್ದು ಮತ್ತು ಬೆಂಗಳೂರಿಗೆ ಸರಬರಾಜಾಗತಕ್ಕಂಥ ವಾಡಿಕೆಯನ್ನು ಮಾಡಿಕೊಂಡಿದ್ದಾರೆ. ಅವರು ಇವತ್ತು ಸಾಲವನ್ನಾದರೂ ಮಾಡಿ ಸುಮಾರು ನಾಲ್ಕೈದು ಲಕ್ಷ ರೂ.ಗಳನ್ನು ಖರ್ಚು

ಮಾಡಿ ಬೋರ್‌ವೆಲ್ ಹಾಕಿ ಸಾವಿರಾರು ಅಡಿಗಳಿಂದ ನೀರು ತೆಗೆಯತಕ್ಕಂಥ ಕೆಲಸವನ್ನು ಮಾಡುತ್ತಿದ್ದಾರೆ. ಇವತ್ತು ಅಲ್ಲೇನಾಗಿದೆಯೆಂದರೆ ಇರತಕ್ಕಂಥ ಟ್ರಾನ್ಸ್‌ಫಾರ್ಮರ್ ಮೇಲೆಯೇ ಹೆಚ್ಚು ಒತ್ತಡವಾಗಿ ಆ ಟ್ರಾನ್ಸ್‌ಫಾರ್ಮ್‌ರ್‌ಗಳು ಬಹಳ ಬೇಗ ವಿಫಲವಾಗುತ್ತಿವೆ. ನಾವೂ ಅಧಿಕಾರಿಗಳ ಮೇಲೆ ಹೆಚ್ಚು ಒತ್ತಡವನ್ನು ತರುತ್ತಿದ್ದೇವೆಯಾದ್ದರಿಂದ ಆ ಟ್ರಾನ್ಸ್‌ಫಾರ್ಮ್‌ರ್‌ಗಳನ್ನು ಬದಲಾಯಿಸತಕ್ಕಂಥ ಕೆಲಸವಾಗುತ್ತಿದೆ. ಸರ್ಕಾರ ಈಗ ಅಕ್ರಮ ಪಂಪ್‌ಸೆಟ್‌ಗಳನ್ನು ಸಕ್ರಮ ಮಾಡುತ್ತೇವೆಂದು ಘೋಷಣೆ ಮಾಡಿದ್ದಾರೆ. ಖಂಡಿತ ಅದನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ಒಂದು ವಿಚಾರವನ್ನು ಮಂತ್ರಿಗಳಿಗೂ ಹೇಳಿದ್ದೇನೆ. ಮತ್ತೆ ಈಗ ಎಲ್ಲೋ ಒಂದು ಕಡೆ ಈ ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟ್ ರಿಪೋರ್ಟ್ ಏನಿದೆ ಅದನ್ನು ಅಡ್ಡ ತರತಕ್ಕಂಥ ಪ್ರಯತ್ನವಾಗುತ್ತಿದೆ. ನಿಯಮಗಳನ್ನು ಅದಕ್ಕೆ ಮಾಡತಕ್ಕಂಥ ಸಂದರ್ಭದಲ್ಲಿ ದಯವಿಟ್ಟು ಮೈನ್ಸ್ ಅಂಡ್ ಜಿಯಾಲಜಿ ರಿಪೋರ್ಟ್‌ನ್ನು ಅಡ್ಡ ಇಟ್ಟುಕೊಂಡು ತೊಂದರೆ ಕೊಡತಕ್ಕಂಥದ್ದು ಆಗಬಾರದು ಎನ್ನತಕ್ಕಂಥ ಮನವಿಯನ್ನು ಸರ್ಕಾರಕ್ಕೆ ಮಾಡಿಕೊಳ್ಳಬಯಸುತ್ತೇನೆ. ಇನ್ನು ಕೇಂದ್ರ ಸರ್ಕಾರದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಎಂಬುದಿದೆ. ಇದರಲ್ಲಿ ಶೇಕಡ ನೂರಕ್ಕೆ ನೂರರಷ್ಟು ಗ್ರ್ಯಾಂಟ್ ಕೊಡತಕ್ಕಂಥದ್ದು. ಇದರಲ್ಲಿ ಏನೂ ಸಾಲ ಎನ್ನತಕ್ಕಂಥದ್ದಿಲ್ಲ. ಇದರ ಉದ್ದೇಶ G.D.P. of Agriculture and Horticulture products ಎಂದು ಹೇಳಿ ಅಥವಾ ಆ ಒಂದು ಕ್ಷೇತ್ರದಲ್ಲಿ G.D.P. ಯನ್ನು ವೃದ್ಧಿ ಮಾಡತಕ್ಕಂಥದ್ದಕ್ಕೆ ವಿಶೇಷವಾಗಿ ಕಾರ್ಯಕ್ರಮಗಳನ್ನು ರೂಪಿಸುವುದಕ್ಕೆ ಕೇಂದ್ರ ಸರ್ಕಾರ 2007 ರಲ್ಲಿ ಹೊಸದಾಗಿ ಮನಮೋಹನ್ ಸಿಂಗ್‌ರವರ ಸರ್ಕಾರ ತಂದಿರತಕ್ಕಂಥ ಒಂದು ಯೋಜನೆ ಇದಾಗಿದೆ. ಇದನ್ನು ನಮ್ಮ ರಾಜ್ಯ ಸರ್ಕಾರದ ಕೃಷಿಯ ಒಂದು outlay ಏನಿದೆ, ಸರ್ಕಾರದವರು ಇವತ್ತು ಕೃಷಿಗೆ 10 % ಅನ್ನು ಕೊಟ್ಟಿದ್ದಾರೆ. ಕಳೆದ ವರ್ಷ ಬಜೆಟ್‌ನಲ್ಲಿ ಬಹುಶ: ಐದಾರು ಪರ್ಸೆಂಟ್ ಇತ್ತು ಎಂದೆನಿಸುತ್ತದೆ. ಕಳೆದ ವರ್ಷದ ಬಜೆಟ್ ಪುಸ್ತಕವನ್ನು ನೋಡಿದಾಗ ಕೃಷಿ ಮತ್ತು ಅಲೈಡ್‌ಗೆ ಬಹುಶ: ಆರು ಪರ್ಸೆಂಟ್ ಇದೆ ಎಂದು ಕಾಣುತ್ತದೆ. ಇವತ್ತು ಅದರ ಆಧಾರದ ಮೇಲೆ ಕೇಂದ್ರ ಸರ್ಕಾರ

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ಅನುದಾನವನ್ನು ಕೊಡತಕ್ಕಂಥ ಕೆಲಸವಾಯಿತು. 2008 ರಲ್ಲಿ ನಮಗೆ ಹೆಚ್ಚು ಅನುದಾನ ಬಂತು. ಆದರೆ ಕಳೆದ ವರ್ಷ ಅದರಲ್ಲಿ ಬಹಳಷ್ಟು ಕಡಿತವಾಯಿತು. ಈಗ ಹತ್ತು ಪರ್ಸೆಂಟ್ ಆಗಿರುವುದರಿಂದ ಬಹುಶ: ಹೆಚ್ಚು ಬರತಕ್ಕಂಥದ್ದಾಗುತ್ತದೆ. ಆದರೆ ಆ ಒಂದು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಲ್ಲಿ ಬಹಳಷ್ಟು ಉತ್ತಮವಾದಂಥ ಯೋಜನೆಗಳನ್ನು ಏನು ರಿಸರ್ಚ್‌ಗೆ ಸಂಬಂಧಪಟ್ಟಂಥದ್ದಿರಬಹುದು ಅಥವಾ ಈ ಒಂದು ಜಿ.ಡಿ.ಪಿ.ಯನ್ನು ಇನ್‌ಕ್ರೀಸ್ ಮಾಡತಕ್ಕಂಥದ್ದಕ್ಕೆ, ಕೃಷಿ ಅಥವಾ ತೋಟಗಾರಿಕೆ, ಪಶು ಸಂಗೋಪನೆ ಇರಬಹುದು, ಹೀಗೆ ಇವೆಲ್ಲದ್ದಕ್ಕೂ ಒಂದು ವ್ಯವಸ್ಥಿತವಾಗಿ ಅದನ್ನು ಸದ್ಬಳಕೆ ಮಾಡಿಕೊಳ್ಳತಕ್ಕಂಥದ್ದು ಆಗಬಹುದು. ಆದರೆ ಪ್ರಾರಂಭದಲ್ಲಿ ಇದಕ್ಕೆಲ್ಲಾ ಕಾಂಪೌಂಡ್ ಕಟ್ಟತಕ್ಕಂಥದ್ದಕ್ಕೆ, ಆಫೀಸ್ ಬಿಲ್ಡಿಂಗ್ ಕಟ್ಟುವುದಕ್ಕೆ, ಈ ರೀತಿ ಇವೆಲ್ಲವೂ ಅವರಿಗೇ ಅರ್ಥವೇ ಆಗಿಲ್ಲ. ಅದನ್ನು ಯಾವುದಕ್ಕೆ ಉಪಯೋಗಿಸಬೇಕೆಂದು. ಉದಾಹರಣೆಗೆ ನಮ್ಮ ಭಾಗದಲ್ಲಿಯೇ ಕಳೆದ ಬಜೆಟ್‌ನಲ್ಲಿ Mango Development Board ಎಂದು ಘೋಷಣೆಯನ್ನು ಮಾಡಿದ್ದರು. ಇವತ್ತಿಗೂ ಅದು ಪ್ರಾರಂಭವಾಗಿಲ್ಲ.

ಆದರೆ ನಾವು 2007ರಲ್ಲಿ ಇದಕ್ಕೆ ಪ್ರಯತ್ನಪಟ್ಟು Mango Development Centre ನಮ್ಮ ಭಾಗದಲ್ಲಿ ಪ್ರಾರಂಭವಾಗಿದೆ. ಸುಮಾರು 4.50 ಕೋಟಿ ರೂಪಾಯಿಯ ಯೋಜನೆ ಮಾನ್ಯ ಶ್ರೀನಿವಾಸ್ ಪ್ರಸಾದ್‌ರವರ ತಾಲ್ಲೂಕಿನಲ್ಲಿ ಆಗುತ್ತಿದೆ. ನನ್ನ ಚಿಂತಾಮಣಿ ಕ್ಷೇತ್ರದಲ್ಲಿ ಸುಮಾರು 14.50 ಕೋಟಿ ರೂಪಾಯಿಗೆ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ Mango Development Centre ಎಂದು ಹೇಳಿ ಅಂತರರಾಷ್ಟ್ರೀಯ ಮಾರುಕಟ್ಟೆಗೆ ಮಾವನ್ನು ಸರಬರಾಜು ಮಾಡುವುದಕ್ಕೆ ರೈತರಿಗೆ ಯಾವರೀತಿ ತಯಾರು ಮಾಡಬೇಕು, ಯಾವರೀತಿ ಕ್ರಮಗಳನ್ನು ತೆಗೆದುಕೊಳ್ಳಬೇಕು, post harvest technology ಯಾವ ರೀತಿ ವೃದ್ಧಿ ಮಾಡಬೇಕು ಎನ್ನುವ ಉತ್ತಮ ರೀತಿಯ ಯೋಜನೆ ಅನುಷ್ಠಾನಗೊಂಡು ಇವತ್ತು ಅಲ್ಲಿ ಪ್ರಗತಿಯಾಗುತ್ತಿದೆ. ಅಲ್ಲಿ building ಮುಕ್ತಾಯ ಹಂತಕ್ಕೆ ಬಂದಿದೆ. ಆದರೆ ಈ ರೀತಿಯಾದಂತಹ ಕಾರ್ಯಕ್ರಮಗಳನ್ನು ಹೆಚ್ಚೆಚ್ಚು ಮಾಡಬೇಕಾಗಿದೆ. ಆದರೆ ಎಲ್ಲೋ ಒಂದು ಕಡೆ

ಅಧಿಕಾರಿಗಳ ಆಲೋಚನೆಯ ಕೊರತೆ ಇದೆ. ನಾನು ಬೇರೆ ಬೇರೆ ರಾಜ್ಯಗಳಾದ ತಮಿಳುನಾಡು, ಗುಜರಾತ್ ಬಗ್ಗೆ ವೆಬ್‌ಸೈಟ್‌ನಲ್ಲಿ ನೋಡಿದೆ. ಕೆಲವು ರಾಜ್ಯಗಳಲ್ಲಿ ಈ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ಮಾರುಕಟ್ಟೆಯನ್ನು ಅಭಿವೃದ್ಧಿ ಪಡಿಸುವುದಕ್ಕೆ computerization ಮೂಲಕ online technology ಮಾಡುವುದಕ್ಕೆ ಉತ್ತಮ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ನಾನು ಸರ್ಕಾರಕ್ಕೆ ಸಲಹೆ ಕೊಡುತ್ತೇನೆ. ನಾನು ನನ್ನ ಚಿಂತಾಮಣಿ ಕ್ಷೇತ್ರದಲ್ಲಿ ಒಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ಟೊಮ್ಯಾಟೊ ಮತ್ತು ಮಾವಿನ ಮಾರುಕಟ್ಟೆಯನ್ನು ಮಾಡುವಂತಹ ಪ್ರಯತ್ನವನ್ನು ಏಳು ವರ್ಷದಿಂದ ಮಾಡುತ್ತಿದ್ದೇನೆ. ಅಲ್ಲಿಗೆ ಈಗ 1.50 ಕೋಟಿ ರೂಪಾಯಿಯನ್ನು ಕೊಟ್ಟಿದ್ದಾರೆ, ಇನ್ನು ಹೆಚ್ಚು ಅನುದಾನ ಬೇಕಾಗುತ್ತದೆ. ಈ ರೀತಿಯಾಗಿ ಉತ್ತಮ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸತಕ್ಕಂಥ ಕೆಲಸವನ್ನು ಸರ್ಕಾರ ಮಾಡಬೇಕು ಎನ್ನುವ ಮನವಿಯನ್ನು ಮಾಡುತ್ತಿದ್ದೇನೆ.

Drip Irrigationಗೆ 100 ಕೋಟಿ ರೂಪಾಯಿ ಕೊಟ್ಟಿದ್ದಾರೆ. ನಾನು ಬಹಳ ಸಂದರ್ಭದಲ್ಲಿ ಸಂಬಂಧಪಟ್ಟ ಕಾರ್ಯದರ್ಶಿಯವರಿಗೆ ದಯವಿಟ್ಟು ಸರಿಯಾದ ಸಮಯಕ್ಕೆ ಹಣವನ್ನು ಬಿಡುಗಡೆ ಮಾಡಿ ಎಂದು ವಿನಂತಿ ಮಾಡುತ್ತೇನೆ. ಆದರೆ ಎರಡು ವರ್ಷವಾದರೂ ಬಿಡುಗಡೆಯಾಗುತ್ತಿಲ್ಲ. ಈಗ macro irrigation ಹೋಗಿ ಇವತ್ತು ನಾವು micro irrigationನಲ್ಲಿ ಎಷ್ಟು ಮಿತವಾಗಿ ನೀರನ್ನು ಬಳಸುತ್ತೇವೆ, ಎಷ್ಟು ಉಳಿತಾಯ ಮಾಡುತ್ತೇವೆ ಎನ್ನುವುದನ್ನು ನೋಡಿ ಮಾಡಿದಾಗ ಮಾತ್ರ ಮುಂದಿನ ಪೀಳಿಗೆಗೆ ನೀರು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ರೈತರು ಸಾಲ ಮಾಡಿ drip irrigation ಮಾಡುತ್ತಿದ್ದಾರೆ, ಆದರೆ ಸಮಯಕ್ಕೆ ಸರಿಯಾಗಿ ಹಣ ಬಿಡುಗಡೆಯಾಗುತ್ತಿಲ್ಲ. ಮೊನ್ನೆ ಕೇಂದ್ರ ಸರ್ಕಾರ ಸುಮಾರು 7.50 ಕೋಟಿ ರೂಪಾಯಿ, ರಾಜ್ಯ ಸರ್ಕಾರ 3.50 ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಿದೆ. ನನ್ನ ಚಿಂತಾಮಣಿ ಕ್ಷೇತ್ರದಲ್ಲಿ ಸುಮಾರು 1.50 ಕೋಟಿ ರೂಪಾಯಿ ಬಿಡುಗಡೆ ಮಾಡಬೇಕಾಗಿರುವುದು ಬಾಕಿ ಇದೆ. ಅದನ್ನು ಬಿಡುಗಡೆ ಮಾಡುತ್ತೇವೆನ್ನುವ ಮಾತನ್ನು ಹೇಳಿದ್ದಾರೆ. ಈ ರೀತಿಯಾಗಿ ಇವತ್ತು ಏನು

ನೂರು ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ, ದಯವಿಟ್ಟು ಇದನ್ನು ಇನ್ನೂ ಹೆಚ್ಚು ಮಾಡಬೇಕಾಗುತ್ತದೆ. ನಾವು ಕೇವಲ ಬಿಜಾಪುರ, ಬಾಗಲಕೋಟೆ, ಕೋಲಾರ ಜಿಲ್ಲೆಗಳಿಗೆ ಅಷ್ಟೆ ಅಲ್ಲ ಎಲ್ಲಾ ಕಡೆ ಇವತ್ತು micro irrigation system ಅನ್ನು ಹೆಚ್ಚಿನ ರೀತಿಯಲ್ಲಿ ರೈತರು ಬಳಸುವುದಕ್ಕೆ ಪ್ರಾತಿನಿಧ್ಯ ಕೊಡಬೇಕಾಗಿರುವುದು ಬಹಳ ಮುಖ್ಯ ಎನ್ನುವ ಮಾತನ್ನು ಹೇಳುತ್ತೇನೆ.

ಮಾನ್ಯ ನಾಡಗೌಡರು market intervention ಹಾಗೂ support price ಬಗ್ಗೆ ಮಾತನಾಡಿದರು. ಇವತ್ತು ನನ್ನ ಕ್ಷೇತ್ರದಲ್ಲಿ ಹೆಚ್ಚು ಟೊಮ್ಯಾಟೋವನ್ನು ಬೆಳೆಯುವಂತಹ ಭಾಗ. ಅಲ್ಲಿ 15 ಕೆ.ಜಿ ಬಾಕ್ಸ್ ಮಾಡುತ್ತಾರೆ. ಅಲ್ಲಿ ಇನ್ನು crate system ಮಾಡಿಲ್ಲ. 15 ಕೆ.ಜಿ ಬಾಕ್ಸ್ 500 ರೂಪಾಯಿ ಬೆಲೆಗೆ ಹೋಗಿರುವ ಉದಾಹರಣೆ ಇದೆ. ಮೊನ್ನೆ ಬೆಲೆ ಕುಸಿದಾಗ ಬೀದಿಗೆ ಬಿಸಾಡುವಂತಹ ಪರಿಸ್ಥಿತಿಯನ್ನು ನಾವು ನೋಡುತ್ತೇವೆ. ಎರಡು ವರ್ಷದ ಹಿಂದೆ ಟೊಮ್ಯಾಟೊಗೆ ಬೆಂಬಲ ಬೆಲೆಯನ್ನು ಘೋಷಣೆ ಮಾಡಿದಂತಹ ಸಂದರ್ಭದಲ್ಲಿ ದಯವಿಟ್ಟು satellite image ತೆಗೆದುಕೊಳ್ಳಿ, ಎಷ್ಟು ಜನ ಎಲ್ಲೆಲ್ಲಿ ಟೊಮ್ಯಾಟೊ ಬೆಳೆ ಹಾಕಿದ್ದಾರೆ, ಒಂದು ಎಕರೆಗೆ ಇಷ್ಟು ಎಂದು ಅದರ ಆಧಾರದ ಮೇಲೆ minimum support price ಎಂದು ಬೆಂಬಲ ಬೆಲೆಯನ್ನು ಘೋಷಣೆ ಮಾಡಿ ಎಂದು ಹೇಳಿದಾಗ ಅವತ್ತಿನ ಸಂದರ್ಭದಲ್ಲಿ ಅಧಿಕಾರಿಗಳು ಯಾರು ಬೆಲೆ ಕೊಡಲಿಲ್ಲ. ಈಗ ಏನಾಗಿದೆ ಎಂದರೆ ಸುಮಾರು 18 ಕೋಟಿ ರೂಪಾಯಿಗೆ ಅಲ್ಲಿ ಬಿಲ್ ಮಾಡಿದ್ದಾರೆ. ಎಲ್ಲಾ ಬೋಗಸ್ ಬಿಲ್‌ಗಳು ಮಾಡಿದ್ದಾರೆ. ಇವತ್ತಿಗೂ ಸಹ ಅದನ್ನು ಯಾವುದೇ ಸರ್ಕಾರ ಕೊಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಈ ರೀತಿಯಾಗಿ ಉತ್ತಮವಾದ ಸಲಹೆಗಳನ್ನು ತೆಗೆದುಕೊಳ್ಳುವ ಕಡೆ ಅಧಿಕಾರಿಗಳು ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ಮನವಿಯನ್ನು ಸರ್ಕಾರಕ್ಕೆ ಮಾಡುತ್ತೇನೆ.

ಇನ್ನು ಈಗಾಗಲೇ ಬೇಸಿಗೆ ಪ್ರಾರಂಭವಾಗಿದೆ. ಈಗ ಎಲ್ಲರಿಗೂ ವಿದ್ಯುತ್ ಸಮಸ್ಯೆ ಕಾಡುತ್ತಿದೆ, ಅದು ಕೃಷಿ ವಿಚಾರಕ್ಕೆ ಸಂಬಂಧಪಟ್ಟಂತೆ ಅಥವಾ ಮಕ್ಕಳಿಗೆ ಪರೀಕ್ಷೆ ಸಮಯ ಬರುತ್ತಿರುವುದರಿಂದ ಓದುವ ವಿಚಾರದಲ್ಲಿ ಸಮಸ್ಯೆ ಆಗಬಹುದು. ನಿನ್ನೆ ಸಂಜೆ ಒಬ್ಬ ಪಿ.ಯು.ಸಿ ಓದುವಂತಹ ವಿದ್ಯಾರ್ಥಿ

ಫೋನ್ ಮಾಡಿ, ನಮಗೆ ಚಂದನ ಟಿ.ವಿ ಯಲ್ಲಿ ಬೆಳಿಗ್ಗೆ 10.00 ಗಂಟೆಯಿಂದ 1.00 ಗಂಟೆಯವರೆಗೆ ಪಿ.ಯು.ಸಿ subjects ಬಗ್ಗೆ revision ಕಾರ್ಯಕ್ರಮ ಬರುತ್ತಿದೆ. ಮೂರು ಗಂಟೆಗಳ ಕಾಲ phone–in ಕಾರ್ಯಕ್ರಮವಿದೆ. ದಯವಿಟ್ಟು ಆ ಸಂದರ್ಭದಲ್ಲಿ ವಿದ್ಯುತ್ ಕಡಿತ ಮಾಡಬೇಡಿ ಎಂದು ಹೇಳಿ ಸಾರ್, ಆ ಕಾರ್ಯಕ್ರಮ 15 ನೇ ತಾರೀಖಿನವರೆಗೂ ಇದೆ ಎಂದು ಮನವಿ ಮಾಡಿಕೊಂಡನು. ನಾನು ನಿನ್ನೆ ಬೆಳಿಗ್ಗೆ ಅಧಿಕಾರಿಗಳ ಹತ್ತಿರ ಬೆಳಿಗ್ಗೆ 10. 00 ಗಂಟೆಯಿಂದ 1.00 ಗಂಟೆಯವರೆಗೂ ವಿದ್ಯುತ್ ಸರಬರಾಜು ಮಾಡಿ ಎಂದು ಮಾತನಾಡಿದೆ. ಈಗ ಮಾನ್ಯ ಮಂತ್ರಿಗಳು ರಾತ್ರಿ ಹೊತ್ತು ಲೋಡ್ ಶೆಡ್ಡಿಂಗ್ ಇರುವುದಿಲ್ಲ, ಬೇರೆ ಸಮಯದಲ್ಲಿ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಈಗ ಇದು ಬಹಳ ಮುಖ್ಯವಾದಂತಹ ಘಟ್ಟ . ಈಗ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಯುವ ಸಮಯ. ಇವತ್ತು ಚಂದನ ಟಿ.ವಿಯಲ್ಲಿ ಕಾರ್ಯಕ್ರಮ ಬರುತ್ತಿದೆ. ದಯವಿಟ್ಟು ಅದನ್ನು......

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಇಲ್ಲಿ ಯಾರೂ ಸಂಬಂಧಪಟ್ಟ ಮಂತ್ರಿಗಳು ಇಲ್ಲ. ಇವರು ಹೇಳುತ್ತಿರುವುದನ್ನು ಯಾರು ಬರೆದುಕೊಳ್ಳುತ್ತಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೇ, ಈಗ ಪ್ರಶ್ನೋತ್ತರ ಇಲ್ಲ. ಗಮನ ಸೆಳೆಯುವ ಸೂಚನೆ ಕೂಡ ಇಲ್ಲ. ನಾಳೆ ಮಧ್ಯಾಹ್ನ ಬೇಕಾದರೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಹೇಳಿಸಿ. ದಯಮಾಡಿ ತಾವು ಈಗ Zero Hour or Question Hour ತೆಗೆದುಕೊಳ್ಳಿ. ಇಲ್ಲಿ ಒಬ್ಬರೂ ಮಂತ್ರಿಗಳು ಮತ್ತು ಅಧಿಕಾರಿಗಳು ಇಲ್ಲ. ಈಗ ನೀವು ಇದನ್ನು ಮುಂದೂಡಿ ನಾಳೆ ಮಧ್ಯಾಹ್ನದವರೆಗೂ ಬಜೆಟ್ ಭಾಷಣದ ಮೇಲೆ ಚರ್ಚೆಗೆ ಅವಕಾಶ ಕೊಡಿ. ಈಗ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: BAC meeting ನಲ್ಲಿ ನೀವು 9ನೇ ತಾರೀಖಿಗೆ replyಗೆ ಏಕೆ ಒಪ್ಪಿಕೊಂಡಿದ್ದೀರಿ?

ಶ್ರೀ ಹೆಚ್.ಡಿ. ರೇವಣ್ಣ: ನಾವು ಒಪ್ಪಿಲ್ಲ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಹಾಗಾದರೆ ಕೇಳಿ, ಅವರು ಒಪ್ಪಕೊಂಡಿದ್ದಾರೆಂದು ಹೇಳುತ್ತಿದ್ದಾರೆ. If you want gages, ನಮ್ಮ ಮಾತು ಸದನದಲ್ಲಿ ಕೇಳಬಾರದು, ಅದು ರೆಕಾರ್ಡ್‌ಗೆ ಹೋಗಬಾರದು ಎಂದು ನೀವೇನಾದರೂ ನಿರ್ಣಯ ಮಾಡಿದ್ದರೆ ಸರ್ಕಾರದ ಪರವಾಗಿ ಹೇಳಿಬಿಡಿ. No, this is not the way to conduct the House.

ಶ್ರೀ ಹೆಚ್.ಡಿ. ರೇವಣ್ಣ: ನೀವು Question Hour ತೆಗೆದುಕೊಳ್ಳದೇ ಹೋದರೆ ನಾವು ಧರಣಿ ಮಾಡಬೇಕಾಗುತ್ತದೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಇಲ್ಲಿ ನಾವು 9.00 ಗಂಟೆಯಲ್ಲಿ ಏನು ಮಾತನಾಡಬೇಕು?

(ಗೊಂದಲ)

Dr.Sharana Prakash Rudrappa Patil: How many hours this House has spent? It is a Budget Session. We are not come here to play. ನಾಳೆ ಬೆಳಿಗ್ಗೆ ನಾವು reply ಕೇಳುವುದಿಲ್ಲ. We will all protest. 15ನೇ ತಾರೀಖು reply ಕೊಡಲಿ. What is the hurry? ನೀವು 30ನೇ ತಾರೀಖಿನವರೆಗೂ vote an account ತೆಗೆದುಕೊಳ್ಳಬಹುದು. ನೀವು ಬೇಕಿದ್ದರೆ House extend ಮಾಡಿ.

ಅಧ್ಯಕ್ಷರು: ಅವರು ಮಾತನಾಡಲಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ನಾವು ಇನ್ನು ಮೇಲೆ ಬಜೆಟ್ ಮೇಲೆ ಮಾತನಾಡುವುದಿಲ್ಲ. ಏಕೆ ಮಾತನಾಡಬೇಕು? ಇಲ್ಲಿ ಯಾರಿದ್ದಾರೆಂದು ಹೇಳಿ? Nobody is there to listen and nobody is serious.

ಶ್ರೀ ಹೆಚ್.ಡಿ. ರೇವಣ್ಣ: ನಾಳೆ ಬೆಳಿಗ್ಗೆ ಬೇಕಾದರೆ ಐದಾರು ಜನ ಸದಸ್ಯರು ಮಾತನಾಡುತ್ತಾರೆ. ಮಧ್ಯಾಹ್ನ C.M reply ಕೊಡುತ್ತಾರೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: 15ನೇ ತಾರೀಖು ಉತ್ತರ ಕೊಡಲಿ. ಅವರು ನಾಳೆ ಮುಹೂರ್ತ ನೋಡಿ ಬಂದಿದ್ದಾರಾ?

ಶ್ರೀ ಹೆಚ್.ಡಿ. ರೇವಣ್ಣ: 15ನೇ ತಾರೀಖು ಕೊಡಲಿ.

ಅಧ್ಯಕ್ಷರು: ರೇವಣ್ಣನವರೇ ಕುಳಿತುಕೊಳ್ಳಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ರೇವಣ್ಣನವರೇ, ಅಲ್ಲಿ ನೀವು ಏಕೆ ಒಪ್ಪಿಕೊಂಡಿರಿ?

ಶ್ರೀ ಹೆಚ್.ಡಿ. ರೇವಣ್ಣ: ನಾವು ಒಪ್ಪಿಲ್ಲ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಈ ರೀತಿ ಮಾಡಿ ನೀವು ಅಲ್ಲೊಂದು ಹೇಳುತ್ತೀರಿ, ಇಲ್ಲಿಗೆ ಬಂದು ನಮಗೆ ಇಲ್ಲೊಂದು ಹೇಳುತ್ತೀರಿ. ಈಗ ನೀವು ನಮ್ಮನ್ನು ಕಷ್ಟಕ್ಕೆ ಸಿಕ್ಕಿ ಹಾಕಿಸುತ್ತೀರಿ.

ಶ್ರೀ ಹೆಚ್.ಡಿ. ರೇವಣ್ಣ: ನಾವು ಮತ್ತು ಸಿದ್ದರಾಮಯ್ಯನವರು 17ನೇ ತಾರೀಖು ಉತ್ತರ ಕೊಡಬೇಕೆಂದು ಹೇಳಿದ್ದು.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ನಾವು 9ನೇ ತಾರೀಖಿಗೆ replyಗೆ ಒಪ್ಪುವುದಿಲ್ಲ. We are not going to agree that the C.M is going to reply on 9th. Why we should agree? Let him reply on 15th. ನಾಳೆ reply ಮಾಡುವುದಕ್ಕೆ ಮುಹೂರ್ತ ಇದೆಯೇ? We will not accept this. BACಯಲ್ಲಿ ಆಗಿದ್ದರೆ ಅದನ್ನು ತಿದ್ದುಪಡಿ ಮಾಡಿ.

ಶ್ರೀ ಗೋವಿಂದ ಎಂ. ಕಾರಜೋಳ: ಡಾಕ್ಟರ್ ಶರಣ ಪ್ರಕಾಶ್‌ರವರಿಗೆ ಬಹಳ ತಡವಾಗಿ ಗೊತ್ತಾಗಿದೆ ರೇವಣ್ಣನವರ ದಾರಿ ತಪ್ಪಿಸುತ್ತಿರುವುದು.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಕಾರಜೋಳರವರೇ, ನಾನು ದಾರಿ ತಪ್ಪಿಸುವುದಕ್ಕೆ ಹೋಗಿಲ್ಲ ನೀವು ದಯಮಾಡಿ ದಾರಿ ತಪ್ಪಿಸುವುದಕ್ಕೆ ಹೋಗಬೇಡಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ನಮ್ಮ ಸಲಹೆಗಳನ್ನು ಕೇಳಬಾರದು ಎಂದು ಸರ್ಕಾರ ನಿರ್ಣಯ ಮಾಡಿ ಏನಾದರೂ ಹೇಳಿದ್ದರೆ ಹಾಗೆ ತೀರ್ಮಾನ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ: Reply 17ನೇ ತಾರೀಖು ಆಗಬೇಕೆಂದು ನಾನು, ಮಾನ್ಯ ಸಿದ್ಧರಾಮಯ್ಯ ಹಾಗೂ ಜಯಚಂದ್ರರವರು ಕೂಡ ಹೇಳಿದ್ದಾರೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: 9th reply ಗೆ ಒಪ್ಪಿಲ್ಲವಂತೆ. ನಮ್ಮ ನಾಯಕರನ್ನು ಕೇಳಿದರೆ ಅವರು ಯಾರೂ ಇದಕ್ಕೆ ಒಪ್ಪಿಲ್ಲ. ನಾಳೆ C.M replyಗೆ ನಾವು ಒಪ್ಪುವುದಿಲ್ಲ. ನಮಗೆಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಿ. We don't want to listen your reply.

(ಗೊಂದಲ)

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೇ, 10ರಂದು ಉತ್ತರ ಕೊಡುವುದಕ್ಕೆ ಹೇಳಿಬಿಡಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡಬಾರದು ಎಂದು ಡಿಸೈಡ್ ಮಾಡಿದ್ದೀರಾ?

ಶ್ರೀ ಸಿದ್ಧರಾಮಯ್ಯ: ಕಾನೂನು ಮತ್ತು ಸಂಸದೀಯ ಸಚಿವರೇ, ಹೇಗೋ time ಇದೆಯಲ್ಲ, 10ರಂದು ಉತ್ತರ ಕೊಟ್ಟು ಬಿಡಲಿ.

ಶ್ರೀ ಎಸ್. ಸುರೇಶ್ ಕುಮಾರ್: ಈಗಾಗಲೇ BACಯಲ್ಲಿ ಚರ್ಚೆಯಾಗಿದೆ.

ಶ್ರೀ ಸಿದ್ಧರಾಮಯ್ಯ: BACನಲ್ಲಿ 9ನೇ ತಾರೀಖು ಎಂದು ಆಗಲಿಲ್ಲ.

ಅಧ್ಯಕ್ಷರು: ಅವತ್ತು 9ನೇ ತಾರೀಖು ಎಂದು ಆಗಿದೆ.

ಶ್ರೀ ಎಸ್. ಸುರೇಶ್ ಕುಮಾರ್: 9ನೇ ತಾರೀಖು reply ಕೊಡಬೇಕೆಂದು ಆಗಿದ್ದು.

ಶ್ರೀ ಸಿದ್ಧರಾಮಯ್ಯ: ನಾವು 10ನೇ ತಾರೀಖು ಎಂದು ಹೇಳಿದ್ದೆವು ಸ್ವಾಮಿ.

ಶ್ರೀ ಎಸ್. ಸುರೇಶ್‌ಕುಮಾರ್: ಇಲ್ಲ 9ನೇ ತಾರೀಖು ಎಂದು ಆಗಿತ್ತು.

ಶ್ರೀ ಸಿದ್ದರಾಮಯ್ಯ: ಇಲ್ಲ ನಾವು ಹೇಳಲಿಲ್ಲ. ನಾವು 10ನೇ ತಾರೀಖು ಎಂದು ಹೇಳಿದೆವು.

ಶ್ರೀ ಎಸ್. ಸುರೇಶ್ ಕುಮಾರ್: ನೀವೂ ಒಪ್ಪಿಕೊಂಡಿರಿ.

ಶ್ರೀ ಸಿದ್ಧರಾಮಯ್ಯ: ನಾವು 10ನೇ ತಾರೀಖು ಎಂದು ಹೇಳಿದೆವು. 10ನೇ ತಾರೀಖು ಸಾಯಂಕಾಲ aircraft ತೆಗೆದುಕೊಂಡು ಹೋಗಿ ಎಂದು ಹೇಳಿದೆವು. ನಾಳೆ ಒಂದು ದಿನ ಮಾತನಾಡುವವರೆಲ್ಲ ಮಾತನಾಡಲಿ.

ಶ್ರೀ ಹೆಚ್.ಡಿ. ರೇವಣ್ಣ: ನೀವು ಬೇಕಾದರೆ special aircraft ತೆಗೆದುಕೊಂಡು ಹೋಗಿ.

ಶ್ರೀ ಎಸ್. ಸುರೇಶ್ ಕುಮಾರ್: ಇದರ ಬಗ್ಗೆ BACಯಲ್ಲಿ ಸಂಪೂರ್ಣ ಚರ್ಚೆಯಾಗಿದೆ. 9ನೇ ತಾರೀಖು ಬೆಳಿಗ್ಗೆ reply ಮುಗಿಸಿ ನಾವು ಅಲ್ಲಿಗೆ ಹೋಗಬೇಕು.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೇ, ನೀವು ದಯಮಾಡಿ Question Hour ತೆಗೆದುಕೊಳ್ಳಿ. ನೀವು Question Hour ತೆಗೆದುಕೊಳ್ಳದಿದ್ದರೆ ನಾವು ಈಗ walk out ಮಾಡುತ್ತೇವೆ.

ಅಧ್ಯಕ್ಷರು: BACಯಲ್ಲಿ ತೀರ್ಮಾನ ಮಾಡಿ ಮತ್ತೇ ಈಗ ಬದಲಾವಣೆ ಮಾಡಬೇಕೆಂದರೆ ಆಗುವುದಿಲ್ಲ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಸದಸ್ಯರುಗಳೆಲ್ಲ ಗಲಾಟೆ ಮಾಡುತ್ತಿದ್ದಾರೆ, ಏನು ಮಾಡುತ್ತೀರಿ? ನಾವು ಅವರ ಕೈಯಲ್ಲಿ ಏಟು ಹೊಡೆಸಿಕೊಳ್ಳಬೇಕಾಗುತ್ತದೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೇ, ನನ್ನದು request ಇದೆ. If you want to discuss ಅಲ್ಲಿ ಮಾತನಾಡಿ ಎಂದು subject committees ಮಾಡಿದ್ದೀರಾ. ಇಲಾಖೆಗಳ ಬಗ್ಗೆ ಅಲ್ಲಿ ಕೂಡ ಚರ್ಚೆಯಾಗುತ್ತಿಲ್ಲ, Houseನಲ್ಲೂ ಚರ್ಚೆಯಾಗುತ್ತಿಲ್ಲ. Is this is the way to conduct the business of the House? ನೀವು subject committees abolish ಮಾಡಿದಿರಿ. ಇಲ್ಲಿ ಕೂಡ ನಮಗೆ ಹೇಳುವುದಕ್ಕೆ ಅವಕಾಶ ಕೊಡುವುದಿಲ್ಲ. ಹಾಗಾದರೆ ನಾವು ಎಲ್ಲಿ ಹೇಳಬೇಕೆಂದು ಹೇಳಿ. ನಾವು ಹೇಳಿದರೆ ಮಂತ್ರಿಗಳು ಯಾರು respond ಮಾಡುವುದಿಲ್ಲ. You should reply to me. I am not talking nonsense here. You are curtailing our rights.

ಅಧ್ಯಕ್ಷರು: ಈಗ ಬಜೆಟ್ ಮೇಲೆ vote on account ಆದಮೇಲೆ ಮತ್ತೆ ಚರ್ಚೆಗೆ ಅವಕಾಶ ಇದೆ.

Dr.Sharana Prakash Rudrappa Patil: Is this is the way of conducting the Budget Session? ಯಾವಾಗ ಅವಕಾಶವಿದೆ?

ಅಧ್ಯಕ್ಷರು: Vote on account ಬಗ್ಗೆ ಹಿಂದೆ ನಡೆದಿರುವುದನ್ನೆಲ್ಲಾ ನೋಡಿದರೆ 4–5 ದಿವಸದಲ್ಲಿ ಚರ್ಚೆ ಮಾಡಿ vote on account ತೆಗೆದುಕೊಂಡಿದೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಇದು ಎಂದೂ ಆಗಿಲ್ಲ, minimum 10 days discussion ಆಗಿದೆ.

ಅಧ್ಯಕ್ಷರು: ಎಂದೂ ಆಗಿಲ್ಲವೆಂದರೆ ನೀವು ದಾಖಲೆ ತೆಗೆದು ನೋಡಿ. Don't argue without looking into the records. ನಾನು ದಾಖಲೆ ನೋಡಿ ಹೇಳುತ್ತಿದ್ದೇನೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಡಿಟೇಲ್ ಆಗಿ ಎಲ್ಲಾ ಹೇಳಿ.

ಅಧ್ಯಕ್ಷರು: 1995ರಿಂದ ಆಗಿರುವಂತಾದ್ದು ಹೇಳಬೇಕೆಂದರೆ ನನ್ನ ಚೇಂಬರಿಗೆ ಬನ್ನಿ ತೋರಿಸುತ್ತೇನೆ. You can't say like that.

Dr.Sharana Prakash Rudrappa Patil: Do you want to curtail our rights?

Mr.Speaker: No you cannot do this type of argument.

Dr.Sharana Prakash Rudrappa Patil: Then you tell me what we will do?

ಅಧ್ಯಕ್ಷರು: ನಾನು ಹೇಳಿದ್ದೆನಲ್ಲಾ vote on account, ಆಮೇಲೆ ವಿಸ್ತ್ರತವಾಗಿ ಚರ್ಚೆ ಮಾಡುವುದಕ್ಕೆ ಅವಕಾಶವಿದೆ, ಇಲ್ಲವೆಂದು ಯಾರು ಹೇಳಿದ್ದು?

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮತ್ತೆ 9ನೇ ತಾರೀಖು ಎಂದು ಹೇಳುತ್ತಾರಲ್ಲಾ ಕೇಳಿ.

ಅಧ್ಯಕ್ಷರು: ನೀವು B.A.C.ಯಲ್ಲಿ ಒಪ್ಪಿಕೊಂಡಿದ್ದೀರಿ. ಅಲ್ಲಿ ಒಂದು ಮಾತು ಇಲ್ಲಿ ಒಂದು ಮಾತನ್ನು ಏಕೆ ಹೇಳುತ್ತೀರಿ. ಇಲ್ಲಿ ನೀವು ಪಕ್ಷದ ನಾಯಕರಾಗಿ ಇದ್ದುಕೊಂಡು, ಇಲ್ಲಿ ಒಂದು ಮತ್ತೆ ಹೀಗೆ ಹೇಳುವಂಥದ್ದು ಶೋಭೆ ತರುವಂಥದ್ದಲ್ಲ, ಹಾಗೆ ಮಾತನಾಡಬೇಕಾಗುತ್ತದೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಇನ್ನು ನಮ್ಮವರು ಮಾತನಾಡಬೇಕಾಗಿದೆ. ಶ್ರೀ ಬಾಲಕೃಷ್ಣರವರು ಮಾತನಾಡುತ್ತಾರೆ.

ಅಧ್ಯಕ್ಷರು: ಈಗ ಕಾಂಗ್ರೆಸ್ ಪಕ್ಷದವರಿಗಿಂತ ಜೆ.ಡಿ.ಎಸ್.ನವರು ಹೆಚ್ಚು ಮಾತನಾಡಿದ್ದಾರೆ. ನಿಮಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಮಾನ್ಯ ಅಧ್ಯಕ್ಷರೆ, ಕೆಲವು ನಾಯಕರು ಮಾತನಾಡಿರುವುದನ್ನು ಅವರು ಒಂದು ಸಾರಿ ಓದಿನೋಡಲಿ, ಅವರು ಏನು ಮಾತನಾಡಿದ್ದಾರೆಂಬುದು ಅರ್ಥವಾಗುತ್ತದೆ. ಅವರು ಯಾವ ರೀತಿಯಲ್ಲಿ ಮಾತನಾಡಿದ್ದಾರೆಂಬುದನ್ನು ನೋಡಲಿ, ಹೇಳಿರುವುದನ್ನೇ ಹತ್ತು ಸಾರಿ ಹೇಳಿದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ನಾವು ಅವರಿಂದ ಕಲಿಯ ಬೇಕಾಗಿಲ್ಲ.

(ಗೊಂದಲ)

ಅಧ್ಯಕ್ಷರು: ಕಾಂಗ್ರೆಸ್‌ನವರು ಮಾತನಾಡಿರುವುದಕ್ಕಿಂತ ಹೆಚ್ಚು ಸಮಯವನ್ನು ನಿಮಗೆ ಕೊಟ್ಟಿದೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ನಮ್ಮ Membersಗೆ ಅವಕಾಶ ಕೊಡಿ.

ಅಧ್ಯಕ್ಷರು: ನಾನು ನಿಮ್ಮ ಪಕ್ಷಕ್ಕೆ ನಿಗದಿತ 7 ಗಂಟೆಗಳಿಗಿಂತ ಹೆಚ್ಚು ಸಮಯವನ್ನು ಕೊಡಲಾಗಿದೆ. ಕಾಂಗ್ರೆಸ್ ಪಕ್ಷದವರು 7 ಗಂಟೆಗಳ ಕಾಲ ಮಾತನಾಡಿದ್ದಾರೆ. ತಾವು ಸುಮ್ಮನೆ ಏಕೆ ಮಾತನಾಡುತ್ತೀರಿ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಗುರುವಾರ ಬೆಳಿಗ್ಗೆ 10.00 ಗಂಟೆಗೆ reply ಕೊಡುವುದೆಂದು ತೀರ್ಮಾನವಾಗಿರುವುದು. ದಯಮಾಡಿ ತಾವು ಈಗ Question Hour ತೆಗೆದುಕೊಳ್ಳಿ. ಇಲ್ಲಿ ಬೆಳಿಗ್ಗೆಯಿಂದ ಸದಸ್ಯರು ಕಾಯುತ್ತಿದ್ದಾರೆ. ನೀವೇ ಸಂಜೆ 5 ಗಂಟೆಗೆ question hour ತೆಗೆದು ಕೊಳ್ಳುತ್ತೇನೆಂದು ಹೇಳಿದ್ದೀರಿ. ತಾವು ದಯಮಾಡಿ ಅದನ್ನು ತೆಗೆದುಕೊಳ್ಳಿ.

ಅಧ್ಯಕ್ಷರು: ನಿಮಗೆ ಸಾಕಷ್ಟು ಅವಕಾಶಗಳನ್ನು ಕೊಟ್ಟಿದೆ.

ಶ್ರೀ ಹೆಚ್.ಡಿ.ರೇವಣ್ಣ: ಈಗ ದಯಮಾಡಿ ತಾವು Question Hour ತೆಗೆದುಕೊಳ್ಳುತ್ತೇನೆಂದು ಹೇಳಿ, ಗುರುವಾರ ಬೆಳಿಗ್ಗೆ ಚರ್ಚೆ ಮುಂದುವರೆಯಲಿ, ನಾಡಿದ್ದು reply ಕೊಡಲಿ.

Dr.Sharana Prakash Rudrappa Patil: MLAs are being deprived of their right. I protest.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಸಿದ್ಧರಾಮಯ್ಯನವರೆ ಹೇಳಿ, ಮಾನ್ಯ ಜಯಚಂದ್ರರವರೆ.. .

(**ಗೊಂದಲ**)

Mr.Speaker: Because of . .

Dr.Sharana Prakash Rudrappa Patil: No you are telling that our leaders have agreed. But they are telling that they have not agreed. We protest. This is not the way to conduct the House.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಮಾನ್ಯ ಅಧ್ಯಕ್ಷರೇ ನಿಮಗೆ direct ಮಾಡುವುದು ಸರಿಯಿಲ್ಲ. ಅಧ್ಯಕ್ಷರು House ಅನ್ನು ಈ ರೀತಿ ನಡೆಸಬೇಕೆಂದು ನಿಮಗೆ ಹೇಳುತ್ತಿರುವುದು ಸರಿಯಿಲ್ಲ.

Sri S. Suresh Kumar: Yes there is a way.

Mr. Spekaer: Dr.Sharana Prakash Rudrappa Patil, I am observing you. You are threatening the Chair. Don't ಡು this. Feelings ಅನ್ನು ಹೇಳುವ ರೀತಿಯಲ್ಲಿ ಹೇಳಿ. Are you

threatening? If you are threatening, I know how to act also.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಸದನ ಹೀಗೆ ನಡೆಸಬೇಕೆಂದು ಹೇಳುವ ಅಧಿಕಾರ ಅವರಿಗೆ ಇಲ್ಲ.

Sri Siddaramaiah: ಮಾನ್ಯ ಅಧ್ಯಕ್ಷರೇ, he is not threatening.

Mr. Spekaer: He is threatening, ನಾನು ಆಗಲಿಂದ observe ಮಾಡುತ್ತೀದ್ದೇನೆ.

ಶ್ರೀ ಎಸ್.ಸುರೇಶ್‌ಕುಮಾರ್: ನೀವು ನಿಮ್ಮ ಪಾರ್ಟಿಯವರು, ನಿಮ್ಮ ಪಾರ್ಟಿಯ ಶಾಸಕರು; ಹಾಗೆ ಮಾತನಾಡುವುದು. Entire house is a witness.

Mr. Spekaer: He is threatening. Are you going to threat? ಮತ್ತೆ ಏಕೆ ಮಾತನಾಡಬೇಕು? Threat ಮಾಡುತ್ತಾರಲ್ಲಾ, ನಾನು observe ಮಾಡುತ್ತಿದ್ದೇನೆ.

ಶ್ರೀ ಸಿದ್ಧರಾಮಯ್ಯ: ಅವರ feelings ಅನ್ನು ಹೇಳುತ್ತಿದ್ದಾರೆ.

ಅಧ್ಯಕ್ಷರು: Feelings ಅನ್ನು ಹೇಳಲಿ, ನಾನು ಆಗಲಿಂದಲೂ ನೋಡುತ್ತಿದ್ದೇನೆ.

Sri Siddaramaiah: Why do you confuse it as threatening?

ಅಧ್ಯಕ್ಷರು: It is nothing but a threatening. ನಾನು ಅಷ್ಟು cool ಆಗಿ ಹೇಳುತ್ತಿದ್ದೇನೆ.

ಶ್ರೀ ಸಿದ್ಧರಾಮಯ್ಯ: No. It is not threatening. ಮಾನ್ಯ ಅಧ್ಯಕ್ಷರೆ, ಇಲ್ಲಿ 10ನೇ ತಾರೀಖಿನಂದು ಉತ್ತರ ಕೊಡುವುದು ಒಳ್ಳೆಯದು.

ಶ್ರೀ ಎಸ್.ಸುರೇಶ್‌ಕುಮಾರ್:ಮಾನ್ಯ ಅಧ್ಯಕ್ಷರೆ, BACಯಲ್ಲಿ ಚರ್ಚೆ ಮಾಡಿದ ನಂತರ ತಾವು ಅದನ್ನು Houseನಲ್ಲೂ announce ಮಾಡಿದ್ದೀರಿ. ದಯವಿಟ್ಟು, let us adhere to that.

ಶ್ರೀ ಸಿದ್ಧರಾಮಯ್ಯ: ಅದೇ ಏನು supreme ಅಲ್ಲ.

ಶ್ರೀ ಎಸ್.ಸುರೇಶ್‌ಕುಮಾರ್: ಹೌದು, ನೀವು ಹೇಳುವುದೇ supreme ಅಲ್ಲ.

ಶ್ರೀ ಸಿದ್ಧರಾಮಯ್ಯ: ನಾನು ಹೇಳುವುದಲ್ಲ, House is supreme.

ಶ್ರೀ ಎಸ್.ಸುರೇಶ್‌ಕುಮಾರ್: ಹೌದು, House is supreme and he is the custodian of the House.

Sri Siddaramaiah: Yes he is the custodian of the House. He has to go by the feeling of the House.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ನಿನ್ನೆ ಮತ್ತು ಇವತ್ತು ಸಾಕಷ್ಟು ಜನರಿಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೇವೆ.

Sri Siddaramaiah: He has to go by the opinion of the House. You have to take the opinion of the House to be considered.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಪ್ರತಿ ಪಕ್ಷದ ನಾಯಕರೆ ಮೂರು ದಿವಸಗಳು ಮಾತನಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, you have to consider both the sides opinion of the House.

ಅಧ್ಯಕ್ಷರು: ನಾನು ತಮ್ಮ ಅಭಿಪ್ರಾಯಗಳನ್ನು ತೆಗೆದುಕೊಂಡೇ ಮಾಡಿದ್ದು. ಈಗ ತಮ್ಮೆಲ್ಲರ ಅಭಿಪ್ರಾಯ ತೆಗೆದುಕೊಂಡು ತೀರ್ಮಾನಕ್ಕೆ ಬಂದಿದ್ದು.

ಡಾ: ಹೆಚ್.ಸಿ.ಮಹದೇವಪ್ಪ: ಮಾನ್ಯ ಅಧ್ಯಕ್ಷರೆ, ಒಂದು ಆಯವ್ಯಯದ ಮೇಲೆ ಚರ್ಚೆ ಮಾಡುವಾಗ ...

(ಗೊಂದಲ)

Dr.Sharana Prakash Rudrappa Patil: ಆಯವ್ಯಯದ ಮೇಲೆ ಚರ್ಚೆ ಮಾಡಲು ನೀವು ಅವಕಾಶ ಕೊಡಲಿಲ್ಲ ಎಂದರೆ, this is the

systematic gagging of the opposition members and we cannot yield to this.

Sri Siddaramaiah: Please allow them to participate.

ಅಧ್ಯಕ್ಷರು: ತಾವು ನನಗೆ ಏನು ಲಿಸ್ಟ್ ಕೊಟ್ಟಿದ್ದೀರಿ. ಆ ಲಿಸ್ಟ್‌ನಲ್ಲಿರುವವರೆಲ್ಲರೂ ಮಾತನಾಡಿದ್ದಾರೆ.

ಶ್ರೀ ಸಿದ್ಧರಾಮಯ್ಯ: ಲಿಸ್ಟ್‌ನಲ್ಲಿ ಅವರ ಹೆಸರು ಇದೆಯಲ್ಲಾ.. ..

ಅಧ್ಯಕ್ಷರು: ಅವರಿಗೆ ಮಾತನಾಡಲು ಅವಕಾಶವನ್ನು ಕೊಡುತ್ತೇನೆ, ಯಾರು ಇಲ್ಲವೆಂದು ಹೇಳಿದ್ದು.

ಶ್ರೀ ಸಿದ್ಧರಾಮಯ್ಯ: ಎಲ್ಲಿ?

ಅಧ್ಯಕ್ಷರು: ಈಗ ಕೊಡುತ್ತೇನೆ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, ಇನ್ನು ಬಹಳ ಜನರು ಮಾತನಾಡುವವರು ಇದ್ದಾರೆ.

ಅಧ್ಯಕ್ಷರು: ಲಿಸ್ಟ್‌ನಲ್ಲಿ ಕೊಟ್ಟಿರುವ ಹೆಸರಿನವರೆಲ್ಲಾ ಮಾತನಾಡಿದ್ದು ..ದೆ.

ಡಾ: ಹೆಚ್.ಸಿ.ಮಹದೇವಪ್ಪ: ಮಾನ್ಯ ಅಧ್ಯಕ್ಷರೆ, ಬಜೆಟ್ ಮೇಲೆ ಮಾತನಾಡದೇ ಬೇರೆ ಇನ್ನು ಯಾವುದರ ಮೇಲೆ ಮಾತನಾಡುತ್ತಾರೆ?

ಅಧ್ಯಕ್ಷರು: ಮಾನ್ಯ ವಿರೋಧಪಕ್ಷದ ನಾಯಕರೆ, ತಾವು ಏನು ಲಿಸ್ಟ್ ಕೊಟ್ಟಿದ್ದೀರಿ. ಅದರಲ್ಲಿ ಇನ್ನು ಡಾ:ಶರಣ ಪ್ರಕಾಶ ರುದ್ರಪ್ಪ ಪಾಟೀಲ್‌ರವರು ಒಬ್ಬರು ಇದ್ದಾರೆ, ಅವರಿಗೆ ಅವಕಾಶವನ್ನು ಕೊಡುತ್ತೇನೆ. ಈ ಲಿಸ್ಟ್ ತಾವೇ ಕೊಟ್ಟಿದ್ದು.

(ಗೊಂದಲ)

ಶ್ರೀ ಸಿದ್ಧರಾಮಯ್ಯ: ಹೌದು, ಈಗ 7.00 ಗಂಟೆಯಾಗುತ್ತಿದೆ. ನಿನ್ನೆ 8 ಗಂಟೆಯವರೆಗೂ ಕುಳಿತ್ತಿದ್ದೆವು. ಈಗ ಇನ್ನು Question Hour ಆಗಿಲ್ಲ, Calling Attention ಇದೆ. ಅದಕ್ಕೆ ಇವತ್ತು ಚರ್ಚೆಯನ್ನು ನಿಲ್ಲಿಸಿ, ನಾಳೆ ಬೆಳಿಗ್ಗೆ ಚರ್ಚೆಯನ್ನು ಪ್ರಾರಂಭ ಮಾಡಿ. ನಾಳಿದ್ದು ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಡಲಿ. ಒಂದು ದಿವಸದಲ್ಲಿ ಏನು

ಆಗುವುದಿಲ್ಲ, ಅಂಥ ಬಹಳ ಅನಿವಾರ್ಯತೆ ಏನೂ ಇಲ್ಲ. ಈಗ ನಾಳೆಯೇ 31ನೇ ತಾರೀಖು. ...

ಅಧ್ಯಕ್ಷರು: ಇದೆಲ್ಲವನ್ನು BACಯಲ್ಲಿ ಚರ್ಚೆ ಮಾಡಿ ಆಗಿದೆಯಲ್ಲಾ..

ಶ್ರೀ ಸಿದ್ಧರಾಮಯ್ಯ: ಅವತ್ತು ಚರ್ಚೆಯಲ್ಲೂ ನಾನು 10ನೇ ತಾರೀಖು ಎಂದು ಹೇಳಿದ್ದೇನೆ.

ಅಧ್ಯಕ್ಷರು: ಹಾಗಾದರೆ ನಾನು ಸದನದ ಮುಂದೆ ಸುಳ್ಳು ಹೇಳಿದ್ದೇನೆ ಅಂತ, ತಾವು ಏನು ಹೇಳಿದ್ದೀರಿ.

Sri Siddaramaiah: I am repeating what I said on that day. 9ನೇ ತಾರೀಖು ಬೇಡ, 10ನೇ ತಾರೀಖಿನಂದು ಮಾಡಿ ಎಂದು ಹೇಳಿದ್ದೇನೆ. 11ನೇ ತಾರೀಖಿನಂದು ವಿಶ್ವ ಕನ್ನಡ ಸಮ್ಮೇಳನ ಇರುವುದು. 10ನೇ ತಾರೀಖಿನಂದು ಉತ್ತರ ಕೊಟ್ಟು ರಾತ್ರಿ ಅಲ್ಲಿಗೆ ಹೋದರೆ ಆಯಿತು ಅಥವಾ 11ನೇ ತಾರೀಖಿನಂದು ಬೆಳಿಗ್ಗೆ ಹೋದರಾಯಿತು. 11ನೇ ತಾರೀಖಿನಂದು 5 ಗಂಟೆಗೆ ಉದ್ಘಾಟನಾ ಕಾರ್ಯಕ್ರಮ ಇರುವುದೆಂದು ನಾನು ಹೇಳಿದೆ. ಅದಕ್ಕೆ ಅವರು ಇಲ್ಲ, ನಾವು 9ನೇ ತಾರೀಖಿನಂದೆ ಉತ್ತರವನ್ನು ಕೊಡಬೇಕೆಂದು ಹೇಳಿದರು, 9ನೇ ತಾರೀಖು ಅಂಥ urgent ಇದ್ದರೆ, 14ನೇ ತಾರೀಖಿನಂದು ಕೊಡಲಿ ಎಂದು ಹೇಳಿದೆವು. ಇನ್ನು ಬಹಳ ಜನರು ಮಾತನಾಡುವವರು ಇದ್ದಾರೆ. ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಸಿಗಲಿ.

ಅಧ್ಯಕ್ಷರು: ತಾವು ಲಿಸ್ಟ್ ಕೊಟ್ಟಿದ್ದೀರಿ, ಅದರಲ್ಲಿರುವವರೆಲ್ಲರಿಗೂ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೇನೆ. ಇನ್ನು ಡಾ:ಶರಣ ಪ್ರಕಾಶ ರುದ್ರಪ್ಪ ಪಾಟೀಲ್‌ರವರು ಒಬ್ಬರು ಇದ್ದಾರೆ.

ಶ್ರೀ ಸಿದ್ಧರಾಮಯ್ಯ: ಆಗ ಯಾರು ಹೆಸರನ್ನು ಕೊಟ್ಟಿದ್ದರೊ ಅದನ್ನು ಕೊಟ್ಟಿದ್ದೆ, ಈಗ ಪುನ: ಇವತ್ತು ಕೊಡುತ್ತಿದ್ದಾರೆ.

ಅಧ್ಯಕ್ಷರು: ಈ ರೀತಿ ಹೇಳಿದರೆ, there is no end.

ಡಾ:ಹೆಚ್.ಸಿ.ಮಹದೇವಪ್ಪ: ಮಾನ್ಯ ಅಧ್ಯಕ್ಷರೆ, ಇದರಿಂದ ಸರ್ಕಾರಕ್ಕೆ ಮುಜುಗರ ಏನು ಆಗುವುದಿಲ್ಲವಲ್ಲಾ, ಅನುಕೂಲವೇ ಹೊರತು

ಅನಾನುಕೂಲವೇನು ಆಗುವುದಿಲ್ಲವಲ್ಲಾ, ಬಜೆಟ್ ಮೇಲೆ ಚರ್ಚೆಯಾಗುವಂಥದ್ದು ಆದರೆ ಬೆಳಕು ಚೆಲ್ಲುವಂಥದ್ದು .. .. .

ಶ್ರೀ ಸಿದ್ದರಾಮಯ್ಯ: ಈಗ ಏನೋ ಅನಿವಾರ್ಯತೆ ಇದೆ, ನಾಳೆಯೇ ಮುಗಿಸಬೇಕೆಂದರೆ we will cooperate. But the question is, ನಾಳೆಯೇ ಉತ್ತರ ಕೊಡಬೇಕೆಂದು ಏನು ಇಲ್ಲ. ನಾಳೆ ಮಾರ್ಚ್ 31ನೇ ತಾರೀಖು ಇದೆಯಾ? ಮಾರ್ಚ್ 31ರವರೆಗೂ ಉತ್ತರ ಕೊಡಬಹುದು.

ಡಾ: ಹೆಚ್.ಸಿ. ಮಹದೇವಪ್ಪ: ಆಯವ್ಯಯದ ಮೇಲೆ ಚರ್ಚೆ ಯಾಗುವುದರಿಂದ ಆಗುವ ನಷ್ಟ ಏನು? ಸರ್ಕಾರಕ್ಕೆ ಮುಜುಗರ ಏನು ಆಗುವುದಿಲ್ಲ, ಸರ್ಕಾರಕ್ಕೆ ಅನಾನುಕೂಲವಾಗುವುದಿಲ್ಲ. ಆಯವ್ಯಯದ ಮೇಲೆ ಚರ್ಚೆ ಮಾಡಿದರೆ ಆ ಕಡೆಯ ಸದಸ್ಯರು ಇರಬಹುದು, ಈ ಕಡೆಯ ಸದಸ್ಯರು ಇರಬಹುದು.

ಶ್ರೀ ಸಿದ್ದರಾಮಯ್ಯ: Appropriation Bill pass ಆಗಬೇಕಾಗಿರುವುದು before 31st of March.

ಶ್ರೀ ಆರ್.ಅಶೋಕ್: ಈಗಾಗಲೇ BACಯಲ್ಲಿ ಚರ್ಚೆಯಾಗಿದೆ. ನಮ್ಮ programme ಎಲ್ಲಾ fix ಆಗಿದೆ. ನಮ್ಮ ಸದಸ್ಯರೆಂದು ಅಲ್ಲ, ಎಲ್ಲಾ ಸದಸ್ಯರು ಅವರವರ programmeಗಳನ್ನು fix ಮಾಡಿಕೊಂಡಿದ್ದಾರೆ. 9ನೇ ತಾರೀಖು..

ಶ್ರೀ ಸಿದ್ಧರಾಮಯ್ಯ: ನಿಮ್ಮ programme important ಅಲ್ಲ, ಇದು important.

ಶ್ರೀ ಆರ್.ಅಶೋಕ್: ನಾನು ಹೇಳಿದ್ದು, ಎಲ್ಲಾ ಸದಸ್ಯರದ್ದು ಹೇಳಿದ್ದು.

ಶ್ರೀ ಸಿದ್ಧರಾಮಯ್ಯ: ನಿಮ್ಮ programme important ಅಲ್ಲ, ಸದನದ ಕಲಾಪ important.

ಶ್ರೀ ಆರ್.ಅಶೋಕ್:ಎಲ್ಲಾ ಭಾಗದ ಸದಸ್ಯರ ಬಗ್ಗೆ ಹೇಳಿದ್ದು.

ಶ್ರೀ ಸಿದ್ಧರಾಮಯ್ಯ: ಈ ಭಾಗದವರು ಸದಸ್ಯರಲ್ಲವೇ?

ಡಾ: ಹೆಚ್.ಸಿ. ಮಹದೇವಪ್ಪ: ಆ ಕಡೆ ಸದಸ್ಯರು, ಈ ಕಡೆ ಸದಸ್ಯರು ಚರ್ಚೆ ಮಾಡುವುದರಿಂದ ಸರ್ಕಾರಕ್ಕೆ ನಷ್ಟ ಏನು? ಆಯವ್ಯಯದ ಮೇಲೆ

ಚರ್ಚೆಯಾಗುವುದರಿಂದ ಸರ್ಕಾರಕ್ಕೆ ಮುಜುಗರವೇನು ಆಗುವುದಿಲ್ಲ. Light would be thrown on this Budget. How Government should be?

ಶ್ರೀ ಸಿದ್ಧರಾಮಯ್ಯ: ನಷ್ಟ ಏನು? ಇನ್ನು ಅವರಿಗೆ ಒಳ್ಳೆಯದು. ಅವರಿಗೆ ಒಳ್ಳೆಯ ಸಲಹೆಗಳನ್ನು ಕೊಡುತ್ತಿದ್ದಾರೆ. ಕಳೆದ ಬಾರಿ ಡಿಮಾಂಡ್ಸ್ ಮೇಲೂ ಚರ್ಚೆಯಾಗಲಿಲ್ಲ, Governor's address ಮೇಲೂ ಚರ್ಚೆಯಾಗಲಿಲ್ಲ. ಈ ಸಾರಿ ನಾವೆಲ್ಲರೂ participate ಮಾಡಿ , ಇವರಿಗೆ ಸಹಾಯ ಮಾಡೋಣ, ಸಲಹೆ ಕೊಡೋಣವೆಂದರೆ, they are not ready to take.

Dr.H.C Mahadevappa: There is no harm to the Government by allowing the debate. Please give opportunity.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ತಾವು ಈಗ ದಯಮಾಡಿ Question Hour ತೆಗೆದುಕೊಳ್ಳಿ.

ಅಧ್ಯಕ್ಷರು: ಡಾ: ಸುಧಾಕರ್‌ರವರು ಮಾತನಾಡಲಿ, ನೀವು ಮಾತನಾಡಿದ್ದು ಆಗಿದೆಯಲ್ಲಾ.. .

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, Question Hour ತೆಗೆದುಕೊಳ್ಳಿ, ನಾಳೆ ಬೆಳಿಗ್ಗೆ ಅವರು ಮಾತನಾಡಲಿ, ಇವತ್ತು ಯಾರು ಇಲ್ಲ.

ಅಧ್ಯಕ್ಷರು: ಡಾ: ಸುಧಾಕರ್‌ರವರು ಮಾತನಾಡಲಿ, ನೀವು ಮಾತನಾಡಿ ಆಗಿದೆಯಲ್ಲಾ.

ಡಾ:ಎಂ.ಸಿ.ಸುಧಾಕರ್: ಮಾನ್ಯ ಅಧ್ಯಕ್ಷರೆ, ಈಗ ಬೆಂಬಲ ಬೆಲೆ ವಿಚಾರದಲ್ಲಿ ನಾನು ಟೊಮೋಟೊವನ್ನು ಒಂದು ಉದಾಹರಣೆಯಾಗಿ ಹೇಳಿದೆ, ಬಹಳಷ್ಟು ವೈಜ್ಞಾನಿಕವಾಗಿ ದುರುಪಯೋಗವಾಗದಂತೆ ಅದನ್ನು ಅನುಷ್ಠಾನ ಗೊಳಿಸುವ ಬಗ್ಗೆ ಹೆಚ್ಚು ಗಮನವನ್ನು ಕೊಡಬೇಕಾಗಿದೆ. ಈಗ ಏನಾಗಿದೆಯೆಂದರೆ ಒಂದು ಕಡೆ ಅತಿವೃಷ್ಟಿ ಕೆಲವರಿಗೆ ಅನುಕೂಲ, ಅನಾವೃಷ್ಟಿಯಾದರೂ ಅನುಕೂಲ, ಆ ರೀತಿಯಾಗಿ ಏನು ಒಳ್ಳೆಯದನ್ನು

ಮಾಡುವುದಕ್ಕೆ ಹೋದರೂ ಬೆಲೆ ಜಾಸ್ತಿಯಾದರೂ ಅದನ್ನು ದುರುಪಯೋಗ ಮಾಡಿಕೊಳ್ಳುವಂಥ ವ್ಯವಸ್ಥೆ ಇದೆ, ಬೆಲೆ ಕುಸಿದಾಗಲೂ ದುರುಪಯೋಗ ಮಾಡಿಕೊಳ್ಳುವಂಥ ವ್ಯವಸ್ಥಿತವಾದ ಒಂದು ಜಾಲ ಸಮಾಜದಲ್ಲಿದೆ. ದಯವಿಟ್ಟು ಅಧಿಕಾರಿಗಳು ಇದನ್ನು ಬಹಳ ವೈಜ್ಞಾನಿಕವಾಗಿ ಆತುರಾತುರವಾಗಿ ಆ policyಯನ್ನು ಮಾಡುವಂಥದ್ದು ಆಗಬಾರದು. ಮುಂಚಿತವಾಗಿ ಯಾವ್ಯಾವ ಸಂದರ್ಭದಲ್ಲಿ ಯಾವ್ಯಾವ ಬೆಲೆಗಳು ಕುಸಿದಿದೆ. ಆ ಸಂಬಂಧಪಟ್ಟಂಥ ಬೆಳೆಗಳಿಗೆ ನಾವು ಯಾವ ರೀತಿ market intervention ಮಾಡುವಂಥದ್ದು ಆಗಬಹುದು, market support price ಕೊಡುವಂಥದ್ದು ಆಗಬಹುದು. ಅದರ ಬಗ್ಗೆ ಹೆಚ್ಚು ಗಮನ ಕೊಡುಬೇಕೆಂಬ ಮಾತನ್ನು ಹೇಳುತ್ತೇನೆ. ಇನ್ನು ಸುವರ್ಣ ಭೂಮಿ ಯೋಜನೆ ಬಗ್ಗೆ ಹೇಳುವುದಾದರೆ, ಇದರ ಬಗ್ಗೆ ಬಹಳಷ್ಟು ಸದಸ್ಯರು ಮಾತನಾಡಿದರು. ಹಲವಾರು ಸರ್ಕಾರಗಳು populist programmesಗಳನ್ನು ತೆಗೆದುಕೊಂಡು ಬರುತ್ತಿವೆ. ಅದರೆ ಸರ್ಕಾರಗಳು ಯಾವುದೂ ಶಾಶ್ವತವಾಗಿ ಉಳಿದಿಲ್ಲ. ಇವತ್ತು ಎಲ್ಲೋ ಒಂದು ಕಡೆ, we are spoiling the entire system now. ಇವತ್ತು ಸಾವಿರ ಕೋಟಿ, ಐದ್ಯೆದು ಸಾವಿರ, ಹತ್ತತ್ತು ಸಾವಿರ ರೂ.ಗಳನ್ನು ಕೊಡುವಂಥ ಕೆಲಸವನ್ನು ನೀವು ಮಾಡುತ್ತಿದ್ದೀರಿ. ಅದೇ ಸಾವಿರ ಕೋಟಿ ರೂ.ಗಳನ್ನು ನೀವು infrastructure building ಅನ್ನು ಮಾಡಿ, educationಗೆ ಕೊಡಿ, ವಿದ್ಯಾವಂತರನ್ನಾಗಿ ಮಾಡಿ, ಅವರು ನಾಳೆ ಅವರ ಸ್ವಂತ ಕಾಲಿನ ಮೇಲೆ ನಿಲ್ಲುವಂಥದ್ದಕ್ಕೆ ದಯವಿಟ್ಟು ಅವಕಾಶ ಮಾಡಿ. ಮನೆ ಮನೆಗೂ ಐದು ಸಾವಿರ, ಹತ್ತು ಸಾವಿರ ರೂ.ಗಳನ್ನು ಕೊಡುವುದರಿಂದ ಓಟು ಬರುವುದಿಲ್ಲ. ಹಿಂದಿನ ಸರ್ಕಾರಗಳು ವಿದ್ಯುತ್ ಬಾಕಿಯನ್ನು ಮನ್ನಾ ಮಾಡಿದೆ, ಇನ್ನೊಂದು ಮಾಡಿದೆ, ಮತ್ತೊಂದು ಮಾಡಿದೆ, ಯಾವ ಸರ್ಕಾರಗಳು ವಾಪಸ್ಸು ಬರಲಿಲ್ಲ.

ಸ್ಥಳೀಯವಾಗಿರುವ ಸಂದರ್ಭ, ವ್ಯವಸ್ಥೆ, ಅಲ್ಲಿಯ ಜನಪ್ರತಿನಿಧಿ, ಅವರು ಯಾವ ರೀತಿ ಜನರ ಜೊತೆ ನಡೆದುಕೊಳ್ಳುತ್ತಾನೆ ಮತ್ತು ಆ ಸಂದರ್ಭಕ್ಕೆ ಏನೇನು ಇಷ್ಯೂಸ್ ಬರುತ್ತವೆ ಅದರ ಆಧಾರದ ಮೇಲೆ ರಾಜಕಾರಣ ನಡೆಯುತ್ತದೆಯೇ ವಿನ: ಈ ರೀತಿ ನಾವು ವ್ಯವಸ್ಥೆಯನ್ನು ಹಾಳು

ಮಾಡಿಕೊಂಡರೆ ಸರಿಯಲ್ಲ. ತಮಿಳುನಾಡಿನಲ್ಲಿ ಬಣ್ಣದ ಟಿ.ವಿ. ಕೊಡುವುದು, ಮತ್ತೊಂದು ಕೊಡುವುದು, ಆಂಧ್ರದಲ್ಲಿ ನೂರು ರೂಪಾಯಿಗಳಿಗೆ ಅಕ್ಕಿ ಕೊಡುತ್ತೇವೆ, ಬೇಳೆ ಕೊಡುತ್ತೇವೆ, ಎಣ್ಣೆ ಕೊಡುತ್ತೇವೆ ಎನ್ನುವಂಥ ಸ್ಕೀಮ್‌ಗಳನ್ನು ಕೊಡುವುದನ್ನು ಈ ಸದನಕ್ಕೆ ಬರುವ ವಿದ್ಯಾವಂತರಾಗಿರುವ ನಾವೆಲ್ಲರೂ ಇಂಥ ಚೀಪ್ ಪಬ್ಲಿಸಿಟಿಯನ್ನು ಸರ್ಕಾರಗಳು ದಯವಿಟ್ಟು ನಿಲ್ಲಿಸಬೇಕಾಗುತ್ತದೆ. ಇವತ್ತು ಈ ರೀತಿಯಾದಂಥ ಕಾರ್ಯಕ್ರಮಗಳನ್ನು ದಯವಿಟ್ಟು ಬಿಡಬೇಕು. ನಾನು ಸಣ್ಣ ನೀರಾವರಿ ಇಲಾಖಾ ಸಚಿವರಿಗೆ ಅಭಿನಂದನೆ ಸಲ್ಲಿಸುತ್ತೇನೆ, ಏಕೆಂದರೆ ಇವತ್ತು ಸಣ್ಣ ನೀರಾವರಿ ಇಲಾಖೆಯವರು ಒಂದೊಂದು ವಿಧಾನಸಭಾ ಕ್ಷೇತ್ರಕ್ಕೆ 5 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಅದೊಂದು ಉತ್ತಮ ಕೆಲಸ, ಒಳ್ಳೆಯ ಕೆಲಸ. ಅದು infrastructure building, capacity building. ಅದರಿಂದ tanks capacity building ಆಗುತ್ತದೆ. ಶಾಶ್ವತ ನೀರಾವರಿ ಬೇಕು ಎಂದು ನಮ್ಮ ಭಾಗದಲ್ಲಿ ಕೇಳುತ್ತಿದ್ದೇವೆ. ಬೇರೆ ಕಡೆ, ನದಿ ಮೂಲಗಳಿರುವಂಥ ಭಾಗಗಳಲ್ಲಿ ಕೆರೆಗಳಲ್ಲಿ ನೀರು ನಿಲ್ಲಿಸಿದಾಗ ಅಂತರ್ಜಲ ವೃದ್ಧಿಯಾಗುತ್ತದೆ. ಅದೊಂದು ಅಸೆಟ್ ಆಗುತ್ತದೆ. ದಯವಿಟ್ಟು ಅಂಥಾದ್ದಕ್ಕೆ ದುಡ್ಡು ಖರ್ಚು ಮಾಡುವುದು ಆಗಬೇಕು. ಅದು ಬಿಟ್ಟು, ಈ ರೀತಿ ಮನೆಮನೆಗೆ ಸಾವಿರ ಕೊಟ್ಟರೆ ಅದು ಯಾವುದಕ್ಕೂ ಆಗುವುದಿಲ್ಲ. ಇವತ್ತು ಸಾವಿರ ರೂಪಾಯಿ ಯಾವ ಲೆಕ್ಕ? ಇವತ್ತು ಸಾವಿರ ರೂಪಾಯಿಗೆ ಕೈ ಒಡ್ಡತಕ್ಕಂಥ ಜನ ನಮ್ಮ ಮುಂದೆ ಇಲ್ಲ. ಸರ್ಕಾರ ಈಗಲೂ ಇದರ ಬಗ್ಗೆ ಯೋಚನೆ ಮಾಡಲಿ, ಈ ಒಂದು ಸಾವಿರ ಕೋಟಿ ರೂಪಾಯಿಗಳನ್ನು ವೃಥಾ ಅನ್ಯಾಯವಾಗಿ ವೇಸ್ಟ್ ಮಾಡುವುದಕ್ಕೆ ಬದಲಾಗಿ ಅದನ್ನು ಉತ್ತಮವಾಗಿ ಬೇರೆಯದಕ್ಕೆ ಬಳಸಿಕೊಳ್ಳಿ ಎನ್ನುವ ಸಲಹೆಯನ್ನು ಕೊಡುತ್ತೇನೆ. ಅಂತರ್ಜಲ ಕೃಷಿಯ ಬಗ್ಗೆ ಮಾತನಾಡುವಂಥ ಈ ಸಂದರ್ಭದಲ್ಲಿ ಅಂತರ್ಜಲವನ್ನು ವೃದ್ಧಿ ಮಾಡುವ ಕಡೆ ಬಹಳಷ್ಟು ಗಮನ ಕೊಡಬೇಕು. ನಾನು ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಶಾಶ್ವತ ನೀರಾವರಿ ವ್ಯವಸ್ಥೆಯಾಗಬೇಕು ಎಂದು ನಮ್ಮ ಬಯಲುಸೀಮೆ ಭಾಗಗಳಲ್ಲಿ ಬಹಳ ವರ್ಷಗಳಿಂದ ಬೇಡಿಕೆ ಇತ್ತು. ಇದಕ್ಕೆ ಆವತ್ತು ಎಸ್.ಎಂ.ಕೃಷ್ಣರವರು

ಒಂದು ಹೆಜ್ಜೆಯನ್ನು ಇಟ್ಟು ಪ್ರಾರಂಭ ಮಾಡಿದರು. ಪರಮಶಿವಯ್ಯನವರ ವರದಿಯ ಸಮೀಕ್ಷೆಯಾಗಬೇಕು ಎಂದು ಆವತ್ತು ಸುಮಾರು ಐದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಅದಕ್ಕೆ ಚಾಲನೆಯನ್ನು ಕೊಟ್ಟಿದ್ದರು. ನಂತರದ ಸರ್ಕಾರಗಳಲ್ಲಿ ಬಹಳಷ್ಟು ಪ್ರಯತ್ನ ಮಾಡಿದರೂ ಅದಕ್ಕೆ ನಮಗೆ ಸರಿಯಾದ ರೀತಿಯಲ್ಲಿ ಸ್ಪಂದನ ಸಿಗಲಿಲ್ಲ. ಇವತ್ತು ನಾನು ನಮ್ಮ ಭಾಗದ ಆ ಎಲ್ಲ ಜನರ ಪರವಾಗಿ ನಮ್ಮ ಭಾರೀ ನೀರಾವರಿ ಸಚಿವರನ್ನು ಮತ್ತು ಮುಖ್ಯಮಂತ್ರಿಗಳನ್ನು ಅಭಿನಂದಿಸಬೇಕಾಗುತ್ತದೆ, ಅವರು ಒಂದು ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ, ಒಂದು ಹೆಜ್ಜೆಯನ್ನು ಮುಂದೆ ಇಟ್ಟಿದ್ದಾರೆ, ನಾವು 200 ಕೋಟಿ ರೂಪಾಯಿಗಳನ್ನು ಒದಗಿಸುತ್ತೇವೆ, detailed project reportಅನ್ನು ಮಾಡಲು ಮುಂದೆ ಬರುತ್ತೇವೆ ಎತ್ತಿನಹೊಳೆ ಯೋಜನೆಯಿಂದ 10 ಟಿ.ಎಂ.ಸಿ. ನೀರನ್ನು ಕುಡಿಯುವ ನೀರಿಗಾಗಿ ಪೈಪ್ ಮುಖಾಂತರ ಕೊಡುವ ಕಾರ್ಯಕ್ರಮವನ್ನು ಮಾಡುತ್ತೇವೆ ಎನ್ನುವ ಒಂದು ಉತ್ತಮವಾದಂಥ ಒಳ್ಳೆಯ ಘೋಷಣೆಯನ್ನು ಮಾಡಿದ್ದಾರೆ. ನಾವೆಲ್ಲರೂ ಖಂಡಿತವಾಗಿ ಪಕ್ಷಭೇದ ಮರೆತು ಅವರನ್ನು ಅಭಿನಂದಿಸುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನು 2004ರಲ್ಲಿ ಶಾಸಕನಾಗಿದ್ದಾಗ ಆವತ್ತು ಸಣ್ಣ ನೀರಾವರಿ ಇಲಾಖೆಯ ಬಜೆಟ್ ಗಾತ್ರ ಎಷ್ಟಿತ್ತು, ಅಲೋಕೇಷನ್ ಎಷ್ಟಿತ್ತು ಎನ್ನುವುದನ್ನು ನೋಡಬೇಕಾಗುತ್ತದೆ.ಇವತ್ತು ಕೇಂದ್ರ ಸರ್ಕಾರ ಬಹಳ ಉತ್ತಮ ಕಾರ್ಯಕ್ರಮಗಳನ್ನು ಮಾಡುತ್ತಿದೆ. ನಮ್ಮ ಸಚಿವರು ಅದನ್ನು ಒಪ್ಪಿಕೊಳ್ಳ ಬೇಕಾಗುತ್ತದೆ. Accelerated Irrigation Benefit Programme, ಅಂದರೆ A.I.B.P. ಮತ್ತು R.R.R. ಸ್ಕೀಮಿನಲ್ಲಿ ರಾಜ್ಯ ಸರ್ಕಾರದ ಭಾಗ 10% ಇದ್ದರೆ, 90% ಭಾಗದ ಹಣವನ್ನು ಕೇಂದ್ರ ಸರ್ಕಾರ ಕೊಟ್ಟು, ಸುಮಾರು 700–800 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣವನ್ನು ನಮ್ಮ ರಾಜ್ಯಕ್ಕೆ ಕೊಟ್ಟಿದೆ. ಇವತ್ತು ಇಡೀ ರಾಜ್ಯದಲ್ಲಿ ಎಲ್ಲ ಕಡೆಯೂ ಜನ ಸಣ್ಣ ನೀರಾವರಿಯ ಕಡೆಗೆ ನೋಡಿ ಮೆಚ್ಚಿಕೊಳ್ಳುತಕ್ಕಂಥ ರೀತಿಯಲ್ಲಿ ಕಾರ್ಯಕ್ರಮಗಳು ಬರುತ್ತಿವೆ. ಇದರಲ್ಲಿ ಕೇಂದ್ರ ಸರ್ಕಾರದ ಪಾಲು ಹೆಚ್ಚಿದೆ. ಜೊತೆಗೆ ಇದರಲ್ಲಿ ರಾಜ್ಯ ಸರ್ಕಾರದ ಪಾಲೂ ಇರುವುದರಿಂದ ಇದೊಂದು ಉತ್ತಮ ಕಾರ್ಯವಾಗಿದೆ

ಎಂದು ಹೇಳುತ್ತಾ, ಇದು ಸರಿಯಾದ ರೀತಿಯಲ್ಲಿ ವಾಸ್ತವಿಕವಾಗಿ ತಳ ಮಟ್ಟದಲ್ಲಿ ಅದನ್ನು ಅನುಷ್ಠಾನ ಮಾಡುವುದರ ಕಡೆಗೆ ನಾವು ಹೆಚ್ಚು ಗಮನವನ್ನು ಕೊಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದಕ್ಕೆ ದಾರಿ ತೋರಿಸಿಕೊಟ್ಟವರು ಎಸ್.ಎಂ.ಕೃಷ್ಣರವರು, "ಜಲ ಸಂವರ್ಧನ" ಎನ್ನುವ World Bankನ external aided programme ಮುಖಾಂತರ ಏನು ಪ್ರಾರಂಭ ಮಾಡಿದರು, ಅದು ಇದಕ್ಕೆ ದಾರಿದೀಪವಾಯಿತು ಎಂದು ಹೇಳುತ್ತೇನೆ. ಮಂತ್ರಿಗಳು ಮುಂದಿನ ದಿನಗಳಲ್ಲಿ ಇದಕ್ಕೆ ಇನ್ನೂ ಹೆಚ್ಚಿನ ರೀತಿಯಲ್ಲಿ ಒತ್ತು ಕೊಡುವುದು ಆಗಬೇಕು. ರಾಜ್ಯದಿಂದ ಹೋಗಿರುವ ಬಹಳಷ್ಟು ಪ್ರಸ್ತಾವನೆಗಳು ಕೇಂದ್ರದಲ್ಲಿ ಬಾಕಿ ಉಳಿದಿವೆ. ದಯವಿಟ್ಟು ತಾವು ಆದಷ್ಟು ಬೇಗ ಆ ಯೋಜನೆಗಳನ್ನು ಮಂಜೂರು ಮಾಡಿಸಿಕೊಂಡು ಈ ಭಾಗದಲ್ಲಿ capacity building ಮಾಡಬೇಕಾಗುತ್ತದೆ. ಇವತ್ತು ಅಂತರ್ಜಲ ವೃದ್ಧಿ ಮಾಡುವುದು ಬಹಳ ಮುಖ್ಯವಾಗಿ ಆಗಬೇಕು. ಏಕೆಂದರೆ, ಭೂದೇವಿಗೆ ಒಂದು ರೀತಿಯಾಗಿ ರೋಗ ಬಂದ ಹಾಗೆ ಆಗಿದೆ. ಏನಾದರೂ ಮಾಡಿ ನಾವು ಇದಕ್ಕೆ ಚಿಕಿತ್ಸೆ ಕೊಡಬೇಕಾಗಿದೆ. ನಾವು ಭೂಮಿಯಿಂದ ಏನು ನೀರನ್ನು ತೆಗೆಯುತ್ತೇವೆ, ಅದಕ್ಕನುಗುಣವಾಗಿ ನಾವು ಕನಿಷ್ಟ ಪ್ರಮಾಣದಲ್ಲಿ re-charge ಮಾಡಲಿಲ್ಲ ಎಂದರೆ ಮುಂದೆ ನಾವ್ಯಾರೂ ಬದುಕಲಿಕ್ಕೆ ಸಾಧ್ಯವಿಲ್ಲ. ಈ ಕೆಲಸವನ್ನು ಮಾಡುವಂಥ ನಿಟ್ಟಿನಲ್ಲಿ ಸಣ್ಣ ನೀರಾವರಿ ಇಲಾಖೆ ಸಾಗುತ್ತಿದೆ. ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೆ ಮುಖ್ಯ ಮಂತ್ರಿಯವರು ತಲಾ ಐದೈದು ಕೋಟಿ ರೂಪಾಯಿಗಳನ್ನೇನು ಕೊಡುತ್ತಿದ್ದಾರೆ, ಇದನ್ನು ಸ್ಥಳೀಯ ಶಾಸಕರ ಗಮನಕ್ಕೆ ತಂದು ಅವರ ಸಲಹೆಗಳನ್ನು ತೆಗೆದುಕೊಂಡು ಆ ಕಾರ್ಯಕ್ರಮ ಯಶಸ್ವಿಯಾಗಿ ಅನುಷ್ಠಾನವಾಗುವುದಕ್ಕೆ ಸಹಕಾರ ಕೊಡಬೇಕು ಎನ್ನುವ ಮನವಿಯನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ. ನಮ್ಮ ಭಾಗದಲ್ಲಿ ಈಗಾಗಲೇ ಸುಮಾರು 32 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವವಾಗಿದೆ. ನಾನು ಹಲವಾರು ಬಾರಿ ಸಂಬಂಧಪಟ್ಟಂಥ ಕಾರ್ಯದರ್ಶಿಗಳು ಮತ್ತು ಅಧಿಕಾರಿಗಳ ಹತ್ತಿರ ಮಾತನಾಡಿದಾಗ, ಅಲ್ಲಿ ಬೋರ್ ಹಾಕಬಾರದು, you find some other alternative way ಎಂದು ಹೇಳಿದರು. ಈ ತಕ್ಷಣಕ್ಕೆ ನಾವು ಬೇರೆ

ಪರ್ಯಾಯ ಮಾರ್ಗವನ್ನು ಎಲ್ಲಿ ಹುಡುಕಲಿಕ್ಕೆ ಸಾಧ್ಯವಿದೆ? ಕುಡಿಯುವ ನೀರಿನ ವಿಚಾರಕ್ಕಾಗಿ ನಾನು ನನ್ನ ಕ್ಷೇತ್ರದಲ್ಲಿ 6 ದಿವಸ ಹಗಲೂ ಇರುಳು ಧರಣಿ ಕುಳಿತಿದ್ದೆ. ಆ ಸಂದರ್ಭದಲ್ಲಿ ನಾನು ಕೇಳಿದೆ, ನೀವು ದಯವಿಟ್ಟು ಬೇರೆ ಯಾವುದನ್ನಾದರೂ ಅಂದರೆ ಬಿಲ್ಡಿಂಗ್ ಕಟ್ಟುವುದು, ಮತ್ತೊಂದು ಕಟ್ಟುವುದನ್ನು ಒಂದೆರಡು ವರ್ಷ ತಡವಾಗಿ ಮಾಡಿದರೂ ನಡೆಯುತ್ತದೆ, ಆದರೆ ಕುಡಿಯುವ ನೀರಿಗೆ ನೀವು ಹಣ ಇಲ್ಲವೆಂದು ಹೇಳಿದರೆ ನಮಗೆ ಬೇರೆ ಮಾರ್ಗವಿಲ್ಲ. ಇಲ್ಲದಿದ್ದರೆ, ಪರ್ಯಾಯವಾಗಿ ಏನಾದರೂ ಮಾರ್ಗವನ್ನು ಹುಡುಕಿಕೊಡಿ. ಕುಡಿಯಲು ನೀರನ್ನು ಕೊಡದೇ ಬೇರೆ ಇನ್ನೇನಾದರೂ ಕೊಡಲು ಸರ್ಕಾರ ವ್ಯವಸ್ಥೆ ಮಾಡಿಕೊಟ್ಟರೆ ನಾವು ಅದಕ್ಕೆ 2–3 ವರ್ಷ ಕಾಯುವುದಕ್ಕೆ ತಯಾರಿದ್ದೇವೆ. ಬೋರ್ ಹಾಕಿದರೇ ನಮಗೆ ಅಲ್ಲಿ ನೀರು ಸಿಗುವುದು. ಹೀಗಿರುವಾಗಿ, ನೀವು ಅಲ್ಲಿ ಬೋರ್ ಹಾಕಲೇಬೇಡಿ ಎಂದರೆ ನಾವು ಏನು ಮಾಡಬೇಕು? ಅದೂ ಸಹ ಬೋರ್‌ವೆಲ್‌ಗಳು 800 ಅಡಿಗೂ ಹೆಚ್ಚು ಹೋಗಬೇಕು. ಆದರೂ ಅದರಲ್ಲಿ ಫ್ಲೋರೈಡ್ ಇದೆಯೋ, ನೈಟ್ರೇಟ್ ಇದೆಯೋ, ಸೋಡಿಯಂ ಕ್ಲೋರೈಡ್ ಇದೆಯೋ ಅಥವಾ ಇನ್ನೇನಿದೆಯೋ ನಮಗೆ ಗೊತ್ತಿಲ್ಲ, ಅದನ್ನೇ ಕುಡಿಯುತ್ತಿರುವಂಥ ಭಾಗ ನಮ್ಮದು. ಇದು slow poison. ನಮ್ಮ ಭಾಗದಲ್ಲಿರುವ ಜನರಿಗೆಲ್ಲ ನಾವು ವಿಷವನ್ನು ಕೊಡುತ್ತಿದ್ದೇವೆ. ನಾನು ಇದನ್ನು ಪ್ರಸ್ತಾಪ ಮಾಡುತ್ತಿದ್ದರೆ, ಸಂಪಂಗಿಯವರು ನನ್ನ ಕ್ಷೇತ್ರದಲ್ಲಿ ನೀರು ಫ್ಲೋರೈಡ್‌ಯುಕ್ತವಾಗಿದೆ ಎಂದು ಎದ್ದು ನಿಲ್ಲುತ್ತಾರೆ. ಅಲ್ಲಿರುವಂಥ ವಾಸ್ತವಾಂಶವನ್ನು ಹೇಳುತ್ತಿದ್ದೇನೆ. ನಾನು ಒಬ್ಬ ದಂತ ವೈದ್ಯನಾಗಿ ಹೇಳುತ್ತಿದ್ದೇನೆ, ನಿಗದಿತ ಪ್ರಮಾಣಕ್ಕಿಂತ ಹೆಚ್ಚು ಫ್ಲೋರೈಡ್ ಅಂಶ ಸೇರಿಕೊಂಡಾಗ ಖಂಡಿತವಾಗಿಯೂ skeletal deformity, physical deformity ಇಂಥವುಗಳೆಲ್ಲ ಆಗತಕ್ಕಂಥ ಸಮಸ್ಯೆ ಇದೆ. ಆದ್ದರಿಂದ, ದಯವಿಟ್ಟು ಅಂತರ್ಜಲವನ್ನು ವೃದ್ಧಿ ಮಾಡುವುದು ಮುಖ್ಯ. ಕುಡಿಯುವ ನೀರಿಗೆ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕಾಗುತ್ತದೆ. ಇವತ್ತೂ ಮಧ್ಯಾಹ್ನ ನನಗೆ ಫೋನ್ ಮಾಡಿ, ಒಂದು ಗ್ರಾಮದಲ್ಲಿ ಕುಡಿಯುವುದಕ್ಕೆ ನೀರಿಲ್ಲ, ಬೋರ್‌ವೆಲ್ ಹಾಕಬೇಕು ಎಂದು ಹೇಳಿದರು. ಈಗ ಬೋರ್‌ವೆಲ್ ಹಾಕಲು ಒಂದು

ಹೊಸ ನಿಯಮವನ್ನು ತಂದಿದ್ದಾರೆ. ಯಾವ ಊರಿನಲ್ಲಿ ನೀರಿಲ್ಲ ಎನ್ನುವ ಬಗ್ಗೆ ಇಲಾಖೆಗೆ ಮಾಹಿತಿ ಕೊಟ್ಟಾಗ ಅವರು ಅದಕ್ಕೆ ಟೆಂಡರ್ ಕರೆಯುತ್ತಾರಂತೆ. ಸರ್ಕಾರ ಅನುದಾನ ಕೊಡಬೇಕು, ಆಗ ಅವರು ಟೆಂಡರ್ ಕರೆಯಬೇಕು. ಬೋರ್‌ವೆಲ್ ಹಾಕುವುದು, ಪಂಪು ಮೋಟರ್ ಇಳಿಸುವುದು, ಪೈಪ್‌ಲೈನ್ ಇಳಿಸುವುದು, ಎನರ್ಜೈಸೇಷನ್ ಮಾಡುವುದು ಇವೆಲ್ಲವನ್ನೂ ಒಬ್ಬರಿಗೇ ಕಂಟ್ರಾಕ್ಟ್ ಕೊಡುತ್ತಾರಂತೆ. ಇದಕ್ಕೆ ಎಷ್ಟು ದಿವಸವಾಗುತ್ತದೆ? ಇದಕ್ಕೆ 3-4 ತಿಂಗಳುಗಳಾದರೆ ಆ ಗ್ರಾಮದಲ್ಲಿ ಜನರು ಕುಡಿಯುವ ನೀರಿಗಾಗಿ ಏನು ಮಾಡಬೇಕು? ಅವರು ನೀರು ಕುಡಿಯಬೇಕೇ ಅಥವಾ ಇನ್ನೇನು ಕುಡಿಯಬೇಕು? ದಯವಿಟ್ಟು, ಹಿಂದೆ ಏನು ಪದ್ಧತಿ ಇತ್ತು, ಅದನ್ನೇ ಪುನ: ತೆಗೆದುಕೊಂಡು ಬನ್ನಿ.

ಶ್ರೀ ಗೋವಿಂದ ಎಂ ಕಾರಜೋಳ: ಸುಭಾಷ್ ಗುತ್ತೇದಾರ್‌ರವರಿದ್ದಾರೆ, ಅವರನ್ನು ಕೇಳಿದರೆ ಏನು ಕುಡಿಯಬೇಕು ಎಂದು ಹೇಳುತ್ತಾರೆ. ನೀವು wrong personರವರಿಗೆ ಕೇಳಿದರೆ ಹೇಗೆ ಗೊತ್ತಾಗುತ್ತದೆ?

ಡಾ: ಎಂ.ಸಿ. ಸುಧಾಕರ್: ಈಗ ಅದನ್ನೆಲ್ಲ ನೀವು ಬಂದ್ ಮಾಡಿದ್ದೀರಿ. ಅದೂ ಸಹ ದುಬಾರಿಯಾಗಿಬಿಟ್ಟಿದೆ. ಅದನ್ನು ಕುಡಿಯಲು ಸಾಧ್ಯವಿಲ್ಲ. ಹಿಂದೆ ಏನು ಪದ್ಧತಿ ಇತ್ತು, ಅದರಲ್ಲಿ ಬೋರ್‌ವೆಲ್ ಕೊರೆಯುವುದು ತಕ್ಷಣ ಆಗುತ್ತಿತ್ತು, ಪಂಪು ಮೋಟರ್‌ಅನ್ನು ಇಲಾಖೆಯವರು ಟೆಂಡರ್ ಮುಖಾಂತರ ಖರೀದಿ ಮಾಡಿ ಕೊಡುವುದು ಆಗುತ್ತಿತ್ತು, ಪೈಪ್‌ಲೈನ್ ಹಾಕುವಂಥ ಕೆಲಸವನ್ನು ಮಾತ್ರ ಸ್ಥಳೀಯವಾಗಿ ಗುತ್ತಿಗೆದಾರರು ಮಾಡುತ್ತಿದ್ದರು. ಹಾಗಾಗಿ ದಯವಿಟ್ಟು ಆ ಹಿಂದಿನ ಪದ್ಧತಿಯನ್ನೇ ತರಬೇಕಾಗುತ್ತದೆ. ಏಕೆಂದರೆ ಹಾಲಿ ಇರತಕ್ಕಂಥ ಬೋರೆವೆಲ್‌ಗಳಲ್ಲಿ ನೀರು ಸಿಕ್ಕಿದರೆ, ಅದು ಯೋಗ್ಯವಿದ್ದರೆ ತಕ್ಷಣ ಪಂಪು ಮೋಟರ್ ಇಳಿಸುವುದಕ್ಕೆ ಮತ್ತು ಕೂಡಲೇ ಅಲ್ಲಿನ ಜನರಿಗೆ ನೀರು ಕೊಡುವುದಕ್ಕೆ ವ್ಯವಸ್ಥೆಯಾಗುತ್ತದೆ. ಇದಕ್ಕೆ ಟೆಂಪೊರರಿಯಾಗಿ ಕನೆಕ್ಷನ್ ತೆಗೆದುಕೊಂಡರೂ ಬೆಸ್ಕಾಂನವರು ಅದಕ್ಕೆ ವಿರೋಧ ಮಾಡುವುದಿಲ್ಲ. ನಮ್ಮ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಉಲ್ಬಣವಾಗಿದೆ. ಯಾವ್ಯಾವ ಭಾಗದಲ್ಲಿ ಎಷ್ಟು ಸಮಸ್ಯೆ ಇದೆ, ಆ ಸಮಸ್ಯೆಗೆ ಅನುಗುಣವಾಗಿ ಸರ್ಕಾರ ಕೂಡಲೇ ಹಣವನ್ನು ಬಿಡುಗಡೆ ಮಾಡಬೇಕಾಗುತ್ತದೆ. ಬಾರ್ಟರ್ ಸಿಸ್ಟಂ ರೀತಿ

ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೂ 10 ಲಕ್ಷ – 20 ಲಕ್ಷ ಕೊಡಲು ಸಾಧ್ಯವಿಲ್ಲ. ಯಾವಯಾವ ಕ್ಷೇತ್ರದಲ್ಲಿ ವಾಸ್ತವಿಕವಾಗಿ ಏನು ಪರಿಸ್ಥಿತಿ ಇದೆ, ಆ ಒಂದು ಪ್ರದೇಶದ ಬೇಡಿಕೆಗೆ ಅನುಗುಣವಾಗಿ ದಯವಿಟ್ಟು ಹಣ ಬಿಡುಗಡೆ ಮಾಡಬೇಕು ಎನ್ನುವ ಮನವಿಯನ್ನು ನಾನು ಮಾಡುತ್ತೇನೆ. ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಶಾಶ್ವತ ನೀರಾವರಿ ಅಥವಾ ಮತ್ತೊಂದನ್ನು ಮಾಡಲು ಬಹಳ ಸಮಯ ಹಿಡಿಯುತ್ತದೆ. ಅದಕ್ಕಾಗಿ ಈಗ ತಕ್ಷಣಕ್ಕೆ ನಾವು ಏನು ಮಾಡಬೇಕು ಎಂದು ಯೋಚನೆ ಮಾಡಬೇಕು. ಬೆಂಗಳೂರಿನ sewage water ಬೆಳ್ಳಂದೂರು ಲೇಕ್ ಕಡೆ ಹರಿದು ಹೋಗುತ್ತಿದೆ, ತಮಿಳುನಾಡಿಗೂ ಬಹಳಷ್ಟು ಹರಿದು ಹೋಗುತ್ತಿದೆ. ಅಲ್ಲಿ sewage treatment plant ಹಾಕಿದ್ದಾರೆ. ಅದು secondary or tertiary treatment plant ಎನ್ನುವುದು ನನಗೆ ಗೊತ್ತಿಲ್ಲ. ಅಲ್ಲಿ ಆ ವಾಟರ್‌ಅನ್ನು ಟ್ರೀಟ್ ಮಾಡುತ್ತಿದ್ದು ಅದನ್ನು ಕೆಲವು ಫ್ಯಾಕ್ಟರಿಗಳವರು ಯಥೇಚ್ಛವಾಗಿ ತೆಗೆದುಕೊಳ್ಳುತ್ತಿದ್ದಾರೆ. ನಾನು ಹೇಳುತ್ತಿರುವುದೇನೆಂದರೆ, ನಿರಂತರವಾಗಿ ಹರಿಯುತ್ತಿರುವ ನೀರಿನ ಬಗ್ಗೆ. ಹಿಂದೆ ನಾನು ಒಬ್ಬರು ಅಧಿಕಾರಿಯೊಂದಿಗೆ ಮಾತನಾಡಿದಾಗ ಅವರು, ನಾವು ಬೆಂಗಳೂರಿನಲ್ಲಿ dual water system ಮಡುತ್ತೇವೆ ಎಂದು ಹೇಳಿದರು. ಈಗ ನೀವು ಬೆಂಗಳೂರಿನಲ್ಲಿ dual water system ಮಾಡಬೇಕಾದರೆ ಅದನ್ನು ಟ್ರೀಟ್ ಮಾಡಿ, ಮತ್ತೆ ನೀವು ಪ್ರತಿಯೊಂದು ಭಾಗದಲ್ಲೂ pipeline, raising mains ಮತ್ತೊಂದು ಹಾಕಬೇಕು, ಅದಕ್ಕಾಗಿ ಅಗೆದ ರಸ್ತೆಯನ್ನು ಮತ್ತೆ ದುರಸ್ತಿ ಮಾಡಬೇಕಾದರೆ ಎಷ್ಟು ಸಾವಿರ ಕೋಟಿ ರೂಪಾಯಿಗಳು ಬೇಕು ಎಂದು ನೀವು ಲೆಕ್ಕ ಹಾಕಿ. ಅದಕ್ಕೆ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಸ್ವಲ್ಪ ಲಿಫ್ಟ್ ಆದರೂ ಪರವಾಗಿಲ್ಲ, ನಮ್ಮ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಆ ನೀರನ್ನು ಟ್ರೀಟ್ ಮಾಡಿ ಕೆರೆಗಳಿಗೆ ತುಂಬುವಂಥ ಕೆಲಸವಾದರೆ ಆ ಭಾಗದಲ್ಲಿ ಅಂತರ್ಜಲ ವೃದ್ಧಿಯಾಗುತ್ತದೆ ಮತ್ತು ಕೃಷಿಗೆ ಅದನ್ನು ಬಳಕೆ ಮಾಡಿಕೊಳ್ಳಲು ಆಗುತ್ತದೆ. ಇಲ್ಲೆಲ್ಲೋ ಎಷ್ಟೋ ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದರ ಬದಲು ಕೆಲವೇ ಕೆಲವು ಅಂದರೆ ನೂರಾರು ಕೋಟಿಗಳಲ್ಲಿ ಆ ಕೆಲಸವಾಗುತ್ತದೆ. ಸರ್ಕಾರ ಈ ಸಲಹೆಯನ್ನು ದಯವಿಟ್ಟು ಗಂಭೀರವಾಗಿ ಆಲೋಚನೆ ಮಾಡಬೇಕು.

ನಿರಂತರವಾಗಿ gravity ಯಾವ ಕಡೆ flow ಆಗುತ್ತದೆಯೋ ಆ ಕಡೆಗೆ ಮಾಡಬೇಕು. ಈ ಕಡೆ ವೃಷಭಾವತಿ ನದಿ ಎಲ್ಲಿ ಹೋಗುತ್ತದೋ, ಆ ಕಡೆ ಭಾಗದಲ್ಲಿ ಈಗಾಗಲೇ ಉಪಯೋಗಿಸುತ್ತಿದ್ದಾರೆ. ನಾನು ಸಾತನೂರು ಕಡೆಗೆ ಒಂದು ಸಲ ಹೋದಾಗ, ದೊಡ್ಡದಾದ ಒಂದು treatment plant ನೋಡಿದೆ. ಆ ನೀರನ್ನು treatment ಮಾಡಿ ಬಿಡಬೇಕು, ಹಾಗೆಯೇ ಬಿಡಬಾರದು. ದಯವಿಟ್ಟು, ಅದನ್ನು treat ಮಾಡಿ ಉಪಯೋಗಿಸುವುದಕ್ಕೆ ಅವಕಾಶವಿದೆ. ಆದ್ದರಿಂದ, ಈ ಒಂದು ಸಲಹೆಯನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ನಮ್ಮ ಭಾಗದಲ್ಲಿ ಕೆರೆಗಳನ್ನು ತುಂಬಿಸುವ ಅವಕಾಶವಿದೆ. ತ್ವರಿತವಾಗಿ ಇದು ಆಗುವ ಅವಕಾಶವಿದೆ. ಇನ್ನು, ಮುಖ್ಯಮಂತ್ರಿಯವರ ನಗರೋತ್ಥಾನ ಕಾರ್ಯಕ್ರಮವಿದ್ದು, ಇದಕ್ಕೆ ನಾವೆಲ್ಲರೂ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದೆವು. ಇದುವರೆಗೂ ಸ್ಥಳೀಯ ಸಂಸ್ಥೆಗಳಲ್ಲಿ ಕೇವಲ ನಿರಂತರವಾಗಿ ರಸ್ತೆ, ಚರಂಡಿ ಇಲ್ಲವೆನ್ನುವ ಮಾತುಗಳನ್ನು ಸದಸ್ಯರು ಹೇಳುತ್ತಿದ್ದರು. ಮಾನ್ಯ ಮುಖ್ಯಮಂತ್ರಿವರು 2 ವರ್ಷಗಳ ಹಿಂದೆ CM special grant ಎಂದು ಕೊಟ್ಟರು. ಜಿಲ್ಲಾ ಕೇಂದ್ರಗಳಲ್ಲಿರುವ CMCs ಇರಬಹುದು, Corporation ಇರಬಹುದು, TMCs ಇರಬಹುದು ಅದಕ್ಕೆ 30 ಕೋಟಿ ರೂಪಾಯಿಗಳು Corporation ಗೆ ವಿಶೇಷವಾಗಿ 100 ಕೋಟಿ ರೂಪಾಯಿಗಳನ್ನಿಟ್ಟಿರುವುದು ಇದೆ. ಆದರೆ, ಜನಸಂಖ್ಯೆಗನುಗುಣವಾಗಿ ಅದನ್ನು ಕೊಡಬೇಕಾಗಿತ್ತು. ನನ್ನ ಚಿಂತಾಮಣಿ ಕ್ಷೇತ್ರದ CMC ಯಲ್ಲಿ ಅಥವಾ municipality ಯಲ್ಲಿ ಸುಮಾರು 80000 ಜನಸಂಖ್ಯೆ ಇದೆ. ಅಲ್ಲಿಗೆ ಕೇವಲ 5 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟರು. ಇಷ್ಟು ಕಡಿಮೆ ಹಣವನ್ನು ಯಾವ ರೀತಿ ಉಪಯೋಗ ಮಾಡಲಾಗುತ್ತದೆ? ದಯವಿಟ್ಟು, ಜನಸಂಖ್ಯೆಗನುಗುಣವಾಗಿ ಕೊಡಬೇಕಾಗುತ್ತದೆ. ಇದು ಬಹಳ ಉತ್ತಮವಾದ ಕಾರ್ಯಕ್ರಮ. ಅದಕ್ಕೆ ನಾವು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ. ಕಾಮಗಾರಿಗಳ ಗುಣಮಟ್ಟವನ್ನು ಕಾಯ್ದಿರಿಸಿಕೊಳ್ಳಲು ಅದರಲ್ಲಿ ಕೆಲವು conditions ಅನ್ನು ಹಾಕಿದ್ದಾರೆ. ಎಲ್ಲಾ ಕಡೆ ಒಳ್ಳೆಯ ರೀತಿಯಲ್ಲಿ ಕೆಲಸವಾಗುತ್ತಿದೆ. ನಗರಗಳು ಸಮಗ್ರವಾಗಿ ಒಂದೇ ರೀತಿಯಲ್ಲಿ ಮಾದರಿಯಾಗಿ ಅಭಿವೃದ್ಧಿಯಾಗತಕ್ಕಂಥದ್ದಕ್ಕೆ ಅವಕಾಶವಿದೆ. ಮಾನ್ಯ ಕಾನೂನು ಸಚಿವರೆ, 44 CMC ಗಳಿವೆ. ಆದರೆ, ನೀವು ಕೇವಲ District Head quarter ಗಳಿಗೆ ಮಾತ್ರ 30 ಕೋಟಿ ರೂಪಾಯಿಗಳನ್ನು

ಕೊಟ್ಟಿದ್ದೀರಿ. Population basis ಮೇಲೆ ಎಲ್ಲಾ CMCಗಳಿಗೂ ಒಂದೇ ತರಹ ಹಣವನ್ನು ಕೊಡಬೇಕು.

ಶ್ರೀ ಸಿದ್ದು ಸವದಿ: ಮೊದಲು ಅದೇ ರೀತಿ ಹಣ ಹಂಚಲಾಗುತ್ತಿತ್ತು. ಆನಂತರ ಪರಿವರ್ತನೆ ಮಾಡಲಾಯಿತು.

ಅಧ್ಯಕ್ಷರು: ಸಿದ್ದು ಸವದಿಯವರೆ, ಕುಳಿತುಕೊಳ್ಳಿ.

ಡಾ: ಎಂ.ಸಿ. ಸುಧಾಕರ್: ಇದು ಬಹಳ ಉಪಯುಕ್ತವಾದ ಕಾರ್ಯಕ್ರಮ. ಈ ವರ್ಷ ಈ ಯೋಜನೆಗೆ 750 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಆದರೆ, ಬಜೆಟ್ ಬುಕ್ ಅನ್ನು ನೋಡಿದಾಗ ನಮ್ಮ CMC ಗೆ ಕೇವಲ 48 ಲಕ್ಷ ರೂಪಾಯಿ earmark ಆಗಿದೆ. ದಯವಿಟ್ಟು, ಆ 30 ಕೋಟಿ ರೂಪಾಯಿಗಳನ್ನು ಏನು ಕೊಡಬೇಕು ಅದನ್ನು CMC ಗಳಿಗೆ ಕೊಡಿ. ನಾನು ಮೊನ್ನೆ ಒಂದು subject ಬಗ್ಗೆ ಮಾತನಾಡುವಾಗ ಹೇಳಿದೆ. ಇವತ್ತು ಪತ್ರಿಕೆಯಲ್ಲಿ ಬಂದಿರುವ ಮಾಹಿತಿಯನ್ನು ನೋಡಿದೆ. Agro Industries ಗೆ ಸೇರಿದ ಜಾಗದಲ್ಲಿ ಸುಮಾರು 52–53 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮಂತ್ರಿಗಳಿಗೆ 15 bungalow ಕಟ್ಟಿಸುವ ವ್ಯವಸ್ಥೆಯನ್ನು ಹಿಂದೆಯೇ announce ಮಾಡಿದ್ದರು. ಆ ಕಾಮಗಾರಿ ಪ್ರಾರಂಭವಾಗಿರಬೇಕು ಎನಿಸುತ್ತದೆ. ಒಂದು ಬಂಗ್ಲೆ ಕಟ್ಟಿಸುವುದಕ್ಕೆ ಒಂದೂವರೆ ಕೋಟಿ ರೂಪಾಯಿಗಳ ವೆಚ್ಚವಾಗಿರುತ್ತದೆ. ಇವತ್ತು ಮಂತ್ರಿಗಳೆಲ್ಲ ಖಾಸಗಿ ಮನೆಗಳಲ್ಲಿದ್ದಾರೆ. ನಾವೆಲ್ಲ ಅವರನ್ನು ಹುಡುಕಿಕೊಂಡು ಹೋಗಬೇಕು. ಮಂತ್ರಿಗಳನ್ನು ಎಲ್ಲೆಲ್ಲೋ ಹುಡುಕಿಕೊಂಡು ಹೋಗಬೇಕು. ಈ ರೀತಿಯ ಪರಿಸ್ಥಿತಿ ಇದೆ. ಇಂಥದ್ದರಲ್ಲಿ ನನಗೆ ಆಶ್ಚರ್ಯವಾಯಿತು. ಕೆಲವು ದಿವಸಗಳ ಹಿಂದೆ High Court ನ್ಯಾಯಮೂರ್ತಿಗಳಿಗೆ Veterinary University ಯಲ್ಲಿ 20 ಎಕರೆ ಜಾಗ ಕೊಡುತ್ತಿದ್ದಾರೆ ಎಂದು ಓದಿದೆ. ಇದಕ್ಕೆ Government Order ಸಹ ಆಯಿತು. ಇವತ್ತು ದಿಢೀರ್ ಎಂದು ನೋಡಿದಾಗ, ಆದರೆ, ಮಂತ್ರಿಗಳ ಬಂಗ್ಲೆ ಕಟ್ಟಲು ಇದ್ದಂಥ ಜಾಗ High Court Judges ಗೆ ಮನೆ ಕಟ್ಟಿಕೊಡಲು ಕಾನೂನು ಇಲಾಖೆಗೆ ಹಸ್ತಾಂತರ ಆಗಿದೆ ಎನ್ನುವ ವಿಷಯ ತಿಳಿದು ಆಘಾತವಾಯಿತು. ಇವತ್ತು constitution ನಲ್ಲಿ ಏನಾದರೂ ಬದಲಾವಣೆ ಆಗಿದೆಯೇ? ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗ ಈ ಮೂರು ಅಂಗಗಳಲ್ಲಿ ಸಮಾನತೆ ಇದೆಯೇ? ಇಲ್ಲ, ಇವತ್ತು ನ್ಯಾಯಾಂಗ ಮೇಲುಗೈ ಆಗಿದೆಯೇ? ಅದಕ್ಕೆ ನಾವೇ ಕಾರಣಕರ್ತರೇ? ನಮ್ಮ ವೈಫಲ್ಯವೇ ಕಾರಣವೇ? ನಮ್ಮ ಕೆಲವು

ಸಮಸ್ಯೆಗಳಿಂದ ನಾವು ಅವರಿಗೆ yield ಆಗುತ್ತಿದ್ದೇವೆಯೇ? ನನ್ನ ಕ್ಷೇತ್ರದ ಒಂದು ಉದಾಹರಣೆ ಕೊಡುತ್ತೇನೆ. ಅಲ್ಲಿ ನೀರಿನ ಸಮಸ್ಯೆ ಇದ್ದು, ಒಂದು ಬೋರ್‌ವೆಲ್ ಕೊರೆಸಲು ಕೇಳಿದರೆ, ಅಧಿಕಾರಿಗಳು ಅದಕ್ಕೆ ಹಣ ಇಲ್ಲವೆಂದು ಹೇಳುತ್ತಾರೆ. ಆದರೆ, ಒಬ್ಬ ನ್ಯಾಯವಾದಿ ಕರೆದು ನೀರಿಲ್ಲ ಬೋರ್‌ವೆಲ್ ಹಾಕಿಸಿ ಎಂದರೆ ಅಧಿಕಾರಿಗಳು ಹೋಗಿ ಬೋರ್ ಹಾಕಿಸಿ ಬರುತ್ತಾರೆ. ಅದಕ್ಕೆ ಹಣವನ್ನೇನೂ ಕೇಳುವಷ್ಟಿಲ್ಲ. ಏಕೆ ಹೀಗೆ ಮಾಡಿದಿರಿ ಎಂದು ಅಧಿಕಾರಿಗಳನ್ನು ಕೇಳಿದರೆ, ಸಾರ್, ನೀವೇನೋ ಬಯ್ಯುತ್ತೀರಿ, ಅವರು ಹೇಳಿದ ಮಾತನ್ನು ಕೇಳಲಿಲ್ಲವೆಂದರೆ, ನಮ್ಮನ್ನು ಜೈಲಿಗೆ ಹಾಕುತ್ತಾರೆಂದು ಹೇಳುತ್ತಾರೆ. ಈ ರೀತಿಯಾದರೆ, what is this? ಎಲ್ಲಾ ಸದಸ್ಯರೂ ಸುಮ್ಮನೆ ಕುಳಿತಿದ್ದಾರೆ. We cannot accept. ನಮಗೆ ಸಂಪೂರ್ಣ ಗೌರವವಿದೆ. ನ್ಯಾಯಾಧೀಶರಿಗೆ ಬಂಗ್ಲೆ ಕೊಡಬೇಕು, ಎಲ್ಲಾ ವ್ಯವಸ್ಥೆ ಕೊಡುವುದು ಸರ್ಕಾರದ ಜವಾಬ್ದಾರಿ ಒಪ್ಪಿಕೊಳ್ಳುತ್ತೇನೆ, ಇಲ್ಲವೆಂದು ಹೇಳುತ್ತಿಲ್ಲ. ಆದರೆ, ಶಾಸಕಾಂಗದ ಒಂದು ನಿರ್ಣಯದ ಪ್ರಕಾರ ಮಂತ್ರಿಗಳಿಗೆ ಕೊಡಬೇಕೆಂದು ನಿರ್ಧಾರವಾಗಿ ಇಷ್ಟೆಲ್ಲಾ ಆಗಿ ದಿಢೀರ್ ಎಂದು Chief Secretary ಯವರನ್ನು ಕರೆದು ಬಾಯಿಗೆ ಬಂದಂತೆ ಬಯ್ದರು, ಮತ್ತೊಂದನ್ನು ಮಾಡಿದರು ಎಂದು ನಾವು ಹೆದರಿಕೊಂಡು ಈ ರೀತಿ ಆಗುವುದಾದರೆ, ಇದಕ್ಕೆ ನಾವೇನು ಹೇಳಬೇಕು?

(ಗೊಂದಲ)

ಶ್ರೀ ವೆಂಕಟರಾವ್ ನಾಡಗೌಡ: ಆ compound wall ಕಟ್ಟಿಕೊಟ್ಟರೂ road prepare ಮಾಡುವುದಕ್ಕೆ ಬಿಡುವುದಿಲ್ಲ. ಇದಕ್ಕೇನಾದರೂ ಒಂದು ವ್ಯವಸ್ಥೆ ಮಾಡಬೇಕು.

(ಗೊಂದಲ)

ಡಾ: ಎಂ.ಸಿ. ಸುಧಾಕರ್: ಸಂವಿಧಾನದತ್ತವಾಗಿ ನಮ್ಮ ಹಕ್ಕುಗಳೇನಿವೆ ಅವುಗಳಿಗೆ ಚ್ಯುತಿ ಆಗದಂಥ ರೀತಿಯಲ್ಲಿರಬೇಕು. ಸರ್ಕಾರ ಅವರಿಗೆ ವ್ಯವಸ್ಥೆ ಮಾಡಿ, ಬೇಡವೆಂದು ಹೇಳುತ್ತಿಲ್ಲ. Cabinet ನಲ್ಲಿ ಏನು ನಿರ್ಣಯ ಮಾಡಿದ್ದಾರೆ ಅದನ್ನು ತಾವು ಪುನರ್ ಪರಿಶೀಲನೆ ಮಾಡಬೇಕು. ಅದನ್ನು ವಾಪಸ್ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ abolish ಮಾಡಿಬಿಡಿ. Legislature has to be abolished let them rule.Give entire power. Let them rule we have no problem. ಏಕೆಂದರೆ, ನಾಳೆ ನಾವೂ ತಲೆ ಎತ್ತಿಕೊಂಡು ಗೌರವವಾಗಿ ಓಡಾಡಬೇಕು. ಆದ್ದರಿಂದ, ಈ

ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಾವು ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಇನ್ನು, ಸರ್ಕಾರ ಸಾವಿರಾರು ಕೋಟಿ ರೂಪಾಯಿಗಳ ಅಭಿವೃದ್ಧಿ ಕೆಲಸಗಳನ್ನು ಘೋಷಣೆ ಮಾಡಿದೆ. ಈಗ ಇದೇ ಒಂದು ವ್ಯವಸ್ಥೆ ಕಾನೂನಿನ ಹೋರಾಟ, ಅದು Supreme Court, High Court ಇರಬಹುದು. ಕರ್ನಾಟಕ ರಾಜ್ಯ ಕಲ್ಲು, ಜಲ್ಲಿ ಉತ್ಪಾದಕರು ಮತ್ತು ಕಲ್ಲು ಗಣಿಗಾರಿಕೆಗಳ ಸಂಘ ಇವರು ಈಗಾಗಲೇ ಎಲ್ಲವನ್ನೂ ಸ್ಥಗಿತ ಮಾಡಿದ್ದಾರೆ. ಉದಾಸಿಯವರು, World Bank roads ಬಗ್ಗೆ announce ಮಾಡಿದ್ದಾರೆ. World Bank aided, Asian Development Bank roads ಗೆ ಟೆಂಡರ್ ಆಗುತ್ತಿದೆ. ಈಗ ಸಾವಿರಾರು ಕೋಟಿ ರೂಪಾಯಿ ಕೆಲಸ ಏಕ್‌ದಂ ಬಂದ್ ಆಗಿದೆ. Safe zone ಎಂದು ಹೇಳುತ್ತಾರೆ. Safe zone 1.50 ಕಿ.ಮೀ. ಸಿಗಲಿಕ್ಕೆ ಸಾಧ್ಯವೇ? ಇವೆಲ್ಲ ಕೆಲವು ಸಮಸ್ಯೆಗಳಿವೆ. ದಯವಿಟ್ಟು, ಸರ್ಕಾರ ಇದರ ಬಗ್ಗೆ ತಕ್ಷಣ ಗಮನಹರಿಸಬೇಕಾಗಿದೆ. ಈ ಸಮಸ್ಯೆಯನ್ನು ತಾವು ಯಾವ ರೀತಿ ಬಗೆಹರಿಸುತ್ತೀರಿ? ಎಲ್ಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕೆಲಸಗಳಾಗುವುದು ಅತ್ಯವಶ್ಯಕ. ಜಲ್ಲಿ ಬಹಳ ಅವಶ್ಯಕವಿದೆ. ರಸ್ತೆ ಕೆಲಸವಿರಬಹುದು, building ಇರಬಹುದು ಅದು ಅತಿ ಅವಶ್ಯಕ. ಸರ್ಕಾರ ಆದಷ್ಟು ಬೇಗ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು. ಬಸವರಾಜ ಬೊಮ್ಮಾಯಿಯವರಿಗೆ ಅಭಿನಂದನೆ ಸಲ್ಲಿಸಿದ್ದೆ, ಆಗ ಅವರು ಇರಲಿಲ್ಲ. ಇನ್ನು, ಗ್ರಾಮೀಣಾಭಿವೃದ್ಧಿಯಲ್ಲಿ ಸುವರ್ಣ ಗ್ರಾಮೋದಯ ಯೋಜನೆ ಇದೆ. ಸುವರ್ಣ ಗ್ರಾಮದೋಯ ಯೋಜನೆಯಲ್ಲಿ first phase ಅನ್ನು ಎಲ್ಲರಿಗೂ ಕೊಟ್ಟರು. Second phase ಅನ್ನು ಗುಲಬರ್ಗಾ ಪ್ರಾಂತ್ಯದಲ್ಲಿ ಕೊಟ್ಟರು. Third phase ಅನ್ನು ಎಲ್ಲರಿಗೂ ಕೊಟ್ಟರು. Fourth phase ಅನ್ನು ಮಧ್ಯೆ ಯಾವ ಯಾವ ಜಿಲ್ಲೆಗೆ ಕೊಟ್ಟರೋ ಆ ಮಾಹಿತಿ ಇಲ್ಲ. ಈ ರೀತಿಯ ಪರಿಸ್ಥಿತಿ ಇದೆ. ಬಹುಶ: ತೆಲಂಗಾಣ ಹೋರಾಟವೇನು ಆಗುತ್ತಿದೆ, ಅಲ್ಲಿ ಪ್ರತ್ಯೇಕ ರಾಜ್ಯವಾದರೆ ಬಹುಶ: ಇಲ್ಲಿಯೂ ಸಹ ಪ್ರತ್ಯೇಕ ರಾಜ್ಯಕ್ಕೆ ಅದೇ ರೀತಿ ಹೋರಾಟ ಆಗಬಹುದೇನೋ? ಏಕೆಂದರೆ, ಈ ರೀತಿಯ ತಾರತಮ್ಯವನ್ನು ನಾವು ನೋಡುವುದಕ್ಕಾಗುವುದಿಲ್ಲ. ಸಮಾನತೆ ಇರಬೇಕು. ಎಲ್ಲಾ ಭಾಗದಲ್ಲಿಯೂ ಅಭಿವೃದ್ಧಿಯಗಬೇಕಾಗುತ್ತದೆ. ಒಂದು ಕಡೆ ಹೆಚ್ಚು ಪ್ರಾತಿನಿಧ್ಯ, ಇನ್ನೊಂದು ಕಡೆ ಕಡಿಮೆ ಪ್ರಾತಿನಿಧ್ಯ ಆಗಬಾರದು. ಡಾ: ನಂಜುಂಡಪ್ಪ ವರದಿ ಇದೆ. ಎಲ್ಲಾ ಭಾಗದಲ್ಲಿ, ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಹಿಂದುಳಿದ ಪ್ರದೇಶವಿದೆ, ಅಲ್ಲಿ ಎಲ್ಲರಿಗೂ

ಒತ್ತು ಕೊಡುವುದು ನಮ್ಮ ಜವಾಬ್ದಾರಿ. ಕೆಲವೇ ಕೆಲವು ಪ್ರದೇಶಕ್ಕೆ ವಿಶೇಷ ಸ್ಥಾನಮಾನ, ಮತ್ತೊಂದು ಕೊಡುವುದು, ಈ ರೀತಿಯಾಗಿ ಹಿಂದೆ ಯಾರೋ ತಪ್ಪು ಮಾಡಿದ್ದರಿಂದ ಕಾರ್ಯಕ್ರಮಗಳು ಸರಿಯಾಗಿ ಅನುಷ್ಠಾನಗಳಾಗಿಲ್ಲ ಎಂದು ಹೇಳಿ ಈ ರೀತಿ ತಾರತಮ್ಯ ಮಾಡುವುದು ಸರಿಯಲ್ಲ. ಸುವರ್ಣ ಗ್ರಾಮೋದಯ ಯೋಜನೆ ಬಹಳ ಪ್ರತಿಷ್ಠಿತ, ಬಹಳ ಉತ್ತಮ ಕಾರ್ಯಕ್ರಮ. ಆದರೆ, ಅದಕ್ಕೆ ಹಣ ಸಮಯಕ್ಕೆ ಸರಿಯಾಗಿ ಬಿಡುಗಡೆಯಾಗುತ್ತಿಲ್ಲ. ಕಾರ್ಯಕ್ರಮ ಅನುಷ್ಠಾನವಾಗುತ್ತಿಲ್ಲ. ಅದಕ್ಕೆ ಹಣ ಬಿಡುಗಡೆಯಾಗುವುದು ಬಹಳ ಮುಖ್ಯ. PWD ಯಲ್ಲಿ 1600 ಕೋಟಿ ರೂಪಾಯಿಗಳ ಬಿಡುಗಡೆ ಬಾಕಿ ಇದೆ. ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಲೋಕೋಪಯೋಗಿ ಸಚಿವರಿಗೆ ಸಲಹೆ ನೀಡುವುದೇನೆಂದರೆ, K Ship roads ಗೆ toll ಹಾಕುತ್ತೇವೆಂದು ಹೇಳಿದಿರಿ. ಕೆಲವು ಕಡೆ ರೋಡ್ 10 ಮೀಟರ್ಸ್ ಇದೆ. ನಮ್ಮ ಕಡೆಯೂ ಈಗ ರಸ್ತೆ ಆಗುತ್ತಿದೆ. Toll ಸ್ವೀಕರಿಸಲು ಯಾರಿಗೆ ಕೊಡುತ್ತೀರಿ, ಇನ್ನೇನಾದರೂ ಸ್ಥಳವಿದ್ದು, acquisition problem ಬರದಿದ್ದ ಸಂದರ್ಭದಲ್ಲಿ ಆ ಕಡೆ ಈ ಕಡೆ 2-2 ಮೀಟರ್ ಅಗಲ ಮಾಡಿದಾಗ 4 ಲೈನ್ ರಸ್ತೆ ಆಗುತ್ತದೆ. ಬಳ್ಳಾರಿ ರಸ್ತೆಯಲ್ಲಿ ಬಹಳಷ್ಟು ಅಪಘಾತಗಳಾಗುತ್ತವೆ. ನೀವು ಡಬಲ್ ರೋಡ್ ಮಾಡಿದಾಗ ಆ ಅಪಘಾತಗಳು ಸಾಕಷ್ಟು ಕಡಿಮೆ ಆಗುವುದಕ್ಕೆ ಸಾಧ್ಯವಿದೆ. ಈ ಸಲಹೆಯನ್ನು ಪರಿಗಣಿಸಿ. Toll ತೆಗೆದುಕೊಳ್ಳುವವರೇ ಆ ರಸ್ತೆಯನ್ನು 2-2 ಮೀಟರ್ extra ಅಗಲ ಮಾಡಿದಾಗ 7-7 ಮೀಟರ್ಸ್ ಡಬಲ್ ಲೈನ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ತಾವು ಪರಿಗಣಿಸಬೇಕೆಂದು ಹೇಳುತ್ತೇನೆ. ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಶರಣ ಪ್ರಕಾಶ್‌ರವರೆ, ನೀವು ಮಾತನಾಡಿ. Please, ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ: ಈಗ ದಯಮಾಡಿ, Question Hour ತೆಗೆದುಕೊಳ್ಳಿ. ಅವರು ಚರ್ಚೆಯನ್ನು ನಾಳೆ ಮುಂದುವರೆಸಲಿ.

(ಗೊಂದಲ)

ಅಧ್ಯಕ್ಷರು: ಡಾ: ಶರಣ ಪ್ರಕಾಶ್‌ರವರೆ, ತಾವು ಮಾತನಾಡಿ.

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಹೀಗೆ ಎಲ್ಲರೂ ಎದ್ದು ನಿಂತು ಮಾತನಾಡಿದರೆ ನಾನು ಹೇಗೆ ಮಾತನಾಡಲಿ? How can I speak when the House is not in order?

(ಗೊಂದಲ)

ಅಧ್ಯಕ್ಷರು: Please, ಕುಳಿತುಕೊಳ್ಳಿ. ಎಲ್ಲರೂ ಸಹಕರಿಸಿ.

(ಗೊಂದಲ)

ಅಧ್ಯಕ್ಷರು: ನೀವು ಮಾತನಾಡಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ನಾನು ಈಗ ಪ್ರಾರಂಭ ಮಾಡಿ, ನಾಳೆಗೆ continue ಮಾಡುತ್ತೇನೆ.

ಅಧ್ಯಕ್ಷರು: ಈಗ ನೀವು ಮಾತನಾಡಲು start ಮಾಡಿ, close ಮಾಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ(ವಿರೋಧ ಪಕ್ಷದ ನಾಯಕರು): ತಾವು ಏಕೆ ಇಷ್ಟು rigid ಆಗಿಬಿಟ್ಟಿರಿ? ನೀವು ಸ್ವಲ್ಪ flexible ಇದ್ದೀರಿ ಎಂದು ನಾವು ಅಂದುಕೊಂಡಿದ್ದೆವು.

ಅಧ್ಯಕ್ಷರು: ನೀವೇ BAC ಯಲ್ಲಿ ತೀರ್ಮಾನ ಮಾಡಿಕೊಟ್ಟಿದ್ದು.

ಶ್ರೀ ಸಿದ್ದರಾಮಯ್ಯ: ನಾವೆಲ್ಲ co–operate ಮಾಡುತ್ತಿದ್ದೇವೆ. Agreed ಎಂದು ಇಟ್ಟುಕೊಳ್ಳೋಣ. What is the mood of the members? We can't just neglect the mood of the House.

(ಗೊಂದಲ)

ಅಧ್ಯಕ್ಷರು: ಈಗ ಮಾತನಾಡಿದವರೇ, ಮಾತನಾಡಬೇಕೆ? ಅವರೆಲ್ಲ ಮಾತನಾಡಿದ್ದಾರೆ. ಮತ್ತೆ ಏಕೆ ಎದ್ದು ನಿಲ್ಲುತ್ತಾರೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ: 10ನೇ ತಾರೀಖು ಮಾನ್ಯ ಮುಖ್ಯಮಂತ್ರಿಯವರು let him reply. ನಾಳೆ ಮಾತನಾಡುವವರೆಲ್ಲ ಮಾತನಾಡಲಿ. ಈಗ Question Hour ಪ್ರಾರಂಭ ಮಾಡಿ. Question Hour ಮುಗಿಯಲಿ. ಆಮೇಲೆ, calling attention ಎಲ್ಲ ತೆಗೆದುಕೊಳ್ಳಿ. ಇವತ್ತು ಮಾತನಾಡಿದರೆ ಉಳಿದವರು ನಾಳೆ ಮಾತನಾಡಲಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ರಹೀಂಖಾನ್‌ರವರೆ, ನಿಮ್ಮ senior leader ತಮ್ಮ ಹೆಸರು ಕೊಡಲಿಲ್ಲ.

(ಗೊಂದಲ)

ಅಧ್ಯಕ್ಷರು: ಶರಣ ಪ್ರಕಾಶ್‌ರವರೆ, ಮಾತನಾಡಿ. ರೇವಣ್ಣನವರೆ, ನೀವೇಕೆ ತಡೆಯುತ್ತೀರಿ?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಅವರಿಗೆ ನಾಳೆ ಬೇಕಾದರೆ ಅವಕಾಶ ಕೊಡಿ. ಈಗ Question Hour ಪ್ರಾರಂಭ ಮಾಡಿ.

(ಗೊಂದಲ)

ಅಧ್ಯಕ್ಷರು: ತಾವು ಕುಳಿತುಕೊಳ್ಳಿ. ತಾವು ಅರ್ಧ ಗಂಟೆ ಎಂದು ಹೇಳಿ ಒಂದೂವರೆ ಗಂಟೆ ಮಾತನಾಡಿದರೆ ನಾನೇನೂ ಮಾಡುವುದಕ್ಕಾಗುವುದಿಲ್ಲ. ರೇವಣ್ಣವರೆ, please, ಕುಳಿತುಕೊಳ್ಳಿ. ಸಹಕಾರ ನೀಡಿ. ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ದಯಮಾಡಿ, ನೀವು Question Hour ತೆಗೆದುಕೊಳ್ಳಿ. ಅವರಿಗೆ ನಾಳೆ ಅವಕಾಶ ಕೊಡಿ. ನಮ್ಮ members ಎಲ್ಲಾ ಗಲಾಟೆ ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: Please, ತಾವು ಕುಳಿತುಕೊಳ್ಳಿ. ಸಹಕಾರ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ: ನೀವು ಹೇಳಿದ್ದೆಲ್ಲ ಕೇಳಿದ್ದೇವೆ. ಈಗ Question Hour ತೆಗೆದುಕೊಳ್ಳಿ. ಬೇಕಾದರೆ 9 ಗಂಟೆ ನಂತರ ಚರ್ಚೆ ತೆಗೆದುಕೊಳ್ಳಿ. ಸಿದ್ದರಾಮಯ್ಯನವರೆ, ಹೇಳಿ. ನೀವು co–operate ಮಾಡದಿದ್ದರೆ, ನಾವು ಧರಣಿ ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನಾನು ನಿಮ್ಮಲ್ಲಿ ಏನು ಮನವಿ ಮಾಡುವುದೆಂದರೆ, ಮಾನ್ಯ ಮುಖ್ಯಮಂತ್ರಿಯವರು 9ನೇ ತಾರೀಖಿನಂದೇ ಉತ್ತರ ಕೊಡಬೇಕೆನ್ನುವಂಥ ಅನಿವಾರ್ಯತೆ ಏನೂ ಇಲ್ಲ. ಯಾವ ಮುಹೂರ್ತಗಳೂ ಇರುವ ಹಾಗೆ ನನಗೆ ಕಾಣಿಸುತ್ತಿಲ್ಲ. ಅವೊತ್ತು BAC ಯಲ್ಲಿ ಚರ್ಚೆಗೆ ಬಂದಿದ್ದು ಏನೆಂದರೆ, ವಿಶ್ವ ಕನ್ನಡ ಸಮ್ಮೇಳನಕ್ಕೆ ಹೋಗಬೇಕು, ಅದಕ್ಕೋಸ್ಕರ 9ನೇ ತಾರೀಖು ಉತ್ತರ ಕೊಡುತ್ತೇವೆಂದು ಹೇಳಿದರು. ಅದಕ್ಕೆ ನಾನು ಏನು ಸಲಹೆ ಕೊಟ್ಟೆ ಎಂದರೆ, 11ನೇ ತಾರೀಖು 5 ಗಂಟೆಗೆ ವಿಶ್ವ ಕನ್ನಡ ಸಮ್ಮೇಳನ ಉದ್ಘಾಟನೆ ಇದೆ, ನೀವು 10ನೇ ತಾರೀಖು ಉತ್ತರ ಕೊಡಿ ಎಂದು ಹೇಳಿದೆ. ಅದಕ್ಕೆ ಅವರು ಇಲ್ಲ, ನಾನು 9ನೇ ತಾರೀಕು ಉತ್ತರ ಕೊಡುತ್ತೇನೆ, ಬೇರೆ ವಿಚಾರ ಬೇಕಾದರೆ 10ನೇ ತಾರೀಖು ತೆಗೆದುಕೊಳ್ಳೋಣವೆಂದು ಹೇಳಿದರು. ಈಗ 10ನೇ ತಾರೀಖು ಸದನ ಇಲ್ಲವೆಂದು ಆಯಿತು. ಈಗ ಸರ್ಕಾರ ಬಹಳ rigid ಆಗಿರುವುದು ಬೇಡ. ವಿರೋಧ ಪಕ್ಷದವರೆಲ್ಲ ಇವತ್ತು ಬಜೆಟ್‌ನ ಸಾಮಾನ್ಯ ಚರ್ಚೆಯಲ್ಲಿ ಭಾಗಿಯಾಗಿ ಮಾತನಾಡಿದ್ದೇವೆ. ಅನೇಕ ಒಳ್ಳೆಯ ಸಲಹೆಗಳನ್ನೂ ಕೊಟ್ಟಿದ್ದೇವೆ. ನೀವು ಹೇಳಿದ ಹಾಗೆ, ರಾತ್ರಿ 8 ಗಂಟೆವರೆಗೂ ಕುಳಿತುಕೊಳ್ಳುತ್ತಿದ್ದೇವೆ. ಬೆಳಗ್ಗೆ 10 ಗಂಟೆಗೇ ಬರುತ್ತಿದ್ದೇವೆ. ನೀವು ಹೇಗೆ ಹೇಳುತ್ತೀರೋ, ಹಾಗೆ ಕೇಳುತ್ತಿದ್ದೇವೆ. ಆದರೂ ಕೂಡ ಮುಗಿದಿಲ್ಲ. ಇನ್ನೂ Question Hour ಮುಗಿದಿಲ್ಲ. ಜನಾರ್ದನ ರೆಡ್ಡಿಯವರೆ, ನೀವು ಮುಖ್ಯಮಂತ್ರಿಯವರಿಗೆ ಸ್ವಲ್ಪ ಹೇಳಿ. ಅವರು ನೀವು ಹೇಳಿದ ಹಾಗೆ ಕೇಳುತ್ತಾರೆ. ನೀವು ಆ ಕಡೆ ಕುಳಿತುಕೊಂಡೇ ಹೇಳಿ. Chief Minister ರವರು ಇವರು ಹೇಳಿದರೆ ಪಾಪ ಕೇಳುತ್ತಾರೆ. ಇವರು ಹೇಳುವುದೇ ಇಲ್ಲ. ಏಕೋ ನೀವು ಅವರ ಕೈ ಬಿಟ್ಟಿದ್ದೀರಿ.

(ಗೊಂದಲ)

ಶ್ರೀ ಜಿ. ಜನಾರ್ದನ ರೆಡ್ಡಿ(ಪ್ರವಾಸೋದ್ಯಮ ಸಚಿವರು): Question Hour ಸಲುವಾಗಿ 4 questions ಗೆ ಉತ್ತರ ನೀಡಲು ನಾನು ಬೆಳಗ್ಗೆಯಿಂದ ಕಾಯುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ: ಜನಾರ್ದನರೆಡ್ಡಿಯವರೆ, ಅವರು ನಿಮ್ಮ ಮಾತು ಸ್ವಲ್ಪ ಕೇಳುತ್ತಾರೆ.

ಡಾ: ಹೆಚ್.ಸಿ. ಮಹದೇವಪ್ಪ: ಈಗ Question Hour ತೆಗೆದು ಕೊಳ್ಳಲಿ. ನಾನು ಬೆಳಗ್ಗೆಯಿಂದ ಕಾಯುತ್ತಿದ್ದೇನೆಂದು ಹೇಳಿದರಲ್ಲ.

ಶ್ರೀ ಸಿದ್ದರಾಮಯ್ಯ: 9ನೇ ತಾರೀಖಿನಂದೇ ಬಜೆಟ್‌ಗೆ ಉತ್ತರ ಕೊಡಬೇಕೆಂದು ಶಾಸ್ತ್ರ ಏನಾದರೂ ಕೇಳಿದ್ದಾರೆಯೇ?

ಶ್ರೀ ಜಿ. ಜನಾರ್ದನ ರೆಡ್ಡಿ: ನನಗೆ ಗೊತ್ತಿಲ್ಲ. ನನಗೆ ಅದರ ಬಗ್ಗೆ ನಂಬಿಕೆ ಇಲ್ಲ.

ಶ್ರೀ ಸಿದ್ದರಾಮಯ್ಯ: ಗೊತ್ತಿಲ್ಲವೇ? ನಂಬಿಕೆ ಇಲ್ಲ, very good. ಹಾಗಾದರೆ, ನೀವು ನಮ್ಮ category ಯಲ್ಲಿ ಇದ್ದೀರಿ.

ಶ್ರೀ ಬಸವರಾಜ ಬೊಮ್ಮಾಯಿ(ಜಲಸಂಪನ್ಮೂಲ ಸಚಿವರು): ಈ ಅಧಿವೇಶನ ಪ್ರಾರಂಭವಾದ ಮೇಲೆ ಮಾನ್ಯ ಮುಖ್ಯಮಂತ್ರಿಯವರು ಯಾರ ಮಾತು ಕೇಳದಿದ್ದರೂ ಸಿದ್ದರಾಮಯ್ಯನವರ ಮಾತು ಮಾತ್ರ ಕೇಳುತ್ತಾರೆ, ಬೇರೆ ಯಾರ ಮಾತೂ ಕೇಳುತ್ತಿಲ್ಲ.

ಶ್ರೀ ಸಿದ್ದರಾಮಯ್ಯ: ನನ್ನ ಮಾತು ಕೇಳುತ್ತಾರೆಂದ ಮೇಲೆ let him give reply on 10th.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ನೀವು ಅದನ್ನು ಅವರಿಗೆ ಹೇಳಬೇಕು. BAC ಯಲ್ಲಿ ನೀವು ಅವರ ಮಾತನ್ನು ಒಪ್ಪಿಕೊಂಡಿದ್ದೀರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: Let him give reply on 10th. ನೀವು ಸ್ವಲ್ಪ ವಕಾಲತ್ ಹಾಕಿ.

ಶ್ರೀ ಬಸವರಾಜ ಬೊಮ್ಮಾಯಿ: BAC ಯಲ್ಲಿ ನೀವು ಅವರು ಸೇರಿ ತೀರ್ಮಾನ ಮಾಡಿ ನೀವು ಇವರಿಗೆಲ್ಲ ಗೋಳು ಹುಯ್ದುಕೊಳ್ಳುತ್ತೀರಿ?

ಶ್ರೀ ಸಿದ್ದರಾಮಯ್ಯ: Chief Minister ರವರ ಬೆನ್ನ ಹಿಂದೆ ನಿಂತಿರುವವರು ಬಸವರಾಜ ಬೊಮ್ಮಾಯಿ. You please advise him, ask him to reply on 10th.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಸದನದ mood ಬಹಳ important. ಅಭಿಪ್ರಾಯ ಬಹಳ ಮುಖ್ಯ. ನಾವು ಯಾರೋ ಅಭಿಪ್ರಾಯ ಹೇಳುವುದು, ಇನ್ನೊಬ್ಬರು ತೀರ್ಮಾನ ಮಾಡುವುದು. BAC ಯೇ ಸರ್ವೋಚ್ಚ ಏನಲ್ಲ. House is supreme. ಸದನ ಸರ್ವೋಚ್ಚ. ಇಲ್ಲಿರುವ members ಅಭಿಪ್ರಾಯ ಬಹಳ ಮುಖ್ಯ. ಆ ಕಾರಣದಿಂದ, ನಾನು ನಿಮ್ಮಲ್ಲಿ ಮನವಿ ಮಾಡುವುದೇನೆಂದರೆ, ನೀವು ಮುಖ್ಯಮಂತ್ರಿಯವರಿಗೆ ಅಂದರೆ ಸಭಾನಾಯಕರಿಗೆ direction ಕೊಡಬೇಕು. The mood of the House is that they are not ready to hear the reply on 9th, they are ready to hear the reply on 10th ಎಂದು ಹೇಳಿದರೆ, definitely he will agree. ದಯವಿಟ್ಟು ಅದನ್ನು ಮಾಡಿ. Because, ಅಪರೂಪಕ್ಕೆ ಎಲ್ಲರೂ ಕೂಡ ಬಹಳ ಆಸಕ್ತಿಯಿಂದ ಭಾಗವಹಿಸಬೇಕೆಂದಿದ್ದಾರೆ. ಇನ್ನೂ 5–6 ಜನ ಮಾತನಾಡುವವರಿದ್ದಾರೆ ಅವರು ಚರ್ಚೆಯಲ್ಲಿ ಭಾಗವಹಿಸಲಿ. ನಿಮಗೂ ಅನುಕೂಲವಾಗುತ್ತದೆ. ದಯವಿಟ್ಟು ಅದನ್ನು ಮಾಡಿ. ಈಗ Question Hour ತೆಗೆದುಕೊಳ್ಳಲಿ. ನಾಳೆ ಶರಣ ಪ್ರಕಾಶ್‌ರವರು ಬೆಳಗ್ಗೆ 10 ಗಂಟೆಗೆ ಪ್ರಾರಂಭ ಮಾಡಲಿ. ಉಳಿದವರು 4–5 ಜನ ಸದಸ್ಯರು ಮಾತನಾಡಲಿ.

ಅಧ್ಯಕ್ಷರು: ಡಾ: ಶರಣ ಪ್ರಕಾಶ್‌ರವರು ಸ್ವಲ್ಪ ಹೊತ್ತು ಮಾತನಾಡಲಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಈಗ 10 ನಿಮಿಷ ಮಾತನಾಡಿ, ನಾಳೆ continue ಮಾಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ನಾವು ಬೆಳಗ್ಗೆಯಿಂದ Question Hour ಗೋಸ್ಕರ ಕಾಯುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಈಗ ಅವರು ಎಷ್ಟು ಹೊತ್ತು ಮಾತನಾಡುತ್ತಾರೋ, ಮಾತನಾಡಲಿ. ನೀವು ಏಕೆ ಅವರಿಗೆ ಅವಕಾಶ ಕೊಡುತ್ತಿಲ್ಲ. ನೀವು ಮಾತನಾಡಿ ಆಯಿತಲ್ಲ. ಅವರ ಸಲಹೆ ಯಾವುದೂ ಬೇಡವೇ? ಶರಣ ಪ್ರಕಾಶ್‌ರವರೆ, ನೀವು ಮಾತನಾಡಬಾರದೆಂಬ ಚಿಂತನೆ ಅವರದು ಇದೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ತಾವು ಬೆಳಗ್ಗೆ ಮಾತನಾಡಿ.

(ಗೊಂದಲ)

ಅಧ್ಯಕ್ಷರು: ಅವರಿಗೆ ಬೆಳಗ್ಗೆಯೂ ಅವಕಾಶ ಕೊಡುತ್ತೇನೆ. ಈಗ ಮಾತನಾಡಿ.

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಬೆಳಗ್ಗೆ ಅವಕಾಶ ಕೊಡುತ್ತಾರಂತೆ. ಈಗ ನಾನು 5 ನಿಮಿಷ ಮಾತನಾಡಿ ಕುಳಿತುಕೊಳ್ಳುತ್ತೇನೆ. ಮತ್ತೆ ನಾಳೆ ಮುಂದುವರೆಸುತ್ತೇನೆ.

(ಗೊಂದಲ)

ಅಧ್ಯಕ್ಷರು: 5 ನಿಮಿಷ ಅಲ್ಲ, ಎಷ್ಟು ಹೊತ್ತು ಮಾತನಾಡುವುದ–ಕ್ಕಾಗುತ್ತದೋ ಅಷ್ಟು ಹೊತ್ತು ಮಾಡಿ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್(ಸೇಡಂ): ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು. ಇನ್ನೊಂದು ಏನೆಂದರೆ, Sorry, I didn't mean to threaten. You should not take it like that. This is in the interest of public I am telling. ಏನೋ ಹೇಳಬೇಕು. ನಮ್ಮ ಭಾಗದಲ್ಲಿ ತೊಂದರೆಗಳಿರುವುದರಿಂದ ನಾನು ಅಷ್ಟು

ಆವೇಶದಲ್ಲಿ ಹೇಳಿದೆ. I don't have any personal interest or I don't have any interest to tell anything. 2011-12ನೇ ಸಾಲಿನ ಆಯವ್ಯಯವನ್ನು ಮಾನ್ಯ ಮುಖ್ಯ ಮಂತ್ರಿಯವರು ಮಂಡಿಸಿದ್ದಾರೆ. ಅದರ ಬಗ್ಗೆ ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರು ಬಹಳ ಸುದೀರ್ಘವಾಗಿ ಒಳ್ಳೆಯ ರೀತಿಯಿಂದ ವಿಶ್ಲೇಷಣೆ ಮಾಡಿದ್ದಾರೆ. ಈ ಆಯವ್ಯಯ ಏನಿದೆ ಇದು growth oriented budget ಅಲ್ಲ. ಇದು ನಮ್ಮ ರಾಜ್ಯದ ಪ್ರಗತಿಗೆ ಪೂರಕವಾಗಿರುವ ಬಜೆಟ್ ಅಲ್ಲ. ಇದು ಕೇವಲ ಜನರ attention divert ಮಾಡಲಿಕ್ಕೆ ಮತ್ತು ಈ ಜನರನ್ನು ಮರಳು ಮಾಡತಕ್ಕಂಥ ಸುಮ್ಮನೆ ಏನೋ ಒಂದು ಸ್ವರ್ಗ ಸೃಷ್ಟಿ ಮಾಡುತ್ತೇವೆ, ಎಲ್ಲರನ್ನೂ ಒಂದು ಹೊಸ ಲೋಕಕ್ಕೆ ಕರೆದುಕೊಂಡು ಹೋಗುತ್ತೇವೆ, ರೈತರನ್ನು ಉದ್ಧಾರ ಮಾಡಿಬಿಡುತ್ತೇವೆನ್ನುವಂಥ ಒಂದು ಕೃಷಿ ಬಜೆಟ್ ಕೊಡುತ್ತೇವೆ ಎಂದು ರಾಜ್ಯದ ಜನರನ್ನು ತಪ್ಪು ದಾರಿಗೆ ಒಯ್ಯುವಂಥ ಪ್ರಯತ್ನವೆಂದು ನಾನು ಅಂದುಕೊಂಡಿದ್ದೇನೆ. ಏಕೆಂದರೆ, ನಾನು convince ಆಗಿಲ್ಲ. ನಾನು ಇದನ್ನು ರಾಜಕೀಯ ಉದ್ದೇಶದಿಂದ ಅಥವಾ ಬೇರೆ ಯಾವುದೋ ಉದ್ದೇಶದಿಂದ ಹೇಳುತ್ತಿಲ್ಲ. ಅವರು ಹೇಳುವ ಮಾತಿಗೂ, ಅವರು ಕೊಡತಕ್ಕಂಥ ಅಂಕಿ ಸಂಖ್ಯೆಗೂ ಬಹಳ ವ್ಯತ್ಯಾಸವಿದೆ. ಮೊಟ್ಟಮೊದಲನೆಯದಾಗಿ, ಯಾವುದೇ ಒಂದು ಬಜೆಟ್ ಆ ರಾಜ್ಯದ ಪ್ರಗತಿಯಾಗಬೇಕಾದರೆ ನಾವು ಏನು ನೋಡುತ್ತೇವೆಂದರೆ, ಎಷ್ಟು ಹಣ ಖರ್ಚು ಮಾಡುತ್ತಿದ್ದೇವೆ ಎಂದು ಯೋಚಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಏಕೆ 1 ಲಕ್ಷ ಕೋಟಿ ರೂಪಾಯಿಗಳ ಬಜೆಟ್ ಅನ್ನು ಮಂಡನೆ ಮಾಡಬೇಕೆಂದು ಬಹಳ ಆತುರದಲ್ಲಿದ್ದಾರೋ ನನಗಂತೂ ಅರ್ಥವಾಗುತ್ತಿಲ್ಲ. ಏಕೆಂದರೆ, ಆ ಸಮಯ ನಮ್ಮ ರಾಜ್ಯಕ್ಕೆ ಇನ್ನೂ ಬಂದಿಲ್ಲ. ಆ ಸಮಯ ಇನ್ನೂ ಪರಿಪಕ್ವವಾಗಿಲ್ಲ. ಏಕೆಂದರೆ, ಅಷ್ಟು resources ಅನ್ನು mobilize ಮಾಡುವ ಸ್ಥಿತಿಯಲ್ಲಿ ನಾವಿಲ್ಲ. ಅಷ್ಟು ನಮ್ಮ ಆದಾಯವಿಲ್ಲ. ನೀವು ಬೇಕಾಬಿಟ್ಟಿ borrow ಮಾಡಿ ಹಣವನ್ನು ಸಾಲದ ರೂಪದಲ್ಲಿ ತೆಗೆದುಕೊಂಡು, ಅಭಿವೃದ್ಧಿ ಮಾಡಲಿಕ್ಕೆ capital investment ಗೆ ಮಾಡುವುದಾದರೆ ನಮ್ಮದೇನೂ ಅಭ್ಯಂತರವಿಲ್ಲ.

ಈ ರಾಜ್ಯದ ಬೆಳವಣಿಗೆಗೆ ಪೂರಕವಾಗಿ ಹಣ ಸಾಲ ತಂದು ಅದನ್ನು ಉಪಯೋಗಿಸುತ್ತೀರಿ ಎನ್ನುವುದಾದರೆ ಅದಕ್ಕೆ ನಮ್ಮ ಸಹಮತವಿದೆ. ಆದರೆ, ಅದನ್ನು ಆ ರೀತಿಯಾಗಿ ಉಪಯೋಗಿಸುತ್ತಾರೆನ್ನುವ ವಿಶ್ವಾಸವಿಲ್ಲ. ಏಕೆ ಇಲ್ಲವೆಂದರೆ, ನಾನು ಅಂಕಿ ಅಂಶಗಳ ಜೊತೆಗೆ ಹೇಳುತ್ತೇನೆ. ಇವತ್ತು ಬೆಳಗ್ಗೆ ನನಗೆ ನಿಮ್ಮ Accounts at a glance 2009-10 ಎನ್ನುವ ಪುಸ್ತಕ ಬಂತು. ಈ ಪುಸ್ತಕ ಹೇಳುತ್ತಿದೆ ನಾನು ಹೇಳುತ್ತಿಲ್ಲ. ಯಾವುದೇ ರಾಜ್ಯ ಅಭಿವೃದ್ಧಿಯಾಗಬೇಕಾದರೆ ಅದು ಎಷ್ಟು capital investment ಮಾಡುತ್ತಿದೆ, Plan expenditure ಏನಿದೆ non-plan expenditure ಮುಖ್ಯವಲ್ಲ. Plan expenditure ಎಷ್ಟು ಇದೆ ಎಂಬುದು ಬಹಳ ಮುಖ್ಯ. ಯಾವುದೇ ಒಂದು ಪ್ರಗತಿಪರವಾಗಿರುವ ರಾಜ್ಯ ಅಂದರೆ financially prudent state ಎಂದು ನಾವು ಯಾವುದಕ್ಕೆ ಹೇಳುತ್ತೇವೆಂದರೆ, ನಮ್ಮ plan and non-plan at least 50:50 ಇರಬೇಕೆನ್ನುವುದನ್ನು we expect. ನಮ್ಮ expectation ಏನೀರಬೇಕೆಂದರೆ plan and non-plan should be at least at par. ಏನೆಂದರೆ, 70% plan, 30% non-plan ಗೆಂದು ನಾವು ಹೋಗುವುದಕ್ಕಾಗುವುದಿಲ್ಲ physically it is not possible. But at least 50:50 ತರುವುದಕ್ಕೆ ಪ್ರಯತ್ನ ಯಾವತ್ತೂ ನಮ್ಮದು ಇರಲೇಬೇಕು. ಆದರೆ, ಇಲ್ಲಿ ಏನಾಗಿದೆ ಎಂದರೆ, ನಮ್ಮ plan and non-plan ಗೆ 75:25 ಆಗಿ ಬಿಟ್ಟಿದ್ದೇವೆ. 75% ಹಣ ನಾವು non-plan ಗೆ ಖರ್ಚು ಮಾಡುತ್ತಿದ್ದೇವೆ. Non-plan ಎಂದರೆ revenue expenditureಗೆ, salary ಗೆ ಮತ್ತು ಇತರೇ ವೆಚ್ಚಗಳಿಗೆ Capital investment ಗೆ ಅಲ್ಲ. Plan expenditure ಗೆ ಅಲ್ಲ. ಇದು ಒಂದು ಬಹಳ ನೋವಿನ ಸಂಗತಿ. ನಮ್ಮ ಮುಖ್ಯ ಮಂತ್ರಿಗಳು ಯಾವಾಗಲೂ plan size 20% increase ಮಾಡಿದ್ದೇನೆ ಎಂದು ಹೇಳುತ್ತಾರೆ. 2008-09 ನೇ ಸಾಲಿನ ಅಂಕಿಅಂಶಗಳಲ್ಲಿ ಹೇಳಿದ್ದಾರೆ. 2008-09 ನೇ ಸಾಲಿನಲ್ಲಿ ಏನು plan outlay ಇದೆ 25,952 ಕೋಟಿ. ನಾವೆಲ್ಲಾ ಖುಷಿ ಪಟ್ಟೆವು. 25 ಸಾವಿರ plan size ಇದೆ ನಮ್ಮ plan size increase ಮಾಡಿದ್ದಾರೆ, ಹಣ ಹೇಗೆ ಹೊಂದಿಸುತ್ತಾರೆಂದು ಆ ದಿವಸ ಮಾನ್ಯ

ಸಿದ್ದರಾಮಯ್ಯನವರು flour of the House ನಲ್ಲಿ ಕೇಳಿದರು. ನೀವು ದುಡ್ಡು ಎಲ್ಲಿಂದ ತರುತ್ತೀರಿ? ಹೇಗೆ ಮಾಡುತ್ತೀರಿ? ಎಂದು ಕೇಳಿದ್ದಕ್ಕೆ ನಾವೆಲ್ಲಾ ಮಾಡುತ್ತೇವೆ, ನಮ್ಮಲ್ಲಿರುವ ಜಮೀನು ಹರಾಜು ಮಾಡುತ್ತೇವೆ, ಅದು ಮಾಡುತ್ತೇವೆ, ಇದು ಮಾಡುತ್ತೇವೆ ಎಂದು ಹೇಳಿದರು. ಆದರೆ ಅದು ಏನೂ ಆಗಲಿಲ್ಲ ನಿಮಗೆಲ್ಲಾ ಗೊತ್ತು. 2008-09ನೇ ವರ್ಷದಲ್ಲಿ plan expenditure ನಲ್ಲಿ ಖರ್ಚು ಮಾಡಿದ್ದು ಕೇವಲ 18 ಸಾವಿರ ಕೋಟಿ. ಅಂದರೆ ಇಲ್ಲಿ ಎಷ್ಟು ಕಟ್ ಆಯಿತು? ಸುಮಾರು one third of Plan outlay ನಿಮಗೆ ಖರ್ಚು ಮಾಡಲಿಕ್ಕೆ ಆಗಲಿಲ್ಲ. How can you call it as a progressive state? ಇಲ್ಲಿ ಹಣಕಾಸಿನ ನಿರ್ವಹಣೆ ಬಹಳ ಒಳ್ಳೆಯ ರೀತಿಯಲ್ಲಿ ಆಗುತ್ತದೆ ಎಂದು ನಾವು ಹೇಗೆ ನಂಬುವುದಕ್ಕೆ ಆಗುತ್ತದೆ? ನಿಮ್ಮ plan outlay ನಲ್ಲಿ one third 33% ಖರ್ಚು ಮಾಡಲಿಕ್ಕೆ ಆಗಲಿಲ್ಲ. ಏಕೆ ಖರ್ಚು ಮಾಡಲಿಕ್ಕೆ ಆಗಿಲ್ಲವೆಂದರೆ ನಿಮಗೆ ಹಣ ಹೊಂದಿಸಲಿಕ್ಕೆ ಆಗಲಿಲ್ಲ. ಇದು ನಿಮ್ಮ administrative capacityಯನ್ನು ತೋರಿಸುತ್ತದೆ. ಏಕೆಂದರೆ, ನೀವು ಸರಿಯಾಗಿ ಯೋಜನೆ ಮಾಡಲಿಲ್ಲ. ಸರಿಯಾಗಿ ಹಣ ಹೊಂದಿಸಲಿಲ್ಲ, ಸರಿಯಾಗಿ ಮಾನೀಟರ್ ಮಾಡಲಿಲ್ಲ. ಖರ್ಚು ಮಾಡಲಿಲ್ಲ. ಅದು ಒಂದೇ ವರ್ಷವಾಗಿದ್ದರೆ ಏನೋ recession ಇದೆ, ಹೀಗಾಗಿ ಹಣ ಹೊಂದಿಸಲಿಕ್ಕೆ ಆಗಲಿಲ್ಲ ಕೇಂದ್ರ ಸರ್ಕಾರದಲ್ಲೂ ಹಾಗೆ ಆಯಿತು, ಆ ಸರ್ಕಾರದವರು ಕೂಡ ಹಾಗೆ ಮಾಡಿದರು ಎಂದು ನೀವು ಹೇಳಿದಿರಿ. ನಾವು ಕೂಡ ತಾವು ಹೇಳಿದ್ದನ್ನು ಆಯಿತು ಎಂದು ಇಟ್ಟುಕೊಳ್ಳೋಣ. ನಿಮ್ಮ plan size ನಲ್ಲಿ ಹೋದ ವರ್ಷ 25,000 ಕೋಟಿಯಲ್ಲಿ ನೀವು ಖರ್ಚು ಮಾಡಿರುವುದು 18 ಸಾವಿರ ಕೋಟಿ. ಆದರೆ, 2009-10ನೇ ಸಾಲಿನಲ್ಲಿ ನಿಮ್ಮ plan size ಎಷ್ಟು ಇತ್ತೆಂದರೆ 29,500 ಸಾವಿರ ಕೋಟಿ. ನೀವು ಕೊಟ್ಟ ಅಂಕಿ ಅಂಶಗಳನ್ನೇ ನಾನು ಹೇಳುತ್ತಿದ್ದೇನೆ. ಖರ್ಚು ಮಾಡಿದ್ದು ಎಷ್ಟು ಎಂದರೆ 22,859 ಸಾವಿರ ಕೋಟಿ. ಈ ವರ್ಷ ಏನಾಯಿತು? ಇದರಲಿ 30% ಕಟ್ ಆಯಿತು. Plan expenditure ನಲ್ಲಿ 30% ನೀವು ಖರ್ಚು ಮಾಡುವುದಕ್ಕೆ ಆಗುತ್ತಿಲ್ಲವೆಂದರೆ ಈ ರಾಜ್ಯ ಸರಿಯಾದ ದಿಕ್ಕಿನಲ್ಲಿ ಹೋಗುತ್ತಿದೆ ಎಂದು ನಾನು ಭಾವಿಸುವುದಕ್ಕೆ

ಆಗುತ್ತದೆಯೆ? ಈ ವರ್ಷ 2010-11 ರಲ್ಲಿ ನಮ್ಮ plan size 31 ಸಾವಿರ ಕೋಟಿ ಇದರಲ್ಲಿ ಖರ್ಚು ಆಗಿರುವುದು, ಮಾನ್ಯ ಸಿದ್ದರಾಮಯ್ಯನವರು ಆ ದಿವಸ ಅಂಕಿ ಅಂಶಗಳನ್ನು ತರಿಸಿದ್ದರು. ನಾವು ಕೇಳಿದರೆ ಅವರು ಸರಿಯಾಗಿ ಕೊಡುತ್ತಿಲ್ಲ. ಅವರು ಹೇಳಿದ ಪ್ರಕಾರ they have not spent still 51% of the out lay. 51% you have not spent i.e., up to January end. ನಮಗೆ ಇರುವುದು ಎರಡು ತಿಂಗಳು. 16,070 ಕೋಟಿ ಖರ್ಚು ಮಾಡಿದ್ದು ಇನ್ನೂ 15 ಸಾವಿರ ಕೋಟಿ ಖರ್ಚು ಮಾಡಿಲ್ಲವೆಂದರೆ ನಾವು ಒಳ್ಳೆಯ ಬಜೆಟ್ ಕೊಡುತ್ತಿದ್ದೇವೆ, ರೈತರ ಪರವಾಗಿ ಇದ್ದೇವೆ, ಎಂದರೆ ಇದು ಹೇಗೆ ಆಗುತ್ತದೆ? ಬರಿ ರೈತರಲ್ಲ ಈ ರಾಜ್ಯದಲ್ಲಿರತಕ್ಕಂಥ ನಾವು ಎಲ್ಲರ ಪರವಾಗಿ ನ್ಯಾಯಬದ್ದವಾಗಿ ಕಾನೂನು ಬದ್ದವಾಗಿ ನಾವು ನುಡಿದಂತೆ ನಡೆಯಬೇಕು. ನುಡಿದಂತೆ ನಡೆದರೆ ಮಾತ್ರ ಈ ರಾಜ್ಯದ ಜನ ನಮ್ಮನ್ನು ನಂಬುವುದಕ್ಕೆ ಸಾಧ್ಯವಾಗುತ್ತದೆ. ನಾವು ಹೇಳುವುದೊಂದು ಮಾಡುವುದೊಂದು. ನಾವು ಘೋಷಣೆಯನ್ನು ದೊಡ್ಡದಾಗಿ ಮಾಡಿಬಿಡುತ್ತೇವೆ. ಇಲ್ಲಿ ಗ್ಯಾಲರಿಯಲ್ಲಿರತಕ್ಕಂಥವರು ಅದನ್ನು ದೊಡ್ಡ ದೊಡ್ಡ ಅಕ್ಷರಗಳಲ್ಲಿ ಇಷ್ಟು ನಮ್ಮ ರಾಜ್ಯದ plan outlay ಎಂದು ಬರೆದು ಬಿಡುತ್ತಾರೆ, ಆದರೆ ಖರ್ಚಾಗಿರುವುದರ ಬಗ್ಗೆ ಯಾರೂ ಬರೆಯುವುದೇ ಇಲ್ಲ. I am very sorry to say this. ನಮ್ಮ ರಾಜ್ಯ plan outlay 33% ಖರ್ಚಾಗಿಲ್ಲ ಎನ್ನುವುದು that should come in the headlines. ಅದು ಬರುವುದಿಲ್ಲ. I am very sorry to say this. They also have responsibility towards society. ನಾನು ಸತ್ಯವನ್ನೇ ಹೇಳುತ್ತಿದ್ದೇನೆ. I am feeling sorry for that. I am totally un-happy, I am disappointed. ಈ ರೀತಿ ಇದ್ದರೆ How can I show my face to my people? and tell anything. ನಾನು ನನ್ನ ಮತಕ್ಷೇತ್ರದಲ್ಲಿ ಹೋಗಿ ಈ ವರ್ಷದ ಬಜೆಟ್‌ನಲ್ಲಿ ಇಷ್ಟು ಸಾವಿರ ಕೋಟಿ ರೂಪಾಯಿ rural roads ಗೆ ಕೊಟ್ಟಿದ್ದಾರೆ. ನಾನು ಈ ರೋಡ್ ಮಾಡಿಸುತ್ತೇನೆಂದು How can I tell if tomorrow it does not happen? ಅಲ್ಲಿ ನಾನು ಸುಳ್ಳು ಹೇಳಿದಂತೆ

ಆಗುತ್ತೆ. ನನ್ನ ಮರ್ಯಾದೆಯ ಪ್ರಶ್ನೆ, ನಾನು ಯಾವತ್ತು ನುಡೆದಂತೆ ನಡೆಯತಕ್ಕಂಥ ಪ್ರಮಾಣಿಕ ಪ್ರಯತ್ನ ಮಾಡುತ್ತೇನೆ, ನಾನು ಸುಳ್ಳು ಹೇಳುವುದಕ್ಕೆ ಹೋಗುವುದಿಲ್ಲ. ಆಗದೇ ಇದ್ದರೆ ಆಗುವುದಿಲ್ಲವೆಂದು ಹೇಳುತ್ತೇನೆ. ಆದರೆ, ಈ ರೀತಿ ಮಾಡತಕ್ಕಂಥದ್ದು ಬಹಳ ತಪ್ಪು. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಇತಿಮಿತಿಯನ್ನು ಅರ್ಥ ಮಾಡಿಕೊಂಡು ಅಂಕಿ ಸಂಖ್ಯೆಯನ್ನು ಕೊಡಬೇಕಾಗಿತ್ತು. ಮೂರು ವರ್ಷ ಸತತವಾಗಿ ನಾವು ಪಾಠ ಕಲಿಯದೇ ಈ ವರ್ಷ ನಮ್ಮ ಆಯವ್ಯಯದಲ್ಲಿ ಮತ್ತೆ 38 ಸಾವಿರ ಕೋಟಿ ರೂಪಾಯಿಗೆ ನೀವು ಮಾಡುತ್ತೀರಲ್ಲಾ ಇದಕ್ಕೆ ನಾನು ಏನು ಹೇಳಬೇಕು? 25 ಸಾವಿರ ಹೇಳದಿರಿ 18 ಸಾವಿರ ಮಾಡಿದಿರಿ. 29 ಸಾವಿರ ಹೇಳಿದಿರಿ 22 ಸಾವಿರ ಮಾಡಿದಿರಿ. 31 ಸಾವಿರ ಹೇಳಿದಿರಿ ಇನ್ನೂ 16 ಸಾವಿರ ಖರ್ಚು ಮಾಡಿಲ್ಲ. ಮುಂದಿನ ವರ್ಷಕ್ಕೆ ಅಂದರೆ ಈ ವರ್ಷಕ್ಕೆ ನೀವು ಪುನ: 38 ಸಾವಿರ ಕೋಟಿ ಹೇಳುತ್ತೀರಿ, ಹಣ ಎಲ್ಲಿಂದ ತರುತ್ತೀರಿ? ನಿಮ್ಮ ಕೈಯಲ್ಲಿ ಖರ್ಚು ಮಾಡುವುದಕ್ಕೆ ಆಗುತ್ತದೆಯೆ? How can we believe this? ಅದಕ್ಕೆ ಬೇರೆ ಬೇರೆ ಸಾಕಷ್ಟು ವಿಷಯಗಳು ನಮ್ಮ ವಿರೋಧ ಪಕ್ಷದ ನಾಯಕರು ಬಹಳ ಚೆನ್ನಾಗಿ ಹೇಳಿದ್ದಾರೆ. I want to bring to the notice of the House ಏನೆಂದರೆ, ನಮ್ಮ ರಾಜ್ಯದಲ್ಲಿ Plan expenditure ಸರಿಯಾಗಿ ಆಗುತ್ತಿಲ್ಲ. ಅದಕ್ಕೆ state is not going towards..., we are not in right direction. So this is a very sorry state of affairs, ಇದಕ್ಕೆ ನಾವು ತಕ್ಷಣವಾಗಿ remedy ಹುಡಕಬೇಕು. ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಸಚಿವರು ಇದರ ಬಗ್ಗೆ ಏಕೆ ಈ ರೀತಿ ಆಗುತ್ತದೆಂದು ಬಹಳ ದೀರ್ಘವಾದ ಆಲೋಚನೆ ಮಾಡಬೇಕು. ಏಕೆ ಈ ರೀತಿಯಾಗುತ್ತದೆ ಎಂದರೆ, ಖಂಡಿತವಾಗಿ ಇದರಲ್ಲಿ ನಾವು ಒಂದಂಶವನ್ನು ಅರ್ಥ ಮಾಡಿಕೊಳ್ಳಬೇಕು. ಮೊದಲನೆಯದು ಈ ರಾಜ್ಯದಲ್ಲಿ ಯಾವ ಇಲಾಖೆಗೆ ಎಷ್ಟು ಹಣ ಕೊಡಬೇಕೆನ್ನುವ ನಮ್ಮ planning ಇದೆ, ನೀವೇನು plan ಮಾಡುತ್ತೀರಿ, ಮಾಡಿರತಕ್ಕಂಥ plan ಗೆ ಸರಿಯಾದ ಯೋಜನೆ ಮಾಡಿ ಅದಕ್ಕೆ ಸಂಬಂಧಪಟ್ಟ ಇಲಾಖೆಗಳು ಸಂಬಂಧಪಟ್ಟ ಕಾರ್ಯದರ್ಶಿಗಳು, ಸಂಬಂಧಪಟ್ಟ ಸಚಿವರು ಅದಕ್ಕೆ ಯಾವುದೇ ರೀತಿಯ

ರಿವ್ಯೂ ಮಾಡುತ್ತಿಲ್ಲ. Implementing authorities are not doing their job rightly. ಅದಕ್ಕೆ who is responsible for this? You have to fix the responsibility also. ನಾವು ಹೊಣೆಗಾರಿಕೆಯನ್ನು ನಿಗಧಿ ಮಾಡಬೇಕಾಗುತ್ತದೆ. ಯಾವ ಇಲಾಖೆಯಲ್ಲಿ ಹಣ ಖರ್ಚಾಗುವುದಿಲ್ಲ ಆ ಮಂತ್ರಿಗಳಿಗೆ ನೀವು ತಕ್ಕ ಶಾಸ್ತಿ ಮಾಡಬೇಕಾಗುತ್ತದೆ. ಯಾವ ಇಲಾಖೆಯಲ್ಲಿ ಹಣ ಖರ್ಚಾಗುವುದಿಲ್ಲ you have to ask an explanation from the concerned Minister. ನಿಮ್ಮ ಇಲಾಖೆಗೆ ಇಷ್ಟು ದುಡ್ಡು ಕೊಟ್ಟಿದ್ದರೂ ಏಕೆ ಖರ್ಚಾಗಿಲ್ಲವೆಂದು ನೀವು ಅವರನ್ನು ಕೇಳಬೇಕು. ಒಂದು ವೇಳೆ finance department ನವರು ಅವರಿಗೆ ಹಣವೇ ರಿಲೀಸ್ ಮಾಡಲಿಲ್ಲವೆಂದರೆ ಅದು ಅವರ ತಪ್ಪಾಗುವುದಿಲ್ಲ. ಅದಕ್ಕೆ ನಾವು ಏನು ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಇದನ್ನು ಸರಿಪಡಿಸತಕ್ಕಂಥ ಕೆಲಸ, ಮಾಡಬೇಕು. ವಿರೋಧ ಪಕ್ಷದ ನಾಯಕರನ್ನು ನೀವು ವಿಶ್ವಾಸಕ್ಕೆ ತೆಗೆದುಕೊಂಡು, because he has also presented seven budgets. ಯಾರ್ಯಾರಿಗೆ ಇದರಲ್ಲಿ ಅನುಭವ ಇದೆ, state ನಲ್ಲಿ ಒಳ್ಳೆಯ ಕೆಲಸ ಮಾಡಬೇಕೆಂದು public interestನಲ್ಲಿ ವಿಚಾರ ಮಾಡತಕ್ಕಂತವರಿಂದ ಸಲಹೆ ಪಡೆದು ಇದನ್ನು ಸರಿಪಡಿಸತಕ್ಕಂಥ ಕೆಲಸ ಮಾನ್ಯ ಮುಖ್ಯ ಮಂತ್ರಿಗಳು ಮಾಡಬೇಕು, ಇದಕ್ಕೆ ನಮ್ಮ ಎಲ್ಲಾ ಸಚಿವರು ಸಹಕಾರ ಕೊಡಬೇಕು ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಈ ಸದನದಲ್ಲಿ ಮಾಡತಕ್ಕಂಥ ಆಯವ್ಯಯ ಸಾಮಾನ್ಯ ಮನುಷ್ಯನ ಜೀವನದಲ್ಲಿ ಅದು ಹೇಗೆ ಪ್ರಭಾವ ಬೀರುತ್ತದೆಂದು ನೋಡಬೇಕಾಗುತ್ತದೆ. ರಾಜ್ಯ ಸರ್ಕಾರ ಎಲ್ಲಿಂದ ತನ್ನ ಆದಾಯ ತರುತ್ತಿದೆ ಅದನ್ನು ಹೇಗೆ ಯಾವ ರೀತಿಯಾಗಿ ಖರ್ಚು ಮಾಡುತ್ತಿದೆ. ಈ ಒಂದು ಹಣ ಸಂಗ್ರಹಣೆ ಮಾಡುವುದು ಮತ್ತು ಖರ್ಚು ಮಾಡುವುದರ ಮಧ್ಯದಲ್ಲಿ ಇಷ್ಟೆ ಆಯವ್ಯಯ ಅಲ್ಲ. ಸರ್ಕಾರದ ಕರ್ತವ್ಯ ಇಷ್ಟೆ ಅಲ್ಲ. ಹಣ ಇಲ್ಲದೆಯೂ ಕೂಡ ಸರ್ಕಾರ ಬಹಳಷ್ಟು ಕೆಲಸ ಮಾಡಬಹುದು. ನೀವು ಯಾವ ರೀತಿಯಾಗಿ ಜನರಿಗೆ administration ಕೊಡುತ್ತೀರಿ, ಜನರಿಗೆ ನೀವೇನು ನೆಮ್ಮದಿಯ ಬದುಕನ್ನು ಕೊಡುತ್ತಿದ್ದೀರಾ? ನಿಮ್ಮ ಕಾನೂನು ಸುವ್ಯವಸ್ಥೆ ಹೇಗೆ

ಇದೆ? ಸಂಬಂಧಪಟ್ಟ ನಿಮ್ಮ ಇಲಾಖಾಧಿಕಾರಿಗಳು ಕೆಲಸ ಮಾಡುತ್ತಿದ್ದಾರೆಯೆ? ಆಯಕಟ್ಟಿನ ಪ್ರದೇಶದಲ್ಲಿ ಪ್ರಾಮಾಣಿಕ ಅಧಿಕಾರಿಗಳು ಇದ್ದಾರೆಯೆ? ಇದಕ್ಕೆ ಯಾರು ಗಮನ ಕೊಡುತ್ತಿದ್ದಾರೆ? ಮಾನ್ಯ ಮುಖ್ಯಮಂತ್ರಿಗಳ ಹತ್ತಿರವೇ ಆ DPAR ಇರಬಹುದು.

ಇವತ್ತಿನ ದಿವಸ ನೀವು ಬೇಕಾಬಿಟ್ಟಿ ಅಧಿಕಾರಿಗಳನ್ನು ವರ್ಗಾವಣೆ ಮಾಡುತ್ತಿದ್ದೀರಿ. ಆಯಕಟ್ಟಿನ ಸ್ಥಳದಲ್ಲಿರುವ ಒಳ್ಳೆಯ ಅಧಿಕಾರಿಗಳನ್ನು ಅಲ್ಲಿಂದ ತೆಗೆದು ಹಾಕಿ ಅಪ್ರಾಮಾಣಿಕ ಅಧಿಕಾರಿಗಳನ್ನು ಆಯಕಟ್ಟಿನ ಸ್ಥಳಕ್ಕೆ ತರುತ್ತೀರಿ. ಆದ್ದರಿಂದ, ನಿಮ್ಮ ಆಡಳಿತ ಯಾವ ರೀತಿಯಾಗಿ ಆಗುತ್ತಿದೆ ಎಂಬುದು ನಿಮಗೆ ಗೊತ್ತಿದೆ. ಆದ್ದರಿಂದ, ಸರ್ಕಾರ ಮನುಷ್ಯನ ಹಿತದೃಷ್ಟಿಯಿಂದ ಆಡಳಿತ ನಡೆಸತಕ್ಕಂಥದು, ಮತ್ತು ಆಯವ್ಯಯವನ್ನು ಮಾಡತಕ್ಕಂಥದಾಗಿದೆ. ಇವತ್ತಿನ ದಿವಸ ಆಡಳಿತದ ಜೊತೆ ನೀವು ಹಣವನ್ನು ಏಕೆ ಖರ್ಚು ಮಾಡುತ್ತಿದ್ದೀರಿ? ಮಾನ್ಯ ಸುಧಾಕರ್‌ರವರು ಬಹಳ ಒಳ್ಳೆಯ ರೀತಿಯಲ್ಲಿ ಹೇಳಿದ್ದಾರೆ. ಇದನ್ನು ನಾನು appreciate ಮಾಡುತ್ತೇನೆ. ಜನರಿಗೆ ಅಂದರೆ, ಅವರ ಕುಟುಂಬದ ಅಕೌಂಟ್‌ಗೆ ದುಡ್ಡು ಕೊಟ್ಟು ಅವರ loyalty ಅನ್ನು ಗಳಿಸುವುದಕ್ಕೆ ಆಗುವುದಿಲ್ಲ. ಏಕೆಂದರೆ, ಮನುಷ್ಯನ ಆಸೆಗೆ ಮಿತಿ ಇಲ್ಲ. ಇವತ್ತು ನೀವು 5 ಸಾವಿರ ರೂಪಾಯಿ ಕೊಟ್ಟು ಆತ ನಮ್ಮ ಪರವಾಗಿ ಇರುತ್ತಾನೆಂದು ಸರ್ಕಾರ ಭಾವಿಸುವುದಾದರೆ ಅದು ಮೂರ್ಖತನವೆಂದು ನಾನು ಅಂದುಕೊಳ್ಳುತ್ತೇನೆ. ಏಕೆಂದರೆ, ಹಿಂದೆ ಕೇಂದ್ರ ಸರ್ಕಾರ ಕೂಡ ಒಳ್ಳೆಯ ಒಂದು ಉದ್ದೇಶದಿಂದ ಸಾಲ ಮನ್ನಾ ಮಾಡಿತು. ಮತ್ತೆ ರಾಜ್ಯ ಸರ್ಕಾರ ಸಹ ಸಾಲ ಮನ್ನಾ ಮಾಡಿತು. ಆದರೆ, ಇದರ ಯಾವುದೇ ಪ್ರಭಾವ ಎಲೆಕ್ಷನ್‌ನಲ್ಲಿ ಆಗಲಿಲ್ಲ. ಈಗ ನಾವು ಮಾಡುತ್ತಿರುವ published schemes ರಾಜ್ಯಕ್ಕೆ ಒಳ್ಳೆಯದಲ್ಲ. ಮತ್ತೆ ಇದರಿಂದ ನಮ್ಮ ರಾಜ್ಯದಲ್ಲಿರುವ ವಾತಾವರಣವನ್ನು ಕಲುಷಿತ ಮಾಡತಕ್ಕಂಥ ಕೆಲಸವನ್ನು ಮಾಡುತ್ತಿದ್ದೇವೆ. ಅದಕ್ಕಾಗಿ ಯಾವುದೇ ಸರ್ಕಾರ ಬಜೆಟ್ ಮತ್ತು ಆಡಳಿತ ಮಾಡುವಾಗ ಸಾಮಾನ್ಯ ಮನುಷ್ಯನಿಗೆ ಯಾವುದು ಉಪಯೋಗವಾಗುತ್ತದೆಂದರೆ, ನೀವು ಒಳ್ಳೆಯ ರಸ್ತೆ ಮಾಡಿದರೆ ಅದು ಸಾಮಾನ್ಯ ಮನುಷ್ಯನಿಗೆ ಉಪಯೋಗವಾಗುತ್ತದೆ. ಒಳ್ಳೆಯ ಶಾಲೆಗಳನ್ನು ಅಂದರೆ, ನಮ್ಮ

education system ಅನ್ನು strengthen ಮಾಡಿದರೆ ಅದು ಸಾಮಾನ್ಯ ಮನುಷ್ಯನಿಗೆ ಉಪಯೋಗವಾಗುತ್ತದೆ ಮತ್ತು ಜನರು appreciate ಮಾಡುತ್ತಾರೆ. ಮತ್ತೆ ಒಳ್ಳೆಯ ಒಂದು ಆಸ್ಪತ್ರೆ ಮಾಡಿ ನಮ್ಮ ರಾಜ್ಯದ ಜನರ ಆರೋಗ್ಯವನ್ನು ಕಾಪಾಡತಕ್ಕಂಥ ಹಿತದೃಷ್ಟಿಯಿಂದ ನೀವು ಅವರಿಗೆ ಸವಲತ್ತುಗಳನ್ನು ಕೊಡಿ. ಒಬ್ಬ ಸಾಮಾನ್ಯ ಮನುಷ್ಯನ ಹತ್ತಿರ ದುಡ್ಡು ಇರುವುದಿಲ್ಲ. ಆದರೆ, ಏನಾದರೂ ಖಾಯಿಲೆ ಬಂದರೆ ನನ್ನ ರಾಜ್ಯ, ನನ್ನ ಸರ್ಕಾರ, ನನ್ನ ಸಹಾಯಕ್ಕೆ ಬಂದು ನನ್ನನ್ನು ಕಾಪಾಡುತ್ತದೆ ಎನ್ನತಕ್ಕಂಥ ಒಂದು confidence ಅನ್ನು ತಾವು ಬಿಲ್ಡ್ ಮಾಡಬೇಕು. ಅಂದರೆ, ಆ ರೀತಿಯಾದ ವ್ಯವಸ್ಥೆಯನ್ನು ತಾವು ಬಿಲ್ಡ್ ಮಾಡಿದಾಗ ಮಾತ್ರ ಜನ appreciate ಮಾಡುತ್ತಾರೆ. Public Transport ಬಗ್ಗೆ ನಾವೆಲ್ಲರು ಮರೆತು ಹೋಗುತ್ತಿದ್ದೇವೆ. ಇವತ್ತಿನ ದಿವಸ ನಾವು Public transportಗೆ support ಮಾಡಬೇಕು. ಬೆಂಗಳೂರಿನಲ್ಲಿ ಯಾವ ರೀತಿಯಾದ ಟ್ರಾಫಿಕ್ ಇದೆ ಎಂಬುದನ್ನು ನಾವು ನೋಡುತ್ತಿದ್ದೇವೆ. 10 ವರ್ಷಗಳ ಹಿಂದೆ ಬೆಂಗಳೂರು ಯಾವ ರೀತಿ ಇತ್ತೋ ಆ ರೀತಿಯಾಗಿ ಇವತ್ತು ಇಲ್ಲ. ಏಕೆಂದರೆ, ಟ್ರಾಫಿಕ್ ಜಾಸ್ತಿಯಾಗಿದೆ. ಟ್ರಾಫಿಕ್ ಇಷ್ಟು ಜಾಸ್ತಿ ಏಕೆ ಆಗಿದೆ ಎಂದರೆ, ನಮ್ಮ ಹತ್ತಿರ ಸರಿಯಾದಂಥ public transport ವ್ಯವಸ್ಥೆ ಇಲ್ಲ. ಇವತ್ತು metro ಮಾಡುತ್ತಿದ್ದೀರಿ. We appreciate it. ಇಲ್ಲಿನ metro ಸಾವಿರ ಕೋಟಿ ಕೊಡುತ್ತಿದ್ದೀರಿ, ಆದರೆ ನಮ್ಮ ಹಳ್ಳಿಗಳಿಗೆ ಹೋಗುವುದಕ್ಕೆ ರಸ್ತೆಗಳಿಲ್ಲವೆಂದು 2004ರಲ್ಲಿ ನಾನು ಗೆದ್ದು ಬಂದಾಗ ನಾನು ಒಂದು ಸಾರಿ ಇದೇ ಸದನದಲ್ಲಿ ಹೇಳಿದ್ದೆ. ಆದರೆ, at the same time ಒಂದು ಮಾತನ್ನು ಹೇಳಿದ್ದೆವು. ಅದೇನೆಂದರೆ, world map ನಲ್ಲಿ ಇವತ್ತಿನ ದಿವಸ ಬೆಂಗಳೂರು ಇದೆ. ಆದ್ದರಿಂದ, ಇದನ್ನು ಒಂದು ಒಳ್ಳೆಯ ನಗರವನ್ನಾಗಿ ಮಾಡುವುದಕ್ಕೆ ಎಲ್ಲಾ ರೀತಿಯಲ್ಲಿ ಪ್ರಯತ್ನ ಮಾಡಬೇಕು. ಮೆಟ್ರೋ ಬಗ್ಗೆ ನಾವು appreciate ಮಾಡುತ್ತೇವೆ. ಏಕೆಂದರೆ, ಆ ಮೆಟ್ರೋವನ್ನು ಒಳ್ಳೆಯ ಅಧಿಕಾರಿ ನಿರ್ವಹಣೆ ಮಾಡುತ್ತಿದ್ದಾರೆ. ಆದ್ದರಿಂದ ಮೆಟ್ರೋ ಇವತ್ತಿನದಿವಸ ಟ್ರ್ಯಾಕ್‌ನಲ್ಲಿದೆ. ಒಂದು ವೇಳೆ ಅಲ್ಲಿ ಬೇರೊಬ್ಬ ಅಧಿಕಾರಿಯನ್ನು ಹಾಕಿದ್ದರೆ ಅಲ್ಲಿಯೂ ಕೂಡ ಡಿ–

ಟ್ರ್ಯಾಕ್, ಡಿ-ರೈಲ್ ಆಗುತ್ತಿತ್ತು. ಯಾವುದೇ ಒಂದು ಯೋಜನೆ ಇವತ್ತಿನ ದಿವಸ ಸರಿಯಾಗಿ ನಡೆಯಬೇಕಾದರೆ, ನಿರ್ವಹಣೆ ಮಾಡತಕ್ಕಂಥ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಬಹಳ ಮುಖ್ಯವಾಗಿರುತ್ತಾರೆ. ಇವತ್ತಿನ ದಿವಸ ಮೆಟ್ರೋ ಅನ್ನು ಏತಕ್ಕೆ appreciate ಮಾಡುತ್ತೇವೆಂದರೆ, ಇದು ಬಹಳ ಚೆನ್ನಾಗಿ progress ಆಗುತ್ತಿದೆ. ಮಾನ್ಯ ಅಶೋಕ್‌ರವರು ಇಲ್ಲಿದ್ದಾರೆ. ಆದ್ದರಿಂದ, ಅವರ ಗಮನಕ್ಕೆ ತರುವುದೇನೆಂದರೆ, ಗ್ರಾಮೀಣ ಪ್ರದೇಶದ ಕೆಲವೊಂದು ಹಳ್ಳಿಗಳಿಗೆ ಇವತ್ತೂ ಕೂಡ ಬಸ್ ವ್ಯವಸ್ಥೆ ಕಲ್ಪಿಸುವುದಕ್ಕೆ ಆಗಿಲ್ಲ. We are literally fighting there, ಏನಂದರೆ, ನಾವು ಅಲ್ಲಿ ರಸ್ತೆಗಳನ್ನು ಮಾಡಿಸಿದ್ದೇವೆ. ಅದರೆ, ಅಲ್ಲಿಗೆ ಬಸ್ ವ್ಯವಸ್ಥೆ ಇಲ್ಲ. ಏಕೆ ಬಸ್ ವ್ಯಸ್ಥೆ ಇಲ್ಲವೆಂದರೆ, ನಮ್ಮ NERTC ಯಲ್ಲಿ buses ಇಲ್ಲ ಮತ್ತು ರೆವಿನ್ಯೂ ಬರುವುದಿಲ್ಲವೆಂದು ಹೇಳುತ್ತಾರೆ. ರೆವಿನ್ಯೂ ಬರುವುದಿಲ್ಲವೆಂದರೆ ಅಲ್ಲಿನ ಜನರು ಎಲ್ಲಿಗೂ ಹೋಗಬಾರದೆ? ಆದ್ದರಿಂದ pollution, traffic jam ಇವೆಲ್ಲವನ್ನು ನಿಯಂತ್ರಣ ಮಾಡಬೇಕಾದರೆ, ಒಳ್ಳೆಯ public transport ಮಾಡಬೇಕಾಗುತ್ತದೆ. People will apt for public transport. ಇವತ್ತಿನ ದಿವಸ ಬಾಂಬೆಯಲ್ಲಿ ಲೋಕಲ್ ಟ್ರೈನ್ ಸ್ಟಾಪ್ ಆದರೆ Bombay stand still ಆಗುತ್ತದೆ. ಅಲ್ಲಿ public transport ಚೆನ್ನಾಗಿರುವುದರಿಂದ the city is running. Public transport and drinking water ಬಹಳ ಮುಖ್ಯವಾಗಿದೆ. ಮೂಲಭೂತವಾದ ಸೌಕರ್ಯಗಳನ್ನು ನೀವು ಜನರಿಗೆ ಕೊಡಬಹುದೆ ವಿನ: ಜನರಿಗೆ individual benefits ಕೊಟ್ಟು ಅವರುಗಳನ್ನು ಮರಳು ಮಾಡುವುದಕ್ಕೆ ಆಗುವುದಿಲ್ಲ. ಎಷ್ಟೇ ಒಂದು ಸಣ್ಣ ಗ್ರಾಮ ಇರಲಿ ಅಥವಾ ಎಷ್ಟೇ ದೂರದಲ್ಲಿ ಒಂದು ಹಳ್ಳಿ ಇರಲಿ, ಅಲ್ಲಿನ ಜನರಿಗೆ ಸ್ವಚ್ಛವಾಗಿರುವಂಥ ಕುಡಿಯುವ ನೀರು ಮತ್ತು sanitation ವ್ಯವಸ್ಥೆ ಮಾಡಬೇಕು. ಇವತ್ತಿನದಿವಸ ಗ್ರಾಮೀಣ ಪ್ರದೇಶದಲ್ಲಿನ ಶೌಚಾಲಯದ ವ್ಯವಸ್ಥೆ ನೋಡಿದರೆ ನಮಗೆ ನಾಚಿಕೆ ಬರತಕ್ಕಂಥ ಪರಿಸ್ಥಿತಿ ಇದೆ. ಆದರೆ, ಇದರ ಬಗ್ಗೆ ಚಿಂತನೆ ಮಾಡುವುದಕ್ಕೆ ಸರ್ಕಾರಗಳು ತಯಾರಿಲ್ಲ. ಇದರ ಬಗ್ಗೆ ನಾನೊಂದು ಸಲಹೆಯನ್ನು ಕೊಟ್ಟಿದ್ದೆ. ಅದೇನೆಂದರೆ, ರಾಷ್ಟ್ರೀಯ ಉದ್ಯೋಗ ಖಾತ್ರಿ

ಯೋಜನೆ ಅಡಿಯಲ್ಲಿ ವೈಯಕ್ತಿಕ ಶೌಚಾಲಯದ estimateಗೆ ನೀವೇನಾದರು ಒಂದು ವೇಳೆ approval ಮಾಡಿದರೆ ಈ ಸಮಸ್ಯೆಯನ್ನು ನಮ್ಮ ರಾಜ್ಯದಲ್ಲಿ ಒಂದು ವರ್ಷದಲ್ಲಿ ನಿವಾರಣೆ ಮಾಡಬಹುದು. ಇದಕ್ಕೆ ಕೇಂದ್ರ ಸರ್ಕಾರದಿಂದ ವಿಶೇಷವಾದ ಅನುದಾನವನ್ನು ಕೇಳಿ. 15 ರಿಂದ 20 ಸಾವಿರ ವೈಯಕ್ತಿಕ ಶೌಚಾಲಯಗಳನ್ನು NREGS ನಲ್ಲಿ ಮಾಡಿಕೊಡುವುದಕ್ಕೆ ಅವಕಾಶ ಮಾಡಿಕೊಟ್ಟರೆ 2 ರಿಂದ 3 ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿ individual toilet ಸಮಸ್ಯೆ ಪರಿಹಾರವಾಗುವುದಲ್ಲದೆ ಇದರಿಂದ health ಕೂಡ improve ಆಗುತ್ತದೆ ಮತ್ತೆ communicable diseases ಸಹ ಕಂಟ್ರೋಲ್‌ಗೆ ಬರುತ್ತೆ. ಆದರೆ, ಯಾರೂ ಕೂಡ ಇದರ ಬಗ್ಗೆ ಚಿಂತನೆ ಮಾಡುವುದಕ್ಕೆ ತಯಾರಿಲ್ಲ. ಎಲ್ಲಕ್ಕಿಂಥ ಮುಖ್ಯವಾಗಿ ಸರ್ಕಾರದ ಕರ್ತವ್ಯ ಏನೆಂದರೆ, ನಾವು ಬಡತನ ನಿರ್ಮೂಲನ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರದ ಬದ್ಧತೆ ಏನಿದೆ ಎಂಬುದನ್ನು ಹೇಳಬೇಕು. 80 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಈ ಬಜೆಟ್‌ನಲ್ಲಿ ಹೇಳಿದ್ದೀರಿ. ಹಾಗಾದರೆ ನೀವು ಬಡತನ ನಿರ್ಮೂಲನೆಗಾಗಿ ಎಷ್ಟು ಖರ್ಚು ಮಾಡುತ್ತಿದ್ದೀರಿ? ಇದು agriculture budget ಎಂದು ತಾವು ಹೇಳುತ್ತಿದ್ದೀರಿ. ಈ ಅಗ್ರಿಕಲ್ಚರ್ ಬಜೆಟ್‌ನಲ್ಲಿ ವಿಶೇಷ ಏನಿದೆ? ಎಷ್ಟು ಹಣ ಕೊಟ್ಟಿದ್ದೀರಿ? ಕಳೆದ ಸಾರಿಗಿಂಥ ಈ ಸಾರಿ ಸಾವಿರ ಕೋಟಿ ಹೆಚ್ಚಿಗೆ ಕೊಟ್ಟಿದ್ದೀರಷ್ಟೆ. ಕಳೆದ ಸಾರಿಯ ಅಂಕಿ-ಅಂಶಗಳನ್ನು ಮತ್ತು ಈ ಸಾರಿಯ ಅಂಕಿ-ಅಂಶಗಳನ್ನು ಸಹ ನಾನು ನೋಡಿದ್ದೇನೆ. ಈ ಸಾರಿ 3000 ಕೋಟಿ ರೂಪಾಯಿ ಕೊಟ್ಟಿದ್ದೀರಿ. ಕಳೆದ ಸಾರಿ ಸುಮಾರು 2000 ಕೋಟಿ ರೂಪಾಯಿ ಕೊಟ್ಟಿದ್ದೀರಿ. ಈ ಸಾರಿ ಒಂದು ಸಾವಿರ ಕೋಟಿ ರೂಪಾಯಿಯನ್ನು ಸುವರ್ಣ ಭೂಮಿ ಯೋಜನೆಗೋಸ್ಕರ ಹೆಚ್ಚಿಗೆ ಕೊಟ್ಟಿದ್ದೀರಷ್ಟೆ. ಇದನ್ನು ಬಿಟ್ಟರೆ ಅಗ್ರಿಕಲ್ಚರ್ ಅಲೋಕೇಷನ್‌ನಲ್ಲಿ ಬೇರೇನು ಜಾಸ್ತಿ ಮಾಡಿಲ್ಲ. ಈ ಸಾರಿ ಕೊಟ್ಟಿರುವ 1 ಸಾವಿರ ಕೋಟಿ ರೂಪಾಯಿಗಳಲ್ಲಿ 10 ಲಕ್ಷ ರೈತರನ್ನು ಗುರುತು ಮಾಡಿ ಅವರುಗಳಿಗೆ 5 ರಿಂದ 10 ಸಾವಿರ ಕೊಡಬೇಕೆಂಬ ಯೋಜನೆ ಇದೆ. ಇವತ್ತಿನದಿವಸ ರೈತರಿಗೆ ಏನು ಕೊಟ್ಟರೂ ಸಹ ಕಡಿಮೆ. ಅದನ್ನು ನಾನು ಒಪ್ಪುತ್ತೇನೆ. ಆದರೆ, ಅವರಿಗೆ ಇದರಿಂದ ಯಾವ

ರೀತಿಯಾದ ಲಾಭವಾಗುತ್ತದೆಂಬುದನ್ನು ಹೇಳಬೇಕು. ಏಕೆಂದರೆ, 50 ಲಕ್ಷ ಸಣ್ಣ ಮತ್ತು ಅತೀ ಸಣ್ಣ ರೈತರಿದ್ದಾರೆ. ಆದ್ದರಿಂದ, 10 ಸಾವಿರ ರೈತರನ್ನು ಹೇಗೆ ಗುರುತು ಮಾಡುತ್ತೀರಿ? ಶಾಸಕರುಗಳನ್ನು ಆ ಕಮಿಟಿಗೆ ಅಧ್ಯಕ್ಷರನ್ನಾಗಿ ಮಾಡಿ ಗಲ್ಲಿಗೆ ಏರಿಸಬೇಕೆಂದು ಮಾಡಿದ್ದೀರಾ? ಅಥವಾ ಈ ಎಲ್ಲ ಶಾಸಕರನ್ನು ಸೋಲಿಸಬೇಕೆಂಬ ಉದ್ದೇಶ ಏನಾದರು ಇರಬೇಕು? ನನ್ನ ಮತ ಕ್ಷೇತ್ರದಲ್ಲಿ ನನ್ನ ಪಕ್ಷದವರನ್ನು ಇಟ್ಟುಕೊಂಡು ಕೆಲವೇ ರೈತರನ್ನು ಅಯ್ಕೆ ಮಾಡುವುದಕ್ಕೆ ಆಗುತ್ತದೆಯೇ? We don't want to get involved in this type of programme ನಾನು ಅಲ್ಲಿ ಕುಳಿತುಕೊಂಡಿದ್ದಾಗ ಅಂಗನವಾಡಿ ಕಾರ್ಯಕರ್ತರ ಆಯ್ಕೆಯ ಹಿಂಸೆಯಿಂದ ನಮ್ಮನ್ನು ತಪ್ಪಿಸಿ ಎಂದು ನಾನು ಇದೇ ಸದನದಿಂದ ಒಂದು ಮಾತನ್ನು ಹೇಳಿದ್ದೆ. ಏಕೆಂದರೆ, we are not the appropriate person to do that. ನಾವು ಮೆರಿಟ್ ಮೇಲೆ ಬಡವರನ್ನು ಆಯ್ಕೆ ಮಾಡಬೇಕೆಂಬ ಉದ್ದೇಶ ಇದೆ. ಆದರೆ, ಅಲ್ಲಿ ನಮ್ಮ ಜನ ಮಾಡುವುದಕ್ಕೆ ಬಿಡುವುದಿಲ್ಲ. ಆದ್ದರಿಂದ, ದಯವಿಟ್ಟು ನಮ್ಮನ್ನು ಮಾಡಬೇಡಿ ಎಂದು ನಾನು ಹೇಳಿದ್ದೆ. ಅಧಿಕಾರಿಗಳನ್ನು ನೇಮಿಸಿ as per merit ಮೇಲೆ ಮಾಡಿ ಎಂದು ನಾನು ಹೇಳಿದ್ದೆ. ಆದರೆ ಅದನ್ನು ಹೈಕೋರ್ಟ್ ತೀರ್ಮಾನದಿಂದ ಸರ್ಕಾರ ಒಪ್ಪಿಕೊಂಡಿದೆ ವಿನ: ಸರ್ಕಾರ ಇದನ್ನು ಮೊದಲು ಒಪ್ಪಿಕೊಂಡಿರಲಿಲ್ಲ. Supreme Court, I was relieved ಏಕೆಂದರೆ, ಕಳೆದ ಸಾರಿಯ ನನ್ನ ಎಂಎಲ್ಎ ಟರ್ಮ್‌ನಲ್ಲಿ that was most humiliating day of my life. ಅಂದರೆ, ನಾನು ಸೆಲೆಕ್ಷನ್ ಮಾಡಿದ ದಿವಸ was most humiliating day of my life. ಏಕೆಂದರೆ, ಬಡವರಿಗೆ ನೀನು ಬೇಡ, ನೀನು ಬೇಡ ಎಂದು ಆಯ್ಕೆ ಮಾಡುವಾಗ I felt so bad. ಈ ವರ್ಷ ಅದು ತಪ್ಪಿರುವುದು ನನಗೆ ಸಂತೋಷವಾಗಿದೆ. I have to appreciate the Supreme Court. ಅದೇನೆಂದರೆ, ನೀವು ಕಾನೂನು ಬದ್ಧವಾಗಿ ಮಾಡಿ ಎಂದು ಹೇಳಿರುವುದಕ್ಕೆ we are so happy today. ನಾವು ಈ ಸಾರಿ ಕೃಷಿ ಬಜೆಟ್ ಕೊಟ್ಟಿದ್ದೇವೆಂದು ಹೇಳುತ್ತಿದ್ದೀರಿ. ಆದರೆ, ಇದರ ಉದ್ದೇಶ ಏನು? What is your idea. You want to give a

message to the people that you are pro-farmers. ಮಾನ್ಯ ಅಧ್ಯಕ್ಷರೆ, ನಮ್ಮ ಸ್ನೇಹಿತರು ನಾಳೆ ಮಾತನಾಡಿ ಎಂದು ಹೇಳುತ್ತಿದ್ದಾರೆ. ಆದ್ದರಿಂದ, ನಾನು ನಾಳೆ ದಿವಸ ಮುಂದುವರಿಸಬಹುದೆ? ಪ್ರಮುಖವಾದಂಥ ಒಂದು ವಿಷಯದ ಬಗ್ಗೆ 5 ನಿಮಿಷ ಮಾತನಾಡಿ ಉಳಿದಂಥದನ್ನು ನಾಳೆ ಮಾತನಾಡುತ್ತೇನೆ.

ಅಧ್ಯಕ್ಷರು: ತಾವೆಲ್ಲರು ಕುಳಿತುಕೊಳ್ಳಿ. ಮಧ್ಯದಲ್ಲಿ ಏಕೆ ಮಾತನಾಡುವುದಕ್ಕೆ ಹೋಗುತ್ತೀರಿ?

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಈಗ ನಾನು poverty alleviation ವಿಷಯ ತೆಗೆದುಕೊಂಡಿದ್ದೇನೆ. ಆದ್ದರಿಂದ, ಮಧ್ಯದಲ್ಲಿ ಬಿಡುವುದಕ್ಕೆ ಆಗುವುದಿಲ್ಲ. ಬಡತನ ನಿರ್ಮೂಲನ ಮಾಡುವುದಕ್ಕೆ ಸರ್ಕಾರ ಯಾವುದೇ ಯೋಜನೆಯನ್ನು ಹಾಕಿಕೊಂಡಿಲ್ಲ. ಮತ್ತೆ ಅದಕ್ಕೆ ಏನು ಅನುದಾನ ಸಹ ಕೊಟ್ಟಿಲ್ಲ. ಇವತ್ತಿನ ದಿವಸ ಯಾವುದೇ ಒಂದು ಹಳ್ಳಿ ಪ್ರದೇಶಕ್ಕೆ ನೀವು ಹೋಗಿ ನೋಡಿದಾಗ ರಾಜ್ಯದಲ್ಲಿ 60% of the people are involved in agriculture. Then who are rest of the people in the village? Agriculture labour. ಅವರೂ ಕೂಡ 40% ನಷ್ಟು ಇದ್ದಾರೆ. ಅಗ್ರಿಕಲ್ಚರ್ ಲೇಬರ್ ಬಗ್ಗೆ ನಿಮ್ಮ ಬಜೆಟ್‌ನಲ್ಲಿ ಏನಿದೆ ಎಂಬುದನ್ನು ಹೇಳಿ? What is your commitment?

ಶ್ರೀ ಸಿದ್ದರಾಮಯ್ಯ: ಒಟ್ಟು population ನಲ್ಲಿ 62% they are depending upon agriculture.

ಶ್ರೀ ಬಿ.ಕೆ.ಸಂಗಮೇಶ್ವರ್: ಮಾನ್ಯ ಅಧ್ಯಕ್ಷರೆ, ಈ ಬಜೆಟ್ ಹೇಗಿದೆ ಎಂದರೆ, ಮನೆಯಲ್ಲಿ ರೇಷನ್ ಇಲ್ಲ. ಆದರೆ, ಊರಿಗೆಲ್ಲ ಊಟ ಹಾಕಿಸುತ್ತೇನೆಂಬ ರೀತಿಯಲ್ಲಿದೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, 60% ಜನ ಯಾರಿದ್ದಾರೆ, ಆ ಹೊಲಗಳಲ್ಲಿ ಕೆಲಸ ಮಾಡತಕ್ಕಂಥ ಕೂಲಿ ಕಾರ್ಮಿಕರು. ಅವರಿಗೆ ನಾವು protect ಮಾಡಬೇಕಲ್ಲವೇ? ರೈತರನ್ನು protect ಮಾಡುವುದು ನಮಗೆ ಎಷ್ಟು ಕರ್ತವ್ಯವಿದೆಯೋ, ಆ ಬಡ ಕೂಲಿ

ಕಾರ್ಮಿಕರನ್ನು protect ಮಾಡುವುದು ಅದಕ್ಕಿಂತಲೂ ದೊಡ್ಡ ಕರ್ತವ್ಯವಿದೆ. This Government, it is a welfare State. This Government is a democratic government. It is to protect the poor. The last man the poorest man, my first responsibility is to protect the poorest man. What is your commitment for that? ಬಡತನ ರೇಖೆಗಿಂತ ಕೆಳಗೆ ಇರತಕ್ಕಂಥ ಜನ ಯಾರಿದ್ದಾರೆ? ನೀವು ಯಾವುದೇ ಗ್ರಾಮಕ್ಕೆ ಹೋಗಿ ಅಲ್ಲಿ ನೋಡಿ, Scheduled Caste, Scheduled Tribe, Backward classes & Minorities. ಮುಂದುವರಿದಿರುವ ವರ್ಗದಲ್ಲಿ ಬಡವರು ಇಲ್ಲವೆಂದು ನಾನು ಹೇಳಿಲ್ಲ. ಆದರೆ who are? ನೀವು ನೋಡಿ ಇವೊತ್ತುscheduled casteನಲ್ಲಿ 95% of the people are poor. What is your plan for them? OK you don't plan, at least implement what the Central Government is doing. NREGನಲ್ಲಿ 45 ಸಾವಿರ ಕೋಟಿಯಲ್ಲಿ ನಮ್ಮ ರಾಜ್ಯಕ್ಕೆ 4 ಸಾವಿರ ಕೋಟಿ ಕೊಟ್ಟರೆ ನೀವು ಅದನ್ನು ಬಳಸುವುದಿಲ್ಲ. ಏಕೆ ಬಳಸುತ್ತಿಲ್ಲ? ಏಕೆ ಬಳಸುತ್ತಿಲ್ಲವೆಂದರೆ ನಿಮ್ಮ ಹತ್ತಿರ ಇರುವ machinery ಜಂಗ್ ಹಿಡಿದು ಹೋಗಿದೆ. It is so anti poor, it doesn't have any concern, it doesn't have any commitment. ನಾವು ಯಾರಾದರೂ ಏನಾದರೂ ಹೇಳುವುದಕ್ಕೆ ಹೋದರೆ it is so pathetic. ನನ್ನ ಮತಕ್ಷೇತ್ರದಲ್ಲಿ I can't have a Officer of my choice. I don't bring any officer who is . . . ವಿಮ್ಸ್ ಅಂಡ್ ಫ್ಯಾನ್ಸಿ ಅಲ್ಲ. ಯಾರೋ ಒಬ್ಬರು ಒಳ್ಳೆಯ ಕೆಲಸ ಮಾಡುತ್ತಾರೆ ಎಂದರೆ no no. . .. ಅವರು ಯಾರು ಎಂದರೆ ನನ್ನ ಎದುರುಗಡೆ ಯಾರು ಸೋತಿರುವ ಆ candidate ಹೇಳಿದ officer ಅನ್ನು ಇವರು ಹಾಕುತ್ತಾರೆ. ಅವರಿಗೆ public interest ಇಲ್ಲ. ಇವರಿಗೆ ಕೆಟ್ಟ ಹೆಸರು ಬರಲಿ, worst officers ಅವರೆಲ್ಲ, ದುಡ್ಡು ಹೊಡಯುವವರನ್ನು ತಂದು ಇಲ್ಲಿ ನಮ್ಮ ಹತ್ತಿರ ಹಾಕುವುದು. ನಾವು ಒಂದು ಹೇಳಿದರೆ ಅವರೊಂದು ಮಾಡುವುದು. ನಾವು ಏನಾದರೂ ಬೈದರೆ ಇವರು ಬೈಯುತ್ತಾರೆ

ಎಂದು ಹೇಳುವುದು, ದೂರು ಕೊಡುವುದು. ಇಲ್ಲವೆಂದರೆ ಹೋಗಿ ಜನರಿಗೆ mis– guide ಮಾಡುವುದು. Non–cooperation. What is your commitment ಎಂದು ಹೇಳಿ. ನೀವು ಏನು ಕಾರ್ಯಕ್ರಮ ಮಾಡುತ್ತಿದ್ದೀರಿ ಹೇಳಿ? You are telling ನಾವು ಎಸ್‌ಸಿ ಎಸ್‌ಟಿ ಗಳಿಗೆ ಇಷ್ಟೆಲ್ಲಾ ಮಾಡುತ್ತಿದ್ದೇವೆ ಎಂದು. ಮಾನ್ಯ ಕಾರಜೋಳ ರವರೇ, I know you are committed, but your government is not functioning properly. I will tell you why? ಸುಮ್ಮನೆ ರಾಜಕೀಯ ಉದ್ದೇಶದಿಂದ ನಾನು ಹೇಳುತ್ತಿಲ್ಲ. If you have done a good job, I would have been appreciated it. That's why government is not working properly. It is your responsibility to bring it to the right track. And I will tell you why? Pooled ಇವೊತ್ತು ಎಷ್ಟು ಇದೆ ರಾಜ್ಯದಲ್ಲಿ? ನನ್ನ ಹತ್ತಿರ ಅಂಕಿಅಂಶಗಳಿವೆ ನಿಮಗೆ ಹೇಳುತ್ತೇನೆ. What is your pooled fund? SCP and TSP ಸೇರಿ 4,500 crores. How much have you released? Not 1800 crores. Is this your commitment to the Scheduled Caste and Scheduled Tribe? You cannot talk like this. I appreciate you have done a good thing in your department. But you are not able to do it. ಏಕೆಂದರೆ Cabinet has a collective responsibility. Social Welfare Minister ಎಲ್ಲಿದ್ದಾರೆ ಕಾಣಿಸುತ್ತಿಲ್ಲ. 4,500 ಕೋಟಿಯಲ್ಲಿ ಜೂನ್ endವರೆಗೆ ಖರ್ಚು ಮಾಡದೇ ನೀವು ಬಿಡುಗಡೆ ಮಾಡಿರುವುದೇ 1800 ಕೋಟಿ. This is your commitment shown to the Scheduled Caste and Scheduled Tribe? And you say we have to believe this. ನಾನು ಯಾವಾಗಲಾದರೂ ಎದ್ದು ಆಕ್ರೋಶದಿಂದ ಮಾತನಾಡಿದರೆ ತಾವು ದಯವಿಟ್ಟು ಎಂದೂ ತಪ್ಪು ತಿಳಿಯಬೇಡಿ. ಏಕೆಂದರೆ It is not for a politician affiliation, neither is my personal interest. I do not play for the gallery and not for the

press. Because it is concern. ಏನೆಂದರೆ ನಾವು ಮಾಡುವುದುಕ್ಕೂ ಆಗುವುದಿಲ್ಲ, ಅವರೂ ಮಾಡುತ್ತಿಲ್ಲ, ನಾವು ಹೇಳಿದರೆ ಸಲಹೆಯೂ ಕೇಳಲ್ಲ, ಮತ್ತೇನು ಮಾಡಬೇಕು. What should we do? You tell me what should we do? ನಾವು ಏನಾದರೂ ಸರ್ಕಾರದ ಮೇಲೆ ಕೆಟ್ಟ ಹೆಸರು ತರುವುದಕ್ಕೆ, ಗೂಬೆ ಕುಳ್ಳಿರಿಸುವುದಕ್ಕೆ ಯಾವುದೋ ಭ್ರಷ್ಟಾಚಾರದ ವಿಷಯ ತೆಗೆದು ಮಾತನಾಡುತ್ತಿಲ್ಲ. I am talking on a facts based on figures given by your department. ನನಗೆ ಹೇಗೆ ಮಾಡುತ್ತೀರಿ ಹೇಳಿ.ಇವೊತ್ತು poverty alleviation ಗೆ ನೀವು ಮಾಡಬೇಕಾಗಿರುವ first ಕ್ರಮ ಏನು? ಯಾವುದೇ ಒಂದು ಕುಟುಂಬಕ್ಕೆ ಒಂದು ಸ್ವಾಭಿಮಾನದಿಂದ ಬದುಕುವುದಕ್ಕೆ ನೀವು ಒಂದು ಅವಕಾಶ ಮಾಡಿಕೊಡಬೇಕಾದರೆ, ಅವರಿಗೆ ಏನು ಬೇಕು? Housing Minister ಇಲ್ಲ ಇಲ್ಲಿ. ಒಂದು decent house, I am not telling a palatial house, which many of the people in this House are having. I am talking about the decent house, one room house. ಎಷ್ಟು ಖರ್ಚು ಕೊಡುತ್ತೀರಿ ಅದಕ್ಕೆ? ನೀವು ಅದಕ್ಕೆ ಏನು ಕಾರ್ಯಕ್ರಮ ಮಾಡಿದ್ದೀರಿ? How much your allocation for that? You can't give a decent house to people. OK you can't give a house. ನೀವು ಅವರಿಗೆ 2 ಹೊತ್ತು ಊಟ ಕೊಡುವ ಕೆಲಸವನ್ನಾದರೂ ಕೊಡಬೇಕಲ್ಲ? ನಾವು ಮನೆಯಲ್ಲಿ ಕುಳ್ಳರಿಸಿ ಊಟ ಕೊಡಿ ಎಂದು ನಾನು ಹೇಳಲ್ಲ. I am not for that, everybody have to work. There is no free meals in the state ಎಂಬ message should go. There is no free meals for anybody in the State; you have to work for it. You have a right and duty towards the state; you have to work out your life. ಅವರಿಗೆ ವಂಚನೆ ಆಗಿದೆ. ವಂಚನೆ ಯಾವ ರೀತಿ ಆಗಿದೆ, ಅವರಿಗೆ ವಿದ್ಯೆಯಿಂದ ವಂಚನೆ ಆಗಿದೆ. ಅವರಿಗೆ social status ನಿಂದ ವಂಚನೆ ಆಗಿದೆ. They have been deprived of nutrition and everything in the State. So

they need a special care. So what is my commitment for them? My commitment, I should give them a decent job. ಕೆಲಸ ಮಾಡುವುದಕ್ಕೆ ಒಂದು ಅವಕಾಶ ಕೊಡಬೇಕು. ಅವರ ಮಕ್ಕಳಿಗೆ ಒಂದು, ಈ ಜನರೇಷನ್ ಗೆ 30 and 40 years above that generation is gone ಅವರಿಗೆ ಮಾಡುವುದಕ್ಕೆ ಏನೂ ಇಲ್ಲ. At least for the future generation, we should plan. I am not talking for this generation and next generation. ಇವೊತ್ತು ಹುಟ್ಟುವಂತಹ ಮಗು ಅವರಿಗಾದರೂ ಒಂದು ಒಳ್ಳೆಯ ಬದುಕನ್ನು ಕೊಡುವಂಥಹ ಪ್ರಯತ್ನ ಮಾಡಬೇಕು. Is it not our duty? ಈಗ ನೋಡಿ ನೀವು, ಇವೊತ್ತು ಹತ್ತು ವರ್ಷ, 6ವರ್ಷ ಇರುವಂತಹ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಟ್ಟರೆ, ನಾಳೆ ಅವರ ಕಾಲಿನ ಮೇಲೆ ಅವರು ನಿಲ್ಲುವುದಕ್ಕೆ ಅವಕಾಶವಾಗುತ್ತದೆ. Because education is the only leveler in the society. Either it might be, it will eradiate poverty and it can also bring equality among the status. So education ಗೆ ನಾವು ಏನು ಮಾಡುತ್ತಿದ್ದೇವೆ. ಸಾಮಾನ್ಯ ಮಕ್ಕಳಿಗೆ ನೀವು ಒಳ್ಳೆಯ ವಿದ್ಯಾಭ್ಯಾಸ ಕೊಡತಕ್ಕಂಥಹ ಕೆಲಸ ಮಾಡುತ್ತಿದ್ದೀರಿ, ನಾನು ಒಪ್ಪುತ್ತೇನೆ ಇಲ್ಲ ಎಂದು ಹೇಳಿಲ್ಲ. Central Government ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಎಷ್ಟು ಹಣ ಕೊಡುತ್ತಿದೆ? ಆದರೆ I didn't find one commitment from this government. ಏಕೆಂದರೆ ಹೈಸ್ಕೂಲ್‌ಗೆ ನೀವು ಎಷ್ಟು ಕೊಟ್ಟಿದ್ದೀರಿ ಹೇಳಿ. ಈ 3 ವರ್ಷದಲ್ಲಿ ಒಂದು ಹೈಸ್ಕೂಲ್ ಕೊಡಲಿಲ್ಲ ನೀವು. I went and requested Mr.Kageri, he said , I am sorry ನನಗೆ ದುಡ್ಡೇ ಕೊಡುತ್ತಿಲ್ಲ. ಒಂದು ಪಿಯು ಕಾಲೇಜು ಕೊಡಲಿಲ್ಲ ನೀವು. ಗ್ರಾಮೀಣ ಪ್ರದೇಶದಲ್ಲಿ ಮಕ್ಕಳು ಎಷ್ಟೆಷ್ಟು ಕಷ್ಟ ಪಡುತ್ತಿದ್ದಾರೆ. ಒಂದು ಕೆಲಸ ಮಾಡಿದ್ದೀರಿ I appreciate, ನೀವು ಸೈಕಲ್ ಕೊಡಿಸುವ ಕೆಲಸ ಮಾಡಿದ್ದೀರಿ, ಅದರಿಂದ ಮಕ್ಕಳು ಇವೊತ್ತು girl students ಹೈಸ್ಕೂಲ್‌ನಲ್ಲಿ improve ಆಗಿದೆ. I will not deny it, I will appreciate it. Whatever good I appreciate. ಒಂದು ಹೈಸ್ಕೂಲ್

ನೀವು ಮಾಡಲಿಲ್ಲ. ಒಂದು ಪಿಯು ಕಾಲೇಜ್ ಮಾಡಲಿಲ್ಲ, ಡಿಗ್ರಿ ಕಾಲೇಜ್ ಮಾಡಲಿಲ್ಲ ಏಕೆಂದರೆ ನಾವು ಕೇಳಿಬಿಟ್ಟಿದ್ದೇವೆ, opposition ನಲ್ಲಿ from the day I enter this House, ಒಂದು ವರ್ಷ ನಾವು ಆ government ನಲ್ಲಿ ಇದ್ದೆವು. ಅದಾದ ಮೇಲೆ ಎಲ್ಲಾ ಸರ್ಕಾರಗಳು ತಾರತಮ್ಯವೇ ತಾರತಮ್ಮ. ಒಂದು ಹೈಸ್ಕೂಲ್ ಕೊಡಲಿಲ್ಲ, ಒಂದು ಕಾಲೇಜ್ ಕೊಡಲಿಲ್ಲ, ಎಲ್ಲರ ಹೊಡೆತಕ್ಕ ನಾವು ಸಿಕ್ಕಿದ್ದೇವೆ. ರೇವಣ್ಣನವರು ಎಲ್ಲಿದ್ದಾರೆ ಕಾಣಿಸುತ್ತಿಲ್ಲ, ಅವರ ಹೊಡೆತಕ್ಕೂ ನಾವು ಬಲಿ ಆಗಿದ್ದೇವೆ. ಸಿದ್ದು ಸವದಿ ಅವರು ಕಾಣಿಸುತ್ತಿಲ್ಲ ಇಲ್ಲಿ, he is to rush to the well, ನಮಗೆ ಅನ್ಯಾಯ ಆಗಿದೆ, ತಾರತಮ್ಯ ಆಗಿದೆ, ಸಿ.ಟಿ. ರವಿಯವರೇ ಎಲ್ಲಿ ಹೋಯಿತು ಆ ಜೋಷ್. Is it not your duty to protect us. I will assure you, If I come to that position, I will protect that side. I will assure you this, If am in the position of power, I will always be dispassionate. I will always work for the interest of the House. The entire state, you were swearing, you have taken a oath. ನಾನು ಸುಮ್ಮನೆ ಹೇಳುತ್ತಿಲ್ಲ ಮಾನ್ಯ ಅಧ್ಯಕ್ಷರೆ. These Ministers have taken a oath that we will be dispassionate.

ಶ್ರೀ ಸಿ.ಟಿ.ರವಿ: ಡಾಕ್ಟರೇ, ಹನುಮಪ್ಪ ಹಗ್ಗ ಕಡೀತಿರಬೇಕಾದರೆ, ಪೂಜಾರಪ್ಪ ಶಾವಿಗೆ ಕೇಳಿದ್ದನಂತೆ. ಹಾಗೆ ನೀವು ನಿಮ್ಮ ಜೊತೆಯಲ್ಲಿದ್ದವರಿಗೆ ಇಟ್ಟುಕೊಳ್ಳುವುದಕ್ಕೆ ಆಗದೇ ಅವರೇ ಈ ಕಡೆ ಬರುತ್ತಿದ್ದಾರೆ. ಇನ್ನೇನು ಕೊಟ್ಟೀರಿ ನೀವು ನಮಗೆ.

ಡಾ: ಶರಣ್ಣ ಪ್ರಕಾಶ್ ರುದ್ರಪ್ಪ ಪಾಟೀಲ್: ನೀವು ಈ side ಇದ್ದಿರಿ, ಈಗ ಆ side ಬಂದಿದ್ದೀರಿ. ನಾನೇನು ಈಗ ಹೇಳುವುದಿಲ್ಲ. ನಾವು ಆ side ಬಂದರೆ ನೋಡಿ ನಿಮಗೆ ಗೊತ್ತಾಗುತ್ತದೆ. ನಾನೇಕೆ ಹೇಳುತ್ತಿದ್ದೇನೆಂದರೆ ನಾನು 5 ವರ್ಷದಿಂದ ನೋಡುತ್ತಿದ್ದೇನೆ, ಏನು ಮಾಡಲಿಲ್ಲ. At least you should have come to our rescue. We are also working for the interest of the public. ಇವೊತ್ತು ನನ್ನ ಮತಕ್ಷೇತ್ರದಲ್ಲಿ ನಿಮಗೆ ಮತ

ಹಾಕುವುವವರು ಇಲ್ಲವೇ? ಇದ್ದೇ ಇದ್ದಾರೆ. ಪಕ್ಷ ಇಟ್ಟುಕೊಂಡು ನಾವು ಮಾಡುವುದಕ್ಕಾಗುವುದಿಲ್ಲ. ನಾವು ಚುನಾವಣೆ ಬಂದಾಗ ಪಕ್ಷ ರಾಜಕೀಯ ಮಾಡೋಣ. Definitely we will accept the challenge.

ಶ್ರೀ ಸಿ.ಟಿ. ರವಿ:ಅವರು ಹೇಳಿದ್ದು ಮರೆತು ಬಿಟ್ಟಿದ್ದಾರೆ. ನಾನು ಇಲ್ಲಿ ಹೇಳಿದ್ದು, ಅಲ್ಲಿ ಪೂಜಾರಪ್ಪನ ಪಾತ್ರ ಮಾಡುತ್ತಿರುವುದೇ ಜೆಡಿಎಸ್. ಮಾರಮ್ಮನಿಗೂ ಅವರೇ ಈ ಕಡೆ ಹನುಮಪ್ಪ ದೇವರಿಗೆ ಅವರೇ ಪೂಜಾರಪ್ಪ. ಎರಡೂ ಕಡೆ ಅವರೇ ಪೂಜಾರಪ್ಪ.

(ಗೊಂದಲ)

ಅಧ್ಯಕ್ಷರು: ಗೃಹ ಮಂತ್ರಿಗಳು ತಾವು ಇಲ್ಲಿ ಬನ್ನಿ. ಡಾಕ್ಟರೇ, 30 ನಿಮಿಷ ಆಯಿತು, ಇನ್ನು ಎಷ್ಟು ಹೊತ್ತು ಬೇಕು.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೇ ನಾಳೆ continue ಮಾಡುತ್ತೇನೆ. ಕೆಲವು Ministers ಇಲ್ಲ, specific, I don't criticize anybody. Specific advice to specific departments ಇದೆ. 15 ನಿಮಿಷ ಮಾತನಾಡುತ್ತೇನೆ. ಬೆಳಿಗ್ಗೆ ಎಲ್ಲಾ Ministers ಇರುತ್ತಾರೆ, One specific advice to each Minister ಅಷ್ಟೆ.

ಅಧ್ಯಕ್ಷರು: ನಾಳೆ ಬೆಳಿಗ್ಗೆ 15 ನಿಮಿಷ ಮಾತನಾಡಿ. ಇನ್ನೊಬ್ಬರಿಗೆ ಅವಕಾಶ ಕೊಡುತ್ತೇನೆ. ಈಗ ಪ್ರಶ್ನೋತ್ತರ.

4. ಪ್ರಶ್ನೋತ್ತರ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಚಿಕ್ಕಬಳ್ಳಾಪುರ ನಗರದ ಕೊಳಚೆ ಪ್ರದೇಶಗಳ ಅಭಿವೃದ್ಧಿ

91(422) ಶ್ರೀ ಬಚ್ಚೇಗೌಡ ಕೆ.ಪಿ. (ಚಿಕ್ಕಬಳ್ಳಾಪುರ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ನಗರದಲ್ಲಿ 26 ಕೊಳಚೆ ಪ್ರದೇಶಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಆಯವ್ಯಯದಲ್ಲಿ ಈ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಸರ್ಕಾರ ಒದಗಿಸಿರುವ ಅನುದಾನವೆಷ್ಟು;